ಶನಿವಾರ, ನವೆಂಬರ್ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 331 | ಪುಟ 20

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಆಟವಾಡಲು ಬರಲಿ ಮನೆಗೆ 'ಆಡು–ಹುಲಿ'

ಕರ್ನಾಟಕ ಚಿನ್ನದ ಹೊಳಪು
'5 ಸಾವಿರ ಅರ್ಜಿಗೆ ಸಾಗುವಳಿ ಚೀಟಿ' 6
ರಾಜಕೀಯ ಮತ್ತು ಸಿದ್ಧಾಂತ 11
ಪಟ್ಟು ಸಡಿಲಿಸದ ವಿಪಕ್ಷ; ನಡೆಯದ ಕಲಾಪ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,802	24,131	₹80,540 (ಬೆಂಗಳೂರು)	₹94,800 (ಬೆಂಗಳೂರು)	84.60

ತಯಾರಿಕಾ, ಗಣಿ ವಲಯದ ಬೆಳವಣಿಗೆ ಕುಂಠಿತ, ಎರಡನೇ ತ್ರೈಮಾಸಿಕ– ಶೇ 5.4ರಷ್ಟು ದಾಖಲು

ಜಿಡಿಪಿ: ಎರಡು ವರ್ಷಗಳ ಕನಿಷ್ಠ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ (2024–25) ಎರಡನೇ ತ್ರೈಮಾಸಿಕದಲ್ಲಿ (ಕ್ಯು2-ಜುಲೈ–ಸೆಪ್ಟೆಂಬರ್) ದೇಶದ ಆರ್ಥಿಕ ಬೆಳವಣಿಗೆ ಕುಂಠಿತವಾಗಿದ್ದು, ಎರಡು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಈ ಅವಧಿಯಲ್ಲಿ ದೇಶೀಯ ಆಂತರಿಕ ಉತ್ಪನ್ನ (ಜಿಡಿಪಿ) ಶೇ 5.4ರಷ್ಟು ದಾಖಲಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಈ ಅಂಕಿ ಅಂಶಗಳುಳ್ಳ ವರದಿಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ತಯಾರಿಕಾ ಮತ್ತು ಗಣಿ ವಲಯಗಳ ಪ್ರಗತಿ ಗಣನೀಯವಾಗಿ ಕುಸಿದಿರುವುದು ಹಾಗೂ ಜನರು ಮಾಡುತ್ತಿರುವ ವೆಚ್ಚ ಕಡಿಮೆಯಾಗಿರುವುದು ಬೆಳವಣಿಗೆ ಕುಸಿತಕ್ಕೆ ಕಾರಣ ಎಂದು ಹೇಳಿದೆ.

2022–23ರ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ (ಅಕ್ಟೋಬರ್–ಡಿಸೆಂಬರ್) ಜಿಡಿಪಿ ಬೆಳವಣಿಗೆಯು ಶೇ 4.3ರಷ್ಟು ದಾಖಲಾಗಿದ್ದು ಈ ಹಿಂದಿನ ಕನಿಷ್ಠ ಮಟ್ಟವಾಗಿತ್ತು. 2023–24ರ ಎರಡನೇ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಶೇ 8.1ರಷ್ಟಿತ್ತು. ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್–ಜೂನ್) ಶೇ 6.7ರಷ್ಟು ದಾಖಲಾಗಿತ್ತು.

ಜಿಡಿಪಿ ಇಳಿದಿದ್ದರೂ, ಭಾರತ ಈಗಲೂ ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಯಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

12ನೇ ಪುಟ ನೋಡಿ

ನವ ಭಾರತದ ಕಠೋರ ಸತ್ಯ: ಕಾಂಗ್ರೆಸ್

ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಕುಸಿದಿರುವ ಬಗ್ಗೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಹೊಗಳುಭಟರ (ಚಿಯರ್ ಲೀಡರ್ಸ್) ಉತ್ಪ್ರೇಕ್ಷೆಗಿಂತ ದೇಶದ ವಾಸ್ತವ ಸ್ಥಿತಿಯು ಭಿನ್ನವಾಗಿದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಟೀಕಿಸಿದೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಈ ಹಿಂದಿನ ಜಿಡಿಪಿಯ ಹತಾಶ 'ಮರುಲೆಕ್ಕಾಚಾರಗಳ' ನಂತರವೂ ಅತಿಮಾನುಷ ಪ್ರಧಾನಿಯ ಆರ್ಥಿಕ ಬೆಳವಣಿಗೆಯ ದಾಖಲೆಯು ಡಾ.ಮನಮೋಹನ್ ಸಿಂಗ್ ಅವರ ಅವಧಿಗೆ ಹೋಲಿಸಿದರೆ ತೀರಾ ಶೋಚನೀಯ ಸ್ಥಿತಿಯಲ್ಲಿಯೇ ಉಳಿದಿದೆ' ಎಂದು ಹೇಳಿದ್ದಾರೆ.

'ಇದು ನವ ಭಾರತದ ಕಠೋರ ಸತ್ಯವಾಗಿದೆ' ಎಂದು ನುಡಿದಿದ್ದಾರೆ.

> ಜಿಡಿಪಿ ಬೆಳವಣಿಗೆ ಶೇ 5.4ಕ್ಕೆ ಕುಸಿದಿರುವುದು ನಿರಾಶಾದಾಯಕ. ಇದರ ನಡುವೆಯೂ ಕೃಷಿ, ನಿರ್ಮಾಣ ವಲಯದ ಪ್ರಗತಿಯು ಆಶಾದಾಯಕವಾಗಿದೆ
>
> **ವಿ.ಅನಂತ ನಾಗೇಶ್ವರನ್**
> ಮುಖ್ಯ ಆರ್ಥಿಕ ಸಲಹೆಗಾರ



ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬಿಜೆಪಿ ಬಣ ಜಗಳ ಉಲ್ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಒಳಜಗಳ ದಿನದಿಂದ ದಿನಕ್ಕೆ ಬಿರುಸು ಪಡೆಯುತ್ತಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪರ ಗುರುತಿಸಿಕೊಂಡಿರುವ ಬಣವು ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಬಹಿರಂಗ ಹೋರಾಟಕ್ಕೆ ಚಾಲನೆ ನೀಡಿದೆ. ಇನ್ನೊಂದೆಡೆ ವಿಜಯೇಂದ್ರ ವಿರುದ್ಧ ಯತ್ನಾಳ ವಾಗ್ದಾಳಿ ಮುಂದುವರಿಸಿದ್ದಾರೆ.

ವಿಜಯೇಂದ್ರ ಪರ ಗುರುತಿಸಿಕೊಂಡಿರುವ ಎಂ.ಪಿ.ರೇಣುಕಾಚಾರ್ಯ, ಪರಣ್ಣ ಮುನವಳ್ಳಿ, ಬಸವರಾಜ್ ದಡೇಸುಗೂರ್, ಗೋಪಾಲ್ ನಾಯಕ್, ಸುನೀಲ್ ಹೆಗಡೆ, ಸುನೀಲ್ ನಾಯಕ್, ಬಸವರಾಜ ನಾಯ್ಕ, ಪಿಳ್ಳ ಮುನಿಸ್ವಾಮಪ್ಪ, ಬೆಳ್ಳಿ ಪ್ರಕಾಶ್, ಮಸಾಲೆ ಜಯರಾಮ್, ಎಂ.ಡಿ.ಲಕ್ಷ್ಮಿನಾರಾಯಣ ಸೇರಿ 20ಕ್ಕೂ ಹೆಚ್ಚು ಮಾಜಿ ಶಾಸಕರು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮನೆಯಲ್ಲಿ ಸಭೆ ನಡೆಸಿದರು.

ನಂತರ ಕೋಲಾರದ ಕುರುಡುಮಲೆಗೆ ತೆರಳಿ, ಅಲ್ಲಿಂದ ಹೋರಾಟ ಆರಂಭಿಸಿದರು. ಅಲ್ಲಿ ಬಿ.ಸಿ.ಪಾಟೀಲ, ಜಿ.ಎಂ. ಸಿದ್ದೇಶ್ವರ ಜತೆಯಾದರು. 'ಯತ್ನಾಳರನ್ನು ಪಕ್ಷದಿಂದ ತಕ್ಷಣವೇ ಉಚ್ಚಾಟಿಸಬೇಕು' ಎಂದು ಆಗ್ರಹಿಸಿದರು.

ಇದಕ್ಕೆ ವಿಜಯಪುರದಲ್ಲಿ ಪ್ರತಿಕ್ರಿಯೆ ನೀಡಿದ ಯತ್ನಾಳ, 'ವಿಜಯೇಂದ್ರ ವಂಶವಾದಿ, ಭ್ರಷ್ಟಾಚಾರಿಯಾಗಿದ್ದು ಅವನನ್ನು ಕಿತ್ತೊಗೆಯಲಿ. ನನ್ನ ವಿರುದ್ಧ ಶಿಸ್ತುಕ್ರಮ ತೆಗೆದುಕೊಂಡರೂ ಹೋರಾಟ ನಿಲ್ಲಿಸುವುದಿಲ್ಲ' ಎಂದು ಹೇಳಿದರು.

ಚಂದ್ರಶೇಖರನಾಥ ಶ್ರೀಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಒಕ್ಕಲಿಗ ಸಂಸ್ಥಾನ ಮಠದ ಕುಮಾರ ಚಂದ್ರಶೇಖರ ನಾಥ ಸ್ವಾಮೀಜಿಗೆ ವಿಚಾರಣೆಗೆ ಹಾಜರಾಗುವಂತೆ ಉಪ್ಪಾರಪೇಟೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಚಂದ್ರಶೇಖರ ನಾಥ ಸ್ವಾಮೀಜಿ

'ಮುಸ್ಲಿಂ ಸಮುದಾಯದವರಿಗೆ ನೀಡಿರುವ ಮತ ದಾನದ ಹಕ್ಕನ್ನು ರದ್ದುಪಡಿಸಲು ಕಾನೂನು ಜಾರಿ ಮಾಡಬೇಕು' ಎಂದು ಚಂದ್ರಶೇಖರ ನಾಥ ಸ್ವಾಮೀಜಿ ಅವರು ಸ್ವಾತಂತ್ರ್ಯ ಉದ್ಯಾನದಲ್ಲಿ ನ.26ರಂದು ನಡೆದ ಪ್ರತಿಭಟನೆಯಲ್ಲಿ ಹೇಳಿದ್ದರು.

ಸೈಯದ್ ಅಬ್ಬಾಸ್ ಅವರ ದೂರು ಆಧರಿಸಿ ಬಿಎನ್‌ಎಸ್ ಸೆಕ್ಷನ್ 299ರ ಅಡಿ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು, ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಚಂದ್ರಶೇಖರ ನಾಥ ಸ್ವಾಮೀಜಿ ಅವರಿಗೆ ನೋಟಿಸ್ ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ಖಚಿತಪಡಿಸಿವೆ.

ಹೇಳಿಕೆ ಬಗ್ಗೆ ಆಕ್ರೋಶ ವ್ಯಕ್ತವಾದ ಕೂಡಲೇ ಸ್ಪಷ್ಟನೆ ನೀಡಿದ್ದ ಸ್ವಾಮೀಜಿ, 'ಮುಸ್ಲಿಮರು ಕೂಡ ಈ ದೇಶದ ಪ್ರಜೆಗಳು. ಎಲ್ಲರಂತೆ ಅವರಿಗೂ ಮತದಾನದ ಹಕ್ಕಿದೆ. ನನ್ನ ಹೇಳಿಕೆಯಿಂದ ಮುಸ್ಲಿಂ ಬಾಂಧವರಿಗೆ ನೋವಾಗಿದ್ದರೆ, ಅದಕ್ಕಾಗಿ ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇನೆ' ಎಂದು ಹೇಳಿದ್ದರು.



ಪುಣೆ ಮೊದಲು: ಅಗ್ರ 10 ನಗರಗಳಲ್ಲಿ ಬೆಂಗಳೂರಿಗೆ ಸ್ಥಾನ

ಪ್ರಾಪರ್ಟಿ ರೆಂಟಲ್ ಇಂಡೆಕ್ಸ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಐಎಂ ಬೆಂಗಳೂರಿನಲ್ಲಿರುವ ರಿಯಲ್ ಎಸ್ಟೇಟ್ ರಿಸರ್ಚ್ ಗ್ರೂಪ್, ಸಿಆರ್ಇ-ಮ್ಯಾಟ್ರಿಕ್ಸ್ ಸಹಯೋಗದೊಂದಿಗೆ ಭಾರತದ ಮೊದಲ ವೈಜ್ಞಾನಿಕ, ಮಾದರಿ ಆಧಾರಿತ ಪ್ರಾಪರ್ಟಿ ರೆಂಟಲ್ ಇಂಡೆಕ್ಸ್ (ಸಿಪಿಆರ್ಐ) ಅನ್ನು ಶುಕ್ರವಾರ ಬಿಡುಗಡೆ ಮಾಡಲಾಯಿತು.

ಭಾರತದ ಪ್ರಮುಖ ನಗರಗಳಲ್ಲಿ ವಾಣಿಜ್ಯ ಕಚೇರಿ ಮಾರುಕಟ್ಟೆ ಟ್ರೆಂಡ್ ಸೂಚಿಸುವ ಸೂಚ್ಯಂಕದಲ್ಲಿ ಪುಣೆ ಅಗ್ರಸ್ಥಾನದಲ್ಲಿದ್ದು, ಶೇ 6.9ರಷ್ಟು ಏರಿಕೆ ದಾಖಲಿಸಿದೆ. ಅಗ್ರ 10 ನಗರಗಳಲ್ಲಿ ಬೆಂಗಳೂರು ಸ್ಥಾನ ಪಡೆದಿದೆ.

ಐಐಎಂಬಿ–ಸಿಆರ್ಇ ಮ್ಯಾಟ್ರಿಕ್ಸ್ 12 ವರ್ಷಗಳಲ್ಲಿ, 50 ತ್ರೈಮಾಸಿಕಗಳಲ್ಲಿ 10 ನಗರಗಳಿಗೆ ಸಿಪಿಆರ್ಐ ದಾಖಲಿಸಿದೆ. ಶೇ 74ರಷ್ಟು ನಗರಗಳಲ್ಲಿ ಸೂಚ್ಯಂಕವು ಏರಿಕೆ ಕಂಡಿದೆ. ದಾಖಲಿಸಲಾಗಿದೆ. ಶೇಕಡ 74ರಷ್ಟು ನಿದರ್ಶನಗಳಲ್ಲಿ, ಸೂಚ್ಯಂಕವು ಏರಿಕೆ ಕಂಡಿದೆ.

ಐಐಎಂಬಿ ಆವರಣದಲ್ಲಿ ನಡೆದ ಇಂಡೆಕ್ಸ್ ಬಿಡುಗಡೆ ಕಾರ್ಯಕ್ರಮದಲ್ಲಿ ಸೆಬಿ ಪೂರ್ಣಾವಧಿ ಸದಸ್ಯ ಅನಂತ್ ನಾರಾಯಣ್ ಮಾತನಾಡಿ, 'ಉದ್ಯಮದ ದಿಕ್ಕು ಬದಲಿಸಬಲ್ಲ ರಿಯಲ್ ಎಸ್ಟೇಟ್ ಸೂಚ್ಯಂಕಕ್ಕೆ ಚಾಲನೆ ನೀಡಲಾಗಿದೆ. ಇದು ಉದ್ಯಮದಲ್ಲಿ ಜಾಗೃತಿ ಮತ್ತು ನಂಬಿಕೆಯನ್ನು ನಿರ್ಮಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ. ಜಾಗತಿಕ ಮಾನದಂಡಗಳಿಗೆ ಹೋಲಿಸಿದರೆ ಭಾರತದ ವಾಣಿಜ್ಯ ರಿಯಲ್ ಎಸ್ಟೇಟ್ ಮಾರುಕಟ್ಟೆಯು ಅಗಾಧವಾದ ಬೆಳವಣಿಗೆಯ ಅವಕಾಶ ಹೊಂದಿದೆ' ಎಂದು ತಿಳಿಸಿದರು.

ಮೌಲ್ಯಮಾಪನ ಪ್ರಕ್ರಿಯೆಗಳನ್ನು ಸರಳೀಕರಿಸುವ ಮತ್ತು ಹೊಣೆಗಾರಿಕೆಯನ್ನು ಉತ್ತೇಜಿಸುವ ಮೂಲಕ, ಸೂಚ್ಯಂಕವು ರಿಯಲ್ ಎಸ್ಟೇಟ್ ಮತ್ತು ಮೂಲಸೌಕರ್ಯ ಹಣ ಗಳಿಕೆಯ ಬೆಳವಣಿಗೆಯನ್ನು ವೇಗಗೊಳಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಐಐಎಂಬಿ ನಿರ್ದೇಶಕ ಟಿ. ರಿಷಿಕೇಶ್ ಕೃಷ್ಣನ್ ಸೂಚ್ಯಂಕ ಬಿಡುಗಡೆಯ ಉದ್ದೇಶವನ್ನು ವಿವರಿಸಿದರು. ಸಿಆರ್ಇ ಮ್ಯಾಟ್ರಿಕ್ಸ್ ಸಿಇಒ ಅಭಿಷೇಕ್ ಕಿರಣ್, ಭಾಗವಹಿಸಿದ್ದರು.

'ಭಾರತೀಯ ಕಚೇರಿ ಮಾರುಕಟ್ಟೆಗೆ ಸವಾಲುಗಳು ಮತ್ತು ಅವಕಾಶಗಳು' ಕುರಿತು ಸಂವಾದ ಕಾರ್ಯಕ್ರಮದಲ್ಲಿ ಪ್ರೆಸ್ಟೀಜ್ ಆಫೀಸ್ ವೆಂಚರ್ಸ್, ಬ್ರಿಗೇಡ್ ಗ್ರೂಪ್ ಮತ್ತು ಕೆ. ರಹೇಜಾ ಸಂಸ್ಥೆಗಳ ಪ್ರಮುಖರು ಭಾಗಿಯಾದರು.

ಪ್ರತಿ ಬುಧವಾರ 'ಕಂದಾಯ ಅದಾಲತ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಕಂದಾಯ ವಿಭಾಗಕ್ಕೆ ಸಂಬಂಧಿಸಿದ ನಾಗರಿಕರ ಕುಂದುಕೊರತೆಗಳಿಗೆ ಪರಿಹಾರ ನೀಡಲು ಪ್ರತಿ ಬುಧವಾರ 'ಕಂದಾಯ ಅದಾಲತ್' ಆಯೋಜಿಸಲಾಗುತ್ತದೆ.

ಕಂದಾಯ ವಿಭಾಗದ ಅಧಿಕಾರಿಗಳು ಪ್ರತಿ ಬುಧವಾರ 'ಕಂದಾಯ ಮತ್ತು ಕುಂದು ಕೊರತೆಗಳ ಅದಾಲತ್' ನಡೆಸಿ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸಬೇಕು ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಕಂದಾಯ ಅದಾಲತ್‌ನಲ್ಲಿ ಆಯಾ ವಲಯ, ಉಪ ವಿಭಾಗದ ಅಧಿಕಾರಿಗಳ ಹಾಜರಿ ಕಡ್ಡಾಯ. ಹೀಗಾಗಿ ಅಂತಹ ಅಧಿಕಾರಿಗಳನ್ನು ಯಾವುದೇ ಭೌತಿಕ ಅಥವಾ ವರ್ಚುಯಲ್ ಸಭೆಗೆ ಆಹ್ವಾನಿಸಬಾರದು ಎಂದು ಸೂಚಿಸಿದ್ದಾರೆ.

ಡಿ.16ಕ್ಕೆ 'ಪ್ರಜಾವಾಣಿ' ರಸಪ್ರಶ್ನೆ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗಾಗಿ 'ಪ್ರಜಾವಾಣಿ' ಹಮ್ಮಿಕೊಂಡಿರುವ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯ ಬೆಂಗಳೂರು ವಲಯ ಮಟ್ಟದ ಸ್ಪರ್ಧೆಯು ಡಿ.16ರಂದು ಬೆಳಿಗ್ಗೆ 9ರಿಂದ ಜಯನಗರದ 4ನೇ ಬ್ಲಾಕ್‌ನಲ್ಲಿರುವ ಯುವಪಥ 'ವಿವೇಕ' ಸಭಾಂಗಣದಲ್ಲಿ ನಡೆಯಲಿದೆ.

ವಲಯ ಮಟ್ಟದಲ್ಲಿ ನಡೆಯುವ ಈ ಸ್ಪರ್ಧೆಯಲ್ಲಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ 7ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳು–ವಿದ್ಯಾರ್ಥಿನಿಯರು ಭಾಗವಹಿಸಬಹುದಾಗಿದೆ. ಆಸಕ್ತರಿಗೆ ಉಚಿತ ಪ್ರವೇಶ ನೀಡಲಾಗಿದೆ.

ಶಾಲೆಯ ಸಮ್ಮತಿಯೊಂದಿಗೆ ಕ್ಯೂಆರ್ ಕೋಡ್ ಬಳಸಿ ನೋಂದಣಿ ಮಾಡಿಕೊಳ್ಳಬಹುದು. ವಿಜೇತರು ರಾಜ್ಯಮಟ್ಟದಲ್ಲಿ ಸ್ಪರ್ಧೆಗೆ ಪಾಲ್ಗೊಳ್ಳುವ ಅರ್ಹತೆ ಪಡೆಯಲಿದ್ದಾರೆ.

ಕ್ಯೂಆರ್ ಕೋಡ್

ಅರುಣಾಚಲ ಪ್ರದೇಶದ ಕೃಷಿ ಸಚಿವ ಗೇಬ್ರಿಯಲ್ ಡೆನ್ವಾಂಗ್ ವಾಂಗ್ಸು ಅವರ ನೇತೃತ್ವದ ತಂಡ ಐಐಎಚ್‌ಆರ್‌ಗೆ ಭೇಟಿ ನೀಡಿತ್ತು

ಐಐಎಚ್‌ಆರ್‌ಗೆ ಅರುಣಾಚಲ ಪ್ರದೇಶದ ಕೃಷಿ ಸಚಿವರ ಭೇಟಿ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಅರುಣಾಚಲ ಪ್ರದೇಶದ ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನೆ ಸಚಿವ ಗೇಬ್ರಿಯಲ್ ಡೆನ್ವಾಂಗ್ ವಾಂಗ್ಸು ಅವರ ನೇತೃತ್ವದ ತಂಡ ಐಐಎಚ್‌ಆರ್‌ನಲ್ಲಿ ನಡೆಯುತ್ತಿರುವ ಸಂಶೋಧನೆ, ಶಿಕ್ಷಣ ಮತ್ತು ವಿಸ್ತರಣಾ ಕಾರ್ಯಗಳನ್ನು ವೀಕ್ಷಿಸಲು ಭೇಟಿ ನೀಡಿತ್ತು.

ಹಣ್ಣಿನ ಬೆಳೆಗಳ ನರ್ಸರಿ, ಆಹಾರ ಸುರಕ್ಷತಾ ಪ್ರಯೋಗಾಲಯ, ಫೈಟೋಸಾನಿಟರಿ ಪ್ರಮಾಣೀಕರಣ ಘಟಕ, ಅಣಬೆ ಘಟಕ, ಬೀಜ ಘಟಕಗಳಿಗೆ ನಿಯೋಗವು ಭೇಟಿ ನೀಡಿ ಮಾಹಿತಿ ಪಡೆದುಕೊಂಡಿತು.

ಐಐಎಚ್‌ಆರ್‌ನಿಂದ ಅಂಗಾಂಗ ಕೃಷಿ ಘಟಕ ಸ್ಥಾಪನೆ, ತೋಟಗಾರಿಕೆಯಲ್ಲಿ ಮಾನವ ಸಂಪನ್ಮೂಲ ಸಾಮರ್ಥ್ಯ ವೃದ್ಧಿ, ತಂತ್ರಜ್ಞಾನ ವರ್ಗಾವಣೆ ಮತ್ತು ಪ್ರಾತ್ಯಕ್ಷಿಕೆಗಳ ಬಗ್ಗೆ ಅರುಣಾಚಲ ಪ್ರದೇಶ ಸರ್ಕಾರದ ತೋಟಗಾರಿಕಾ ಕಾರ್ಯದರ್ಶಿ ಕೋಟ್ ತೀನ್ಯ ವಿವರ ಪಡೆದುಕೊಂಡರು.

'ರಾಜ್ಯದ 5 ನಗರಗಳಲ್ಲಿ ಐಟಿ ಪಾರ್ಕ್'

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ರಾಜ್ಯದ ಐದು ಪ್ರಮುಖ ನಗರಗಳಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ) ಸೇವೆ ಒದಗಿಸುತ್ತಿರುವ ಕಂಪನಿಗಳಿಗೆ ಸುಸಜ್ಜಿತ ವಿಶ್ವದರ್ಜೆ ಮೂಲ ಸೌಕರ್ಯ ಹೊಂದಿರುವ ಕಚೇರಿ ಸ್ಥಳಾವಕಾಶ ಅಭಿವೃದ್ಧಿಪಡಿಸಲು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್) ಯೋಜನೆ ರೂಪಿಸಿದೆ.

ಈಗಾಗಲೇ ದೇವನಹಳ್ಳಿ ವಿಮಾನ ನಿಲ್ದಾಣ ಬಳಿ ಡಿಫೆನ್ಸ್ ಏರೋ ಸ್ಪೇಸ್ ಪಾರ್ಕ್‌ನಲ್ಲಿ ಕಿಯೋನಿಕ್ಸ್ ಸಂಸ್ಥೆಗೆ 12 ಎಕರೆ ಭೂಮಿಯನ್ನು ಸರ್ಕಾರ 99 ವರ್ಷದ ಗುತ್ತಿಗೆಗೆ ನೀಡಿದೆ. ಇಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಐಟಿಪಾರ್ಕ್ ನಿರ್ಮಾಣಕ್ಕೆ ಕಿಯೋನಿಕ್ಸ್ ಮುಂದಾಗಿದೆ. ದೇವನಹಳ್ಳಿ ಹೊರತಾಗಿ ಅಭಿವೃದ್ಧಿ ವಿಕೇಂದ್ರೀಕರಣ ಸಲುವಾಗಿ ಮೈಸೂರು, ಕಲಬುರಗಿ, ಹುಬ್ಬಳ್ಳಿ, ಮಂಗಳೂರು ನಗರಗಳಲ್ಲಿಯೂ ಕಿಯೋನಿಕ್ಸ್ ವಿಶ್ವದರ್ಜೆ ಮೂಲಸೌಕರ್ಯಹೊಂದಿರುವ ಕಚೇರಿ ಸ್ಥಳಾವಕಾಶ ನಿರ್ಮಿಸಿ ಐಟಿ ಕಂಪನಿಗಳಿಗೆ ನೀಡುವ ಉದ್ದೇಶ ಹೊಂದಿದೆ.

ಮೈಸೂರಿನ ಹೆಬ್ಬಾಳ ಕೈಗಾರಿಕಾ ವಲಯ, ಹುಬ್ಬಳ್ಳಿಯ ಗೋಕುಲ ರಸ್ತೆ, ಮಂಗಳೂರಿನ ಯೆಯ್ಯಾಡಿ, ಕಲಬುರಗಿ ಹೊರವಲಯದಲ್ಲಿ ಐಟಿ ಪಾರ್ಕ್ ನಿರ್ಮಾಣವಾಗಲಿದೆ ಎಂದು ತಿಳಿಸಿದ್ದಾರೆ.

ನಿಧನ ವಾರ್ತೆ

ಕಸ್ತೂರಿ ಮಿಣಜಗಿ

ಬೆಂಗಳೂರು: ಜೆ.ಪಿ.ನಗರದ ನಿವಾಸಿಯಾದ ಕಸ್ತೂರಿ ಚ. ಮಿಣಜಗಿ (79) ಅವರು ಶುಕ್ರವಾರ ಬೆಳಿಗ್ಗೆ ನಿಧನರಾಗಿದ್ದಾರೆ.

ಮೃತರಿಗೆ ಮೂವರು ಪುತ್ರಿಯರು ಮತ್ತು ಒಬ್ಬ ಪುತ್ರ ಇದ್ದಾರೆ. ಅವರ ಅಂತ್ಯಸಂಸ್ಕಾರ ಬನಶಂಕರಿ ಚಿತಾಗಾರದಲ್ಲಿ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮರೇಶ್



ಬೆಂಗಳೂರು: ಬಿಜೆಪಿ ಮುಖಂಡ ಹಾಗೂ ಮಾಹಿತಿ ಹಕ್ಕು ಅಧ್ಯಯನ ಸಂಸ್ಥೆ ಅಧ್ಯಕ್ಷ ಅಮರೇಶ್ (63) ಅವರು ಹೃದಯಾಘಾತದಿಂದ ಶುಕ್ರವಾರ ಸಂಜೆ ನಿಧನರಾದರು.

ಸುಮಾರು 25 ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಉನ್ನತ ವ್ಯಾಸಂಗಕ್ಕಾಗಿ ನೆರವಾಗಿದ್ದ ಅವರು, ವಿಲ್ಸನ್ ಗಾರ್ಡನ್‌ನಲ್ಲಿ ತಮ್ಮ ನಿವಾಸದ ಸಮೀಪದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಮಕ್ಕಳಿಗೆ ಉಚಿತ ಟ್ಯೂಷನ್‌ನ ವ್ಯವಸ್ಥೆ ಮಾಡುತ್ತಿದ್ದರು.

ಅವರಿಗೆ ಪತ್ನಿ ಭಾಗ್ಯವತಿ ಅಮರೇಶ್ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಚಾಮರಾಜಪೇಟೆ ಟಿ.ಆರ್. ಮಿಲ್‌ನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಧಾ ಓದಿರಿ

ಇನ್ಸ್‌ಪೆಕ್ಟರ್ ಜನರಲ್‌ರವರ ಕಚೇರಿ
ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು–63

ನಂ. ಬಿಐಟಿ/ಹರಾಜು/ಎಸ್‌ಟಿಸಿ–ಬಿಎಲ್‌ಆರ್/2024/16198

ಹರಾಜು ಪ್ರಕಟಣೆ

ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು ಇವರಲ್ಲಿನ ಬಿಎಸ್‌ಎಫ್ ತಂತ್ರಜ್ಞಾನ ಸಂಸ್ಥೆಯ (ಬಿಐಟಿ) ಹಾನಿಗೊಂಡಿರುವ/ದುರಸ್ತಿ ಮಾಡಲಾಗದ ತಾಂತ್ರಿಕ ಪದಾರ್ಥಗಳ ಸಾರ್ವಜನಿಕ ಹರಾಜು ಪ್ರಕ್ರಿಯೆಯನ್ನು **ಡಿಸೆಂಬರ್ 30 ರಂದು 1100 ಗಂಟೆಗೆ** ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರಿನಲ್ಲಿ ಕೈಗೊಳ್ಳಲಾಗುತ್ತದೆ.

2. ಆಸಕ್ತಿಯುಳ್ಳ ಎಲ್ಲಾ ಬಿಡ್‌ದಾರರು ನಿಗದಿತ ದಿನಾಂಕದಂದು ಸಮಯಕ್ಕೆ ಸರಿಯಾಗಿ ಹರಾಜಿನಲ್ಲಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.
3. ಎಲ್ಲಾ ಬಿಡ್‌ದಾರರು ಭದ್ರತಾ ಠೇವಣಿಯನ್ನಾಗಿ **ರೂ. 5000/–** (ರೂಪಾಯಿ ಐದು ಸಾವಿರ ಮಾತ್ರ) ಮೊತ್ತವನ್ನು ಹರಾಜು ಆರಂಭಕ್ಕೆ ಮುಂಚಿತವಾಗಿ ಪಾವತಿಸಬೇಕು. ಸದರಿ ಭದ್ರತಾ ಠೇವಣಿ ಮೊತ್ತವನ್ನು ಹರಾಜು ಇತ್ಯರ್ಥಗೊಂಡ ಬಳಿಕ ಹಿಂದಿರುಗಿಸಲಾಗುತ್ತದೆ/ಹರಾಜಿಗೆ ಹೊಂದಾಣಿಕೆ ಮಾಡಲಾಗುತ್ತದೆ.
4. ಯಶಸ್ವಿ ಬಿಡ್‌ದಾರರು ಹರಾಜುಗೊಂಡಿರುವ ಪದಾರ್ಥಗಳ ಮಾರಾಟ ಮೌಲ್ಯವನ್ನು ಸ್ಥಳದಲ್ಲಿಯೇ ಪಾವತಿಸಬೇಕು ಮತ್ತು ಹರಾಜು ಪೂರ್ಣಗೊಂಡ ಬಳಿಕ 12 ಗಂಟೆಗಳೊಳಗೆ ಪದಾರ್ಥಗಳನ್ನು ತಮ್ಮ ಸ್ವಂತ ವ್ಯವಸ್ಥೆಯಲ್ಲಿ ವಿಲೇವಾರಿ ಮಾಡಿಕೊಳ್ಳತಕ್ಕದ್ದು. ಈ ಸಂಸ್ಥೆಯಿಂದ ಸಾರಿಗೆ ಸೌಲಭ್ಯ ನೀಡಲಾಗುವುದಿಲ್ಲ.
5. ಒಂದು ವೇಳೆ, ಯಶಸ್ವಿ ಬಿಡ್‌ದಾರರು ಸ್ಥಳದಲ್ಲಿಯೇ ಹರಾಜು ಮೌಲ್ಯ ಪಾವತಿಸಲು ವಿಫಲರಾದಲ್ಲಿ, ಅಂತಹವರ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6. ಇನ್ಸ್‌ಪೆಕ್ಟರ್ ಜನರಲ್, ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು ಇವರ ನಿರ್ಧಾರವೇ ಎಲ್ಲಾ ವಿಷಯಗಳಲ್ಲಿ ಅಂತಿಮವಾಗಿರುತ್ತದೆ.
7. ಇನ್ಸ್‌ಪೆಕ್ಟರ್ ಜನರಲ್, ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು ಇವರು, ಯಾವುದೇ ಕಾರಣ ನೀಡದೆಯೇ ಹರಾಜನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– (ಹರೇಂದ್ರ ಕುಮಾರ್) 2ಐಸಿ
ಎಡಿಎಂ. ಆಫೀಸರ್
ಇನ್ಸ್‌ಪೆಕ್ಟರ್ ಜನರಲ್, ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು ಇವರ ಪರವಾಗಿ
ನವಂಬರ್, 2024

CBC 19110/11/0072/2425

IN THE COURT OF IX ADDITIONAL CITY CIVIL JUDGE AT BANGALORE (CCH-05)
Misc No.548/2021 IN O.S.No.498 OF 2020

BETWEEN: G.M. Nagaraj, Son of Mangaraju, Residing at No.266/A-1, 36th A Cross, Jayanagar 7th Block, Bengaluru 560070. ... **PETITIONERS**

AND: Vikram .M.P ... RESPONDENT

NOTICE TO RESPONDENT

Vikram .M.P, Son of Panduranga Shetty, Aged about 51 years, R/at no.14/1; Bull Temple Road, Basavanagudi, Shankarpuram, Bengaluru-560 004

WHEREAS, the Petitioner has filed the above case against the Respondents, seeking to set aside the order dated 21.09.2021 passed by this Hon'ble Court in O.S.No.498 of 2020. By the said order, this Hon'ble Court was pleased to dismiss the O.S.No.498 of 2020 for default.

WHEREFORE, this notice is for Respondent and same is published, directing you to appear before Hon'ble IX Additional District and Session Judge at Bengaluru, on **13.12.2024** about **11:00 A.M** to answer the suit. If you fail to appear before this Hon'ble court on said day, in person or through your counsel, otherwise you will be placed ex-parte and the case will be disposed off in accordance with law.

Given under my hand and seal of the court on this 28/11/2024

By order of the Court, Senior Sheristedar, City Civil Court, Bengaluru

ಸೆಂಟರ್ ಫಾರ್ ಮಟೀರಿಯಲ್ಸ್ ಫಾರ್ ಇಲೆಕ್ಟ್ರಾನಿಕ್ಸ್ ಟೆಕ್ನಾಲಜಿ (ಸಿ–ಮೆಟ್)

(ವೈಜ್ಞಾನಿಕ ಸಮಾಜ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (ಮೈಟಿ), ಭಾರತ ಸರ್ಕಾರ)
ಪ್ರಧಾನ ಕಚೇರಿ: ಸರ್ವೆ ನಂ. 34/2ಬಿ, ಪಂಚವಟಿ,ಡಾ. ಹೋಮಿ ಭಾಭಾ ರಸ್ತೆ, ಎನ್‌ಸಿಎಲ್ (ಪಿ.ಒ), ಪುಣೆ – 411008
ವೆಬ್‌ಸೈಟ್: http://www.cmet.gov.in

ಜಾಹೀರಾತು ಸಂ. 001/2024

ಸಿ–ಮೆಟ್ ಸಂಸ್ಥೆಯು ತನ್ನ ಪ್ರಧಾನ ಕಚೇರಿಯಲ್ಲಿ ಲಭ್ಯವಿರುವ ರಿಜಿಸ್ಟ್ರಾರ್ ಹುದ್ದೆಯನ್ನು ನೇರ ನೇಮಕಾತಿ/ಅಬ್ಸಾರ್ಪ್ಷನ್/ಡೆಪ್ಯುಟೇಶನ್ (ಅಲ್ಪಾವಧಿ ಗುತ್ತಿಗೆ ಸೇರಿ) ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅತ್ಯುತ್ತಮ ಶೈಕ್ಷಣಿಕ ದಾಖಲೆಗಳನ್ನು ಹೊಂದಿರುವ ಮತ್ತು ಸಂಬಂಧಿತ ಕಾರ್ಯಾನುಭವ ಹೊಂದಿರುವ ಭಾರತೀಯ ನಾಗರಿಕರಿಂದ ಆಫ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಹುದ್ದೆ ಹೆಸರು ಮತ್ತು ವೇತನ ಶ್ರೇಣಿ ಹಂತ	ಹುದ್ದೆ ಸಂಖ್ಯೆ	ಪ್ರವರ್ಗ	ನೇಮಕಾತಿ ವಿಧಾನ	ಗರಿಷ್ಠ ವಯೋಮಿತಿ
(1)	(2)	(3)	(4)	(5)	(6)
01.	ರಿಜಿಸ್ಟ್ರಾರ್ ಪಿಎಂಎಲ್–13 ರೂ. 123100–215900	01	1–ಯುಆರ್	ನೇರ ನೇಮಕಾತಿ/ಅಬ್ಸಾರ್ಪ್ಷನ್/ ಡೆಪ್ಯುಟೇಶನ್ (ಅಲ್ಪಾವಧಿ ಗುತ್ತಿಗೆ ಸೇರಿ): ಅವಧಿ 5 ವರ್ಷಗಳವರೆಗೆ	50 ವರ್ಷ

ನಿರ್ದಿಷ್ಟ ನಮೂನೆ, ವಯಸ್ಸು, ವಿದ್ಯಾರ್ಹತೆ ಮತ್ತು ಇನ್ನಿತರ ಮಾಹಿತಿಯು ಸಿ–ಮೆಟ್ ಸಂಸ್ಥೆಯ www.cmet.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಎಂಪ್ಲಾಯ್‌ಮೆಂಟ್ ನ್ಯೂಸ್‌ನಲ್ಲಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 30 ದಿನಗಳು ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ.

CBC - 06169/12/0002/2425
ಸಹಿ/– ರಿಜಿಸ್ಟ್ರಾರ್ (ಎ)

ರೈಲು ಗಾಲಿ ಕಾರ್ಖಾನೆ

ಯಲಹಂಕ ಬೆಂಗಳೂರು–560064
ವೆಬ್‌ಸೈಟ್: www.rwf.indianrailways.gov.in

ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಎಂ/ಓಟಿ/ಎಎಸ್‌ಎಂ/2024–25/36 ದಿನಾಂಕ: 29/11/2024

ಇ–ಟೆಂಡರ್: ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಯಾಂತ್ರಿಕ ಇಂಜಿನಿಯರ್ ರವರು ವೆಬ್‌ಸೈಟ್ http://www.ireps.gov.in (works) ಮೂಲಕ ಆನ್‌ಲೈನ್‌ನಲ್ಲಿ ಕೆಳಗಿನ ಕಾಮಗಾರಿಗಾಗಿ ಎಲೆಕ್ಟ್ರಾನಿಕ್ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯುಎಫ್/ಎಂ/ಓಟಿ/ಎಎಸ್‌ಎಂ/2024–25/52 ದಿನಾಂಕ: 29/11/2024. **ಕಾಮಗಾರಿಯ ಹೆಸರು:** ಆಕ್ಸಲ್ ಶಾಪ್‌ನಲ್ಲಿ ಇಓಟಿ ಕ್ರೇನ್‌ಗಳ ಅಗತ್ಯ ಆಧಾರಿತ ನಿರ್ವಹಣೆ. **ಅಂದಾಜು ವೆಚ್ಚ ರೂ.ಗಳಲ್ಲಿ:** 4679630.07. **ಇಎಂಡಿ ರೂ.ಗಳಲ್ಲಿ:** 93,600.00 **ಟೆಂಡರ್‌ಗಳನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ:** 21/12/2024 10.30 ಗಂಟೆಗೆ. **ಮುಕ್ತಾಯದ ಅವಧಿ:** 24 ತಿಂಗಳುಗಳು. ಈ ಟೆಂಡರ್ ಸೂಚನೆಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ವೀಕ್ಷಿಸಬಹುದು.

ಉಪ ಮುಖ್ಯ ಯಾಂತ್ರಿಕ ಇಂಜಿನಿಯರ್/ಎಎಂ

ICAR - National Institute of Animal Nutrition and Physiology
Adugodi, Bengaluru-560 030
Department of Agricultural Research and Education, Government of India

NIANP/ADV-8-CDN/2024-25

The walk - in - interview has been scheduled on 10.12.2024 for engaging of One Young Professional I under AICRP (NPIERPA) project on temporary basis. The consolidated remuneration is Rs. 30000/- per month. For detailed advertisement please visit the Institute website **www.nianp.res.in.**

Sd/- S. Shashikala
Senior Administrative Officer

ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್, ಕೋಲ್ಕತಾ
ಭಾರತ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ (ಮೈಟಿ) ವೈಜ್ಞಾನಿಕ ಸೊಸೈಟಿ

ELECTRONICS INDIA | सी डैक CDAC

ಆಸಕ್ತಿ ವ್ಯಕ್ತಪಡಿಸುವಿಕೆ

ಭಾರತ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ (ಮೈಟಿ) ಅಡಿಯಲ್ಲಿನ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಾಗಿರುವ, ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿ–ಡಾಕ್) ಕೋಲ್ಕತಾ, ಪ್ಲಾಟ್–ಇ2/1, ಬ್ಲಾಕ್–ಜಿಪಿ, ಸೆಕ್ಟರ್–5, ಸಾಲ್ಟ್ ಲೇಕ್ ಇಲೆಕ್ಟ್ರಾನಿಕ್ಸ್ ಕಾಂಪ್ಲೆಕ್ಸ್, ವಿಧಾನ ನಗರ, ಕೋಲ್ಕತಾ–700091 ಇವರು, ಬಂಬೂ ಶೂಟ್‌ಗಳಲ್ಲಿ ಸೈಯಾನೋಜೆನಿಕ್ ಗ್ಲೈಕೋಸೈಡ್ ಪತ್ತೆಗಾಗಿ ಕೈಯಿಂದ ಬಳಸಬಹುದಾದ "ಸಿಜಿ–ಸ್ಟಾಟ್" – ಉಪಕರಣದ ಟ್ರಾನ್ಸ್‌ಫರ್ ಆಫ್ ಟೆಕ್ನಾಲಜಿ (ಟಿಒಟಿ) ಗಾಗಿ ಆಸಕ್ತಿಯುಳ್ಳ ಪಕ್ಷಗಾರರಿಂದ/ ಉದ್ಯಮಶೀಲರಿಂದ "ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ)" ಆಹ್ವಾನಿಸಿದ್ದಾರೆ. ವಿವರಗಳಿಗಾಗಿ ದಯವಿಟ್ಟು ಭೇಟಿ ಕೊಡಿ www.cdac.in. ಯಾವುದೇ ವಿಚಾರಣೆಗಾಗಿ, ದಯವಿಟ್ಟು ಸಂಪರ್ಕಿಸಿ 9477355692/9405138189. ಇಒಐ ಸಲ್ಲಿಸಲು ಕೊನೆಯ ದಿನಾಂಕ: 26/12/2024 ರಂದು ಸಂಜೆ 5:00 ಗಂಟೆ.

CBC 06147/12/005/2425

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

❖ ವಾಣಿಜ್ಯ ನಿವೇಶನಗಳ ಇ–ಹರಾಜು ❖

ಈ ಹರಾಜು ಆರಂಭಗೊಳ್ಳುವ ದಿನಾಂಕ: 02.12.2024

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಾಣಿಜ್ಯ ನಿವೇಶನಗಳ ಇ–ಹರಾಜು ಪ್ರಕಟಿಸಿದೆ. ಈ ನಿವೇಶನಗಳ ಹರಾಜು ಹಾಗೂ ಮಾರಾಟವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಾಣಿಜ್ಯ ನಿವೇಶನಗಳು ಮತ್ತು ಮೂಲೆ ನಿವೇಶನಗಳ ವಿಲೇವಾರಿ ನಿಯಮಾವಳಿ 1984ರ ಅನುಸಾರ ನಡೆಸಲಾಗುವುದು. ನಿವೇಶನಗಳನ್ನು **"ಎಲ್ಲಿ ಹೇಗಿವೆಯೋ ಹಾಗಿರುವ ಸ್ಥಿತಿಯಲ್ಲಿ"** ಹರಾಜು ಮಾಡಲಾಗುವುದು.

ಪ್ರತಿ ಚ.ಮೀ.ಗೆ ರೂ.1000/- ಗಳ ಗುಣಕಗಳಲ್ಲಿ ಬಿಡ್ ದರದ ಕನಿಷ್ಠ ಏರಿಕೆ

ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 17.12.2024, ಸಂಜೆ 5.00 ಗಂಟೆಗೆ

ಇ–ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 19.12.2024ರ ಬೆಳಿಗ್ಗೆ 11.00 ಗಂಟೆಯಿಂದ
ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 20.12.2024ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

Sl. No	Layout	Block	Village	Sy. No.	E-W (In Mtrs)	N-S (In Mtrs)	Total Area (in Sqm)	Rate per sq mtr
1	RMV 2nd stage	2nd stage	Lottegollahalli	10/1 & 10/11F	As per sketch	As per sketch	2380.58	2,00,000.00

Phone no. 8722433608

ಇ–ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ–ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

1. ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
2. ಪ್ರತಿ ನಿವೇಶನಕ್ಕೆ ಇ.ಎಂ.ಡಿ ಮೊತ್ತ **ರೂ.50.00 ಲಕ್ಷಗಳನ್ನು** (ರೂ.ಐವತ್ತು ಲಕ್ಷ ಮಾತ್ರ) ನಿಗದಿಗೊಳಿಸಿದ್ದು, ಸದರಿ ಮೊತ್ತವನ್ನು ಹಾಗೂ ಇ–ಹರಾಜಿನ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವಂತೆ ಪಾವತಿ ಮಾಡಬೇಕು. ಆದರೆ ಸದರಿ ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಖಾತೆಗೆ ಪಾವತಿಸಬಾರದು. ಇ–ಹರಾಜು ಪೋರ್ಟಲ್ ಬದಲಿಗೆ ಬಿಡಿಎ ಖಾತೆಗೆ ಸಲ್ಲಿಸಿದರೆ ಮರುಪಾವತಿಯ ಸಮಯದಲ್ಲಿ ಇಎಂಡಿ ಮೇಲಿನ 5% ಸೇವಾ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ.
3. ಯಶಸ್ವಿ ಬಿಡ್ಡುದಾರರಿಗೆ/ ಅತಿ ಹೆಚ್ಚಿನ ಬಿಡ್ಡುದಾರರಿಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ 25% ರಷ್ಟು ಮೌಲ್ಯದಲ್ಲಿ ಇ.ಎಂ.ಡಿ ಮೊತ್ತ **ರೂ.50.00 ಲಕ್ಷಗಳನ್ನು** ಕಡಿತಗೊಳಿಸಿ ಬಾಕಿ ಮೌಲ್ಯವನ್ನು ದಿ: **30.12.2024 ರ ಗಂಟೆ 23.59.00 ರೊಳಗೆ** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಪಾವತಿ ಮಾಡಿ ಚಲನ್‌ಗಳನ್ನು ಆರ್ಥಿಕ ಶಾಖೆಯ ಮುಖ್ಯ ಲೆಕ್ಕಾಧಿಕಾರಿ, ಡಿ.ಬ್ಲಾಕ್, 2ನೇ ಮಹಡಿ, ಕೊಠಡಿ ಸಂಖ್ಯೆ:308ಗೆ ಸಲ್ಲಿಸಲು ಇ–Auction Advice Letter ನ್ನು ಇ–ಮೇಲ್ ಮುಖೇನ ಕಳುಹಿಸಲಾಗುವುದು. ನಿಗದಿತ ಸಮಯದೊಳಗೆ 25% ಮೌಲ್ಯವನ್ನು ಪಾವತಿಸಲು ವಿಫಲವಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

   ಬ್ಯಾಂಕ್‌ನ ಹೆಸರು: ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು – 560020

   ಉಳಿತಾಯ ಖಾತೆಯ ಹೆಸರು: ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

   ಉಳಿತಾಯ ಖಾತೆ ಸಂಖ್ಯೆ: 2828101053014 ಐ.ಎಫ್.ಎಸ್.ಸಿ ಕೋಡ್: CNRB0002828

   ಪಾವತಿಯ ವಿಧಾನ: ಆರ್.ಟಿ.ಜಿ.ಎಸ್ /ಎನ್.ಇ.ಎಫ್.ಟಿ

   ಬಿಡ್ಡುದಾರರು ತಮ್ಮ ಸ್ವಂತ ಬ್ಯಾಂಕ್ ಖಾತೆಯಿಂದ ಮಾತ್ರ ಇಎಂಡಿ/ 25% ಹಣವನ್ನು ಪಾವತಿಸಬೇಕು.
4. ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ/ ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು]. ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಭಾರತೀಯ ಅನಿವಾಸಿಗರು (NRI) ಸ್ವ–ಪ್ರಮಾಣ ದೃಢೀಕರಣ ಪತ್ರ (Self Attested) ವನ್ನು ಅಪ್‌ಲೋಡ್ ಮಾಡಬಹುದು. ಯಶಸ್ವಿ ಬಿಡ್‌ದಾರರು ತದನಂತರ ಭಾರತೀಯ ರಾಯಭಾರಿ ಕಛೇರಿ (ಎಂಬೆಸ್ಸಿ) ಯಿಂದ ಪಡೆದ ದೃಢೀಕೃತ ಪತ್ರವನ್ನು ನೀಡಬೇಕು.
5. ಯಶಸ್ವಿ ಬಿಡ್ಡುದಾರರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದು.
6. ಯಶಸ್ವಿಯಾಗದ ಬಿಡ್ಡುದಾರರಿಗೆ ಇಎಂಡಿ ಹಣ 50 ಲಕ್ಷ ರೂ.ಗಳನ್ನು ಒಂದು ತಿಂಗಳ ಒಳಗಾಗಿ ಅವರ ಖಾತೆಗೆ ಹಿಂತಿರುಗಿಸಲಾಗುವುದು.
7. ಇನ್ನಿತರೆ ಸಾಮಾನ್ಯ ಷರತ್ತು ಮತ್ತು ನಿಯಮ–ನಿಬಂಧನೆಗಳಿಗೆ ನಮ್ಮ ವೆಬ್‌ಸೈಟ್ : **www.kbda.karnataka.gov.in** ಗೆ ಭೇಟಿ ನೀಡಿ.
8. ಇ–ಹರಾಜು ನಿವೇಶನಗಳಿಗೆ ಕನಿಷ್ಠ 2 ಬಿಡ್‌ದಾರರು ಇರಬೇಕು. ಒಂದೇ ಬಿಡ್ಡರ್ ಅನ್ನು ತಿರಸ್ಕರಿಸಲಾಗುತ್ತದೆ.
9. ಬಿಡ್ಡಿಂಗ್ ಸಮಯದಲ್ಲಿ, ಅದೇ ನಿವೇಶನಕ್ಕೆ ಅಡ್ಡ ಹೆಸರುಗಳ ಯಾವುದೇ ನಕಲು ಇದ್ದರೆ, ಅಂತಹ ಬಿಡ್ ಅನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುತ್ತದೆ.
10. ಇ–ಹರಾಜು ಬಿಡ್ಡುದಾರರು ವೆಬ್‌ಸೈಟ್: **https://kppp.karnataka.gov.in** ಗೆ ಲಾಗ್‌ಇನ್ ಮಾಡುವ ಮೂಲಕ ಹೊಸ ಇ–ಹರಾಜು ಬಿಡ್ಡಿಂಗ್ ಬಳಕೆದಾರರ ಕೈಪಿಡಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ನು ಸಂಪರ್ಕಿಸಿ: 080–46010000 ಮತ್ತು 080–68948777.
11. ಬಿಡ್ಡುದಾರರು ನಿಗದಿತ ಮಾದರಿ ಸಹಿ ನಮೂನೆಯನ್ನು (ಇದರಲ್ಲಿನ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ) ಮತ್ತು ಸಂಪರ್ಕ ಮಾಹಿತಿ ಸ್ವರೂಪವನ್ನು ವೆಬ್‌ಸೈಟ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿ, ವಿವರಗಳನ್ನು ಭರ್ತಿ ಮಾಡಿ ಮತ್ತು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು.
12. ನಿವೇಶನದ ಜಂಟಿ ಖರೀದಿದಾರರು ಒದಗಿಸಿದ ಸ್ವರೂಪದಲ್ಲಿ ಜಂಟಿ ಹೆಸರನ್ನು ನಿರ್ದಿಷ್ಟಪಡಿಸಬೇಕು ಮತ್ತು ಇ–ಹರಾಜು ಪೋರ್ಟಲ್‌ನಲ್ಲಿ ತಮ್ಮ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮದುವೆ ಪ್ರಮಾಣಪತ್ರ, ಪಾಸ್‌ಪೋರ್ಟ್ ಅಥವಾ ಯಾವುದೇ ಇತರ ಸರ್ಕಾರ ನೀಡಿದ ದಾಖಲೆಗಳನ್ನು ಜಂಟಿಯಾಗಿ ಅಪ್‌ಲೋಡ್ ಮಾಡಬೇಕು. ಜಂಟಿ ನೋಂದಣಿಗಾಗಿ ತಡವಾಗಿ ಸಲ್ಲಿಸುವ ವಿನಂತಿಗಳನ್ನು ತಿರಸ್ಕರಿಸಲಾಗುತ್ತದೆ.
13. ಯಶಸ್ವಿ ಬಿಡ್ಡುದಾರರಿಗೆ ಹರಾಜಾದ ನಿವೇಶನಗಳನ್ನು ಅವು ಹೇಗಿದೆಯೋ ಅದೇ ಸ್ಥಿತಿಯಲ್ಲಿ ಹಂಚಲಾಗುತ್ತದೆ. ಇ–ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಬಿಡ್ ಮಾಡುವ ಮೊದಲು ನಿವೇಶನವಿರುವ ಸ್ಥಳ, ರಸ್ತೆಯ ಅಗಲ ಇತ್ಯಾದಿ ವಿಷಯಗಳನ್ನು ಭೌತಿಕವಾಗಿ ಪರಿಶೀಲಿಸಬೇಕು. ಇ–ಹರಾಜಿನ ಮೂಲಕ ನೀಡಲಾದ ನಿವೇಶನಗಳನ್ನು ರದ್ದುಗೊಳಿಸಲಾಗುವುದಿಲ್ಲ / ಬದಲಿಯಾಗಿ ನೀಡಲಾಗುವುದಿಲ್ಲ.
14. ಇ–ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಮೇಲೆ ನಿರ್ದಿಷ್ಟಪಡಿಸಿದ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧವಾಗಿರಬೇಕು.
15. ಇ–ಹರಾಜಿಗೆ ಸಂಬಂಧಿಸಿದಂತೆ ಬಿಡ್ಡುದಾರರು ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸದೇ ನೇರವಾಗಿ ಪ್ರಾಧಿಕಾರವನ್ನು ಸಂಪರ್ಕಿಸುವುದು.

ಬಿಡ್‌ದಾರರು ಬಿಡ್ ಮಾಡುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಬೇಕು ಮತ್ತು ಅದರ ಪ್ರಕಾರ ಭಾಗವಹಿಸಬೇಕು.

ಇ–ಹರಾಜಿನ ಇತರೆ ಮಾಹಿತಿ ಮತ್ತು ನಿಯಮ ನಿಬಂಧನೆಗಳಿಗೆ **https://kppp.karnataka.gov.in** ಲಾಗಾನ್ ಆಗಿ
ಬಿಡಿಎ ವಾಣಿಜ್ಯ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ **080–23368435 / 23368036** ಹಾಗೂ ಕೆಪಿಪಿಪಿನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ **080–46010000 / 68948777** ಸಂಪರ್ಕಿಸಿ

ನಂ. ಬೆಂಅಪ್ರಾ/ಅಸ/ಇ–ಹರಾಜು/ಟಿ–07/2024–25, ದಿನಾಂಕ: 26.11.2024
ಸಹಿ/- ಅಭಿಯಂತರ ಸದಸ್ಯರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ: ಬಿಡಿಎ/2024–25/ಇಎಲ್/ವರ್ಕ್–ಇಂಡೆಂಟ್70 ದಿನಾಂಕ: 29.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬಿಡಿಎಯು ಬೆಂಗಳೂರಿನಲ್ಲಿರುವ ಬಿಡಿಎ ಕೇಂದ್ರಕಚೇರಿ ಕಟ್ಟಡದಲ್ಲಿ ಅಸ್ತಿತ್ವದಲ್ಲಿರುವ ಹಾಳಾಗಿರುವ ಎಲ್‌ಟಿ ಪ್ಯಾನೆಲ್ ಬೋರ್ಡ್‌ಗಳು ಮತ್ತು ಅದರ ಬಿಡಿಭಾಗಗಳನ್ನು ಬದಲಾಯಿಸಿ 3.5ಸಿX300ಚ.ಮಿ.ಮೀ. Al.Ar LT UG ಕೇಬಲ್, 3.5ಸಿX240ಚ.ಮಿ.ಮೀ. Al.Ar LT UG ಕೇಬಲ್, 3.5ಸಿX95ಚ.ಮಿ.ಮೀ. LT UG ಕೇಬಲ್ ಒದಗಿಸುವ ಕಾಮಗಾರಿಗಾಗಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ವೇಳಾಪಟ್ಟಿ: (1) ಟೆಂಡರ್ ಸಂಬಂಧಿತ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 29.11.2024**. (2) ಇ–ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **13.12.2024, ಸಂಜೆ 4.00 ಗಂಟೆವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **14.12.2024, ಸಂಜೆ 5.00 ಗಂಟೆಗೆ.** (4) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: ಇ–ಪ್ರೋಕ್ ಪೋರ್ಟಲ್‌ನ್ನು ಗಮನಿಸಿ. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಗೆ ಭೇಟಿನೀಡಿ ಅಥವಾ ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಬಿಡಿಎ, ಟಿ.ಚೌಡಯ್ಯರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು, ದೂರವಾಣಿ ಸಂಖ್ಯೆ: 91+9845630164 ಸಂಪರ್ಕಿಸಿ, ವಿಚಾರಣೆಗೆ ಸಂಪರ್ಕಿಸಿ ಇ–ಮೇಲ್ ಐಡಿ: eeelec.bda@gmail.com

ಸಹಿ/– ಕಾರ್ಯಪಾಲಕ ಅಭಿಯಂತರರು(ವಿದ್ಯುತ್),
ವಿದ್ಯುತ್ ವಿಭಾಗ, ಬೆಂಅಪ್ರಾ, ಬೆಂಗಳೂರು.

ಈಶಾನ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ
ಟೆಂಡರ್ ಪ್ರಕಟಣೆ ಸಂ.
ಎನ್–235–62 ಟೆಲೆ ಟೆಂಡರ್ 06–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಡೆ. ಚೀಫ್ ಸಿಗ್ನಲ್ & ಟೆಲಿಕಾಂ ಇಂಜಿನಿಯರ್/ಟೆಲೆ/ಹೆಚ್‌ಕ್ಯೂ, ಈಶಾನ್ಯ ರೈಲ್ವೆ, ಗೋರಖ್‌ಪುರ ಇವರು ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಿರುವಂತಹ ಅರ್ಹತಾ ಮಾನದಂಡಗಳ ಮೇರೆಗೆ ಸಾಕಷ್ಟು ಅನುಭವವುಳ್ಳ ಗುತ್ತಿಗೆದಾರರಿಂದ ಇ–ಟೆಂಡರ್ ಆಹ್ವಾನಿಸಿದ್ದಾರೆ. 1) **ಟೆಂಡರ್ ನಂ.** ಎನ್–235–62 ಟೆಲೆ ಟೆಂಡರ್ 06–2024, 2) ಕಾಮಗಾರಿ ಹೆಸರು: ಈಶಾನ್ಯ ರೈಲ್ವೆಯ ಗೋರಖ್‌ಪುರ ಜಿಎಂ ಕಚೇರಿಯಲ್ಲಿನ ತುರ್ತು ಸಂವೇದನಾ ಕೊಠಡಿಯಲ್ಲಿ ಡಿಜಿಟಲ್ ಆಡಿಯೋ ಕಾನ್ಫರೆನ್ಸ್ ಸಿಸ್ಟಮ್ ಒದಗಿಸಲು ವಿವಿಧ ಟೆಲಿಕಾಂ ಸಲಕರಣೆಗಳ ಪೂರೈಕೆ, ಅಳವಡಿಕೆ, ಪರೀಕ್ಷೆ, ಚಾಲನೆ. 3) ಟೆಂಡರ್ ಮೌಲ್ಯ: ರೂ. 2554906.37 (ರೂ. ಇಪ್ಪತ್ತೈದು ಲಕ್ಷ ಐವತ್ನಾಲ್ಕು ಸಾವಿರದ ಒಂಬತ್ತು ನೂರ ಆರು ಮತ್ತು ಮೂವತ್ತೇಳು ಪೈಸೆ ಮಾತ್ರ) 4) ಬಿಡ್ ಸೆಕ್ಯೂರಿಟಿ: ರೂ. 51,100/– 5) ಆಫರ್ ವ್ಯಾಲಿಡಿಟಿ: 60 ದಿನಗಳು 6) ಟೆಂಡರ್ ಕ್ಲೋಸಿಂಗ್ ಮತ್ತು ಓಪನಿಂಗ್ ದಿನಾಂಕ, ಸಮಯ ಮತ್ತು ಸ್ಥಳ: 27.11.2024 ರಂದು 15:00 ಗಂಟೆ, ಡಿಎಸ್‌ಟಿಇ/ಟೆಲೆ ಕಚೇರಿ, ಈಶಾನ್ಯ ರೈಲ್ವೆ, ಗೋರಖ್‌ಪುರ. 7) ಪೂರ್ಣಗೊಳಿಸುವ ಅವಧಿ: 03 (ಮೂರು) ತಿಂಗಳು 8) ಟೆಂಡರ್‌ನಲ್ಲಿನ ಬದಲಾವಣೆಗಳಿಗಾಗಿ ದಯವಿಟ್ಟು ವೆಬ್‌ಸೈಟ್‌ನಲ್ಲಿ ಮೂಲ ಟೆಂಡರ್‌ನ ತಿದ್ದುಪಡಿ ಪರಿಶೀಲಿಸಿರಿ. 9) ವಿವರವಾದ ಟೆಂಡರ ಪ್ರಕಟಣೆ, ಅರ್ಹತಾ ಮಾನದಂಡ, ಷರತ್ತು ಮತ್ತು ನಿಬಂಧನೆಗಳು http://www.ireps. gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. **ಸೂಚನೆ:** ಟೆಂಡರ್‌ದಾರರ/ ಬಿಡ್‌ದಾರರು ತಮ್ಮ ಬಿಡ್ ಜೊತೆಗೆ ಸಂಬಂಧಿತ ಎಲ್ಲಾ ಅಡಕಗಳನ್ನು/ ನಮೂನೆಗಳನ್ನು/ ಅನುಬಂಧಗಳನ್ನು ಅಪ್‌ಲೋಡ್ ಮಾಡತಕ್ಕದ್ದು.

ಡೆ. ಚೀಫ್ ಸಿಗ್ನಲ್ & ಟೆಲಿಕಾಂ ಇಂಜಿನಿಯರ್/ಟೆಲೆ/ಹೆಚ್‌ಕ್ಯೂ
CPRO/Sig.-73 ಈಶಾನ್ಯ ರೈಲ್ವೆ, ಗೋರಖ್‌ಪುರ

"ಛಾವಣಿ ಮತ್ತು ಮೆಟ್ಟಿಲುಗಳ ಮೇಲೆ ಪ್ರಯಾಣಿಸದಿರಿ"

ಸಾರ್ವಜನಿಕ ಸೂಚನೆ 30-11-2024

ಬೆಂಗಳೂರು ಜಿಲ್ಲೆ, ಯಲಹಂಕ ತಾಲ್ಲೂಕು, ಬಂಡಿಕೊಡಿಗೇಹಳ್ಳಿ ಗ್ರಾಮದಲ್ಲಿರುವ ಒಟ್ಟು ವಿಸ್ತೀರ್ಣ 12 ಎಕರೆ 35 ಗುಂಟೆಗಳ ಜಮೀನು ಅಂದರೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕ್ರ.ಸಂ.1 ರಿಂದ 7 ಎಂದು ನಮೂದಿಸಿರುವ ಮತ್ತು **ಷೆಡ್ಯೂಲ್ ಪ್ರಾಪರ್ಟಿ** ಎಂದು ಇನ್ನು ಮುಂದೆ ಕರೆಯಲ್ಪಡುವ ಜಮೀನು ದಿವಂಗತ ನಾರಾಯಣ ಸ್ವಾಮಿ ಯವರ ಪುತ್ರರಾದ ಜಗದೀಶ ಎನ್. ಅವರಿಗೆ ಸೇರಿದ್ದು ಅವರು ಈಗಿನ ಮಾಲೀಕರಾಗಿದ್ದು, ಈ ಸ್ವತ್ತನ್ನು ಅವರಿಂದ ಪಡೆದು ಅಭಿವೃದ್ಧಿಪಡಿಸಲು ನಮ್ಮ ಕಕ್ಷಿದಾರರು ಇಚ್ಚಿಸುತ್ತಿದ್ದಾರೆ.

ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಜಮೀನಿನ ಯಾವುದೇ ಭಾಗದ ಮೇಲೆ, ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಹಕ್ಕು, ಮಾಲೀಕತ್ವ, ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿದ್ದಲ್ಲಿ ಅಥವಾ ದಾಖಲಾತಿಗಳನ್ನು ಹೊಂದಿದ್ದಲ್ಲಿ, ಸದರಿ ಮಾಲೀಕರ ವಿರುದ್ಧ ಆಕ್ಷೇಪಣೆಗಳಿದ್ದಲ್ಲಿ ಅಥವಾ ಸದರಿ ಮಾಲೀಕರೊಂದಿಗೆ ನಮ್ಮ ಕಕ್ಷಿದಾರರು ನಡೆಸುವ ವ್ಯವಹಾರದ ಬಗ್ಗೆ ಆಕ್ಷೇಪಣೆ ಇದ್ದಲ್ಲಿ, ಅಂತಹವರು ಸದರಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **ಹದಿನೈದು (15) ದಿನಗಳ ಒಳಗಾಗಿ** ತಮ್ಮ ಆಕ್ಷೇಪಣೆಯನ್ನು ದಾಖಲಾತಿಗಳ ಪುರಾವೆಗಳೊಡನೆ ಕೆಳಸಹಿದಾರಿಗೆ ತಿಳಿಸತಕ್ಕದ್ದು. ಇಲ್ಲದಿದ್ದರೆ, ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿಯು ಯಾವುದೇ ಹಕ್ಕು, ಹಕ್ಕು ಬಾಧ್ಯತೆ, ಅಥವಾ ಆಸಕ್ತಿ ಹೊಂದಿರುವುದಿಲ್ಲವೆಂದು ತಿಳಿಯಲಾಗುವುದು, ಮತ್ತು ಇದರಂತೆ ನಮ್ಮ ಕಕ್ಷಿದಾರರು, ಈ ಸ್ವತ್ತಿನ ಮೇಲೆ ಇತರರ ಹಕ್ಕು ಇಲ್ಲವೆಂದು ಭಾವಿಸಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ವ್ಯವಹರಿಸಲು ಮುಂದಾಗುವರು.

ಷೆಡ್ಯೂಲ್

ಕ್ರ. ಸಂ.	ಸರ್ವೆ ಸಂ.	ವಿಸ್ತೀರ್ಣ		ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
		ಎ	ಗುಂ				
1	49	1	39	ಸರ್ವೆ ನಂ.48	ಹಳ್ಳ ಮತ್ತು ಸರ್ವೆ ನಂ.65	ಸರ್ವೆ ನಂ.50	ಸರ್ವೆ ನಂ.66
2	50	04	22	ಸರ್ವೆ ನಂ.48 ಮತ್ತು ಕಾಲುದಾರಿ	ಹಳ್ಳ ಮತ್ತು ತದನಂತರ ಸರ್ವೆ ನಂ.64	ಸರ್ವೆ ನಂ.51 ಮತ್ತು ಕಾಲುದಾರಿ	ಸರ್ವೆ ನಂ.49
3	64/1	1	14	ಹಳ್ಳ ಮತ್ತು ಸರ್ವೆ ನಂ.50	ಸರ್ವೆ ನಂ.63	ಸರ್ವೆ ನಂ.64/5 ಮತ್ತು 64/6	ಸರ್ವೆ ನಂ.64/2 ಮತ್ತು 64/3
4	64/2	00	29	ಸರ್ವೆ ನಂ.64/3	ಸರ್ವೆ ನಂ.62	ಸರ್ವೆ ನಂ.63 ಮತ್ತು 64/1	ಸರ್ವೆ ನಂ.64/4
5	64/3	00	32	ಸರ್ವೆ ನಂ.50 ಮತ್ತು ಹಳ್ಳ	ಸರ್ವೆ ನಂ.64/2	ಸರ್ವೆ ನಂ.64/1	ಸರ್ವೆ ನಂ.64/4
6	64/4	01	19	ಸರ್ವೆ ನಂ.50 ಮತ್ತು ಹಳ್ಳ	ಸರ್ವೆ ನಂ.62;	ಸರ್ವೆ ನಂ. 64/2 ಮತ್ತು 64/3	ಸರ್ವೆ ನಂ.65
7	64/5	02	00	ಸರ್ವೆ ನಂ.64/6	ಕಾಲುವೆ / ನಾಲೆ ಮತ್ತು ರಸ್ತೆ	ಸರ್ವೆ ನಂ.53/1	ಸರ್ವೆ ನಂ.63 ಮತ್ತು 64/1
ಒಟ್ಟು		12	35				

ಸಹಿ/– (ಆರ್. ಸುನಿತಾ) ಇಂಡಸ್‌ಲಾ
#101, 1ನೇ ಮಹಡಿ, ಎಂಬಸಿ ಕ್ಲಾಸಿಕ್, #11, ವಿಟ್ಟಲ್ ಮಲ್ಯ ರಸ್ತೆ, ಬೆಂಗಳೂರು 560001. ದೂರವಾಣಿ ಸಂಖ್ಯೆ: 080 40726600.

ರೇವಾ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು

ರೇವಾ: 4537 ವಿದ್ಯಾರ್ಥಿಗಳಿಗೆ ಪದವಿ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 9ನೇ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸಿದ 4537 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

3311 ವಿದ್ಯಾರ್ಥಿಗಳಿಗೆ ಪದವಿ, 1156 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ, 70 ಮಂದಿಗೆ ಪಿಎಚ್.ಡಿ. ಪದವಿ ಪ್ರದಾನ ಮಾಡಲಾಯಿತು. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಅತ್ಯುತ್ತಮ ಸಾಧನೆಗೈದ 66 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ)ಅಧ್ಯಕ್ಷ ಮಾಮಿದಾಳ ಜಗದೇಶ್ ಕುಮಾರ್ ಮಾತನಾಡಿ, 'ಭಾರತೀಯ ಪ್ರಜೆಗಳಾಗಿ ನಮ್ಮ ಸಂವಿಧಾನ, ಇಲ್ಲಿನ ಸಂಸದೀಯ ವ್ಯವಸ್ಥೆ, ಪ್ರಜಾಪ್ರಭುತ್ವದ ಚುನಾವಣಾ ಪ್ರಕ್ರಿಯೆಗಳು, ನ್ಯಾಯಾಂಗ ಹಾಗೂ ಮಾಧ್ಯಮದಂತಹ ದೃಢವಾದ ಸಂಸ್ಥೆಗಳ ಬಗ್ಗೆ ಹೆಮ್ಮೆ ಪಡಬೇಕು' ಎಂದು ತಿಳಿಸಿದರು.

ರಾಷ್ಟ್ರೀಯ ಶಿಕ್ಷಣನೀತಿಯ ಚೌಕಟ್ಟು, ಸಾಂವಿಧಾನಿಕ ಮೌಲ್ಯದಲ್ಲಿದೆ. ಪ್ರಗತಿ ಪರ, ಒಳಗೊಳ್ಳುವ ಮತ್ತು ಸುಸ್ಥಿರ ಭವಿಷ್ಯದ ಭಾರತೀಯ ಶಿಕ್ಷಣವ್ಯವಸ್ಥೆಯ ಸುಧಾರಣೆ ಮಾಡುವುದು ಇದರ ಮುಖ್ಯ ಗುರಿ. ಸಂವಿಧಾನದ ಸಮಾನತೆ ಮತ್ತು ಒಳಗೊಳ್ಳುವಿಕೆಯ ಬದ್ಧತೆಗೆ ಶಿಕ್ಷಣ ನೀತಿ ಪೂರಕವಾಗಿದೆ ಎಂದು ಹೇಳಿದರು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಪಿ.ಶ್ಯಾಮರಾಜು ಮಾತನಾಡಿ, 'ವಿದ್ಯಾರ್ಥಿಗಳು ಹಾಗೂ ಪೋಷಕರೇ ವಿಶ್ವವಿದ್ಯಾಲಯದ ಪ್ರಗತಿಯ ಹಿಂದಿನ ಪ್ರೇರಕ ಶಕ್ತಿ' ಎಂದು ಕೃತಜ್ಞತೆ ಸಲ್ಲಿಸಿದರು.

ರೇವಾ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಎನ್.ರಮೇಶ್, ಸಹ ಕುಲಪತಿ ಉಮೇಶ್ ಎಸ್.ರಾಜು ಉಪಸ್ಥಿತರಿದ್ದರು.

ಕ್ರಯಪತ್ರ: ಸರ್ಕಾರಕ್ಕೆ ನೋಟಿಸ್

1998ರಲ್ಲಿ ಸ್ಥಳಾಂತರಗೊಂಡಿದ್ದ ಕೊಳೆಗೇರಿ ನಿವಾಸಿಗಳು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕೊಳೆಗೇರಿಯ 951 ಕುಟುಂಬಗಳಿಗೆ ಕ್ರಯಪತ್ರಕ್ಕಾಗಿ ಕೋರಿದ್ದ ಅರ್ಜಿ
- ಡಿಸೆಂಬರ್ 17ಕ್ಕೆ ಪ್ರಕರಣದ ವಿಚಾರಣೆ ಮುಂದೂಡಿದ ಹೈಕೋರ್ಟ್

ಬೆಂಗಳೂರು: 'ಹೊಂಬೇಗೌಡ ನಗರ ಮಾಧವನ್ ಪಾರ್ಕ್ ಕೊಳೆಗೇರಿ ಪ್ರದೇಶದಿಂದ ಕೋರಮಂಗಲ ಮೂರನೇ ಹಂತದ ಕೊಳೆಗೇರಿ ಪ್ರದೇಶಕ್ಕೆ ಸ್ಥಳಾಂತರಿಗೊಂಡಿರುವ 951 ಕುಟುಂಬಗಳಿಗೆ ಕ್ರಯಪತ್ರ ವಿತರಿಸಲು ನಿರ್ದೇಶಿಸಬೇಕು' ಎಂದು ಕೋರಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ 'ಕರ್ನಾಟಕ ಹರಿಜನ ಕೊಳೆಗೇರಿ ನಿವಾಸಿಗಳ ಸಂಘ'ದ ಅಧ್ಯಕ್ಷ ವಿ.ಎಸ್.ಕೃಷ್ಣ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ರಾಜಗೋಪಾಲ ನಾಯ್ಡು ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಡಿಸೆಂಬರ್ 17ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಹಲವಾರು ದಶಕಗಳಿಂದ ಮಾಧವನ್ ಪಾರ್ಕ್ ಕೊಳೆಗೇರಿ ಪ್ರದೇಶದಲ್ಲಿ ವಾಸವಾಗಿದ್ದ 951 ಕುಟುಂಬಗಳನ್ನು ರಾಜ್ಯ ಸರ್ಕಾರ 1998ರಲ್ಲಿ ಕೋರಮಂಗಲ ಮೂರನೇ ಹಂತಕ್ಕೆ ಸ್ಥಳಾಂತರಿಸಿದೆ. ಬಳಿಕ ಹಂಚಿಕೆ ಪತ್ರ ಹಾಗೂ ಹಕ್ಕುಪತ್ರಗಳನ್ನೂ ನೀಡಲಾಗಿದೆ. ಮಾಧವನ್ ಪಾರ್ಕ್‌ನಿಂದ ಕೋರಮಂಗಲಕ್ಕೆ ಸ್ಥಳಾಂತರಗೊಂಡ ಕೊಳೆಗೇರಿ ನಿವಾಸಿಗಳಿಗೆ ಕ್ರಯಪತ್ರ ನೀಡುವಂತೆ 1996ರಲ್ಲಿ ಸರ್ಕಾರ ಆದೇಶವನ್ನೂ ಹೊರಡಿಸಿದೆ. ಈ ವಿಚಾರವಾಗಿ ಸರ್ಕಾರ ಮತ್ತು ಪಾಲಿಕೆಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಕ್ರಯಪತ್ರ ಇಲ್ಲದ ಕಾರಣ, ಖಾತಾ ಸಿಗುತ್ತಿಲ್ಲ. ಇದರಿಂದ ಕಟ್ಟಡ ನಿರ್ಮಾಣಕ್ಕೆ ತೊಂದರೆ ಉಂಟಾಗಿದೆ. 30 ವರ್ಷಗಳಿಂದ ಕೊಳೆಗೇರಿ ನಿವಾಸಿಗಳು ಈ ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ಅರ್ಜಿಯಲ್ಲಿ ದೂರಲಾಗಿದೆ.

'ರಾಜ್ಯ ಸರ್ಕಾರ 1996ರಲ್ಲಿ ಹೊರಡಿಸಿದ ಆದೇಶ ಪಾಲಿಸಿರುವ ಕೊಳೆಗೇರಿ ನಿವಾಸಿಗಳಿಗೆ ಕ್ರಯಪತ್ರ ನೀಡುವಂತೆ ಸರ್ಕಾರ ಮತ್ತು ಪಾಲಿಕೆಗೆ ನಿರ್ದೇಶಿಸಬೇಕು. ಅರ್ಜಿದಾರ ಸಂಘದ ನೆರವಿನೊಂದಿಗೆ ತನಿಖೆ ನಡೆಸಿ ಮೂಲ ನಿವಾಸಿಗಳನ್ನು ಗುರುತಿಸಲು ನಿರ್ದೇಶಿಸಬೇಕು' ಎಂದು ಕೋರಲಾಗಿದೆ.

ಹಂಪಿ ವಿ.ವಿಗೆ ಅನುದಾನ ಬಿಡುಗಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಸ್ಥಾಪನೆಯಾಗಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕೂಡಲೇ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ರಾಜ್ಯದಲ್ಲಿ ಆಡಳಿತ ನಡೆಸಿರುವ ಮೂರೂ ಪಕ್ಷಗಳ ನೇತೃತ್ವದ ಸರ್ಕಾರಗಳು ಸರಿಯಾಗಿ ಅನುದಾನ ಬಿಡುಗಡೆ ಮಾಡಿಲ್ಲ ಎಂದಿದ್ದಾರೆ.

ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರ, ಬೋಧನಾ ಕಟ್ಟಡ, ವಿದ್ಯಾರ್ಥಿ ವಸತಿ ಗೃಹಗಳು ಸೇರಿದಂತೆ ವಿವಿಧ ಮೂಲಸೌಕರ್ಯಗಳಿಗಾಗಿ ಅಲ್ಲಿನ ಕುಲಪತಿ ₹150 ಕೋಟಿಯ ಪ್ರಸ್ತಾವವನ್ನು 2023ರ ಡಿ.20ರಂದು ಸಲ್ಲಿಸಿದ್ದರು. ಇದುವರೆಗೂ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿಲ್ಲ ಎಂದು ಬರೆದಿದ್ದಾರೆ.

ಪರಿಕ್ರಮ ಚಾಂಪಿಯನ್ಸ್ ಲೀಗ್: ಸೆಮಿಗೆ ಅಲೋಷಿಯಸ್

ಬೆಂಗಳೂರು: ನಗರದ ಸೇಂಟ್ ಅಲೋಷಿಯಸ್ ಶಾಲಾ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 4–3 ಗೋಲುಗಳಿಂದ ಅಸ್ಸಾಮಿನ ಹೈತೆ ಮೆಮೋರಿಯಲ್ ಫ್ರೆಂಡ್‌ಷಿಪ್ ಸ್ಕೂಲ್ ತಂಡವನ್ನು ಸೋಲಿಸಿ ಪರಿಕ್ರಮ ಚಾಂಪಿಯನ್ಸ್ ಲೀಗ್ 12ನೇ ಆವೃತ್ತಿಯ ಸೆಮಿಫೈನಲ್ ತಲುಪಿತು.

ಅಶೋಕನಗರದ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಎಂಟರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಗ್ರೀನ್‌ವುಡ್ ಹೈಸ್ಕೂಲ್ ತಂಡ 4–0 ಗೋಲುಗಳಿಂದ ಡಿಪಿಎಸ್ ನಾರ್ತ್ ತಂಡವನ್ನು ಮಣಿಸಿತು.

ಇತರ ಪಂದ್ಯಗಳಲ್ಲಿ ಸೇಂಟ್ ಜೋಸೆಫ್ ಬಾಲಕರ ಹೈಸ್ಕೂಲ್ 1–0ರಿಂದ ಗೋವಾದ ಸೇಂಟ್ ಆನ್ಸ್ ತಂಡವನ್ನು ಸೋಲಿಸಿದರೆ, ಲೆಗಸಿ ಸ್ಕೂಲ್ ಪೆನಾಲ್ಟಿ ಶೂಟೌಟ್‌ನಲ್ಲಿ 4–1ರಿಂದ ಪಾಟರಿ ಟೌನ್‌ನ ಸರ್ಕಾರಿ ಪ್ರೌಢಶಾಲಾ ತಂಡವನ್ನು ಮಣಿಸಿತು.

ಪ್ಲೇಟ್ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ಗೋವಾದ ಸೇಂಟ್ ಆನ್ಸ್ 2–1ರಿಂದ ಡಿಪಿಎಸ್ ನಾರ್ತ್ ತಂಡವನ್ನು, ಪಾಟರಿ ಟೌನ್‌ನ ಸರ್ಕಾರಿ ಶಾಲೆ 2–0ರಿಂದ ಅಸ್ಸಾಮಿನ ಹೈತೆ ಮೆಮೋರಿಯಲ್ ಶಾಲಾ ತಂಡವನ್ನು ಮಣಿಸಿದವು.

ಪ್ರದರ್ಶನ ಪಂದ್ಯ: ಪರಿಕ್ರಮ ಪ್ರತಿಷ್ಠಾನದ ಬಾಲಕಿಯರ ತಂಡ ಪ್ರದರ್ಶನ ಪಂದ್ಯದಲ್ಲಿ ಡಿಪಿಎಸ್ ನಾರ್ತ್ ತಂಡವನ್ನು 3–0ರಿಂದ ಸೋಲಿಸಿತು.

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವ ಸಮಾರಂಭದಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷ ರಾಕೇಶ್ ಸಿಂಗ್ ಅವರು ಕಂಪ್ಯೂಟರ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ(ಬಿ.ಟೆಕ್) ವಿಭಾಗದ ವಿದ್ಯಾರ್ಥಿ ಸಾಲ್ವೆ ಶಬಿರ್ ಅವರಿಗೆ ಚಿನ್ನದ ಪದಕ ಪ್ರದಾನ ಮಾಡಿದರು. ಕುಲಾಧಿಪತಿ ಡಾ. ನಿಸಾರ್ ಅಹಮದ್, ಕುಲಪತಿ ಪ್ರೊ.ವಿಜಯನ್ ಇಮ್ಯಾನುಯೆಲ್ ಉಪಸ್ಥಿತರಿದ್ದರು

ದೇವರಾಜು ವಿಚಾರಣೆ

ಮೈಸೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದ ಆರೋಪಿ ದೇವರಾಜು ಅವರನ್ನು ಶುಕ್ರವಾರ ಇಲ್ಲಿನ ಲೋಕಾಯುಕ್ತ ಪೊಲೀಸ್ ಕಚೇರಿಯಲ್ಲಿ ತನಿಖಾಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು. ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ನೇತೃತ್ವದ ತಂಡವು ಎರಡನೇ ಬಾರಿ ವಿಚಾರಣೆ ನಡೆಸಿತು.

ಕರ್ನಾಟಕ ರಾಜ್ಯ ಎಸ್ಸಿ/ಎಸ್ಟಿ ಪತ್ರಿಕಾ ಸಂಪಾದಕರ ಸಂಘದ ವಾರ್ಷಿಕ ದತ್ತಿ ಪುರಸ್ಕಾರವನ್ನು ಶುಕ್ರವಾರ ಗಾಂಧಿ ಭವನದಲ್ಲಿ ಸಮಾಜ ಕಲ್ಯಾಣ ಸಚಿವ ಎಚ್. ಸಿ. ಮಹದೇವಪ್ಪ ಪ್ರದಾನ ಮಾಡಿದರು. ಹೋರಾಟಗಾರ ಮಾವಳ್ಳಿ ಶಂಕರ್ ಅವರಿಗೆ ಕೃಷ್ಣಪ್ಪ ದತ್ತಿ ಪ್ರಶಸ್ತಿ, ಪತ್ರಕರ್ತ ಜಿ.ಎನ್. ಮೋಹನ್ ಅವರಿಗೆ ಡಾ.ಬಾಬಾಸಾಹೇಬ ಅಂಬೇಡ್ಕರ್ ದತ್ತಿ ಪ್ರಶಸ್ತಿ, ಪತ್ರಕರ್ತ ಬಿ.ಎಂ. ಹನೀಫ್ ಅವರಿಗೆ ಬಿ. ರಾಚಯ್ಯ ದತ್ತಿ ಪ್ರಶಸ್ತಿ, ಮಂಜುಳಾ ಹುಲಿಕುಂಟೆ ಅವರಿಗೆ ಬಿ. ಬಸವಲಿಂಗಪ್ಪ ದತ್ತಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಸ್ಸಿ/ಎಸ್ಟಿ ಪತ್ರಿಕಾ ಸಂಪಾದಕರ ಸಂಘದ ಅಧ್ಯಕ್ಷ ಚೆಲುವರಾಜು, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ, ಮಾಜಿ ಸಚಿವ ಎಚ್. ಆಂಜನೇಯ, ಎಸ್ಸಿ/ಎಸ್ಟಿ ಪತ್ರಿಕಾ ಸಂಪಾದಕರ ಸಂಘದ ಸಂಚಾಲಕ ಎನ್. ರವಿಕುಮಾರ್, ದೇವೇಂದ್ರಪ್ಪ, ಬೆಂಗಳೂರು ಪ್ರೆಸ್‌ಕ್ಲಬ್ ಕಾರ್ಯದರ್ಶಿ ಬೆಳ್ಳಿತಟ್ಟೆ ಶಿವಕುಮಾರ್, ಪತ್ರಕರ್ತ ಮದನ್ ಗೌಡ, ಎಸ್ಸಿ/ಎಸ್ಟಿ ಪತ್ರಿಕಾ ಸಂಪಾದಕರ ಸಂಘದ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

ಪ್ರೆಸಿಡೆನ್ಸಿ ವಿ.ವಿ: ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜಾನುಕುಂಟೆ ಸಮೀಪದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 7ನೇ ಘಟಿಕೋತ್ಸವ ಸಮಾರಂಭದಲ್ಲಿ 3,879 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

19 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ 75 ಮಂದಿ ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿ ವಿತರಿಸಲಾಯಿತು.

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷ ರಾಕೇಶ್ ಸಿಂಗ್ ಅವರು, ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವಲ್ಲಿ ಪೋಷಕರು ಮಾಡಿದ ತ್ಯಾಗವನ್ನು ಎಂದಿಗೂ ಮರೆಯಬಾರದು ಎಂದರು.

ಕುಲಪತಿ ಪ್ರೊ.ವಿಜಯನ್ ಇಮ್ಯಾನುಯೆಲ್ ಮಾತನಾಡಿ, 'ಒಟ್ಟು 18 ವಿಭಾಗಗಳಲ್ಲಿ 40 ಯುಜಿ, 12 ಪಿಜಿ ಸೇರಿ 52 ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಒಂದು ವರ್ಷದಲ್ಲಿ ವಿದ್ಯಾರ್ಥಿಗಳ ದಾಖಲಾತಿಯು ಶೇ 15ರಷ್ಟು ಹೆಚ್ಚಾಗಿದೆ. ಈ ಪ್ರಗತಿಯು ವಿಶ್ವವಿದ್ಯಾಲಯವು ದೇಶದಾದ್ಯಂತ ಹಲವಾರು ವಿದ್ಯಾರ್ಥಿಗಳ ಅಪೇಕ್ಷಿತ ತಾಣವಾಗಿ ಪರಿಣಮಿಸಲಿಕ್ಕೆ ಸಾಕ್ಷಿಯಾಗಿದೆ' ಎಂದರು.

ಕುಲಾಧಿಪತಿ ಡಾ. ನಿಸಾರ್ ಅಹಮದ್, ಸಹ ಕುಲಪತಿ ಡಾ.ಎಂ. ಧನಂಜಯ, ಉಪಾಧ್ಯಕ್ಷ ಸುಹೇಲ್ ಅಹಮದ್, ಪ್ರೆಸಿಡೆನ್ಸಿ ಸಮೂಹ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಸಲ್ಮಾನ್ ಅಹಮದ್, ನಿರ್ದೇಶಕರಾದ ಡಾ. ನಫೀಸ ಅಹಮದ್ ಉಪಸ್ಥಿತರಿದ್ದರು.

CENTRAL INSTITUTE OF PETROCHEMICALS ENGINEERING AND TECHNOLOGY (CIPET)
CENTRE FOR SKILLING & TECHNICAL SUPPORT (CSTS)
Department of Chemicals & Petrochemicals, Ministry of Chemicals & Fertilizers, Govt. of India
No. 437/A, Hebbal Industrial Area, Mysuru - 570 016. Phone: 0821-2511903
Email: mysore@cipet.gov.in Website: https://www.cipet.gov.in

Advertisement No:CIPET/CSTS/MYS/ADMN/CONTRACT/2024/03 Date: 20.11.2024

ADVERTISEMENT FOR ENGAGEMENT OF CONTRACTUAL MANPOWER FOR LIMITED OR FIXED PERIOD IN CIPET: CSTS, MYSURU

Central Institute of Petrochemicals Engineering & Technology (CIPET) (formerly known as Central Institute of Plastics Engineering & Technology) is a premier National Institution in the field of Polymer Science & Technology with a focus on Academic, Technology Support and Research & Application Development. CIPET also offers AICTE approved Diploma, Post Diploma & Post Graduation Diploma Programs in the fields of Plastics Technology, Mould Technology, Mould Design with CAD/ CAM and Plastics Processing & Testing.

CIPET: CSTS, Mysuru invites applications form dynamic, result oriented eligible candidates for contractual engagement in the area of Academics &Skill Development as detailed below:

Sl.No.	Position	Remuneration payable per month	No. of positions
1.	**Asst. Professor** (Mechanical Engg.)	Rs. 35,000/-to Rs. 40,000/- Per Month.	01
2.	**Asst. Placement Consultant**	Rs. 35,000/- Per Month.	01
3.	**Instructor** (Skill Development)	Rs. 25,000/- to Rs. 30,000/- Per Month.	03

For detailed information on eligibility criteria, educational qualifications & experience, general terms and conditions and application form etc., please visit our website: **www.cipet.gov.in**

Applications in the prescribed form along with necessary enclosures should be sent in a sealed envelope to **The Principal Director & Head, CIPET: CSTS, No.437/A, Hebbal Industrial Area, Mysuru - 570 016** by Registered Post / Speed Post. **The closing/ last date of receipt of application is 19.12.2024.** The candidates should clearly mention "Advertisement No.: CIPET/CSTS/MYS/ADMN/CONTRACT/2024/03" and "Name of the position applied with discipline" in BOLD letters on top of the envelope. Applications received after the last date shall be summarily rejected.

CIPET: CSTS, Mysuru reserves the right to cancel, amend or alter the above advertisement without assigning any reason thereof.

Principal Director & Head, CIPET:CSTS, Mysuru

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

NATIONAL PUBLIC SCHOOL BANGALORE

NATIONAL PUBLIC SCHOOL NORTHWEST

ADMISSIONS OPEN

Bangalore Northwest Neighbourhood ushers in World Class Education

Dr. K. P. Gopalkrishna
Chairman
NPS Group of schools, Bangalore

Chairman's Desk

Few things have greater importance to parents than the education of their children. Every parent looks for academic excellence, good values, and discipline for their children. Choosing the right school for them is therefore a crucial decision.

ನ್ಯಾಷನಲ್ ಪಬ್ಲಿಕ್ ಸ್ಕೂಲ್
NATIONAL PUBLIC SCHOOL

2025-26
ADMISSIONS OPEN
Montessory to Grade IX
Enroll Now

NPS Northwest stimulates creativity and develops problem-solving capability in each student

MODERN CLASS ROOMS

WELL STOCKED LIBRARY

COMPUTER SCIENCE LAB

SWIMMING POOL

NPS Website
NPS Google Map location

National Public School NorthWest
Lakshmipura, Madanayakanahalli (Tumkur Road), Bengaluru - 562162.
info@npsnorthwest.com www.npsnorthwest.com
Reach out | Reach High | Reach Beyond

for enquiries contact
+91 90350 59750
+91 90350 59751
+91 90350 59752

ನಂ.1 ಕನ್ನಡ ದಿನ ಪತ್ರಿಕೆ
ವಿಜಯವಾಣಿ
VIJAYAVANI

ASHWASURYA REALITIES
FOR TRUST AND VALUE
Presents

ವಿಜಯವಾಣಿ PROPERTY EXPO 2024

ಉದ್ಘಾಟನೆ
ನವೆಂಬರ್ 30, 2024, ಶನಿವಾರ
ಬೆಳಗ್ಗೆ 11.30 ಗಂಟೆಗೆ

ಶ್ರೀಮುರಳಿ
ಚಲನಚಿತ್ರ ನಟ

ಸ್ವಾಗತ ಕೋರುವವರು

ಡಾ. ಆನಂದ ಸಂಕೇಶ್ವರ
ವ್ಯವಸ್ಥಾಪಕ ನಿರ್ದೇಶಕರು
ವಿಆರ್‌ಎಲ್ ಮೀಡಿಯಾ ಪ್ರೈವೇಟ್ ಲಿಮಿಟೆಡ್

ಪ್ರವೇಶ ಉಚಿತ

ರಿಯಲ್ ಎಸ್ಟೇಟ್ ಎಕ್ಸ್‌ಪೋ

ನವೆಂಬರ್ 30 ಶನಿವಾರ ಮತ್ತು ಡಿಸೆಂಬರ್ 1 ಭಾನುವಾರ, 2024

BDA APPROVED ಅನುಮೋದಿಸಿರುವ ಸೈಟುಗಳು
BMRDA APPROVED ಅನುಮೋದಿಸಿರುವ ಸೈಟುಗಳು

ನಿಮ್ಮ ಕನಸಿನ ಮನೆ / ಸೈಟು / ಅಪಾರ್ಟ್‌ಮೆಂಟ್
ಫಾರ್ಮ್‌ಹೌಸ್ ಖರೀದಿಸಲು ಸುವರ್ಣಾವಕಾಶ

ಸ್ಥಳ: ಶ್ರೀ ಬಸವೇಶ್ವರ ಸುಜ್ಞಾನ ಮಂಟಪ
ಹೊಸಹಳ್ಳಿ ಮೆಟ್ರೋ ಸ್ಟೇಷನ್ ಪಕ್ಕ, BSNL ಟೆಲಿಫೋನ್ ಎಕ್ಸ್‌ಚೇಂಜ್ ಕಚೇರಿ ಹತ್ತಿರ
ಹಾಗೂ ಬಿಜಿಎಸ್ ಶಿಕ್ಷಣ ಸಂಸ್ಥೆ ಎದುರು, ವಿಜಯನಗರ, ಬೆಂಗಳೂರು

ಸಮಯ: ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ

ಎಕ್ಸ್‌ಪೋಗೆ ಬನ್ನಿ, ಪ್ರತಿ 2 ಗಂಟೆಗೊಮ್ಮೆ
ಚಿನ್ನದ ನಾಣ್ಯ* ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ

* ಷರತ್ತುಗಳು ಅನ್ವಯಿಸುತ್ತವೆ.

Associate Sponsor
Sharanya Farms & Resorts — Create your own Sunshine — www.sharanyafarms.com
Guru Punvaani — Fair Policy | Fair Property

Co-Sponsor
Sapthagiri PROMOTERS & DEVELOPERS
DS MAX — ISO 9001:2015 COMPANY

Platinum Sponsor
KNS INFRA
Chowdeshwari Real Estate
FINEST PROPERTIES
V2 HOLDINGS HDPL
Samruddhi ECO FARMS
Chaitgan Group
RAJSHEKAR DEVELOPERS PVT. LTD.
NISCHITHA PROPERTIES — More Than Real Estate
SG GROUPS Developers & Promoters
ADITYA Township Promoters
RIONS INFRA PROJECTS
ಕೃಷ್ಣ ಗ್ರೀನ್ಸ್ ಮಿಡ್ ಲೇಕ್ — KRISHNA GREENS MIDLAKE

Gift Partner
SHETTY AND SHETTY CONSTRUCTIONS AND HOUSING
Trusted Gold Buyers — BENAKAGOLD

Travel Partner
VIJAYANAND TRAVELS ವಿಜಯಾನಂದ ಟ್ರಾವೆಲ್ಸ್

CIN: U92113KA2007PTC043480
*Source: Average Combined Circulation for All Edition ABC Jan-June. 2024

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 72042 81477
VRL MEDIA PRIVATE LIMITED

ದಾಬಸ್‌ಪೇಟೆ ಬಳಿ ಹೊಲದಲ್ಲಿ ಪತ್ತೆ • ಬನ್ನೇರುಘಟ್ಟ ಅರಣ್ಯಧಾಮಕ್ಕೆ ಸ್ಥಳಾಂತರ

ನಿತ್ರಾಣ ಸ್ಥಿತಿಯಲ್ಲಿ ಕರಡಿ ಪತ್ತೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಶ್ರೀಪತಿಹಳ್ಳಿಯ ಹೊಲದಲ್ಲಿ ಸುಮಾರು 6 ವರ್ಷದ ಹೆಣ್ಣು ಕರಡಿಯೊಂದು ನಿತ್ರಾಣ ಸ್ಥಿತಿಯಲ್ಲಿ ಗುರುವಾರ ಕಾಣಿಸಿಕೊಂಡಿತ್ತು. ಅರಣ್ಯ ಇಲಾಖೆ ಅಧಿಕಾರಿಗಳು ಚಿಕಿತ್ಸೆ ನೀಡಿ ಬನ್ನೇರುಘಟ್ಟ ಅರಣ್ಯಧಾಮಕ್ಕೆ ಕಳುಹಿಸಿದ್ದಾರೆ.

ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ ಶ್ರೀಪತಿಹಳ್ಳಿ ಗ್ರಾಮದ ಹೊಲದಲ್ಲಿ ಬಿದ್ದಿದ್ದ ಕರಡಿ ಬಾಯಿಗೆ ಗಂಭೀರ ಗಾಯವಾಗಿತ್ತು. ಹೊಲದ ಮೂರ್ನಾಲ್ಕು ಕಡೆಗಳಲ್ಲಿ ರಕ್ತ ಬಿದ್ದಿತ್ತು. ತೀವ್ರ ರಕ್ತಸ್ರಾವದಿಂದ ಪ್ರಜ್ಞಾಹೀನ ಸ್ಥಿತಿಯಲ್ಲಿ ಕರಡಿ ಬಿದ್ದಿತ್ತು ಎಂದು ಸ್ಥಳೀಯರು ಮಾಹಿತಿ ನೀಡಿದರು.

'ಸಾಮಾನ್ಯವಾಗಿ ಕರಡಿಗಳು ಆಹಾರ ಹರಸುತ್ತಾ ರಾತ್ರಿ ವೇಳೆ ಸಂಚರಿಸುತ್ತವೆ. ಈ ಸಂದರ್ಭದಲ್ಲಿ ಯಾರೋ ಹೊಡೆದಿರ ಬಹುದು ಅಥವಾ ಸಿಡಿಮದ್ದು ತಿಂದು ಬಾಯಿಗೆ ಗಾಯ ಆಗಿರಬಹುದು' ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟರು.

ನೆಲಮಂಗಲ ತಾಲ್ಲೂಕು ವಲಯ ಅರಣ್ಯ ಅರಣ್ಯಾಧಿಕಾರಿ ಮಂಜುನಾಥ್ ಘಟನಾ ಸ್ಥಳದಲ್ಲಿ ಪರಿಶೀಲನೆ ನಡೆಸಿದರು. ವೈದ್ಯರು ಗಾಯಗೊಂಡ ಕರಡಿಗೆ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬನ್ನೇರುಘಟ್ಟ ಅರಣ್ಯಧಾಮಕ್ಕೆ ಕಳುಹಿಸಿದರು.

'ರೈತರೇ ಹೆಚ್ಚಿರುವ ವೀರಸಾಗರ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತೆ ಶ್ರೀಪತಿಹಳ್ಳಿಯಲ್ಲಿ ಕಾಡು ಹಂದಿಗಳು ಹೆಚ್ಚಿವೆ. ರಾತ್ರಿ ವೇಳೆ ಹಂದಿಗಳು ಬಂದು ಬೆಳೆಗಳನ್ನು ಹಾಳು ಮಾಡುತ್ತಿದ್ದು, ಬೆಳೆ ರಕ್ಷಣೆಗಾಗಿ ಸಿಡಿಮದ್ದು ಇಟ್ಟಿರಬಹುದು. ಅದನ್ನು ಕರಡಿ ತಿಂದಿರಬಹುದು ಅಥವಾ ಹಂದಿ ಅಂತ ತಿಳಿದು ಯಾರಾದರೂ ಹಲ್ಲೆ ಮಾಡಿರಬಹುದು. ಏನಾಗಿದೆ ಅನ್ನುವುದು ವೈದ್ಯರ ವರದಿಯಿಂದ ತಿಳಿಯಲಿದೆ' ಎಂದು ಅರಣ್ಯ ಅಧಿಕಾರಿಗಳು ತಿಳಿಸಿದರು.

ನಿತ್ರಾಣ ಸ್ಥಿತಿಯಲ್ಲಿ ಕರಡಿ

ಚಿರತೆ ಓಡಾಟ, ತಪ್ಪದ ಆತಂಕ

ದಾಬಸ್ ಪೇಟೆ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ ಜಿನ್ನಯ್ಯನ ಪಾಳ್ಯ ಹಾಗೂ ಕುರುವೆಲ್ ತಿಮ್ಮನಹಳ್ಳಿ ಗ್ರಾಮದಲ್ಲಿ ಚಿರತೆ ಸಂಚರಿಸುತ್ತಿದ್ದು, ಜನರಲ್ಲಿ ಆತಂಕ ಮೂಡಿಸಿದೆ.

ಇಲ್ಲಿನ ಗುಂಡುತೋಪಿನ ಕಾಡಿನಲ್ಲಿ ಬುಧವಾರ ಮೇಕೆ ಮೇಲೆ ಚಿರತೆ ದಾಳಿ ಮಾಡಿದೆ. ಮೇಕೆ ಮೇಲೆ ಚಿರತೆ ದಾಳಿ ಮಾಡಿದ ಸಂದರ್ಭದಲ್ಲಿ ಮೇಕೆ-ಕುರಿಗಾಹಿಗಳು ಕಿರುಚಾಡಿದಾಗ, ಮೇಕೆಯನ್ನು ಬಿಟ್ಟು ಚಿರತೆ ಓಡಿಹೋಗಿದೆ.

ಇದೇ ಗುಂಡುತೋಪಿನಲ್ಲಿ ಬುಗಡಿಹಳ್ಳಿ ಗೊಲ್ಲರಹಟ್ಟಿಯ ಮೇಕೆಯನ್ನು ತಿಂದಿತ್ತು. ಮೇ 20ರಂದು ಹಗಲಿನಲ್ಲೇ ಚಿರತೆ ಆನಂದ್ ಅವರ ತೋಟದಲ್ಲಿ ಕಾಣಿಸಿಕೊಂಡಿತ್ತು. ಸೆ.23ರಂದು ಹಸುವನ್ನು ಕೊಂದುಹಾಕಿತ್ತು.

'ಚಿರತೆ ಈ ಭಾಗದಲ್ಲಿ ನಿರಂತರ ಓಡಾಡುತ್ತಿದೆ. ಹಿಡಿಯುವಂತೆ ಅರಣ್ಯ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಕ್ರಮ ಕೈಗೊಳ್ಳುತ್ತಿಲ್ಲ. ಮುಂದೆ ಜನರ ಮೇಲೆ ಬಿದ್ದರೆ ಏನು ಮಾಡುವುದು' ಎಂದು ಸ್ಥಳೀಯರು ಪ್ರಶ್ನಿಸಿದರು.

ಜಿಗಣಿ ಸಮೀಪ ಚಿರತೆ ಓಡಾಟ: (ಆನೇಕಲ್): ತಾಲ್ಲೂಕಿನ ಜಿಗಣಿ ಸಮೀಪ ನಿಸರ್ಗ ಮತ್ತು ಲೋಟಸ್ ಬಡಾವಣೆ ಸುತ್ತಮುತ್ತ ಗುರುವಾರ ರಾತ್ರಿ ಚಿರತೆ ಓಡಾಟದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಜನರು ಆತಂಕಗೊಂಡಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಸೆರೆಗೆ ಕಾರ್ಯಾಚರಣೆ ಆರಂಭಿಸಿದ್ದಾರೆ. ಎಲೆಕ್ಟ್ರಾನಿಕ್‌ಸಿಟಿ, ಹುಸ್ಕೂರು, ಶಾಂತಿಪುರ, ಗೂಳಿಮಂಗಲ ಭಾಗದಲ್ಲೂ ಚಿರತೆ ಓಡಾಟವಿದೆ ಆ ಭಾಗದ ನಿವಾಸಿಗಳು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಚಿನ್ನದ ನಗು.... ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವದಲ್ಲಿ ಪ್ರಥಮ ರ್‍ಯಾಂಕ್ ಪಡೆದ ಬೆಂಗಳೂರಿನ ಎಂ.ಎಸ್.ರಾಮಯ್ಯ ಕಾಲೇಜಿನ ನಿಖಿಲ್ ಎರಿನ್‌ಜಿಂಗಟ್ (5 ವರ್ಷದ ಬಿಎ, ಎಲ್‌ಎಲ್‌ಬಿ), ಕೆಎಲ್‌ಇ ಕಾಲೇಜಿನ ಆರ್.ಸುಶ್ಮಿತಾ (5 ವರ್ಷದ ಬಿಬಿಎ, ಎಲ್‌ಎಲ್‌ಬಿ), ಬಿಎಂಎಸ್ ಕಾಲೇಜಿನ ಮೌಶಮಿ ನಾಯಕ್ (5 ವರ್ಷದ ಬಿಕಾಂ, ಎಲ್‌ಎಲ್‌ಬಿ), ಹುಬ್ಬಳ್ಳಿಯ ಕಾನೂನು ವಿ.ವಿ.ಯ ಕಾನೂನು ಶಾಲೆಯ ಐಶ್ವರ್ಯಾ ಎನ್.ಹಿರೇಮಠ (5 ವರ್ಷದ ಬಿಎ, ಎಲ್‌ಎಲ್‌ಬಿ ಹಾನರ್ಸ್) ಹಾಗೂ ರಶ್ಮಿ.ಪಿ.ಮಂಡಿ (5 ವರ್ಷದ ಬಿಬಿಎ, ಎಲ್‌ಎಲ್‌ಬಿ ಹಾನರ್ಸ್) ಚಿನ್ನದ ಪದಕ ತೋರಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

ಛಂದ ಪುಸ್ತಕ: ಹಸ್ತಪ್ರತಿ ಆಹ್ವಾನ

ಬೆಂಗಳೂರು: 'ಛಂದ ಪುಸ್ತಕ' ಪ್ರಕಾಶನ, ಈ ಸಾಲಿನ 'ಛಂದ ಪುಸ್ತಕ' ಬಹುಮಾನಕ್ಕೆ ಹಸ್ತಪ್ರತಿ ಆಹ್ವಾನಿಸಿದೆ.

ಈವರೆಗೆ ಕಥಾಸಂಕಲನ ಪ್ರಕಟಿಸದ ಲೇಖಕರಿಗೆ ಮಾತ್ರ ಅವಕಾಶ ಇದೆ. ಆದರೆ, ಸಾಹಿತ್ಯದ ಇತರ ಪ್ರಕಾರಗಳಲ್ಲಿ ಒಂದೆರಡು ಪುಸ್ತಕಗಳನ್ನು ಪ್ರಕಟಿಸಿದವರೂ ಹಸ್ತಪ್ರತಿ ಕಳುಹಿಸಬಹುದು. ಆಯ್ಕೆಯಾದ ಕಥೆಗಾರರಿಗೆ ₹40 ಸಾವಿರ ಬಹುಮಾನ ನೀಡಲಿದ್ದು, ಕಥಾಸಂಕಲನವನ್ನು ಪ್ರಕಟಿಸಲಾಗುತ್ತದೆ.

ಕಥೆಗಳನ್ನು ಕೊರಿಯರ್ ಮೂಲಕ ಡಿ.30ರೊಳಗೆ ಛಂದ ಪುಸ್ತಕ, C/O ವಸುಧೇಂದ್ರ, ಐ-004, ಮಂತ್ರಿ ಪ್ಯಾರಡೈಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆ ಕೋರಿದೆ.

ಸಂಪರ್ಕಕ್ಕೆ: me@vasudhendra.com ಇ–ಮೇಲ್ ಅಥವಾ, ವಾಟ್ಸ್‌ಆ್ಯಪ್ ಸಂ: 98444 22782.

ವಿದ್ಯಾರ್ಥಿಗಳಿಗಾಗಿ ಬಿದಿರಿನ ಬೈಸಿಕಲ್

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವರ್ತೂರಿನ ದಿ ಗ್ರೀನ್ ಸ್ಕೂಲ್- ಬೆಂಗಳೂರು (ಟಿಜಿಎಸ್-ಬಿ) ಶಾಲೆ ತನ್ನ 'ಬ್ಯಾಂಬೂ 4 ಬೆಂಗಳೂರು' ಕಾರ್ಯಕ್ರಮದ ಭಾಗವಾಗಿ ವಿದ್ಯಾರ್ಥಿಗಳಿಗಾಗಿ ಬಿದಿರಿನ ಬೈಸಿಕಲ್‌ಗಳನ್ನು ತಯಾರಿಸಿದೆ.

ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಬಿದಿರನ ಸೈಕಲ್‌ಗಳಲ್ಲಿ ಸಂಚರಿಸುವ ಮೂಲಕ 'ಬ್ಯಾಂಬೂ 4 ಬೆಂಗಳೂರು' ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿದರು.

ಶಾಲಾ ಆವರಣದಲ್ಲಿ 8 ಮತ್ತು 9 ನೇ ತರಗತಿ ವಿದ್ಯಾರ್ಥಿಗಳೊಂದಿಗೆ ಬಿದಿರಿನ ಬೈಸಿಕಲ್ ಸವಾರಿ ಮಾಡಿದ ನಂತರ ಮಾತನಾಡಿದ ಈಶ್ವರ್ ಖಂಡ್ರೆ, 'ಇದು ವಿದ್ಯಾರ್ಥಿಗಳನ್ನು ಪ್ರಕೃತಿಗೆ ಹತ್ತಿರವಾಗಿಸುವ ಉತ್ತಮ ಮಾರ್ಗ' ಎಂದು ಹೇಳಿದರು.

'ಬಿದಿರು ಹೆಚ್ಚಿನ ಸಾಮರ್ಥ್ಯದ ಶಕ್ತಿ ಹೊಂದಿದೆ. ಬಿದಿರಿನ ಬೈಸಿಕಲ್‌ಗಳು 20ರಿಂದ 30 ವರ್ಷಗಳವರೆಗೆ ಬಾಳಿಕೆ ಬರುತ್ತವೆ. ಭಾರತದ ಪ್ರಥಮ ಜೀರೋ ಕಾರ್ಬನ್ ಶಾಲೆಯಾಗಿ, ನಾವು ಈ ಪರಿಸರಸ್ನೇಹಿ ಉಪಕ್ರಮವನ್ನು ಕೈಗೊಂಡಿದ್ದೇವೆ. ಬಿದಿರಿನ ಕಾರ್ಯಸಾಧ್ಯತೆಯನ್ನು ಅನ್ವೇಷಿಸಲು, ಬಿದಿರಿನಿಂದ ಮಾಡಿದ ಸುಮಾರು 6 ಸೈಕಲ್‌ಗಳನ್ನು ಸಿದ್ಧಪಡಿಸಿದ್ದೇವೆ' ಎಂದು ಟಿಜಿಎಸ್- ಬಿ ಪ್ರಾಂಶುಪಾಲೆ ಉಷಾ ಅಯ್ಯರ್ ಮಾಹಿತಿ ನೀಡಿದರು.

ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ, ಭಾರತೀಯ ಬಿದಿರು ಸೊಸೈಟಿ ಅಧ್ಯಕ್ಷ ಪುನಾಟಿ, ಅರಣ್ಯ ಪಡೆ ಮುಖ್ಯಸ್ಥ ಬ್ರಿಜೇಶ್ ಕುಮಾರ್ ದೀಕ್ಷಿತ್, ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಪ್ರಭಾಶ್ ಚಂದ್ರ ರೇ ಉಪಸ್ಥಿತರಿದ್ದರು.

ಸಚಿವ ಈಶ್ವರ್ ಖಂಡ್ರೆ ಅವರು ವಿದ್ಯಾರ್ಥಿಗಳ ಜೊತೆಗೂಡಿ ಬಿದಿರಿನ ಸೈಕಲ್ ಮೇಲೆ ಸವಾರಿ ಮಾಡಿದರು

'ಕ್ವಿನ್ ಸಿಟಿಯತ್ತ ಬ್ರಿಟನ್ ವಿ.ವಿಗಳ ಆಸಕ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ಕ್ವಿನ್ ಸಿಟಿ ಯೋಜನೆಯಲ್ಲಿ ಭಾಗಿಯಾಗಲು ಬ್ರಿಟನ್‌ನ ಲಿವರ್‌ಪೂಲ್, ಈಸ್ಟ್ ಲಂಡನ್, ಯಾರ್ಕ್, ವಾಲ್ವರ್ ಹ್ಯಾಂಪ್ಟನ್ ವಿಶ್ವವಿದ್ಯಾಲಯಗಳು ಆಸಕ್ತಿ ವ್ಯಕ್ತಪಡಿಸಿವೆ' ಎಂದು ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಅವರು ಹೇಳಿದ್ದಾರೆ.

ಎಂ.ಬಿ ಪಾಟೀಲ

2025ರಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದ ಪೂರ್ವಭಾವಿ ಸಿದ್ದತೆಗಳ ಅಂಗವಾಗಿ ಬ್ರಿಟನ್‌ನ ಉದ್ಯಮಿಗಳು ಮತ್ತು ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳ ಜತೆ ಲಂಡನ್‌ನಲ್ಲಿ ನಡೆಸಿದ ಸಭೆಯ ನಂತರ ಅವರು ಮಾಧ್ಯಮಗಳಿಗೆ ಈ ಮಾಹಿತಿ ನೀಡಿದ್ದಾರೆ.

'ಕ್ವಿನ್ ಸಿಟಿಯೂ ಸೇರಿ ರಾಜ್ಯದ ವಿವಿಧ ಭಾಗಗಳಲ್ಲಿ ಕ್ಯಾಂಪಸ್ ಆರಂಭಿಸಲು ಬ್ರಿಟನ್‌ನ ವಿಶ್ವವಿದ್ಯಾಲಯಗಳಿಗೆ ಇರುವ ಅವಕಾಶಗಳನ್ನು ಪ್ರತಿನಿಧಿಗಳಿಗೆ ವಿವರಿಸಲಾಯಿತು. ಕರ್ನಾಟಕವು ಜಾಗತಿಕ ಶಿಕ್ಷಣ ಕೇಂದ್ರವಾಗಿ ರೂಪುಗೊಳ್ಳುತ್ತಿರುವುದನ್ನು ಮನವರಿಕೆ ಮಾಡಿಕೊಡಲಾಯಿತು' ಎಂದಿದ್ದಾರೆ.

ಸಚಿವರ ನೇತೃತ್ವದ ರಾಜ್ಯದ ಉನ್ನತ ಮಟ್ಟದ ನಿಯೋಗವು ಬ್ರಿಟನ್‌ನ ಪ್ರಮುಖ ಕೈಗಾರಿಕೋದ್ಯಮಿಗಳ ಜೊತೆ ಪ್ರತ್ಯೇಕವಾಗಿ ದುಂಡು ಮೇಜಿನ ಸಭೆಗಳನ್ನು ನಡೆಸಿತು. ಬ್ರಿಟನ್‌ನ ಸಣ್ಣ ಉದ್ದಿಮೆ ಹಾಗೂ ರಫ್ತು ಸಚಿವ ಗರೆಥ್ ಥಾಮಸ್, ಬ್ರಿಟನ್-ಭಾರತ ವಹಿವಾಟು ಮಂಡಳಿಯ (ಯುಕೆಐಬಿಸಿ) ಪ್ರತಿನಿಧಿಗಳಿಗೆ ಕರ್ನಾಟಕದಲ್ಲಿ ಹೂಡಿಕೆಗೆ ಇರುವ ಅವಕಾಶಗಳನ್ನು ಸಭೆಯಲ್ಲಿ ವಿವರಿಸಲಾಯಿತು ಎಂದು ಅವರು ಹೇಳಿದ್ದಾರೆ.

ಈಜಿಪುರ ಮೇಲ್ಸೇತುವೆಯಲ್ಲಿ ಬಿರುಕು: ಕಠಿಣ ಕ್ರಮಕ್ಕೆ ಅಂದಾಜುಗಳ ಸಮಿತಿ ಆದೇಶ

ಗುತ್ತಿಗೆದಾರರಿಗೆ ದಂಡ ವಿಧಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಜಿಪುರ ಮೇಲ್ಸೇತುವೆ ಕಾಮಗಾರಿಯಲ್ಲಿ ಸೆಗ್‌ಮೆಂಟ್ ಬಿರುಕಾಗಿದ್ದು, ಇಂತಹ ಕಳಪೆ ಕಾಮಗಾರಿ ಮಾಡಿರುವ ಹಿಂದಿನ ಗುತ್ತಿಗೆದಾರರಿಗೆ ದಂಡ ವಿಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ವಿಧಾನಸಭೆಯ ಅಂದಾಜುಗಳ ಸಮಿತಿ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದೆ.

ವಿಧಾನಸಭೆ ಅಂದಾಜುಗಳ ಸಮಿತಿ ಅಧ್ಯಕ್ಷ ಹಂಪನಗೌಡ ಬಾದರ್ಲಿ ಸಮಿತಿಯ ನೇತೃತ್ವದಲ್ಲಿ ಸದಸ್ಯರು ಈಜಿಪುರಮೇಲ್ಸೇತುವೆಕಾಮಗಾರಿಯನ್ನು ನವೆಂಬರ್ 22ರಂದು ಪರಿಶೀಲಿಸಿದ್ದರು. ಮೇಲ್ಸೇತುವೆಯಲ್ಲಿ ಅಳವಡಿಸುವ ಸಂದರ್ಭದಲ್ಲೇ ಸೆಗ್‌ಮೆಂಟ್‌ನಲ್ಲಿ ಬಿರುಕು ಕಾಣಿಸಿಕೊಂಡಿರುವ ಬಗ್ಗೆ ಆತಂಕ ವ್ಯಕ್ತಪಡಿದ್ದರು. ಈ ಬಗ್ಗೆ ಎಲ್ಲ ರೀತಿಯ ವಿವರವನ್ನು ಸಮಿತಿ ಮುಂದೆ ಹಾಜರುಪಡಿಸಲು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದ್ದರು.

ಈಜಿಪುರ ಮೇಲ್ಸೇತುವೆಗೆ ಅಳವಡಿಸಲಾಗಿದ್ದ ಸೆಗ್‌ಮೆಂಟ್ ಬಿರುಕು ಬಿಟ್ಟಿತ್ತು

ಶುಕ್ರವಾರ ನಡೆದ ವಿಧಾನಸಭೆ ಅಂದಾಜುಗಳ ಸಮಿತಿ ಸಭೆಯ ನೇತೃತ್ವ ವಹಿಸಿದ್ದ ಎಂ.ಟಿ. ಕೃಷ್ಣಪ್ಪ ಅವರು, ಕಳಪೆ ಕಾಮಗಾರಿಗೆ ಬಿಬಿಎಂಪಿ ಎಂಜಿನಿಯರ್‌ಗಳನ್ನು ತರಾಟೆಗೆ ತೆಗೆದುಕೊಂಡರು.

ಮುಖ್ಯಾಂಶಗಳು

- ನವೆಂಬರ್ 22ರಂದು ಪರಿಶೀಲಿಸಿದ್ದ ಸಮಿತಿ
- ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ಸ್ ಕಂಪನಿ ನಡೆಸಿದ್ದ ಕಾಮಗಾರಿ
- ಸುರಕ್ಷತೆ ದೃಷ್ಟಿಯಿಂದ ಕಾಮಗಾರಿಯ ಗಡುವು ವಿಸ್ತರಣೆ

'ಈಜಿಪುರ ಮೇಲ್ಸೇತುವೆಯ ಕಾಮಗಾರಿಯನ್ನು ಆರಂಭಿಕ ಹಂತದಲ್ಲಿ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ಸ್ ಕಂಪನಿ ನಡೆಸಿತ್ತು. ಈ ಗುತ್ತಿಗೆದಾರರು ನಿರ್ಮಿಸಿದ್ದ ಸೆಗ್‌ಮೆಂಟ್‌ಗಳನ್ನು ಅಳವಡಿಸುವ ಸಂದರ್ಭದಲ್ಲಿ ಬಿರುಕುಗೊಂಡಿವೆ. ಇದರಿಂದಾಗಿರುವ ನಷ್ಟವನ್ನು ದಂಡವಾಗಿ ಹಿಂದಿನ ಗುತ್ತಿಗೆದಾರರಿಂದ ವಸೂಲಿ ಮಾಡಬೇಕು. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ' ಎಂದು ಕೃಷ್ಣಪ್ಪ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಈಜಿಪುರ ಮೇಲ್ಸೇತುವೆ ಕಾಮಗಾರಿಯಲ್ಲಿ ಹಿಂದಿನ ಗುತ್ತಿಗೆದಾರರು ನಿರ್ಮಿಸಿರುವ ಸೆಗ್‌ಮೆಂಟ್ ಗಳಲ್ಲಿ ಮೂರು ಬಿರುಕು ಬಿಟ್ಟಿವೆ. ಹೀಗಾಗಿ ಉಳಿದ ಎಲ್ಲ ಸೆಗ್‌ಮೆಂಟ್‌ಗಳ ಅಳವಡಿಕೆಗೆ ಮುನ್ನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ತಜ್ಞರಿಂದ ಪರೀಕ್ಷೆ ನಡೆಸಬೇಕು. 'ಥರ್ಡ್ ಪಾರ್ಟಿ' ತಪಾಸಣೆಯನ್ನೂ ನಡೆಸಬೇಕು ಎಂದು ಕಾರ್ಯಪಾಲಕ ಎಂಜಿನಿಯರ್ ಹಾಗೂ ಮುಖ್ಯ ಎಂಜಿನಿಯರ್ ಅವರಿಗೆ ಆದೇಶಿಸಲಾಗಿದೆ' ಎಂದರು.

'ಮೇಲ್ಸೇತುವೆ ಕಾಮಗಾರಿ 2025ರ ಫೆಬ್ರುವರಿಗೆ ಮುಗಿಯಬೇಕಿತ್ತು. ಆದರೆ, ಹಿಂದಿನ ಗುತ್ತಿಗೆದಾರರಿಂದ ಕಳಪೆ ನಿರ್ಮಾಣವಾಗಿದೆ. ಇದು ನಾಗರಿಕರಿಗೆ ಅಪಾಯ ತೊಂದೊಡ್ಡುವ ಆತಂಕ ಸೃಷ್ಟಿಸಿದೆ. ಹೀಗಾಗಿ, 2025ರ ಅಕ್ಟೋಬರ್ ಅಂತ್ಯಕ್ಕೆ ಕಾಮಗಾರಿ ಮುಗಿಸಲು ಹೊಸ ಗುತ್ತಿಗೆದಾರರಿಗೆ ಸೂಚಿಸಬೇಕು. ಎಲ್ಲಕ್ಕಿಂತ ಭದ್ರತೆ, ರಕ್ಷಣೆ ಅತಿ ಮುಖ್ಯ ಎಂದು ಬಿಬಿಎಂಪಿ ಎಂಜಿನಿಯರ್‌ಗಳಿಗೆ ಮನದಟ್ಟು ಮಾಡಿಕೊಡಲಾಗಿದೆ. ಮುಂದಿನ ಸಭೆ ವೇಳೆಗೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕು ಎಂದೂ ಅವರಿಗೆ ಸೂಚಿಸಲಾಗಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

'ಗೃಹ ಆರೋಗ್ಯದಡಿ ಮರೆವು ಕಾಯಿಲೆ ಪತ್ತೆ'

ಬೆಂಗಳೂರು: 'ಗೃಹ ಆರೋಗ್ಯ ಯೋಜನೆಯಡಿ ಮರೆವು ಕಾಯಿಲೆಯ (ಡಿಮೆನ್ಶಿಯಾ) ಪತ್ತೆ ಮಾಡಿ, ಚಿಕಿತ್ಸೆಗೆ ಕ್ರಮವಹಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಡಿಮೆನ್ಶಿಯಾ ಇಂಡಿಯಾ ಅಲಯನ್ಸ್ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಡೆಮ್‌ಕಾನ್–2024' ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ, ಮಾತನಾಡಿದರು.

'ಗೃಹ ಆರೋಗ್ಯ ಯೋಜನೆ ಈಗಾಗಲೇ ಜಾರಿಯಾಗಿದ್ದು, ಜನವರಿಯಲ್ಲಿ ರಾಜ್ಯದಾದ್ಯಂತ ವಿಸ್ತರಿಸಲಾಗುತ್ತದೆ. ಈ ಯೋಜನೆಯಡಿ ಪ್ರತಿ ಮನೆಗೂ ತೆರಳಿ, 30 ವರ್ಷಗಳು ಮೇಲ್ಪಟ್ಟ ವಯಸ್ಸಿನವರಿಗೆ ತಪಾಸಣೆ ಮಾಡಲಾಗುತ್ತದೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡಕ್ಕೆ ಒಂದು ತಿಂಗಳಿಗೆ ಸಾಕಾಗುವಷ್ಟು ಮಾತ್ರೆಗಳನ್ನೂ ನೀಡಲಾಗುತ್ತದೆ. ಮರೆವು ಕಾಯಿಲೆಯ ಬಗ್ಗೆಯೂ ಪ್ರಶ್ನಿಸಿ, ಪ್ರಾರಂಭಿಕ ಹಂತದಲ್ಲಿಯೇ ಸಮಸ್ಯೆ ಗುರುತಿಸಲು ಕ್ರಮ ವಹಿಸಲಾಗುತ್ತದೆ. ಈ ಬಗ್ಗೆ ಸಮುದಾಯ ಆರೋಗ್ಯ ಅಧಿಕಾರಿ, ಆಶಾ ಕಾರ್ಯಕರ್ತೆಯರನ್ನು ಒಳಗೊಂಡ ತಂಡಕ್ಕೆ ತರಬೇತಿಯನ್ನೂ ಒದಗಿಸಲಾಗುತ್ತದೆ' ಎಂದರು.

ಡಿಮೆನ್ಶಿಯಾ ಇಂಡಿಯಾ ಅಲಯನ್ಸ್ ಅಧ್ಯಕ್ಷ ರಾಧಾ ಎಸ್. ಮೂರ್ತಿ, 'ಈ ಕಾಯಿಲೆಯು ಒಬ್ಬ ವ್ಯಕ್ತಿಗೆ ಸೀಮಿತವಾಗಿರದೆ ಇಡೀ ಕುಟುಂಬದ ಮೇಲೆ ಪರಿಣಾಮ ಬೀರುತ್ತದೆ. ಈ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸಬೇಕು. ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಒಟ್ಟಾಗಿ ಕಾರ್ಯನಿರ್ವಹಿಸಿ, ರೋಗವನ್ನು ನಿರ್ವಹಣೆ ಮಾಡಬೇಕು' ಎಂದರು.



ಸುಸ್ಥಿರ ಯೋಜನೆ: ಅಧ್ಯಯನ

ಬೆಂಗಳೂರು: ಜಲಮಂಡಳಿ ಕುಡಿಯುವ ನೀರು ಸರಬರಾಜು ಹಾಗೂ ತ್ಯಾಜ್ಯ ನೀರು ನಿರ್ವಹಣೆಯಲ್ಲಿ ಅಳವಡಿಸಿಕೊಂಡಿರುವ ಸುಸ್ಥಿರ ಯೋಜನೆಗಳ ಬಗ್ಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್‌ಮಿನಿಸ್ಟ್ರೇಷನ್‌ನಲ್ಲಿ ತರಬೇತಿ ಪಡೆಯುತ್ತಿರುವ ರಕ್ಷಣಾ ಸೇವೆಯ ಹಿರಿಯ ಅಧಿಕಾರಿಗಳು ಮಾಹಿತಿ ಪಡೆದುಕೊಂಡರು.

ನಗರ ಪ್ರವಾಸದಲ್ಲಿರುವ ಅಧಿಕಾರಿಗಳ ತಂಡ ಜಲಮಂಡಳಿಗೆ ಶುಕ್ರವಾರ ಭೇಟಿ ನೀಡಿತ್ತು.

ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ದೇಶದ ಮೂರನೇ ಅತಿದೊಡ್ಡ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಿಸುತ್ತಿದೆ. ಈ ಬಾರಿ ಬೇಸಿಗೆ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ನೀರಿನ ಅಭಾವವಿತ್ತು. ಜಲಮಂಡಳಿಯು ಹಲವು ಸುಸ್ಥಿರ ಯೋಜನೆಗಳ ಮೂಲಕ ಅದನ್ನು ಉತ್ತಮವಾಗಿ ನಿರ್ವಹಿಸಿತ್ತು. ಶೇಕಡ 80ರಷ್ಟು ತ್ಯಾಜ್ಯ ನೀರನ್ನು ಸಂಸ್ಕರಿಸಲು ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು, ಅದನ್ನು ಅಂತರ್ಜಲ ಅಭಿವೃದ್ಧಿಗೆ ಬಳಸಿಕೊಂಡಿರುವುದು ಏಷ್ಯಾದಲ್ಲೇ ಹೆಸರುವಾಸಿಯಾಗಿದೆ. ಇದರ ಬಗ್ಗೆ ಅಧ್ಯಯನ ಮಾಡುವ ನಿಟ್ಟಿನಲ್ಲಿ ರಕ್ಷಣಾ ಸೇವೆಯ ಹಿರಿಯ ಅಧಿಕಾರಿಗಳು ಭೇಟಿ ನೀಡಿದ್ದರು ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಕಬ್ಬನ್ ಪಾರ್ಕ್‌ನಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿದ ತಂಡ, ತೃತೀಯ ಹಂತದ ಸಂಸ್ಕರಣಾ ತಂತ್ರಗಳ ಮಾಹಿತಿಯನ್ನು ಪಡೆದುಕೊಂಡಿತು. ನಂತರ ಕೇಂದ್ರ ಕಚೇರಿಗೆ ಭೇಟಿ ನೀಡಿ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಂಸ್ಥೆ ಅನುಮೋದಿಸಿರುವ ಹಲವಾರು ಸುಸ್ಥಿರ ಯೋಜನೆಗಳ ಬಗ್ಗೆ ಪ್ರೊ. ಕೆ.ಕೆ ಪಾಂಡೆ ಅವರ ನೇತೃತ್ವದ ತಂಡದ ಸದಸ್ಯರು ಮಾಹಿತಿ ಪಡೆದುಕೊಂಡರು.

ಕನಕಲಕ್ಷ್ಮೀ ವಿರುದ್ಧ ತನಿಖೆ, ತನಿಖಾಧಿಕಾರಿ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮದ ಅಕ್ರಮ ಪ್ರಕರಣದ ತನಿಖಾಧಿಕಾರಿ ಡಿವೈಎಸ್‌ಪಿ ಕನಕಲಕ್ಷ್ಮೀ ಅವರನ್ನು ಎತ್ತಂಗಡಿ ಮಾಡಲಾಗಿದ್ದು, ತನಿಖಾಧಿಕಾರಿ ಹೊಣೆಯನ್ನು ಡಿವೈಎಸ್‌ಪಿ ಪಿ.ತನ್ವೀರ್ ಅವರಿಗೆ ವಹಿಸಲಾಗಿದೆ.

ಉದ್ಯಮಿ, ವಕೀಲೆ ಜೀವಾ ಆತ್ಮಹತ್ಯೆಗೆ ಪ್ರಚೋದನೆ ಹಾಗೂ ₹25 ಲಕ್ಷ ಲಂಚ ಬೇಡಿಕೆಯಿಟ್ಟಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಬನಶಂಕರಿ ಠಾಣೆಯಲ್ಲಿ ಕನಕಲಕ್ಷ್ಮೀ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಸಂಬಂಧ ಸಿಸಿಬಿ ತನಿಖೆ ನಡೆಸುತ್ತಿದೆ. ಹಾಗಾಗಿ, ನಿಗಮದ ಅಕ್ರಮ ಪ್ರಕರಣದಿಂದ ಅವರನ್ನು ಹೊರಗಿಟ್ಟು ಸಿಐಡಿ ತನಿಖೆ ಮುಂದುವರಿಸಿದೆ.

'₹25 ಲಕ್ಷ ಲಂಚ ಬೇಡಿಕೆ ಹಾಗೂ ವಿವಸ್ತ್ರಗೊಳಿಸಿ ವಕೀಲೆ ಜೀವಾ ಅವರನ್ನು ವಿಚಾರಣೆ ನಡೆಸಿದ ಆರೋಪದ ಸಂಬಂಧ ಕನಕಲಕ್ಷ್ಮೀ ವಿರುದ್ಧ ಆಂತರಿಕ ತನಿಖೆ ನಡೆಯುತ್ತಿದೆ. ವರದಿ ಬಂದ ಬಳಿಕ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಭೋವಿ ಅಭಿವೃದ್ಧಿ ನಿಗಮದಲ್ಲಿ ನಕಲಿ ಫಲಾನುಭವಿಗಳ ಹೆಸರಿನಲ್ಲಿ ಸಾಲ ಮಂಜೂರು ಮಾಡಿರುವ ಸುಮಾರು ₹90 ಕೋಟಿ ಮೊತ್ತದ ಅಕ್ರಮಕ್ಕೆ ಸಂಬಂಧಿಸಿದಂತೆ 2023ರಿಂದ ನಾಲ್ಕು ಪ್ರತ್ಯೇಕ ಪ್ರಕರಣಗಳನ್ನು ಸಿಐಡಿ ತನಿಖೆ ನಡೆಸುತ್ತಿದೆ. ಪ್ರಕರಣಕ್ಕೆ ಪ್ರತ್ಯೇಕ ತನಿಖಾಧಿಕಾರಿ ನಿಯೋಜಿಸಲಾಗಿದೆ. ಪ್ರಕರಣಗಳು ತನಿಖಾ ಹಂತದಲ್ಲಿದ್ದು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿಲ್ಲ ಎಂದು ಮೂಲಗಳು ಹೇಳಿವೆ.

ಈ ನಡುವೆ ವಕೀಲೆ ಜೀವಾ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ಹಾಜರಾಗುವಂತೆ ಕನಕಲಕ್ಷ್ಮೀ ಅವರಿಗೆ ನೋಟಿಸ್ ಜಾರಿ ಮಾಡಲು ಸಿಸಿಬಿ ಪೊಲೀಸರು ಸಿದ್ಧತೆ ನಡೆಸಿದ್ದಾರೆ. ಜೀವಾ ವಿರುದ್ಧ ನಡೆದಿದ್ದ ತನಿಖೆ ಬಗ್ಗೆ ಮಾಹಿತಿ ನೀಡುವಂತೆ ಸಿಐಡಿಗೆ ಪತ್ರ ಬರೆಯಲಾಗಿದೆ. ವಿಚಾರಣೆ ನಡೆಸಿದ್ದ ವೇಳೆಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಕೂಡ ಹಂಚಿಕೊಳ್ಳುವಂತೆ ಕೋರಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

35 ಸಾವಿರ ಪ್ರಕರಣ ಇತ್ಯರ್ಥ ಪಡಿಸುವ ಗುರಿ: ಪ್ರಾಧಿಕಾರ ಅಧ್ಯಕ್ಷರ ಮಾಹಿತಿ

ಡಿ.14ಕ್ಕೆ ರಾಷ್ಟ್ರೀಯ ಲೋಕ ಅದಾಲತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ (ನಾಲ್ಸ) ಸೂಚನೆಯಂತೆ ಬೆಂಗಳೂರು ನಗರ ಜಿಲ್ಲೆಯ ನ್ಯಾಯಾಲಯಗಳಲ್ಲಿ ಡಿ.14ರಂದು ಲೋಕ ಅದಾಲತ್ ನಡೆಯಲಿದೆ ಎಂದು ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶ, ನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಿ. ಮುರಳೀಧರ್ ಪೈ ಹಾಗೂ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ವರದರಾಜ್ ತಿಳಿಸಿದರು.

ವರ್ಷಕ್ಕೆ ನಾಲ್ಕು ಬಾರಿ ಲೋಕ ಅದಾಲತ್ ನಡೆಯುತ್ತದೆ. ಈ ವರ್ಷದ ಕೊನೆಯ ಅದಾಲತ್ ರಾಷ್ಟ್ರದಾದ್ಯಂತ ಡಿ.14ಕ್ಕೆ ನಡೆಯಲಿದೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕಳೆದ ಲೋಕ ಅದಾಲತ್‌ನಲ್ಲಿ 26,353 ಬಾಕಿ ಪ್ರಕರಣಗಳು ಮತ್ತು 3,86,241 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥ ಮಾಡಲಾಗಿತ್ತು. ಸದ್ಯ 3,89,520 ಪ್ರಕರಣಗಳು ಬಾಕಿ ಇವೆ. ಅದರಲ್ಲಿ ಈ ಬಾರಿ 35 ಸಾವಿರ ಪ್ರಕರಣ ಇತ್ಯರ್ಥಪಡಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸರ್ವರಿಗೂ ನ್ಯಾಯ ಎಂಬ ಘೋಷವಾಕ್ಯದೊಂದಿಗೆ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ನಾಲ್ಸ) 15100 ಸಹಾಯವಾಣಿ ಸಂಖ್ಯೆಯನ್ನು ರೂಪಿಸಿದ್ದು, ಇದರ ಪ್ರಚಾರದ ಭಿತ್ತಿಪತ್ರವನ್ನು ನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಿ. ಮುರಳೀಧರ್ ಪೈ (ಬಲಭಾಗದಲ್ಲಿರುವವರು) ಹಾಗೂ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ವರದರಾಜ್ ಬಿಡುಗಡೆ ಮಾಡಿದರು

ರಾಜಿಯಾಗಬಲ್ಲ ಅಪರಾಧಿಕ ಪ್ರಕರಣ, ಬ್ಯಾಂಕ್ ವಸೂಲಾತಿ , ಉದ್ಯೋಗದಲ್ಲಿ ಪುನರ್ ಸ್ಥಾಪಿಸುವ ಪ್ರಕರಣ, ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು, ವೈವಾಹಿಕ, ಕುಟುಂಬ ನ್ಯಾಯಾಲಯದ ಪ್ರಕರಣಗಳು (ವಿಚ್ಛೇದನಗಳನ್ನು ಹೊರತುಪಡಿಸಿ), ಜಿಲ್ಲಾ ಗ್ರಾಹಕರ ವೇದಿಕೆ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ಕರ್ನಾಟಕ ರಿಯಲ್ ಎಸ್ಟೇಟ್ ಪ್ರಾಧಿಕಾರಕ್ಕೆ ಸಂಬಂಧಿಸಿದ ಪ್ರಕರಣಗಳು, ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿತ, ಸಾಲ ವಸೂಲಾತಿ, ಚೆಕ್ ಅಮಾನ್ಯ ಪ್ರಕರಣಗಳು, ಮೋಟರು ಅಪಘಾತ ಪರಿಹಾರ ಪ್ರಕರಣಗಳು, ಕಾರ್ಮಿಕ ವಿವಾದಗಳು, ವಿದ್ಯುತ್ ಹಾಗೂ ನೀರಿನ ಶುಲ್ಕಗಳು, ಭೂಸ್ವಾಧೀನ ಪ್ರಕರಣಗಳು, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಸೇವಾ ಪ್ರಕರಣಗಳು ಹಾಗೂ ಪಿಂಚಣಿ ಪ್ರಕರಣಗಳು ಮತ್ತು ರಾಜಿಯಾಗಬಲ್ಲ ಸಿವಿಲ್ ಪ್ರಕರಣಗಳನ್ನು ಜನತಾ ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ಹೇಳಿದರು.

ನಗರ ಜಿಲ್ಲೆ ವ್ಯಾಪ್ತಿಯಲ್ಲಿ 96 ಜಿಲ್ಲಾ ನ್ಯಾಯಾಲಯಗಳಿವೆ. ಅದರಲ್ಲಿ ವಿಶೇಷ ನ್ಯಾಯಾಲಯ, ಜನಪ್ರತಿನಿಧಿಗಳ ನ್ಯಾಯಾಲಯ ಹೀಗೆ ಕೆಲವು ನ್ಯಾಯಾಲಯಗಳನ್ನು ಹೊರತುಪಡಿಸಿ ಉಳಿದ ಎಲ್ಲ ನ್ಯಾಯಾಲಯಗಳಲ್ಲಿ ರಾಜಿಯಾಗಬಲ್ಲ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುವುದು. ಕಕ್ಷಿದಾರರು ಈ ಅವಕಾಶವನ್ನು ಬಳಸಿಕೊಳ್ಳಬೇಕು ಎಂದು ಕೋರಿದರು.

ಕಾನೂನು ಸೇವೆಗಳ ಪ್ರಾಧಿಕಾರವು ಜೈಲಲ್ಲಿರುವ ವಿಚಾರಣಾಧೀನ ಕೈದಿಗಳಿಗೆ ಮತ್ತು ಶಿಕ್ಷೆಗೊಳಗಾದ ಕೈದಿಗಳಿಗೆ ಕಾನೂನು ನೆರವು ನೀಡಲು ನಿರ್ಧರಿಸಿದೆ. ವಕೀಲರನ್ನು ನೇಮಿಸಿಕೊಂಡು ಪ್ರಕರಣದ ಬಗ್ಗೆ ಮೇಲ್ಮನವಿ ಸಲ್ಲಿಸಲು, ವಾದ ಮಂಡಿಸಲು ಸಾಧ್ಯ ಇಲ್ಲದವರು 'ಲೀಗಲ್ ಏಡೆಡ್ ಡಿಫೆನ್ಸ್ ಸಿಸ್ಟಂ' ಮೂಲಕ ನ್ಯಾಯಾಲಯದ ಗಮನಕ್ಕೆ ತಂದರೆ ಪ್ರಾಧಿಕಾರದಿಂದ ವಕೀಲರನ್ನು ನೇಮಿಸಲಾಗುವುದು ಎಂದು ತಿಳಿಸಿದರು.

ಪ್ರಾಧಿಕಾರದ ಉಚಿತ ಸೇವೆಗಳನ್ನು ಪಡೆಯಲು 'ನಾಲ್ಸ' ಸಹಾಯವಾಣಿ ಆರಂಭಿಸಿದೆ. ದೇಶದ ಯಾವುದೇ ಭಾಷೆ, ಯಾವುದೇ ರಾಜ್ಯದಿಂದ ಸಹಾಯವಾಣಿ ಸಂಖ್ಯೆ 15100ಗೆ ಕರೆ ಮಾಡಿದರೆ ಆಯಾ ಭಾಷೆಯಲ್ಲಿಯೇ ಸ್ಪಂದಿಸುವ ವ್ಯವಸ್ಥೆ ಇದಾಗಿದೆ ಎಂದರು.

ಚಿತ್ರಾವಳಿ

ಕೆನರಾ ಬ್ಯಾಂಕ್ ಜುಬಲಿ ಎಜುಕೇಶನ್ ಫಂಡ್ ವತಿಯಿಂದ ಮಲ್ಲೇಶ್ವರದ ಸರ್ಕಾರಿ ಪಿಯು ಮಹಿಳಾ ಕಾಲೇಜಿನ ವಿದ್ಯಾರ್ಥಿಗಳಿಗೆ 10 ಸಾವಿರ ನೋಟ್ ಬುಕ್, ವಿದ್ಯಾರ್ಥಿವೇತನ ಹಾಗೂ ಪಠ್ಯಪುಸ್ತಕಗಳನ್ನು ಶುಕ್ರವಾರ ವಿತರಿಸಲಾಯಿತು. ಸಂಸ್ಥೆಯ ಕಾರ್ಯಾಧ್ಯಕ್ಷರಾದ ಎಸ್‌.ಟಿ. ರಾಮಚಂದ್ರ, ಯುಟಿಐನ ಸಿದ್ಧಾರ್ಥ, ಕೆ.ಎ. ಭಟ್, ಪ್ರಾಂಶುಪಾಲರಾದ ರಶ್ಮಿ ಉಪಸ್ಥಿತರಿದ್ದರು

ನಗರದ ಅರಮನೆ ರಸ್ತೆಯಲ್ಲಿರುವ ಸರ್ಕಾರಿ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಶುಕ್ರವಾರ ನಡೆದ 'ಜಾನಪದ ಹಬ್ಬ'ವನ್ನು ಚಲನಚಿತ್ರ ನಟಿ ಅನು ಪ್ರಭಾಕರ್ ಮುಖರ್ಜಿ ಉದ್ಘಾಟಿಸಿದರು. ಜಾನಪದ ಗಾಯಕಿ ಸವಿತಕ್ಕ, ಚಲನಚಿತ್ರ ನಟಿ ಶರಣ್ಯಾ ಶೆಟ್ಟಿ, ಪ್ರೇಮಾವತಿ ಎಸ್‌. ಕೆ., ಲೀಲಾ ಎಂ.ಎಸ್, ಅವರು ಉಪಸ್ಥಿತರಿದ್ದರು

ಲಿಟಲ್ ಲಿಲ್ಲಿ ಎಜುಕೇಷನ್ ಸೊಸೈಟಿಯ ವಿದ್ಯಾರಣ್ಯಪುರ ಕ್ಯಾಂಪಸ್‌ನಲ್ಲಿ ನಡೆದ ವಾರ್ಷಿಕ ವಿಜ್ಞಾನ ಮೇಳ ಮತ್ತು ವಿಜ್ಞಾನ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ತಾವು ಸಿದ್ಧಪಡಿಸಿದ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿದರು

ಪಿಎಂಎಸ್‌ಎಸ್‌ವೈ: ಕೇಂದ್ರೀಕೃತ ಎ.ಸಿ. ಸಮಸ್ಯೆ ನಿವಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಕೇಂದ್ರೀಕೃತ ಹವಾನಿಯಂತ್ರಿತ (ಎಸಿ) ವ್ಯವಸ್ಥೆಯಲ್ಲಿನ ಸಮಸ್ಯೆ ನಿವಾರಣೆಯಾಗಿದ್ದು, ಶನಿವಾರದಿಂದ ಎಲ್ಲ ಶಸ್ತ್ರಚಿಕಿತ್ಸೆಗಳು ಪೂರ್ವನಿಗದಿಯಂತೆ ನಡೆಯಲಿವೆ.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ. 4 ದಿನದ ಹಿಂದೆ ವಿದ್ಯುತ್ ವೋಲ್ಟೇಜ್‌ನಿಂದ ಕೇಂದ್ರೀಕೃತ ಹವಾ ನಿಯಂತ್ರಿತ (ಎಸಿ) ವ್ಯವಸ್ಥೆಯಲ್ಲಿ ಸಮಸ್ಯೆ ಕಾಣಿಸಿಕೊಂಡು, ಉಪಕರಣಗಳಿಗೆ ಹಾನಿಯಾಗಿತ್ತು. ಇದರಿಂದಾಗಿ ತುರ್ತು ಶಸ್ತ್ರಚಿಕಿತ್ಸೆಗಳನ್ನು ಮಾತ್ರ ಆಸ್ಪತ್ರೆಗಳಲ್ಲಿ ನಡೆಸಲಾಗುತ್ತಿತ್ತು. ತಾಂತ್ರಿಕ ತಂಡವು ಸುಟ್ಟುಹೋದ ಉಪಕರಣಗಳನ್ನು ಬದಲಾಯಿಸಿ, ಕಾರ್ಯಾಚರಣೆಗೆ ಅನುವು ಮಾಡಿಕೊಟ್ಟಿದೆ.

'ಕೇಂದ್ರೀಕೃತ ಹವಾನಿಯಂತ್ರಿತ ವ್ಯವಸ್ಥೆಯಲ್ಲಿನ ಸಮಸ್ಯೆ ನಿವಾರಣೆಯಾದ್ದರಿಂದ ಆಸ್ಪತ್ರೆಯು ಶುಕ್ರವಾರದಿಂದಲೇ ಪೂರ್ಣ ಪ್ರಮಾಣದ ಕಾರ್ಯಾಚರಣೆ ಪ್ರಾರಂಭಿಸಿದೆ. ಶನಿವಾರದಿಂದಲೇ ಪೂರ್ವನಿಗದಿತ ಶಸ್ತ್ರಚಿಕಿತ್ಸೆಗಳು ನಡೆಯಲಿವೆ' ಎಂದು ಬಿಎಂಸಿಆರ್‌ಐ ಡೀನ್ ಡಾ.ರಮೇಶ್ ಕೃಷ್ಣ ತಿಳಿಸಿದ್ದಾರೆ.

ಪಿಎಂಎಸ್‌ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ವೋಲ್ಟೇಜ್ ಏರಿಳಿತವಾಗಿಲ್ಲ: ಬೆಸ್ಕಾಂ ಸ್ಪಷ್ಟನೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕೇಂದ್ರೀಕೃತ ಎ.ಸಿ. ಹಾಳಾಗಿರುವುದು ವಿದ್ಯುತ್ ವೋಲ್ಟೇಜ್ ಏರಿಳಿತದಿಂದ ಅಲ್ಲ ಎಂದು ಬೆಸ್ಕಾಂ ಸ್ಪಷ್ಟನೆ ನೀಡಿದೆ.

'ಬಿಎಂಸಿಆರ್‌ಐಯಲ್ಲಿ ವಿದ್ಯುತ್ ವೋಲ್ಟೇಜ್ ಏರಿಳಿತದಿಂದ ಕೇಂದ್ರಕೃತ ಎ.ಸಿ. ಹಾನಿಗೊಳಗಾಗಿ ಶಸ್ತ್ರಚಿಕಿತ್ಸೆಗೆ ಸಮಸ್ಯೆ ಆಗಿದೆ ಎಂದು ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಆದರೆ, ಬಿಎಂಸಿಆರ್‌ಐ ಆಸ್ಪತ್ರೆಯಲ್ಲಿ ಅಧಿಕ ಸಾಮರ್ಥ್ಯದ (ಎಚ್‌.ಟಿ.) ಸ್ಥಾವರವಿದೆ. ಅದಕ್ಕೆ ಎಫ್–4 ಯು.ಎಸ್.ಎಸ್. ಫೀಡರ್‌ನಿಂದ ಬೆಸ್ಕಾಂ ವಿದ್ಯುತ್ ಪೂರೈಸುತ್ತಿದೆ. ಆಸ್ಪತ್ರೆಯೂ ಸ್ಥಾವರ ನಿರ್ವಹಣೆಯನ್ನು ಹೊರಗುತ್ತಿಗೆ ನೀಡಿದೆ. ಹೊರಗುತ್ತಿಗೆ ಸಂಸ್ಥೆಯಿಂದ ಈಗಾಗಲೇ ಮಾಹಿತಿ ಪಡೆಯಲಾಗಿದೆ. ನಾಲ್ಕು ದಿನಗಳ ಹಿಂದಿಯೇ ಆಸ್ಪತ್ರೆಯ ಎಸಿ ಚಿಲ್ಲರ್ ವೈಂಡಿಂಗ್ ಸುಟ್ಟುಹೋಗಿದೆ. ಅದನ್ನು ಸರಿಪಡಿಸುವ ಕೆಲಸ ನಡೆಯುತ್ತಿದೆ ಎಂದು ಹೊರಗುತ್ತಿಗೆ ಸಿಬ್ಬಂದಿ ಬೆಸ್ಕಾಂಗೆ ತಿಳಿಸಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

'ಸಚಿವಾಲಯದ ನೌಕರರಿಗೆ ಇವಿ ಮೇಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್‌ಚಾಲಿತ ವಾಹನಗಳ (ಇವಿ) ಬಳಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಸಚಿವಾಲಯದ ನೌಕರರಿಗಾಗಿ 2025ರ ಜನವರಿಯಲ್ಲಿ ವಿಶೇಷ ಇವಿ ಮೇಳ ಆಯೋಜನೆಗೆ ನಿರ್ಧರಿಸಲಾಗಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಹೇಳಿದರು.

ಶುಕ್ರವಾರ ಬೆಸ್ಕಾಂ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ನಿರ್ದೇಶನದಂತೆ ಸಚಿವಾಲಯದ ನೌಕರಿಗಾಗಿ ಈ ಇವಿ ಮೇಳವನ್ನು ಆಯೋಜಿಸಲಾಗುತ್ತಿದೆ. ಇಂಧನ ಸಚಿವ ಕೆ.ಜೆ. ಜಾರ್ಜ್, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಅವರ ಮಾರ್ಗದರ್ಶನದಲ್ಲಿ ಮೇಳ ಜರುಗಲಿದೆ' ಎಂದರು.

'ಇವಿ ದ್ವಿಚಕ್ರ ವಾಹನ ಬಳಕೆಗೆ ಒತ್ತು ನೀಡುವ ನಿಟ್ಟಿನಲ್ಲಿ ಪರಿಸರ ಸ್ನೇಹಿ ಇವಿ ವಾಹನಗಳ ಬಳಕೆಯ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡುವ ಜತೆಗೆ ಸರ್ಕಾರಿ ನೌಕರರು, ವಿಶೇಷವಾಗಿ ಸಚಿವಾಲಯ ನೌಕರರಿಗೆ ಮಾರಾಟಗಾರರಿಂದ ರಿಯಾಯ್ತಿ ದರದಲ್ಲಿ ಇವಿ ದ್ವಿಚಕ್ರ ವಾಹನಗಳನ್ನು ಒದಗಿಸುವುದು ಈ ಮೇಳದ ಉದ್ದೇಶವಾಗಿದೆ' ಎಂದು ಮಾಹಿತಿ ನೀಡಿದರು.

ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾ, ಬೆಸ್ಕಾಂನ ತಾಂತ್ರಿಕ ನಿರ್ದೇಶಕ ಎಚ್‌.ಜೆ. ರಮೇಶ್ ಹಾಗೂ ಇವಿ ವಾಹನಗಳ ತಯಾರಿಕಾ ಕಂಪನಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಬಾಂಗ್ಲಾ ಪ್ರಜೆಗಳಿಗೆ ನಕಲಿ ಗುರುತಿನ ಚೀಟಿ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶದಿಂದ ಅಕ್ರಮವಾಗಿ ಭಾರತದೊಳಗೆ ನುಸುಳಿ ಬಂದವರಿಗೆ ನಕಲಿ ಗುರುತಿನ ಚೀಟಿ, ಆಧಾರ್ ಕಾರ್ಡ್ ಮಾಡಿಕೊಡುತ್ತಿದ್ದ ಆರೋಪಿಯೊಬ್ಬರನ್ನು ಸೂರ್ಯ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಅರ್ನಾಬ್ ಮಂಡಲ್ ಅವರನ್ನು ಬಂಧಿಸಿ, ಆಧಾರ್ ಕಾರ್ಡ್, ಪಾನ್ ಕಾರ್ಡ್, ಬಾಡಿಗೆ ಕರಾರು ಪತ್ರವನ್ನು ವಶಪಡಿಸಿಕೊಂಡಿದ್ದಾರೆ.

'ಒಂದು ವರ್ಷದಿಂದ ನಗರದಲ್ಲಿ ವಾಸವಿದ್ದ ಆರೋಪಿ, ಸೂರ್ಯಸಿಟಿ ಬಳಿ ಸೈಬರ್ ಸೆಂಟರ್ ತೆರೆದು ಬಾಂಗ್ಲಾ ನುಸುಳುಕೋರರಿಗೆ ನಕಲಿ ಆಧಾರ್ ಕಾರ್ಡ್ ಮತ್ತು ಇತರ ದಾಖಲೆಗಳನ್ನು ₹8 ಸಾವಿರದಿಂದ ರಿಂದ ₹ 10 ಸಾವಿರಕ್ಕೆ ತಯಾರಿಸಿಕೊಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಇತ್ತೀಚೆಗೆ ಬಾಂಗ್ಲಾದೇಶ ಪ್ರಜೆಗಳನ್ನು ಬಂಧಿಸಿದ ವೇಳೆ ಅವರ ಬಳಿ ನಕಲಿ ಗುರುತಿನ ಚೀಟಿಗಳು ಪತ್ತೆಯಾಗಿದ್ದವು. ಈ ಎಲ್ಲ ನಕಲಿ ಗುರುತಿನ ಚೀಟಿಗಳು ಪಶ್ಚಿಮ ಬಂಗಾಳ ವಿಳಾಸದ್ದಾಗಿವೆ. ಪ್ರಕರಣ ದಾಖಲಿಸಿಕೊಂಡು ಆರೋಪಿ ನಡೆಸುತ್ತಿದ್ದ ಸೈಬರ್ ಸೆಂಟರ್ ಮೇಲೆ ಗುರುವಾರ ಪೊಲೀಸರು ದಾಳಿ ನಡೆಸಿದರು. ದಾಳಿ ವೇಳೆ ನಕಲಿ ಆಧಾರ್ ಕಾರ್ಡ್‌ಗಳು ಮತ್ತು ಮನೆಗಳ ಬಾಡಿಗೆ ಕರಾರು ಪತ್ರಗಳು ಪತ್ತೆಯಾಗಿವೆ.

ಅರ್ನಾಬ್ ಮಂಡಲ್

ಗ್ರಾಮಾಂತರ ಎಸ್‌ಪಿ ಸಿ.ಕೆ.ಬಾಬಾ ಮಾತನಾಡಿ, 'ಬಾಂಗ್ಲಾದೇಶದ ಪ್ರಜೆಗಳಿಗೆ ನಕಲಿ ಆಧಾರ್, ಗುರುತಿನ ಚೀಟಿ ಮಾಡಿಕೊಡುತ್ತಿದ್ದ ಆರೋಪಿಯನ್ನು ಬಂಧಿಸಲಾಗಿದೆ. ಒಂದು ವರ್ಷದಿಂದ ಇದೇ ರೀತಿ ನಕಲಿ ದಾಖಲೆ ಸೃಷ್ಟಿಸಿ ಕೊಡುತ್ತಿದ್ದ. ದಾಳಿ ವೇಳೆ ನಕಲಿ ದಾಖಲಾತಿಗಳನ್ನು ಜಪ್ತಿ ಮಾಡಲಾಗಿದೆ' ಎಂದರು.

'18 ಮನೆಗಳ ಬಾಡಿಗೆ ಕರಾರು ಪತ್ರ, 55 ಆಧಾರ್ ಕಾರ್ಡ್, ಎರಡು ಕಂಪ್ಯೂಟರ್, ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ. ನಕಲಿ ಗುರುತಿನ ಚೀಟಿ ದಂಧೆಯಲ್ಲಿ ಹಲವರು ಶಾಮೀಲಾಗಿದ್ದು, ಅವರ ಪತ್ತೆಗೆ ಶೋಧ ಕಾರ್ಯ ಮುಂದುವರಿದಿದೆ' ಎಂದು ಹೇಳಿದರು.

ನಗರದಲ್ಲಿ ಇಂದು

ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ: ಅತಿಥಿಗಳು: ಆರ್. ಅಶೋಕ, ಪಿ.ಸಿ. ಮೋಹನ್, ಬಿ.ಆರ್. ನಾಯ್ಡು, ರಾಜೇಂದ್ರ ಕುಮಾರ್ ಕಠಾರಿಯಾ, ಶಮ್ಲಾ ಇಕ್ಬಾಲ್, ಜಗದೀಶ್, ಕುಸುಮಾ, ಆಯೋಜನೆ: ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ, ತೋಟಗಾರಿಕೆ ಇಲಾಖೆ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಹತ್ತಿರ, ಕಬ್ಬನ್ ಉದ್ಯಾನ, ಬೆಳಿಗ್ಗೆ 8ರಿಂದ

'ಅಸೆಂಟ್ ಕನ್ನಡ ವೈಭವ': **ಧ್ವಜಾರೋಹಣ:** ಎಸ್. ಮುನಿರಾಜು, ಜಾಥಾ ಉದ್ಘಾಟನೆ: ಹಂಸಲೇಖ, ಡಾ. ನಾಗಲಕ್ಷ್ಮಿ ಚೌಧರಿ, ಅಧ್ಯಕ್ಷತೆ: ರಘುನಾಥ ಚ.ಹ., ಪ್ರಾಸ್ತಾವಿಕ ನುಡಿ: ಬಿ.ಎಂ. ವೆಂಕಟೇಶ್, ಅತಿಥಿಗಳು: ಮೂಡ್ನಾಕೂಡು ಚಿನ್ನಸ್ವಾಮಿ, ಬೈರಮಂಗಲ ರಾಮೇಗೌಡ, ಕಂನಾಡಿಗ ನಾರಾಯಣ, ಗುರುರಾಜ್ ಎಸ್. ದಾವಣಗೆರೆ, ಆಯೋಜನೆ ಮತ್ತು ಸ್ಥಳ: ಅಸೆಂಟ್ ಪದವಿ ಪೂರ್ವ ಕಾಲೇಜು, ಹೆಸರಘಟ್ಟ ಮುಖ್ಯರಸ್ತೆ, ಎಂಟನೇ ಮೈಲಿ ಹತ್ತಿರ, ಬೆಳಿಗ್ಗೆ 9

ಮೂಡ್ನಾಕೂಡು ಚಿನ್ನಸ್ವಾಮಿ

'ಬಿಯಾಂಡ್ ರೈಟ್ ಆ್ಯಂಡ್ ರಾಂಗ್' ಯುವ ನಾಯಕತ್ವ ಕಾರ್ಯಕ್ರಮ: ಸ್ಥಳ: ಎಚ್‌ಬಿಎಸ್ ಆಸ್ಪತ್ರೆ, ಬೆಳಿಗ್ಗೆ 9.30

'ಮುದ್ದುರಾಮ ಪ್ರಶಸ್ತಿ ಪ್ರದಾನ–2024', 'ಮುದ್ದುರಾಮ ಚೌಪದಿಗಳ ಹತ್ತು ಸಂಪುಟಗಳ' ಬಿಡುಗಡೆ

ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು: ಅ.ರಾ. ಮಿತ್ರ, ಸಂಪುಟಗಳ ಬಿಡುಗಡೆ: ಗುರುರಾಜ ಕರಜಗಿ, ಅತಿಥಿ: ಹಿರೇಮಗಳೂರು ಕಣ್ಣನ್, ಉಪಸ್ಥಿತಿ: ಕೆ.ಸಿ. ಶಿವಪ್ಪ, ಅಧ್ಯಕ್ಷತೆ: ಸಿ. ಸೋಮಶೇಖರ್, ಆಯೋಜನೆ: ಮುದ್ದುರಾಮ ಪ್ರತಿಷ್ಠಾನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಗುರುರಾಜ ಕರಜಗಿ

ಪದವಿ ಪ್ರದಾನ ದಿನ: ಉದ್ಘಾಟನೆ: ಡಿ.ಎನ್.ಎಸ್. ಕುಮಾರ್, ಟಿ.ವಿ. ರಾಜು, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಚಿಕ್ಕಯ್ಯ, ಆಯೋಜನೆ ಮತ್ತು ಸ್ಥಳ: ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಜಯನಗರ ಎರಡನೇ ಬ್ಲಾಕ್, ಬೆಳಿಗ್ಗೆ 10.30

'ಆನ್‌ಲೈನ್ ಗೇಮ್ ನಿರ್ಬಂಧಿಸಲು' ವಿಚಾರಸಂಕಿರಣ: ಅತಿಥಿಗಳು: ರಾಜ ಇಮಾಮ್ ಖಾಸಿಂ, ಶುಭಮಂಗಳ ಸುನಿಲ್, ಅಧ್ಯಕ್ಷತೆ: ಕುರುಬೂರು ಶಾಂತಕುಮಾರ್, ಆಯೋಜನೆ: ಕರ್ನಾಟಕ ನೆಲ–ಜಲ ಸಂರಕ್ಷಣಾ ಸಮಿತಿ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಈ ದಿನ' ಓದುಗರ ಸಮಾವೇಶ: ವಿಶೇಷ ಸಂಚಿಕೆ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ಸೀಮಾ ಚಿಸ್ತಿ, ಪ್ರಿಯಾ ತುವಸ್ಸೆರಿ, ಅಧ್ಯಕ್ಷತೆ: ಸಬೀಹಾ ಭೂಮಿಗೌಡ, 'ಕರ್ನಾಟಕ–50 ನಡೆದ ಹೆಜ್ಜೆ–ಮುಂದಿನ ದಿಕ್ಕು' ಉಪನ್ಯಾಸ: ಎ. ನಾರಾಯಣ, ಉಪಸ್ಥಿತಿ: ಡಿ. ಉಮಾಪತಿ, ಗುರುಪ್ರಸಾದ್ ಕೆರಗೋಡು, ಬಸವರಾಜು ಮೇಗಲಕೇರಿ, ಆಯೋಜನೆ: ಈ ದಿನ. ಕಾಮ್, ಸ್ಥಳ: ಟೌನ್‌ಹಾಲ್, ಜೆ.ಸಿ. ರಸ್ತೆ, ಬೆಳಿಗ್ಗೆ 11

ಕಾರ್ತಿಕ ದೀಪೋತ್ಸವ: ಮಧ್ಯಾಹ್ನ 3ಕ್ಕೆ ರಂಗೋಲಿ ಸ್ಪರ್ಧೆ, ಸಂಜೆ 6ಕ್ಕೆ ತಾಳವಾದ್ಯ, ಸಂಜೆ 6.30ಕ್ಕೆ ದೀಪೋತ್ಸವ, ಆಯೋಜನೆ: ವಿನಾಯಕ ಮಿತ್ರ ಮಂಡಳಿ, ಜಯರಾಮ ಸೇವಾ ಮಂಡಳಿ, ಸ್ಥಳ: ಶ್ರೀ ಜಯರಾಮ ಸೇವಾ ಮಂಡಳಿ, ಒಂದನೇ ಮುಖ್ಯ ರಸ್ತೆ, ಎಂಟನೇ ಬಡಾವಣೆ ಜಯನಗರ

'ಬಂದಿಖಾನೆ ಉದ್ಯಾನದಿಂದ ಬೇಕು ಸ್ವಾತಂತ್ರ್ಯ!' ದುಂಡು ಮೇಜಿನ ಸಭೆ: ಭಾಷಣಕಾರರು: ಬಾಬು ಮ್ಯಾಥ್ಯೂ, ಮಾವಳ್ಳಿ ಶಂಕರ್, ಆಕಾರ್ ಪಟೇಲ್, ಅಕ್ಕೈ ಪದ್ಮಶಾಲಿ, ದು. ಸರಸ್ವತಿ, ಅಧ್ಯಕ್ಷತೆ: ಕೆ.ವಿ. ಭಟ್, ಆಯೋಜನೆ: ಹೋರಾಟ ನಮ್ಮ ಹಕ್ಕು, ಸ್ಥಳ: ಶಾಸಕರ ಭವನ, ಅಂಬೇಡ್ಕರ್ ವೀಧಿ, ಮಧ್ಯಾಹ್ನ 3.30

'ಕಾಮ್ರೇಡ್ ಆಗಿ ನನ್ನ ಬದುಕು' ನೆಚ್ಚಿನ ಟೀಚರ್ ಜಗಮೆಚ್ಚಿದ ಆರೋಗ್ಯ ಸಚಿವೆಯಾದ ಕಥನ– ಪುಸ್ತಕ ಬಿಡುಗಡೆ: ಡಾ. ವಸುಂಧರಾ ಭೂಪತಿ, ಅನುವಾದಕರ ಅನುಭವ: ಡಾ.ಎಚ್. ಎಸ್. ಅನುಪಮಾ, ವಿಚಾರಸಂಕಿರಣ: ಕೆ.ಕೆ. ಶೈಲಜಾ, ಆಶಯ ಭಾಷಣ: ಅನಿಲ್ ಕುಮಾರ್ ಎ., ಪ್ರಸನ್ನ ಸಾಲಿಗ್ರಾಮ, ಆಯೋಜನೆ: ಕ್ರಿಯಾ ಮಾಧ್ಯಮ, ಪುಸ್ತಕ ಪ್ರೀತಿ, ಎಸ್‌ಎಎ–ಕೆ, ಸ್ಥಳ: ಡಾ.ಎಚ್. ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಮಧ್ಯಾಹ್ನ 3.30

ಕೆ.ಕೆ. ಶೈಲಜಾ

'ಕನ್ನಡ ಹಬ್ಬ–2024': ಅತಿಥಿಗಳು: ಟಿ. ತಿಮ್ಮೇಶ್, ಸಿ.ಎಂ. ನಾರಾಯಣ ಸ್ವಾಮಿ, ಉಪಸ್ಥಿತಿ: ಆಕಾಶ್ ಎ. ಸುವರ್ಣ, ಸನ್ಮಾನಿತರು: ಹುಲಿಕಲ್ ನಟರಾಜ್, ಅಧ್ಯಕ್ಷತೆ: ಎನ್.ಆರ್. ಹೆಗಡೆ, ಆಯೋಜನೆ: ಲಯನ್ಸ್ ಅಂತರರಾಷ್ಟ್ರೀಯ ಜಿಲ್ಲೆ317ಎಫ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 4

ಸರ್ಕಾರಿ ಶಾಲಾ ಮಕ್ಕಳ ಚೆಸ್ ಪಂದ್ಯಾವಳಿಯ ಸಮಾರೋಪ ಸಮಾರಂಭ: ಆಯೋಜನೆ: ಡಬ್ಲ್ಯೂಡಿಪಿ ಇನ್‌ಕ್ಲೂಸಿವ್ ಚೆಸ್ ಸಮಿತಿ, ಸ್ಥಳ: ಸಿಟಿ, ವೈಎಂಸಿಎ ನೃಪತುಂಗ ರಸ್ತೆ, ಸಂಜೆ 4

ಕನ್ನಡ ರಾಜ್ಯೋತ್ಸವ: ಉದ್ಘಾಟನೆ: ಎಂ.ಕೆ. ಮಂಜುನಾಥ್, ಅತಿಥಿಗಳು: ರಾಂಕೆ ಹನುಮಂತಯ್ಯ, ಮಾಲತಿ ಆರಾಧ್ಯ, ಪ್ರಕಾಶ್ ಎಸ್‌.ಟಿ., ಸತೀಶ್‌ರೆಡ್ಡಿ, ವೆಂಕಟೇಶ್ ಆರ್. ದಾಸ್, ಆಯೋಜನೆ: ಸಿರಿಗನ್ನಡ ಮಿತ್ರ ತಂಡ, ಸ್ಥಳ: ಲಯನ್ಸ್ ಭವನ, ಸಂಜಯನಗರ, ಸಂಜೆ 4

ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ಶ್ರೀನಾಥ್, ಸಂದೇಶ ಮಹಾದೇವಪ್ಪ, ಕೆ. ರಂಜಿತ್ ಕುಮಾರ್, ಪಿ. ಶ್ರೀಧರ್ ರೆಡ್ಡಿ, ಜಾನಕಿ ರಾಮ್ ಜಿ., ಅಧ್ಯಕ್ಷತೆ: ಬಿ.ಪಿ. ಸತೀಶ್, ಆಯೋಜನೆ: ಭಾರತೀಯ ಅಂಚೆ ಇಲಾಖೆ, ಸ್ಥಳ: ಆರ್‌.ಟಿ. ನಗರ ಪ್ರಧಾನ ಅಂಚೆ ಕಚೇರಿ, ಸಂಜೆ 4.30

ವಚನ ಕಾರ್ತಿಕ: ಉದ್ಘಾಟನೆ: ಹುಸೇನ್‌ಸಾಬ್ ದಾಸ್ ಕನಕಗಿರಿ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, **'ಕನ್ನಡ ಕಟ್ಟಿದವರು ವಚನಕಾರರು' ಉಪನ್ಯಾಸ: ಅನುಪಮ ಪಂಚಾಕ್ಷರಿ, ಆಯೋಜನೆ:** ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ಏಳನೇ ಮುಖ್ಯರಸ್ತೆ, ಕೆಸಿಎಚ್‌ಎಸ್ ಲೇಔಟ್, ದೊಡ್ಡಬಸ್ತಿ ರಸ್ತೆ, ಕೆಂಚನಪುರ ಕ್ರಾಸ್, ಸಂಜೆ 5

'ನಮ್ಮ ಜಾತ್ರೆ' ಜನಪದವನ್ನು ಸಂಭ್ರಮಿಸೋಣ: 'ಜನಪದ ಕಲಾತಂಡಗಳ ಮೆರವಣಿಗೆಗೆ ಚಾಲನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅತಿಥಿ: ಶಿವರಾಜ ತಂಗಡಗಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ವಿಧಾನಸೌಧದ ಮೆಟ್ಟಿಲುಗಳ ಮುಂಭಾಗ, ಸಂಜೆ 5

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಅರವಿಂದ ಮಾಲಗತ್ತಿ, ಅಧ್ಯಕ್ಷತೆ: ಶಿವಕುಮಾರ, ಅತಿಥಿಗಳು: ಭಾನುಪ್ರಕಾಶ್, ಭರತ್ ಸಿ. ಯಾರಮ್, ಗೀತಾ ಪಾಟೀಲ್, ನಂದಿನಿ, ಆಯೋಜನೆ: ಅಕ್ಕ ಐಎಎಸ್ ಅಕಾಡೆಮಿ, ಸ್ಥಳ: ಚಂದ್ರಗಿರಿ ಪ್ಯಾಲೇಸ್, ಚಂದ್ರಾ ಲೇಔಟ್ ಬಸ್ ತಂಗುದಾಣದ ಹತ್ತಿರ, ಸಂಜೆ 5



ಅರವಿಂದ ಮಾಲಗತ್ತಿ

ಅನಾಹ ಅವರ 'ಎಕ್ಲಿಪ್ಸಡ್ ಹ್ಯೂಸ್' ಪುಸ್ತಕ ಬಿಡುಗಡೆ: ಎಚ್.ಎಸ್. ಶಿವಪ್ರಕಾಶ, ಪುಸ್ತಕದ ಕುರಿತು: ಶ್ಯಾಮ ಸುಂದರ್, ಅತಿಥಿಗಳು: ಭಾಗ್ಯವಾನ್, ಸ್ಥಳ: ದೇವರಾಜ ಅರಸ್ ಸಭಾಂಗಣ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ರಿಷಿಕಾ ಕುಂದೇಶ್ವರಗೆ ಸನ್ಮಾನ, 'ಅಂಗದ ಸಂಧಾನ' ಯಕ್ಷಗಾನ ತಾಳಮದ್ದಳೆ: ಹಿಮ್ಮೇಳ: ದೀಪಕ್ ತುಳುಪುಳೆ, ಅಕ್ಷಯ ರಾವ್ ವಿಟ್ಲ, ಅವಿನಾಶ್ ಬೈಪಡಿತ್ತಾಯ, ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಸಂಜೆ 5.30

'ವಾಯ್ಸ್ ಆ್ಯಂಡ್ ಸ್ಟ್ರಿಂಗ್ಸ್' ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ: ಸಿತಾರ್ ವಾದನ: ಸಂಜೀವ್ ಕೆ., ಗಾಯನ: ದತ್ತಾತ್ರೇಯ ವೇಲಂಕರ್, ತಬಲಾ: ನಿಶಾದ್ ಪವಾರ್, ಕಾರ್ತಿಕ ಕೃಷ್ಣ, ಹಾರ್ಮೋನಿಯಂ: ವಿವೇಕ್ ಜೈನ್, ಸ್ಥಳ: ಪ್ರಯೋಗ ಸ್ಟುಡಿಯೊ ಥಿಯೇಟರ್, ಬನಶಂಕರಿ ಮೂರನೇ ಹಂತ, ಸಂಜೆ 5.30

ಕರ್ನಾಟಕ ರಾಜ್ಯೋತ್ಸವ ಸಂಭ್ರಮ: ಗಾಯನ: ಶಂಕರ್ ಶಾನುಭಾಗ್, ಹಾಸ್ಯ ಕಾರ್ಯಕ್ರಮ: ಗಂಗಾವತಿ ಪ್ರಾಣೇಶ್, ಆಯೋಜನೆ: ಆಗಮ ಫೌಂಡೇಶನ್, ಸ್ಥಳ: ಬಿ.ಆರ್. ಸುಬ್ಬರಾವ್ ಎಂ.ಇ.ಎಸ್. ಪಿಯು ಕಾಲೇಜು, ಬಿಇಎಲ್ ಬಡಾವಣೆ, ವಿದ್ಯಾರಣ್ಯಪುರ, ಸಂಜೆ 5.30ರಿಂದ

'ಸುರ ಸಂಧ್ಯಾ' ಸಂಗೀತ ಕಛೇರಿ: ಮಹಮ್ಮದ್ ರಫಿ ಅವರ ಗೀತೆಗಳ ಗಾಯನ: ಛೋಟೆ ರಫಿ, ಗೌರವ್ ಕಿಶನ್, ಅರೋಹ್ ಶಂಕರ್, ರೋನಿತ್ ಬ್ಯಾನರ್ಜಿ, ಶ್ರುತಿ ಭಿಡೆ, ಸ್ಥಳ: ಪ್ರೆಸ್ಟೀಜ್ ಖೋಡೆ ಸೆಂಟರ್ ಸಭಾಂಗಣ, ಕನಕಪುರ ರಸ್ತೆ, ಸಂಜೆ 6

ಕನ್ನಡ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಕೃಷ್ಣ ಬೈರೇಗೌಡ, ಅತಿಥಿಗಳು: ಶೋಭಾ ಕರಂದ್ಲಾಜೆ, ಸಂತೋಷ ಹೆಗ್ಡೆ, ರವಿವರ್ಮ ಕುಮಾರ್, ಧರ್ಮೇಂದ್ರಕುಮಾರ್, ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ರೇಣುಕ ಹೆಗ್ಗಡೆ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ, ಸ್ಥಳ: ಕನ್ನಡ ಭವನ, ಕಾಫಿ ಬೋರ್ಡ್ ಬಡಾವಣೆ, ಹೆಬ್ಬಾಳ ಕೆಂಪಾಪುರ, ಸಂಜೆ 6

'ಮಾರುತಿ ಪ್ರತಾಪ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಬಾಲಕೃಷ್ಣ ಹಿಳ್ಳೋಡಿ, ಆಗ್ನೇಯ ಭಟ್ ಕ್ಯಾಸನೂರು, ಮಿತ್ರ ಮಧ್ಯಸ್ಥ, ಮುಮ್ಮೇಳ: ರಾಧಾಕೃಷ್ಣ ಬೆಳಿಯೂರು, ರವಿ ಐತುಮನೆ, ಆದಿತ್ಯ ಸಿ. ಹಳ್ಳೋಡು, ಕೃಷ್ಣಕುಮಾರ್ ನೆಗಳಗುಳಿ, ಪ್ರಶಾಂತ ಶೆಟ್ಟಿಗಾರ್, ಪಾರ್ಥ ಹೆಗಡೆ ಐತುಮನೆ, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ಅನ್ನಪೂರ್ಣೇಶ್ವರಿ ಲೇಔಟ್, ಐದನೇ ತಿರುವು ಜೆ.ಪಿ. ನಗರ, ಏಳನೇ ಹಂತ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

87ನೇ ನುಡಿಜಾತ್ರೆ: 'ಆಫ್‌ಲೈನ್ ನೋಂದಣಿ'ಗೂ ಒತ್ತಾಯ

'ಪ್ರತಿನಿಧಿ ನೋಂದಣಿ' ಮಂದಗತಿ

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ನಗರದಲ್ಲಿ ಡಿ.20ರಿಂದ ಡಿ. 22ರವರೆಗೆ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇದುವರೆಗೆ 2,894 ಪ್ರತಿನಿಧಿಗಳು ಮಾತ್ರ ನೋಂದಣಿಯಾಗಿದ್ದು, 'ಆನ್‌ಲೈನ್ ನೋಂದಣಿ' ಮಂದಗತಿಯಲ್ಲಿ ಸಾಗುತ್ತಿದೆ.

ಕೆ.ಆರ್.ಎಸ್. ಬೃಂದಾವನದಲ್ಲಿರುವ ರಾಯಲ್ ಆರ್ಕಿಡ್ ಹೋಟೆಲ್‌ನಲ್ಲಿ ನವೆಂಬರ್ 16ರಂದು 'ಆನ್‌ಲೈನ್ ನೋಂದಣಿ'ಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದ್ದರು. 15 ದಿನ ಕಳೆದರೂ ನಿರೀಕ್ಷಿತ ಮಟ್ಟದಲ್ಲಿ ನೋಂದಣಿಯಾಗಿಲ್ಲ.

ವಿವಿಧ ಜಿಲ್ಲೆಗಳಿಂದ ಒಟ್ಟು 10 ಸಾವಿರ ಪ್ರತಿನಿಧಿಗಳ ನೋಂದಣಿ ಗುರಿ ಇದ್ದು, ಇದುವರೆಗೆ ಶೇ 29ರಷ್ಟು ಮಾತ್ರ ನೋಂದಣಿಯಾಗಿದೆ. ಡಿ.5ರವರೆಗೆ ಕಾಲಾವಕಾಶ ಕಲ್ಪಿಸಲಾಗಿದ್ದು, 5 ದಿನಗಳಷ್ಟೇ ಉಳಿದಿವೆ.

ನಿಯಮವೇ ಅಡ್ಡಿ: 'ಪ್ರತಿನಿಧಿಯಾಗಿ ನೋಂದಣಿ ಮಾಡಿಕೊಳ್ಳುವವರು ಕಡ್ಡಾಯವಾಗಿ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿರಬೇಕೆಂಬ ನಿಯಮ ರೂಪಿಸಿದ್ದು, ಆಸಕ್ತರಿಗೆ ಇದೇ ಅಡ್ಡಿಯಾಗಿದೆ. ಇದನ್ನು ಸಡಿಲಿಸಿ, ಆಫ್‌ಲೈನ್ ನೋಂದಣಿಗೂ ಅವಕಾಶ ಕಲ್ಪಿಸಬೇಕು' ಎಂದು ಕಲಬುರಗಿಯ ಸಾಹಿತಿ ಶಿವರಾಜ ಪಾಟೀಲ ಮತ್ತು ಕನ್ನಡಪರ ಸಂಘಟಕ ಯಶವಂತರಾಯ ಅಷ್ಠಗಿ ಒತ್ತಾಯಿಸಿದ್ದಾರೆ.

ಹಾವೇರಿಯಲ್ಲಿ ನಡೆದ 86ನೇ ನುಡಿಜಾತ್ರೆಯಲ್ಲಿ ಮೊದಲಿಗೆ ಆರಂಭಿಸಿದ 'ಆನ್‌ಲೈನ್ ನೋಂದಣಿ'ಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾದಾಗ ಪರಿಷತ್ತು ದಿನಾಂಕವನ್ನು ವಿಸ್ತರಿಸಿ, 'ಆಫ್‌ಲೈನ್' ನೋಂದಣಿಗೂ (ಜಿಲ್ಲಾ ಕಸಾಪ ಕಚೇರಿಗಳಲ್ಲಿ ನೋಂದಣಿ) ಅವಕಾಶ ಕಲ್ಪಿಸಿತ್ತು. ಆಫ್‌ಲೈನ್ ನೋಂದಣಿಯಲ್ಲಿ 'ಕಸಾಪ ಸದಸ್ಯತ್ವ ಕಡ್ಡಾಯ' ಎಂಬ ನಿಯಮವನ್ನೂ ಸಡಿಲಿಸಿತ್ತು. ನಂತರ, ಆನ್‌ಲೈನ್‌ನಲ್ಲಿ 5,169 ಮಂದಿ ಮತ್ತು ಆಫ್‌ಲೈನ್‌ನಲ್ಲಿ 5 ಸಾವಿರ ಮಂದಿ ಸೇರಿ ಒಟ್ಟು 10,169 ಮಂದಿ ನೋಂದಣಿ ಮಾಡಿಕೊಂಡಿದ್ದರು.

ಶುಲ್ಕ ಹೆಚ್ಚಳ: 'ನೋಂದಣಿ ಶುಲ್ಕ ₹600 ನಿಗದಿಪಡಿಸಿದ್ದು, ಜೊತೆಗೆ ಕಸಾಪ ಸದಸ್ಯತ್ವ ನೋಂದಣಿಗೆ (ಆಜೀವ ಸದಸ್ಯರು) ₹250 ಸೇರಿ, ಪ್ರತಿನಿಧಿಯಾಗಿ ಬರುವವರು ಒಟ್ಟು ₹850 ಶುಲ್ಕ ಕಟ್ಟಬೇಕು. ಇದು ದುಬಾರಿ. ಹಾವೇರಿ ಸಮ್ಮೇಳನದಲ್ಲಿ ₹500 ಪ್ರತಿನಿಧಿ ಶುಲ್ಕ ನಿಗದಿ ಮಾಡಲಾಗಿತ್ತು. ಈ ಬಾರಿ ಶುಲ್ಕ ಹೆಚ್ಚಳವಾಗಿರುವುದು ಕೂಡ ನೋಂದಣಿ ಕಡಿಮೆಯಾಗಲು ಕಾರಣ' ಎನ್ನಲಾಗುತ್ತಿದೆ.

ಪ್ರತಿನಿಧಿಗಳಿಗೆ ಎರಡು 'ವಿಶೇಷ ಕಿಟ್'

'ಸಮ್ಮೇಳನದ ಪ್ರತಿನಿಧಿಗಳಾಗಿ ಬರುವವರಿಗೆ ಬ್ಯಾಗ್, ಪೆನ್, ನೋಟ್‌ಬುಕ್, ಸಮ್ಮೇಳನಾಧ್ಯಕ್ಷರ ಭಾಷಣ ಪ್ರತಿ, ಆಹ್ವಾನ ಪತ್ರಿಕೆ ಹಾಗೂ ಅರ್ಧ ಕೆ.ಜಿ. 'ಮಂಡ್ಯ ಬೆಲ್ಲ' ಒಳಗೊಂಡ ಕಿಟ್ ಅನ್ನು ಸಮ್ಮೇಳನದ ಕೌಂಟರ್‌ನಲ್ಲಿ ನೀಡುತ್ತೇವೆ. ಜತೆಗೆ ಸೋಪು, ಬ್ರಶ್, ಟೂತ್ ಪೇಸ್ಟ್, ಬಾಚಣಿಗೆ, ದಿಂಬು, ಹೊದಿಕೆ ಒಳಗೊಂಡ 'ವಸತಿ ಕಿಟ್' ಅನ್ನು ಕೂಡ ನೀಡಿ, ವಸತಿ ಸೌಲಭ್ಯ ಕಲ್ಪಿಸುತ್ತೇವೆ' ಎಂದು ಸಮ್ಮೇಳನದ ನೋಂದಣಿ ಸಮಿತಿ ಸದಸ್ಯ ಕಾರ್ಯದರ್ಶಿ, ಉಪವಿಭಾಗಾಧಿಕಾರಿ ಶಿವಮೂರ್ತಿ ತಿಳಿಸಿದರು.

'ಪರಿಷತ್ತಿನ ಸದಸ್ಯತ್ವ ಪಡೆದಿರುವವರು ಪರಿಷತ್ತಿನ ವೆಬ್‌ಸೈಟ್ (https://kannadasahithya parishattu.in/sammelana2024) ಮೂಲಕ ನೋಂದಣಿ ಮಾಡಿಕೊಳ್ಳಲು ಒಟ್ಟು 20 ದಿನ (ನ.16ರಿಂದ ಡಿ.5ರವರೆಗೆ) ಅವಕಾಶ ನೀಡಲಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿದ ನಂತರ ಹಣ ಪಾವತಿ ಕೂಡ ಆನ್‌ಲೈನ್ ಮೂಲಕ ಮಾಡಬೇಕು. ವಿಶೇಷ 'ಗುರುತಿನ ಚೀಟಿ' ಕೂಡ ಸಿಗಲಿದೆ' ಎಂದು ಮಾಹಿತಿ ನೀಡಿದ್ದಾರೆ.

ಸದಸ್ಯತ್ವ ಕಡ್ಡಾಯ: ತಪ್ಪೇನಿದೆ?'

'ಸಾಹಿತ್ಯ ಸಮ್ಮೇಳನಕ್ಕೆ ಬರಲು ಎಲ್ಲರಿಗೂ ಮುಕ್ತ ಅವಕಾಶವಿದೆ. ಆದರೆ, ಸಮ್ಮೇಳನದ ಪ್ರತಿನಿಧಿಯಾಗಿ ಬರುವವರಿಗೆ ಮಾತ್ರ ಕಸಾಪ ಸದಸ್ಯತ್ವ ಕಡ್ಡಾಯ ಮಾಡಲಾಗಿದೆ. ಇದರಲ್ಲಿ ತಪ್ಪೇನಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಪ್ರತಿಕ್ರಿಯಿಸಿದರು.

'ಪ್ರಸ್ತುತ 3.78 ಲಕ್ಷ ಸದಸ್ಯರಿದ್ದು, 1 ಕೋಟಿ ಸದಸ್ಯತ್ವದ ಗುರಿ ಹಾಕಿಕೊಂಡಿದ್ದೇವೆ. ಜನಸಾಮಾನ್ಯರ ಪರಿಷತ್ತು ಆಗಬೇಕೆಂಬ ಉದ್ದೇಶದಿಂದ ಸದಸ್ಯತ್ವ ಅಭಿಯಾನ ನಡೆಸುತ್ತೇವೆ. ಈ ಬಾರಿ ಆಫ್‌ಲೈನ್ ಬದಲಾಗಿ ಪೂರ್ಣ ಪ್ರಮಾಣದಲ್ಲಿ ಆನ್‌ಲೈನ್ ನೋಂದಣಿಗೆ ಮಾತ್ರ ಅವಕಾಶ ಕಲ್ಪಿಸಿದ್ದೇವೆ. ನಿರೀಕ್ಷಿಸಿದಷ್ಟು ಪ್ರತಿನಿಧಿಗಳು ನೋಂದಣಿಯಾಗುವ ಭರವಸೆ ಇದೆ' ಎಂದರು.

ಖರ್ಚು ಕಡಿತಗೊಳಿಸಿ: ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಖರ್ಚು ಕಡಿತಗೊಳಿಸಿ, ಆರ್ಥಿಕ ಸಂಕಷ್ಟದಲ್ಲಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ನೆರವು ನೀಡುವಂತೆ ಮಂಡ್ಯ ಜಿಲ್ಲಾಧಿಕಾರಿ ಕುಮಾರ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಸಲಹೆ ನೀಡಿದ್ದಾರೆ.

ಮಹೇಶ ಜೋಶಿ

ಈ ಬಗ್ಗೆ ಅವರು ಪತ್ರ ಬರೆದಿದ್ದು, 'ಹಂಪಿ ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಅಸ್ಮಿತೆಯಾಗಿದೆ. ಇದು ಆರ್ಥಿಕ ಬಿಕ್ಕಟ್ಟಿನಿಂದಾಗಿ ಸಂಕಷ್ಟಕ್ಕೊಳಗಾಗಿರುವುದರಿಂದ ಖೇದವಾಗಿದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ದೊರಕದಿರುವುದರಿಂದ ಅವರ ಕಲಿಕಯಲ್ಲಿ ಹಿನ್ನಡೆಯಾಗುತ್ತಿರುವುದು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗೆ ಹಲವು ತಿಂಗಳಿನಿಂದ ವೇತನ ಪಾವತಿಯಾಗದೇ ಇರುವುದು ದುಃಖದ ವಿಚಾರವಾಗಿದೆ ಆದ್ದರಿಂದ ಸಾಹಿತ್ಯ ಸಮ್ಮೇಳನದ ಖರ್ಚುಗಳನ್ನು ಕಡಿತಗೊಳಿಸಿ, ವಿಶ್ವ ವಿದ್ಯಾಲಯಕ್ಕೆ ಸಹಾಯ ಮಾಡಿದಲ್ಲಿ ಸಮ್ಮೇಳನದ ಆಚರಣೆಯೂ ಅರ್ಥಪೂರ್ಣವಾಗುತ್ತದೆ' ಎಂದು ಹೇಳಿದ್ದಾರೆ.

'ಡಿ.20, 21 ಮತ್ತು 22ರಂದು ನಡೆಯಲಿರುವ ಸಮ್ಮೇಳನದ ಭೋಜನವನ್ನು ಇತಿಮಿತಿಗೊಳಿಸಿ, ಉಳಿದ ಖರ್ಚುಗಳನ್ನು ಸಾಧ್ಯವಾದಷ್ಟು ಕಡಿತಗೊಳಿಸಿ' ಎಂದು ಅವರು ಹೇಳಿದ್ದಾರೆ.

10ರಿಂದ ಆಳ್ವಾಸ್ ವಿರಾಸತ್ ಶಾಸ್ತ್ರೀಯ ಯುವಸಂಪದ

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ನಡೆಯುವ ಆಳ್ವಾಸ್ ವಿರಾಸತ್‌ಗೆ ಸಂಬಂಧಿಸಿ 'ಆಳ್ವಾಸ್ ವಿರಾಸತ್ ಶಾಸ್ತ್ರೀಯ ಯುವಸಂಪದ' ಶಿಬಿರ ಡಿ.10ರಿಂದ 14ರವರೆಗೆ ಬೆಳಿಗ್ಗೆ 7.30ರಿಂದ ಸಂಜೆ 5ರವರೆಗೆ ನಡೆಯಲಿದೆ.

ಆಸಕ್ತ ಶಾಸ್ತ್ರೀಯ (ಹಿಂದೂಸ್ಥಾನಿ-ಕರ್ನಾಟಕ) ಸಂಗೀತ- ನೃತ್ಯ- ತಾಳವಾದ್ಯ ಮತ್ತು ಯಕ್ಷಗಾನ ಕಲೆ ಅಭ್ಯಸಿಸುವ 6ನೇ ತರಗತಿಯಿಂದ ಸ್ನಾತಕೋತ್ತರ ತರಗತಿವರೆಗಿನ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದು. ಡಿ.9ರೊಳಗೆ ನೋಂದಾಯಿಸಿ. ಮಾಹಿತಿಗಾಗಿ ಮೊ: 9972247873 /9448989382 ಸಂಪರ್ಕಿಸಬಹುದೆಂದು ಪ್ರಕಟಣೆ ತಿಳಿಸಿದೆ.

PUBLIC NOTICE

Our client ('**Client**') is desirous of entering into sale transaction in connection with the immovable property morefully described in the '**Schedule**' hereunder and hereinafter referred to as the '**Schedule Property**' with: (i) Mrs. Bhagyamma; (ii) Mr. Srinivas V.; (iii) Mrs. V. Shashirekha; and (iv) Mrs. V. Manjula ('**Owners**'). The Owners have represented to our Client that the Owners are the joint and absolute owners of the Schedule Property, with unrestricted rights of alienation over the same.

Notice is hereby given to the general public that any person/s other than the Owners, asserting any right, title, charge, lien, claim/s or any interest whatsoever in respect of the Schedule Property is/are hereby called upon to submit to the undersigned, their claim/s, if any, over the Schedule Property or their objections, if any, to the aforementioned transaction. The said claim/s or objections must be in writing, together with documentary proof of such claim/s or objections, so as to reach us at the address given below within a period of **15 (fifteen) days** from the date of publication of this Notice. If no such claim/s or objections are received within the said period of 15 (fifteen) days, it shall be deemed that no one else other than the Owners have any right, title, charge, lien, claim/s or any interest whatsoever in respect of the Schedule Property. Further any claims or alleged interests, if any, which are not received within the said period of 15 (fifteen) days shall be deemed to have been consciously waived and disregarded for all intents and purposes and shall thereafter not be binding on our Client and our Client would be at liberty to proceed with the said transaction in connection with the Schedule Property.

SCHEDULE
(Description of the Schedule Property)

All that piece and parcel of immovable property bearing Survey No. 128/3, measuring 02 Acres 31 Guntas excluding of 04 Guntas of kharab, situated at Hireamanikere Village, Kasaba Hobli, Devanahalli Taluk and Bengaluru Rural District and bounded on the:

East by : Property bearing Survey Nos. 454 & 455;
West by : Road;
North by : Property belonging to Ms. Jaya Anand; and
South by : Nala & Property belonging to L & W.

Date: 30.11.2024
Place: Bengaluru

Ms. Brijita Prakash,
Partner
J. Sagar Associates,
Advocates & Solicitors,
Level 3, Prestige Obelisk,3, Kasturba Road
Bengaluru – 560 001.
Ph. 080-4350 3600/080-4350 3676
Email – brijita.prakash@jsalaw.com

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ **ಸಾರ್ವಜನಿಕರಿಗೆ** ತಿಳಿಸುವುದು ಏನೆಂದರೆ, ಮಾದನಹಟ್ಟಿ ವೆಂಕಟಾಪುರ ಗ್ರಾಮ, ಕಸಬಾ ಹೋಬಳಿ, ಮಾಲೂರ ತಾಲ್ಲೂಕು, ಕೋಲಾರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಮತ್ತು ಇಲ್ಲಿ ಇನ್ನುಮುಂದೆ **'ಷೆಡ್ಯೂಲ್ ಪ್ರಾಪರ್ಟಿ'** ಎನ್ನಲಾಗುವ, ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ, ಒಟ್ಟಾರೆ 20 ಎಕರೆ 11½ ಗುಂಟೆ ವಿಸ್ತೀರ್ಣದಲ್ಲಿ 1/2 ಗುಂಟಾ ಖರಾಬ್ ಸೇರಿದಂತೆ ವಸತಿಯೋಗ್ಯ ಉದ್ದೇಶಕ್ಕೆ ಭೂಪರಿವರ್ತನೆಗೊಂಡಿರುವ ಜಮೀನಿಗೆ ಸಂಬಂಧಿಸಿದಂತೆ, ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿರುವ ವ್ಯಕ್ತಿಕ 'ಭೂಮಾಲೀಕರ' **(ಭೂಮಾಲೀಕರು)** ಮಾಲೀಕತ್ವ, ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿ ಕುರಿತಂತೆ ನಾವು ಪರಿಶೋಧನೆ ಮಾಡುತ್ತಿದ್ದೇವೆ.

ಈ ಮೂಲಕ ಮಾಹಿತಿ ನೀಡುವುದು ಏನೆಂದರೆ, ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿಯನ್ನು ಭೂಮಾಲೀಕರೊಂದಿಗೆ ಸೇರಿ ಜಂಟಿಯಾಗಿ ಅಭಿವೃದ್ಧಿಪಡಿಸಲು **(ಉದ್ದೇಶಿತ ವ್ಯವಹಾರ)** ಉದ್ದೇಶಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ, ಒಂದು ವೇಳೆ ಯಾವುದೇ ವ್ಯಕ್ತಿಗೆ, ಸಂಸ್ಥೆಗೆ, ಕಂಪನಿಗೆ, ಸಂಘಕ್ಕೆ, ಸಹಕಾರಕ್ಕೆ (ಕಾರ್ಪೋರೇಟ್ ಅಥವಾ ಇನ್ಯಾತರ) ಸಂಸ್ಥೆಗಳಿಗೆ ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲಾಗಲಿ ಅಥವಾ ಷೆಡ್ಯೂಲ್ ಪ್ರಾಪರ್ಟಿಯ ಯಾವುದೇ ಭಾಗದ ಮೇಲಾಗಲಿ ಅಥವಾ ಭೂಮಾಲೀಕರ ವಿರುದ್ಧವಾಗಲಿ ಅಥವಾ ಉದ್ದೇಶಿತ ವ್ಯವಹಾರಕ್ಕೆ ವಿರುದ್ಧವಾಗಿಯಾಗಲಿ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಕ್ಲೇಮ್, ಬಾಕಿ ವ್ಯಾಜ್ಯ ಅಥವಾ ಡಿಮಾಂಡ್ ಹೊಂದಿದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ 14 **(ಹದಿನಾಲ್ಕು)** ದಿನಗಳೊಳಗೆ ಈ ಕೆಳಗಿನ ಸಹಿದಾರರಿಗೆ ತಮ್ಮ ಹಕ್ಕು, ಅಧಿಕಾರ, ಹಿತಾಸಕ್ತಿ, ಕ್ಲೇಮ್, ಬಾಕಿ ವ್ಯಾಜ್ಯ ಅಥವಾ ಡಿಮಾಂಡ್‌ಗಳಿಗೆ ಸಂಬಂಧಿತ ವಿವರಗಳನ್ನು ಲಿಖಿತ ರೂಪದಲ್ಲಿ ಪೂರಕ ದಾಖಲಾತಿಗಳ ಸಮೇತ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಉಲ್ಲೇಖಿತ ಭೂಮಾಲೀಕರ ಮಾಲೀಕತ್ವ ಹಾಗೂ ಹಕ್ಕುಗಳು ಸ್ಪಷ್ಟವಾಗಿವೆ, ವ್ಯಾಪಾರಕ್ಕೆ ಯೋಗ್ಯವಾಗಿವೆ, ಮತ್ತು ಯಾವುದೇ ರೀತಿಯ ಋಣಭಾರಗಳಿಂದ ಮುಕ್ತವಾಗಿವೆ ಹಾಗೂ ಇವುಗಳ ಮೇಲೆ ಇನ್ನಿತರ ಯಾವುದೇ ವ್ಯಕ್ತಿಗಳ ಯಾವುದೇ ಸ್ವರೂಪದ ಹಕ್ಕು, ಅಧಿಕಾರ, ಹಿತಾಸಕ್ತಿಗಳು ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ನಮ್ಮ ಕಕ್ಷಿದಾರರು ಉದ್ದೇಶಿತ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಮುಂದಾಗುತ್ತಾರೆ. ಮುಂದುವರಿದಂತೆ, ಒಂದು ವೇಳೆ ಸದರಿ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ 14 **(ಹದಿನಾಲ್ಕು)** ದಿನಗಳೊಳಗೆ ಯಾವುದೇ ಕ್ಲೇಮ್‌ಗಳಾಗಲಿ ಅಥವಾ ಆರೋಪಿತ ಹಿತಾಸಕ್ತಿಗಳು ಸಲ್ಲಿಕೆಯಾಗದಿದ್ದಲ್ಲಿ, ಅಂತಹವುಗಳನ್ನು ವಿವೇಚನಾಪೂರ್ವಕವಾಗಿ ಕೈಬಿಡಲಾಗುತ್ತದೆ ಮತ್ತು ಎಲ್ಲಾ ಉದ್ದೇಶಗಳಿಂದ ಅವುಗಳನ್ನು ಕೈಬಿಡಲಾಗುತ್ತದೆ ಹಾಗೂ ಅಂತಹವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸಲಾರವು.

ಷೆಡ್ಯೂಲ್

ಮಾದನಹಟ್ಟಿ ವೆಂಕಟಾಪುರ ಗ್ರಾಮ, ಕಸಬಾ ಹೋಬಳಿ, ಮಾಲೂರ ತಾಲ್ಲೂಕು, ಕೋಲಾರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಒಟ್ಟಾರೆ 20 ಎಕರೆ 11½ ಗುಂಟೆ ವಿಸ್ತೀರ್ಣದಲ್ಲಿ ಸೇರಿದಂತೆ ½ ಗುಂಟಾ ಖರಾಬ್ ಹೊರತುಪಡಿಸಿದ ವಸತಿಯೋಗ್ಯ ಉದ್ದೇಶಕ್ಕೆ ಭೂಪರಿವರ್ತನೆಗೊಂಡಿರುವ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:

ಕ್ರ. ಸಂ.	ಸರ್ವೆ ನಂ.	ಎಕರೆ	ಗುಂಟಾಸ್ (ಖರಾಬ್ ಸೇರಿದಂತೆ)	ಜಮೀನು ಮಾಲೀಕರ ಹೆಸರುಗಳು ಮತ್ತು ಒಪ್ಪಂದ ಹೋಲ್ಡರ್ ವಿವರಗಳು	ಪೂರ್ವಕ್ಕೆ :	ಪಶ್ಚಿಮಕ್ಕೆ :	ಉತ್ತರಕ್ಕೆ :	ದಕ್ಷಿಣಕ್ಕೆ :
1.	2/1	1	12 ½	ಅಮಲಮ್ಮ ಅಲಿಯಾಸ್ ಅಮಲಾಬಾಯಿ ದಿವಂಗತ ಲಕ್ಷ್ಮಣ್ ಸಿಂಗ್ ಅವರ ಪುತ್ರಿ	ಸರ್ವೆ ನಂ.2/3	ಸರ್ವೆ ನಂ.42/5	ಸರ್ವೆ ನಂ. 1/4	ಸರ್ವೆ ನಂ. 3/4
2.	2/2	1	12 ½	ಜಿ. ನಾಗರಾಜ್, ದಿವಂಗತ ಗುಂಡಪ್ಪ ಅವರ ಪುತ್ರ (ಜಿ. ನಾಗರಾಜ್)	ಸರ್ವೆ ನಂ.14/4	ಸರ್ವೆ ನಂ. 2/5	ಸರ್ವೆ ನಂ. 1/4	ಸರ್ವೆ ನಂ. 3/1
3.	2/3	0	20	ಜಿ. ನಾಗರಾಜ್ (ಒಪ್ಪಂದದಾರರು – ಎಚ್. ಎಸ್. ರಾಜೇಶ್ ಗೌಡ)	ಸರ್ವೆ ನಂ.2/4	ಸರ್ವೆ ನಂ. 2/1	ಸರ್ವೆ ನಂ. 1/4	ಸರ್ವೆ ನಂ. 3/4
4.	2/4	0	22	ಜಿ. ನಾಗರಾಜ್	ಸರ್ವೆ ನಂ.2/5	ಸರ್ವೆ ನಂ. 2/3	ಸರ್ವೆ ನಂ. 1/4	ಸರ್ವೆ ನಂ. 3/1 ಮತ್ತು 3/4
5.	2/5	0	20	ಜಿ. ನಾಗರಾಜ್ (ಒಪ್ಪಂದದಾರರು – ಎಚ್. ಎಸ್. ರಾಜೇಶ್ ಗೌಡ)	ಸರ್ವೆ ನಂ.2/2	ಸರ್ವೆ ನಂ. 2/4	ಸರ್ವೆ ನಂ. 1/4	ಸರ್ವೆ ನಂ. 3/1
6.	3/1	0	10	ಜಿ. ನಾಗರಾಜ್	ಸರ್ವೆ ನಂ.13/1	ಸರ್ವೆ ನಂ. 3/4	ಸರ್ವೆ ನಂ.2/2, 2/4 ಮತ್ತು 2/5	ಸರ್ವೆ ನಂ. 3/3 ಮತ್ತು 3/8
7.	3/2	1	30	ಎನ್. ರವಿಕುಮಾರ್, ದಿವಂಗತ ನಾರಾಯಣಗೌಡರ ಪುತ್ರ (ಒಪ್ಪಂದದಾರರು ಹರೀಶ್ ಜಿ.ಎನ್.)	ಸರ್ವೆ ನಂ.3/3	ಸರ್ವೆ ನಂ.42/2	ಸರ್ವೆ ನಂ.3/4	ಸರ್ವೆ ನಂ. 4
8.	3/3	0	10		ಸರ್ವೆ ನಂ.3/5 ಇಂದ 3/8 ವರೆಗೂ	ಸರ್ವೆ ನಂ. 3/2	ಸರ್ವೆ ನಂ.3/1	ಸರ್ವೆ ನಂ. 4
9.	3/4	0	10	ಜಿ. ನಾಗರಾಜ್	ಸರ್ವೆ ನಂ.3/1	ಸರ್ವೆ ನಂ.42/2	ಸರ್ವೆ ನಂ.2/1 2/3 ಮತ್ತು 2/4	ಸರ್ವೆ ನಂ. 3/2
10.	3/5	0	14 ½	ಮುನಿಯಪ್ಪ, ಬೈರಪ್ಪ ಅವರ ಪುತ್ರ	ಸರ್ವೆ ನಂ.13/1	ಸರ್ವೆ ನಂ. 3/3	ಸರ್ವೆ ನಂ.3/6	ಸರ್ವೆ ನಂ. 4
11.	3/6	0	20	ನಾಗೇಶ್ ಎಂ., ಮುನಿಯಪ್ಪ ಅವರ ಪುತ್ರ	ಸರ್ವೆ ನಂ.13/1	ಸರ್ವೆ ನಂ. 3/3	ಸರ್ವೆ ನಂ.3/7	ಸರ್ವೆ ನಂ. 3/5
12.	3/7	0	20	ರವಿ ಎಂ., ಮುನಿಯಪ್ಪ ಅವರ ಪುತ್ರ	ಸರ್ವೆ ನಂ.13/1	ಸರ್ವೆ ನಂ. 3/3	ಸರ್ವೆ ನಂ.3/8	ಸರ್ವೆ ನಂ. 3/6
13.	3/8	0	5 ½	ಉಮಾ ಎಂ., ಮುನಿಯಪ್ಪ ಅವರ ಪುತ್ರಿ	ಸರ್ವೆ ನಂ.13/1	ಸರ್ವೆ ನಂ. 3/3	ಸರ್ವೆ ನಂ.3/1	ಸರ್ವೆ ನಂ. 3/7
14.	13/2	1	0	ಎ. ರಮೇಶ್, ಅಪ್ಪಯ್ಯ ಅವರ ಪುತ್ರ (ಒಪ್ಪಂದದಾರರು ಜಿ. ರವಿ)	ಸರ್ವೆ ನಂ.12	ಸರ್ವೆ ನಂ. 13/3	ಸರ್ವೆ ನಂ.14/1	ಸರ್ವೆ ನಂ. 10
15.	14/1	2	10	(1) ಕೌಶಲ್ ವಿನೋದ್ ದೋಶಿ, ವಿನೋದ್ ದೋಶಿ ಅವರ ಪುತ್ರ (2) ಕಿಷನ್ ಡಿ. ದೋಶಿ ದೇವೇಂದ್ರ ದೋಶಿ ಅವರ ಪುತ್ರ ಮತ್ತು (3) ಮಹಲೋ ವೆಂಚರ್ಸ್ ಎಲ್ಎಲ್‌ಪಿ.	ಸರ್ವೆ ನಂ.15	ಸರ್ವೆ ನಂ. 14/5	ಸರ್ವೆ ನಂ.14/2	ಸರ್ವೆ ನಂ. 13/2, 13/3 ಮತ್ತು 13/4
16.	14/2	2	25	ಜಿ. ನಾಗರಾಜ್	ಸರ್ವೆ ನಂ.15	ಸರ್ವೆ ನಂ. 1/2 ಮತು 1/4	ಪಿಚಗುಂಟ್ರಹಳ್ಳಿ ಗ್ರಾಮದ ಗಡಿ	ಸರ್ವೆ ನಂ. 14/1, 14/3, 14/4 ಮತ್ತು 14/5
17.	14/3	0	20	ಎಂ. ರವಿ, ಮುನಿಯಪ್ಪ ಅವರ ಪುತ್ರ	ಸರ್ವೆ ನಂ.14/5	ಸರ್ವೆ ನಂ.14/4	ಸರ್ವೆ ನಂ.14/2	ಸರ್ವೆ ನಂ.13/1 ಮತ್ತು 13/4
18.	14/4	1	0	ಜಿ. ನಾಗರಾಜ್	ಸರ್ವೆ ನಂ.14/3	ಸರ್ವೆ ನಂ. 2/2	ಸರ್ವೆ ನಂ.14/2	ಸರ್ವೆ ನಂ.13/1
19.	14/5	0	20	(1) ಕೌಶಲ್ ವಿನೋದ್ ದೋಶಿ, ವಿನೋದ್ ದೋಶಿ ಅವರ ಪುತ್ರ (2) ಕಿಷನ್ ಡಿ. ದೋಶಿ ದೇವೇಂದ್ರ ದೋಶಿ ಅವರ ಪುತ್ರ ಮತ್ತು (3) ಮಹಲೋ ವೆಂಚರ್ಸ್ ಎಲ್ಎಲ್‌ಪಿ.	ಸರ್ವೆ ನಂ.14/1	ಸರ್ವೆ ನಂ.14/3	ಸರ್ವೆ ನಂ.14/2	ಸರ್ವೆ ನಂ.13/4
20.	15	3	33	ಜಿ. ನಾಗರಾಜ್ (ಒಪ್ಪಂದದಾರರು ಕೆ.ಟಿ. ಬುದ್ದೇಗೌಡ,)	ಪಿಚಗುಂಟ್ರಹಳ್ಳಿ ಗ್ರಾಮದ ಗಡಿ ಸರ್ವೆ ನಂ.16 ಮತ್ತು ಖಾಸಗಿ ಆಸ್ತಿ	ಸರ್ವೆ ನಂ. 14/1 ಮತ್ತು 14/2	ಪಿಚಗುಂಟ್ರಹಳ್ಳಿ ಗ್ರಾಮದ ಗಡಿ ಮತ್ತು ಖಾಸಗಿ ಆಸ್ತಿ	ಸರ್ವೆ ನಂ.12
21.	42/4	0	8½	ಜಿ. ನಾಗರಾಜ್	ಸರ್ವೆ ನಂ.42/5	ಬನಹಳ್ಳಿ ಗ್ರಾಮದ ಗಡಿ ಮತ್ತು ರಸ್ತೆ	ಸರ್ವೆ ನಂ.42/3	ಸರ್ವೆ ನಂ.42/2
22.	42/5	0	8		ಸರ್ವೆ ನಂ.2/1	ಸರ್ವೆ ನಂ.42/3 ಮತು 42/4	ಸರ್ವೆ ನಂ. 1/3	ಸರ್ವೆ ನಂ.42/2
ಒಟ್ಟು ವಿಸ್ತೀರ್ಣ		20	11½					

ದಿನಾಂಕ: 30.11.2024
ಸ್ಥಳ: ಬೆಂಗಳೂರು

ಮೃದುಲ್ ಕುಂಬಲತ್
ಪಾಲುದಾರರು
ಟ್ರೈಲೀಗಲ್
ವಕೀಲರು ಮತ್ತು ಸಾಲಿಸಿಟರ್ಸ್
6ನೇ ಮತ್ತು 7ನೇ ಮಹಡಿ, ಮಾರ್ಕ್ಸ್ ಸ್ಕ್ವೇರ್, ನಂ. 61, ಸೈಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು – 560 001
ಫೋನ್: 080 4343 4646, ಇ ಮೇಲ್: mridul.kumbalth@trilegal.com

ಮುದ್ದೇಬಿಹಾಳ: ವಸತಿ ಶಾಲೆ ಮುಂದೆ ವಿದ್ಯಾರ್ಥಿನಿಗೆ ತಾಳಿಕಟ್ಟಿದ ಯುವಕ

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ತಾಲ್ಲೂಕಿನ ವಸತಿ ಶಾಲೆಯೊಂದರ ಮುಂಭಾಗದಲ್ಲಿ 10ನೇ ತರಗತಿ ವಿದ್ಯಾರ್ಥಿನಿಗೆ ಯುವಕನೊಬ್ಬ ತಾಳಿಕಟ್ಟಿ, ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಘಟನೆಗೆ ಸಂಬಂಧಿಸಿದಂತೆ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಪೋಕ್ಸೊ ಅಡಿ ಬಾಲಕಿ ಪ್ರಕರಣ ದಾಖಲಿಸಿದ್ದಾಳೆ.

ಘಟನೆ ವಿವರ: ಶಾಲೆಯ ಮುಂಭಾಗದಲ್ಲಿ ನ.24 ರಂದು ಈ ಘಟನೆ ನಡೆದಿದ್ದು, ಆರೋಪಿಗಳಾದ ನಾಲತವಾಡ ಪಟ್ಟಣದ ಮೌನೇಶ ಹನುಮಂತ ಮಾದರ ಹಾಗೂ ಸಂಗಮೇಶ ಬಡಪ್ಪ ಜುಂಜುವಾರ ವಿರುದ್ಧ ಪೋಕ್ಸೊ ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆ ಅನ್ವಯ ನ.28ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ವಸತಿ ಶಾಲೆಗೆ ಅಧಿಕಾರಿಗಳು ಭೇಟಿ ನೀಡಿದ್ದು, ಮಾಹಿತಿ ಕಲೆ ಹಾಕುತ್ತಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ, ನಾಲತವಾಡ ಪಟ್ಟಣದ ಖಾಸಗಿ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿದ್ದ ಬಾಲಕಿಗೆ ಚುಡಾಯಿಸಿ ಪ್ರೀತಿಸುವಂತೆ ಬೆನ್ನು ಬಿದ್ದು ಕಿರುಕುಳ ನೀಡಿದ್ದು, ತಡೆಯಲು ಹೋದ ಅವರ ಸಂಬಂಧಿಕರ ಮೇಲೆ ಹಲ್ಲೆಗೈದು ಜೀವ ಬೆದರಿಕೆ ಒಡ್ಡಿದ ಆರೋಪದ ಮೇರೆಗೆ ಸಂಗಮೇಶ ಜುಂಜವಾರ, ಚಿದಾನಂದ ಕಟ್ಟಿಮನಿ ಹಾಗೂ ಮೌನೇಶ ಮಾದರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಅಡಿ ಪ್ರಕರಣ ದಾಖಲಿಸಲಾಗಿದೆ.

ಸುಗ್ಗಿ ಹಬ್ಬ 'ಹುತ್ತರಿ' ಆಚರಣೆ 14ರಂದು

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಸುಗ್ಗಿ ಹಬ್ಬ 'ಹುತ್ತರಿ'ಯನ್ನು ಡಿ.14ರಂದು ಆಚರಿಸಲು ಇಲ್ಲಿಗೆ ಸಮೀಪದ ಪಾಡಿ ಇಗ್ಗುತ್ತಪ್ಪ ದೇವಾಲಯದ ಸಭಾಂಗಣದಲ್ಲಿ ಶುಕ್ರವಾರ ನಿರ್ಧರಿಸಲಾಯಿತು.

ದೇವಾಲಯದ ಪ್ರಮುಖರು ಹಾಗೂ ಭಕ್ತರ ಸಮ್ಮುಖದಲ್ಲಿ ಕಣಿಯರ ಶಶಿಕುಮಾರ್ ಸಲಹೆ ಮೇರೆಗೆ ದಿನ ನಿಗದಿ ಮಾಡಲಾಯಿತು. ದೇವಾಲಯದಲ್ಲಿ ಡಿ.14ರಂದು ರಾತ್ರಿ 7.30ಕ್ಕೆ ಹುತ್ತರಿ ಹಬ್ಬದ ನೆರೆ ಕಟ್ಟುವುದು, 8.30ಕ್ಕೆ ಕದಿರು ಕುಯ್ಯುವುದು, 9.30ಕ್ಕೆ ಊಟೋಪಚಾರ ನಡೆಯಲಿದೆ. ಡಿ.13ರಂದು ಅಲ್ಲಿಯೇ ಕಲ್ಲಾಡ್ಚ ಹಬ್ಬ ನಡೆಯಲಿದೆ.

14ರಂದು ರಾತ್ರಿ ಬೇರೆ ಕಡೆಗಳಲ್ಲಿ ಸಾರ್ವಜನಿಕರು ರಾತ್ರಿ 7.50ಕ್ಕೆ ನೆರೆ ಕಟ್ಟಬೇಕು, 8.50ಕ್ಕೆ ಕದಿರು ತೆಗೆಯಬೇಕು ಹಾಗೂ 9.50ಕ್ಕೆ ಊಟೋಪಚಾರ ನಡೆಸಬೇಕು ಎಂದು ಸಭೆಯು ಸಮಯ ನಿಗದಿಪಡಿಸಿತು.

ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆಗೆ ಸರ್ವಾನುಮತದ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚಿಸುವ ಪ್ರಸ್ತಾವಕ್ಕೆ ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆ ಅನುಮೋದನೆ ನೀಡಿದೆ.

ನಗರದ ಪಾಲಿಕೆ ಸಭಾಂಗಣದಲ್ಲಿ ಶುಕ್ರವಾರ ಮೇಯರ್ ರಾಮಪ್ಪ ಬಡಿಗೇರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷಗಳ ಸದಸ್ಯರೆಲ್ಲರೂ ಒಮ್ಮತದಿಂದ ನಿರ್ಣಯಕ್ಕೆ ಬೆಂಬಲ ಸೂಚಿಸಿದರು.

ಸದಸ್ಯ ಶಿವು ಹಿರೇಮಠ ಅವರು, ಪ್ರತ್ಯೇಕ ಪಾಲಿಕೆ ಬೇಡಿಕೆಗೆ ಅನುಮೋದನೆ ನೀಡುವಂತೆ ವಿಷಯ ಮಂಡಿಸಿದರು. ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಎಲ್ಲ ಸದಸ್ಯರು ಬೆಂಬಲ ಸೂಚಿಸಿದರು. ಮೇಯರ್ ರಾಮಪ್ಪ ಬಡಿಗೇರ ಮಾತನಾಡಿ, 'ಸರ್ಕಾರ ಬೇಗ ನಿರ್ಣಯ ತೆಗೆದುಕೊಳ್ಳಲಿ' ಎಂದರು.

'ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ದೇಶಕ್ಕೆ ವಿಸ್ತರಿಸಲಿ'

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ: ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ ರಾಜ್ಯದ ಹಳ್ಳಿ ಹಳ್ಳಿಗಳಲ್ಲಿ ಜನರ ಜೀವನ ಸುಧಾರಿಸಿದೆ. ಇದು ದೇಶಕ್ಕೆ ವಿಸ್ತರಣೆ ಆದರೆ ಎಲ್ಲರ ಆರ್ಥಿಕ ಸ್ಥಿತಿ ಉತ್ತಮ ಆಗಬಹುದು ಎಂದು ಗೃಹಸಚಿವ ಜಿ.ಪರಮೇಶ್ವರ ಅವರು ಆಶಿಸಿದರು.

ಧರ್ಮಸ್ಥಳ ಲಕ್ಷ ದೀಪೋತ್ಸವದ ಅಂಗವಾಗಿ ಶುಕ್ರವಾರ ಸಂಜೆ ನಡೆದ ಸರ್ವಧರ್ಮ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ನ್ಯಾಯದಾನ ಮಾಡುವ ಕ್ಷೇತ್ರ ಧರ್ಮಸ್ಥಳದ ಆಶಯ ದೇಶಕ್ಕೆ ಮಾದರಿ. ಚುನಾಯಿತ ಸರ್ಕಾರಕ್ಕೆ ಮಾಡಲು ಸಾಧ್ಯವಾಗದ ಕೆಲಸ ಧರ್ಮಸ್ಥಳದಲ್ಲಿ ಆಗುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಆರ್ಥಿಕವಾಗಿ ವೇಗದ ಹಾದಿಯಲ್ಲಿರುವ ದೇಶ ಸಾಮಾಜಿಕವಾಗಿ ಯಾವ ಹಾದಿಯಲ್ಲಿ ನಡೆಯುತ್ತಿದೆ ಎಂಬುದನ್ನು ಯೋಚಿಸಿದರೆ ಆತಂಕವಾಗುತ್ತದೆ. ಹೊರದೇಶದಿಂದ ಬಂದ ಇಸ್ಲಾಂ, ಕ್ರೈಸ್ತ ಮುಂತಾದ ಎಲ್ಲ ಧರ್ಮಗಳನ್ನೂ ಉಳಿಸಿಕೊಂಡು ಮುನ್ನಡೆಯಬೇಕೇ ಹೊರತು ಸಾಮಾಜಿಕ ಸ್ವಾಸ್ಥ್ಯ ಕೆಡಿಸಲು ಪ್ರಯತ್ನಿಸ ಬಾರದು ಎಂದರು.

ಮಂಜೂಷಾ ವಸ್ತು ಸಂಗ್ರಹಾಲಯಕ್ಕೆ ಲಭಿಸಿದ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಪ್ರಮಾಣಪತ್ರವನ್ನು ಮುಖ್ಯ ತೀರ್ಪುಗಾರ ಪ್ರದೀಪ್ ಭಾರದ್ವಾಜ್ ಅವರು ವೀರೇಂದ್ರ ಹೆಗ್ಗಡೆ ಅವರಿಗೆ ಹಸ್ತಾಂತರಿಸಿದರು.

ಉಜಿರೆಯ ಎಸ್‌ಡಿಎಂ ಆಸ್ಪತ್ರೆಯಲ್ಲಿ ಜ.1ರಿಂದ ಉಚಿತ ಡಯಾಲಿಸಿಸ್ ವ್ಯವಸ್ಥೆ ಇರಲಿದೆ. ಇದಕ್ಕೆ ವರ್ಷಕ್ಕೆ ಅಂದಾಜು ₹1 ಕೋಟಿ ವೆಚ್ಚವಾಗಲಿದೆ
ಡಿ.ವೀರೇಂದ್ರ ಹೆಗ್ಗಡೆ
ಧರ್ಮಾಧಿಕಾರಿ

ಮೂಲ ಅನುಭವ ಮಂಟಪ ಅತಿಕ್ರಮಣ: ಆರೋಪ

ಡಿ.10ರಂದು ದೆಹಲಿಗೆ ನಿಯೋಗ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಅತಿಕ್ರಮಣ ಆಗಿರುವ ಮೂಲ ಅನುಭವ ಮಂಟಪವನ್ನು ಮರಳಿ ಪಡೆಯಲು ಒತ್ತಾಯಿಸಿ ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ನೇತೃತ್ವದಲ್ಲಿ ರಾಜ್ಯದ 100ಕ್ಕೂ ಹೆಚ್ಚು ಮಠಾಧೀಶರ ನಿಯೋಗ ಡಿಸೆಂಬರ್ 10ರಂದು ದೆಹಲಿಗೆ ತೆರಳಲಿದೆ' ಎಂದು ಆಂದೋಲಾದ ಸಿದ್ಧಲಿಂಗ ಸ್ವಾಮೀಜಿ ತಿಳಿಸಿದರು.

ಸಿದ್ಧಲಿಂಗ ಸ್ವಾಮೀಜಿ

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '12ನೇ ಶತಮಾನದಲ್ಲಿ ಬಸವಣ್ಣನವರು ಮತ್ತು 770 ಅಮರಗಣಂಗಳ ಕೂಡಿ ಅನುಭವ ಮಂಟಪವನ್ನು ಸ್ಥಾಪಿಸಲಾಗಿತ್ತು. ಅದು ಅತಿಕ್ರಮಣವಾಗಿ ಪೀರ ಪಾಷಾ ಬಂಗ್ಲಾ ಆಗಿದೆ. ವಕ್ಫ್ ಬೋರ್ಡ್‌ನಲ್ಲಿ ಸೇರ್ಪಡೆಯಾಗಿದೆ. ಆದರೆ, ಅಲ್ಲಿನ ಹಿಂದೂ ವಾಸ್ತುಶಿಲ್ಪಗಳು ಮೂಲ ಅನುಭವ ಮಂಟಪದ ಸಾಕ್ಷ್ಯಗಳಾಗಿವೆ. ಸುಮಾರು 3–4 ಎಕರೆ ಇರುವ ಆ ಜಾಗವನ್ನು ಹಿಂದೂಗಳಿಗೆ ಬಿಟ್ಟುಕೊಡಲು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಸಂಬಂಧಪಟ್ಟ ಕೇಂದ್ರ ಸಚಿವರಿಗೆ, ಜಂಟಿ ಸಂಸದೀಯ ಸಮಿತಿಗೆ ಮನವಿ ಸಲ್ಲಿಸಲಾಗುವುದು' ಎಂದರು.

'ಮೊಘಲರ ಆಳ್ವಿಕೆ ಪ್ರಾರಂಭ ಆದಾಗಿನಿಂದ ದೇಶದ ಮೂಲ ಆಸ್ತಿಗಳ ಕಬಳಿಕೆ ಮತ್ತು ಅದರ ವಸ್ತುಸ್ಥಿತಿ ಹಾಳಾಗಲು ಶುರುವಾಯಿತು. ಮೂಲ ಅನುಭವ ಮಂಟಪ ಕೂಡ ಇದಕ್ಕೆ ಹೊರತಾಗಿಲ್ಲ. ಮುಂದೆ ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿ ನಿಜಾಮರ ವಶವಾಗಿ ಪೀರಪಾಷಾ ಬಂಗ್ಲಾ ಆಗಿದ್ದು, ಅಲ್ಲಿ ಗೋರಿಗಳನ್ನು ನಿರ್ಮಿಸಲಾಗಿದೆ' ಎಂದು ಹೇಳಿದರು.

'ಬಿಜೆಪಿಯವರು ಬಸವತತ್ವ ವಿರೋಧಿಗಳು ಎಂದು ಸಚಿವರಾದ ಎಂ.ಬಿ.ಪಾಟೀಲ, ಪ್ರಿಯಾಂಕ್ ಖರ್ಗೆ, ಈಶ್ವರ ಖಂಡ್ರೆ, ಡಾ.ಶರಣಪ್ರಕಾಶ ಪಾಟೀಲ ಪಟ್ಟಕಟ್ಟಿದ್ದಾರೆ. ಬಸವಣ್ಣನವರ ಬಗ್ಗೆ ಇವರಿಗೆ ನಿಜವಾದ ಕಾಳಜಿ, ಅಭಿಮಾನ ಇದ್ದರೆ ಮೂಲ ಅನುಭವ ಮಂಟಪವನ್ನು ಮುಕ್ತ ಮಾಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಬೇಕು. ಗೋರಿಗಳನ್ನು ಸ್ಥಳಾಂತರಿಸಬೇಕು' ಎಂದು ಸವಾಲು ಹಾಕಿದರು.

ಗುರುಮೂರ್ತಿ ಶಿವಾಚಾರ್ಯರು, ರಾಜೇಶ್ವರ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಚಂದ್ರಶೇಖರ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

THE FEDERAL BANK LIMITED
Regd. Office: Aluva, Kerala.
ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2024-25 **NOTICE FOR PRIVATE SALE OF GOLD** 28/11/2024

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-12-2024 as shown below:

Br. Channapatna: Anugraha Towers, 8th Cross, B M Road, Kuvempunagar, Channapatna, Ramanagara- 562 160, Ph. 080-27251885 :- 16486400196732,16486400197110,16486400195023,16486400193960,16486400198522,16486400196328,16486400195486,16486400193952,16486400198530,16486400194208,16486400194828,16486400195106,16486400197961,16486400201110,16486400192848,16486400195932,16486400169986,16486400177955,16486400192855,16486400195916,16486400166842,16486400199363,16486400194547,16486400200526,16486400192707,16486400198993,16486400130475,16486400171016,16486400198795,16486400198159,16486400199595,16486400200997,16486400195841,16486400199546,16486400167279,16486400191865,16486400198506,16486400197367,16486400148394,16486400199702,16486400171958,16486400198498,16486400208024,16486400206689,16486400198449,16486400192111,16486400173335,16486400144278,16486400200419,16486400200963,16486400198076,16486400198555,16486400194489,16486400192285,16486400198027,16486400198423,16486400199355,16486400197334,16486400130673,16486400196898,16486400196690,16486400194406,16486400199611,16486400200179,16486400179209,16486400197276,16486400217280,16486400157296,16486400198118,16486400199975,16486400195718,16486400171230,16486400198332,16486400199793,16486400199744,16486400150556,16486400199538,16486400197136,16486400200732,16486400200856,16486400199520,16486400198944,16486400129527,16486400196054,16486400194257,16486400200328,16486400126994,16486400191170,16486400196781,16486400194026,16486400195502,16486400197805,16486400190180,16486400191030,16486400199264,16486400193150,16486400196245,16486400198068,16486400196518,16486400196286,16486400197581,16486400154442,16486400194059,16486400190560,16486400203371.

Br.Chambanahalli: Sy no 82,Next to ISME College, Sarjapura Road Chambenahlli., Taluk Anekal, Dommasandra Post, Bangalore, Karnataka, Bangalore Urban, Karnataka, 562125,Ph no. 080 22712227 :- 21646400040833,21646400046095,21646400044603,21646400039272,21646400044108,21646400046806,21646400046046,21646400040411,21646400041039,21646400041435,21646400032921,21646400045857,21646300005290,21646400041443,21646400036450,21646400046186,21646300005456,21646400041450,21646400036468,21646400047242,21646300005480,21646400041468,21646400038431,21646400032939,21646300006082,21646400043316,21646400039124,21646400045279,21646300006157,21646400044801,21646400045196,21646300006165,21716400109886.

Br. Handpost: Sy. No. 34/1A, Yerahalli Taluk, HD Kote, Mysore- 571 114 Ph No. 08228-255225 :- 21726400199969,21726400196254,21726400199399,21726400188053,21726400187931,21726400208299,21725500005076, 21726400186289,21726400161563,21726400200486, 21726400201369, 21726400157249,21726400186776,21726400187832, 21726400195199.

Br.Hunsur: BM Road, Opp. Vijaya Bank, Hunsur, Mysore Dist., Karnataka- 571 105 Ph No.08222252968 :- 19896400053427,19896400049912,19896400051090,19896400060141,19896400059465,19896400044947,19896400065041,19896400059507,19896400059630,19896400059911,19896400044848,19896400051975,19896400052718,19896400059572,19896400059382,19896400059432,19896400060026,19896400059481,19896400059960,19896400051199,19896400051884,19896400060034,19896400053880,19896400060232,19896400059531,19896400058178.

Br.Kengeri: Building No 737, Kommaghatta main road, Kengeri satellite town, Bangalore Urban- 560 060 :- 19646400174784,19646400179593,19646400171772,19646400171889,19646400177407,19646400163902,19646400177225,19646400125364,19646400153945,19646400168091,19646400168141,19646400180963,19646400115472,19646400139407,19646400173612,19646400181722,19646400123088,19646400169032,19646400171749,19646400169180,19646400175211,19646400138623,19646400174222,19646400174917,19646400175674,19646400175773,19646400165055,19646400173950,19646400148630,19646400156542,19646400163720,19646400164371,19646400176888,19646400174792,19646400165113,19646400165253,19646400169586,19646400165352,19646400165550,19646400131008,19646400165857,19646400178819,19646400170840.

Br.Kodathi Gate : St. Patrick Academy Campus, Sarjapur Road, Carmelaram P O, Bangalore - 560 035 Ph No. 08028441020 :- 21716400115669,21716400103970. **Br. Mandya: Kambali Building, Ashoka Nagar, M C Road, Mandya - 571 401, Ph No. 08232-229339 :-** 21446400107660,21446400107645,21446400098778,21446400111324,21446400110870,21446400106373,21446400106381,21446400104790,21446400101713,21446400087409,21446400082673,21446400110276,21446400110433,21446400111316.

Br. Mysore: The Variety Mansion, Bangalore Nilgiri Road, Lashkar Mohalia, Lashkar Mohalla, Mysore - 570 001. Ph no. 08212520055 :- 12816400057522,12816400058637,12816400058785,12816400058793,12816400053083,12816400059288.

Br.Mysore/Jayalakshmipuram: No.D3, Leo Madhurya, Adi Pampa Road, Vanivilas Mohalla Post, Mysore - 570 002,Ph No.0821-2500275 :- 16896400059716,16896400056944,16896400055953,16896400060037,16896400061779,16896400057520,16896400058106,16896400062181,16896400055946,16896400058247,16896400058122,16896400062660.

Br. Ramanagaram: Opp. Rotary Bgs Global Hospitals, Bangalore-Mysore Road, Ramanagaram-562159, Ph: 080-27276699 :- 16696400085228.

Br. Thirupalya: Near Electronic City, Hebgodi Post, Thirupalya, Bangalore-560099, Ph:080-27833335 :- 21126400053466,21126400054050,21126400054068,21126400054084,21126400044606,21126400048227,21126400053557,21126400037469,21126400049795,21126400053177,21126400055677,21126400044960,21126400055685,21126400052377,21126400054837,21126400055545,21126400053375,21126400049712,21126400048664,21126400053243,21126400039812,21126400046098,21126400049787,21126400051015,21126400055891,21126400052278,21126400053052,21126400053060,21126400035901,21126400035919,21126400039234,21126400047252,21126400049514,21126400052997,21126400042345,21126400055131.21126400055362.

Br.Thirumalasettyhalli: SY No.84, Thirumalasettyhalli Village, Samethanahalli P.O, Bangalore Rural - 560067, Ph No. 080 28549041:- 22626400066037,22626400063869,22626400062762,22626400063570,22626400075558,22626400037509,22626400070278,22626400063588,22626400064354,22626400062978,22626400074577,22626400063596,22626400063752,22626400072928,22626400068942,22626400043291,22626400059990,22626400041022,22626400041055,22626400060717,22626400064669,22626400041048,22626400041063,22626400041030,22626400061830,22626400045379,22626400064214,22626400054074,22626400071730,22626400066599,22626400061145,22626400058117,22626400066276.

Br.Taverekere: No.104/1, Ground Floor, Chocolate Factory Road, 1st Main, Taverekere, Bangalore Urban- 560 029 :- 16596400083886,16596400092010,16596400094172,16596400097340,16596400083894,16596400086400,16596400063938,16596400088554,16596400083902,16596400077532,16596400077466,16596400086236,16596400089107,16596400062096,16596400088109,16596400078787,16596400072590,16596400094321,16596400084801,16596400062526,16596400073234,16596400084819,16596400085196,16596400085576,16596400073242,16596400089776,16596100277507,16596400092333,16596400094313,16596400059704,16596400085543,16596400062518,16596400084769,16596400076864,16596400085725,16596400085733,16596400095468,16596400076955,16596400074257,16596400086152,16596400062500.

Br. Visweswaraya Layout: Site No. 2, 4th Block, Visweswaraya Layout, Manganahalli, Ullal Upanagara P O, Bangalore- 560110:- 21676400040731,21676400049773,21676400048197,21676400058097,21676400030120,21676400043776,21676400050441,21676400049856,21676400050243,21676400051563,21676400051571,21676400054963.

Br. Surya Nagar: K H No 165/1 & 166/1, First Floor, Banajappa Building, B.Nanjappa Layout, Suryanagar 1st Phase, Banahall, Chandapura, Bangalore- 560 081 Ph No. 09986031773 :- 21686400043080,21686400044492,21686400045176,21686400043296,21686400045309,21686400041464,21686400045655,21686400040003,21686400042116.

Br. Bangalore / Thalaghattapura : No. 7, Arya Heights, Opp to Police Station, Kanakapura Main Road, Thalaghattapura, Bangalore- 560 109, Ph. No. 9955818481 :- 23826400005618.

Br. Varthur : K. No. 3364, No.1/1, 60/3, Muthsandra Main Road, Near Bethel Church, Varthur, Bangalore-560 087 :- 23836400002739,23836400000584,23836400001087,23836400001103.

Br. Bangalore / Bannerghatta IIMB : Door No. 108/7, Ground floor, Doresanipalya, Bannerghetta Road, Arekere, Bangalore- 560 076 :- 24566400001782,24566400001790,24566400002566,24566400002418,24566400001725,24566400003150,24566400002624,24566400002822,24566400002939,24566400002848,24566400002699,24566400003671.

Bangalore 28-11-2024 Vice President & Zonal Head

ಜಿಲ್ಲಾಧಿಕಾರಿಗಳ ಜೊತೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿಡಿಯೊ ಸಂವಾದ; ಡಿ.15ರ ಒಳಗೆ ಆದೇಶದ ಭರವಸೆ

‘5 ಸಾವಿರ ಅರ್ಜಿಗೆ ಸಾಗುವಳಿ ಚೀಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಗರ್ ಹುಕುಂ ಅಡಿಯಲ್ಲಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳ ಪೈಕಿ ಕನಿಷ್ಠ 5 ಸಾವಿರ ಅರ್ಜಿಗಳನ್ನಾದರೂ ಬಗರ್ ಹುಕುಂ ಸಮಿತಿ ಎದುರು ಮಂಡಿಸಿ ಡಿ. 15ರ ಒಳಗೆ ಸಾಗುವಳಿ ಚೀಟಿ ನೀಡಲಾಗುವುದು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಎಲ್ಲ ಜಿಲ್ಲಾಧಿಕಾರಿಗಳ ಜೊತೆ ಶುಕ್ರವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಜನವರಿ ವೇಳೆಗೆ ಈ ಗುರಿ 15 ಸಾವಿರದಿಂದ 20 ಸಾವಿರಕ್ಕೆ ಏರಿಕೆ ಆಗಲಿದೆ’ ಎಂದರು.

‘ಬಗರ್ ಹುಕುಂ ಅಡಿಯಲ್ಲಿ ಜಮೀನು ಮಂಜೂರಾತಿಗೆ ಸಲ್ಲಿಕೆಯಾದ ಅರ್ಜಿಗಳ ಪೈಕಿ 1.26 ಲಕ್ಷ ಅರ್ಜಿಗಳನ್ನು ಮಾತ್ರ ಅರ್ಹ ಎಂದು ಪರಿಗಣಿಸಲಾಗಿದೆ. ಕೆಲವು ಜಿಲ್ಲೆಗಳಲ್ಲಿ ಅರ್ಹ ಫಲಾನುಭವಿಗಳ ಅರ್ಜಿಗಳನ್ನು ಬಗರ್ ಹುಕುಂ ಸಮಿತಿ ಎದುರು ಇಡಲಾಗಿದೆ. ಆದರೆ, ಆ ಸಂಖ್ಯೆ ಸಮಾಧಾನಕರವಾಗಿಲ್ಲ. ಹೀಗಾಗಿ ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರರಿಗೆ ಗುರಿ ನಿಗದಿಪಡಿಸಲಾಗಿದೆ’ ಎಂದರು.

‘ಮೊದಲು ಗ್ರಾಮ ಆಡಳಿತಾಧಿಕಾರಿ ಅರ್ಜಿದಾರರ ಸ್ಥಳ ಪರಿಶೀಲಿಸಬೇಕು. ನಂತರ ಕಂದಾಯ ನಿರೀಕ್ಷಕರು ಹಾಗೂ ತಹಶೀಲ್ದಾರ್ ವರದಿ ಸಲ್ಲಿಸಬೇಕು. ಈ ಪ್ರಕ್ರಿಯೆಗಳ ನಂತರವೇ ಅರ್ಹ ಅರ್ಜಿಗಳನ್ನು ಬಗರ್ ಹುಕುಂ ಸಮಿತಿ ಎದುರು ಮಂಡಿಸಲು ಸಾಧ್ಯ. ಈ ಕೆಲಸಗಳಿಗೆ ಹೆಚ್ಚಿನ ಸಮಯ ಬೇಕಿದೆ’ ಎಂದರು.

ಡಿಜಿಟಲ್ ಸಾಗುವಳಿ ಚೀಟಿ: ‘ಬಗರ್ ಹುಕುಂ’ ಯೋಜನೆಯ ಅಡಿ ಅರ್ಹ ಫಲಾನುಭವಿಗಳಿಗೆ ಡಿಜಿಟಲ್ ಸಾಗುವಳಿ ಚೀಟಿ ನೀಡಲಾಗುವುದು’ ಎಂದೂ ಅವರು ತಿಳಿಸಿದರು.

‘ಈ ಯೋಜನೆಯ ಅಡಿಯಲ್ಲಿ ಮಂಜೂರಾಗುವ ಜಮೀನಿಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ತಕರಾರು ಬರಬಾರದು, ಕಡತ ಕಳೆದು ಹೋಯಿತು ಎಂದು ರೈತರು ಮತ್ತೆ ಸರ್ಕಾರಿ ಕಚೇರಿಗೆ ಅಲೆಯಬಾರದು. ಹೀಗಾಗಿ ಅರ್ಹ ಅರ್ಜಿಗಳಿಗೆ ಮಂಜೂರಾದ ಜಮೀನಿಗೆ ಪೋಡಿ ಮಾಡಿಸಿ, ಪಹಣಿಯಲ್ಲಿ ಹೆಸರು ನಮೂದಿಸಿ, ತಹಶೀಲ್ದಾರರು ನೋಂದಣಿ ಮಾಡಿದ ನಂತರ ಡಿಜಿಟಲ್ ಸಾಗುವಳಿ ಚೀಟಿ ನೀಡಲಾಗುವುದು’ ಎಂದರು.

‘ಅನರ್ಹ ಅರ್ಜಿಗಳನ್ನು ಅಧಿಕಾರಿಗಳ ಮಟ್ಟದಲ್ಲೇ ಪರಿಶೀಲಿಸಿ ವಿಲೇವಾರಿ ಮಾಡಲಾಗುವುದು. ಆದರೆ, ಈ ಪರಿಶೀಲನೆಯೇ ಅಂತಿಮವಲ್ಲ. ಒಂದು ವೇಳೆ ಅಧಿಕಾರಿಗಳ ತಪ್ಪಿನಿಂದ ಅರ್ಹ ಅರ್ಜಿಯನ್ನು ವಿಸರ್ಜಿಸಲಾಗಿದ್ದರೆ ಅಂತಹ ಅರ್ಜಿಗಳನ್ನು ಮರು ಪರಿಶೀಲನೆಗೆ ಒಳಪಡಿಸಲಾಗುವುದು’ ಎಂದೂ ತಿಳಿಸಿದರು.

ಅಭಿಯಾನ ಮಾದರಿಯಲ್ಲಿ ಪೋಡಿ ದುರಸ್ತಿ: ‘ಪೋಡಿ ದುರಸ್ತಿಯ ಡಿಜಿಟಲ್ ಪ್ರಕ್ರಿಯೆಗೆ ತಂತ್ರಾಂಶ ರೂಪಿಸಲಾಗಿದೆ. ರಾಜ್ಯದಲ್ಲಿ ಒಟ್ಟು 1.96 ಲಕ್ಷ ಸರ್ಕಾರಿ ಸರ್ವೆ ನಂಬರ್ ಇದ್ದು, ಅವುಗಳನ್ನು ದುರಸ್ತಿಗೊಳಿಸಬೇಕು ಎಂಬುದು ನಮ್ಮ ಗುರಿ. ಮೊದಲ ಹಂತದಲ್ಲಿ 27,107 ಕಡತ ಸೃಷ್ಟಿಸಲಾಗಿದೆ. ಈ ಸಂಬಂಧ ಡಾಟಾ ಎಂಟ್ರಿ ಕೆಲಸವೂ ನಡೆಯುತ್ತಿದೆ. ಜೊತೆಗೆ ನಮೂನೆ 6 ರಿಂದ 10ರ ಸರ್ವೆ ಕೆಲಸಕ್ಕೆ ಶನಿವಾರ (ನ. 30) ಹಾಸನದಿಂದ ಚಾಲನೆ ನೀಡಲಾಗುವುದು. ಈ ಕೆಲಸ ಸಂಪೂರ್ಣವಾದರೆ 20 ಲಕ್ಷದಿಂದ 25 ಲಕ್ಷ ರೈತ ಕುಟುಂಬಗಳ ಹಲವು ದಶಕಗಳ ಸಮಸ್ಯೆ ಬಗೆಹರಿಯಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಬಗರ್ ಹುಕುಂ’ – ಅನರ್ಹ ಅರ್ಜಿಗಳು

ಯಾಕೆ ಅನರ್ಹ	ಅರ್ಜಿಗಳ ಸಂಖ್ಯೆ
18 ವರ್ಷ ತುಂಬಿಲ್ಲ	26,051
4.38 ಎಕರೆ ಜಮೀನು ಹೊಂದಿರುವವರು	26,922
ಕೆರೆ, ರಸ್ತೆ, ಬಿ-ಖರಾಬು ಪ್ರದೇಶಗಳ ಮಂಜೂರಾತಿಗೆ	40,799
ಅರಣ್ಯ ಪ್ರದೇಶ ಮಂಜೂರಾತಿಗೆ	1,68,119
ನಗರ ಪರಿಮಿತಿಯೊಳಗೆ ಮಂಜೂರಾತಿ	68,561
ತಾಲ್ಲೂಕು ವ್ಯಾಪ್ತಿಯಲ್ಲಿ ವಾಸ ಇಲ್ಲದವರು	8,665
ಕೃಷಿಕರಲ್ಲದವರು	1,00,400

‘ಹಿಂಗಾರು ನಷ್ಟ– ವಾರದೊಳಗೆ ಪರಿಹಾರ’

‘ರಾಜ್ಯದಲ್ಲಿ ಹಿಂಗಾರು ಮಳೆ ಅವಧಿಯಲ್ಲಿ 1.58 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ₹ 120 ಕೋಟಿವರೆಗೆ ನಷ್ಟ ಆಗಿರಬಹುದು ಎಂದು ಅಂದಾಜಿಸಲಾಗಿದೆ. ಬೆಳೆ ಹಾನಿಯಾದ ರೈತರ ಬ್ಯಾಂಕ್ ಖಾತೆಗಳಿಗೆ ವಾರದೊಳಗೆ ಪರಿಹಾರ ಹಣ ಜಮೆ ಆಗಲಿದೆ’ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

‘ಹಿಂಗಾರು ಹಂಗಾಮಿನಲ್ಲಿ ಆಗಿರುವ ಬೆಳೆ ಹಾನಿ ಸಂಬಂಧಿಸಿದಂತೆ ಜಂಟಿ ಸಮೀಕ್ಷೆ ನಡೆಸಲಾಗಿದೆ. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಒಟ್ಟು ₹ 642 ಕೋಟಿ ಹಣ ಲಭ್ಯವಿದ್ದು, ಈ ಹಣದಲ್ಲೇ ಪರಿಹಾರ ವಿತರಿಸಲಾಗುವುದು’ ಎಂದರು.


ಕೃಷ್ಣ ಬೈರೇಗೌಡ

ಬೀದಿಗೆ ಬಂದ ಬಿಜೆಪಿ ಜಗಳ: ಪರಸ್ಪರ ಬೈಗುಳ

ಬಿಜೆಪಿ ರಾಜ್ಯಘಟಕದಲ್ಲಿ ಬಣ ರಾಜಕಾರಣ ಈಗ ಬೀದಿ ಜಗಳವಾಗಿ ಮಾರ್ಪಟ್ಟಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಹರಿಹಾಯುತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣವು ವಕ್ಫ್ ಹೋರಾಟವನ್ನು ಮುಂದುವರೆಸುವುದಾಗಿ ಹೇಳಿದೆ. ಈ ಮಧ್ಯೆ ವಿಜಯೇಂದ್ರ ಪರ ಗುರುತಿಸಿಕೊಂಡಿರುವ 50ಕ್ಕೂ ಹೆಚ್ಚು ಮಾಜಿ ಶಾಸಕರ ಬಣವು ಕೋಲಾರದ ಕುರುಡುಮಲೆಯಿಂದ ಯತ್ನಾಳ ವಿರುದ್ಧದ ಹೋರಾಟಕ್ಕೆ ಶುಕ್ರವಾರ ಚಾಲನೆ ನೀಡಿದೆ. ಎರಡೂ ಬಣದ ನಾಯಕರು ಸಾರ್ವಜನಿಕವಾಗಿ, ಏಕವಚನದಲ್ಲಿ ಪರಸ್ಪರ ಬೈಯ್ದುಕೊಂಡಿದ್ದಾರೆ.

ಯತ್ನಾಳ ಹಿಂದೂ ಇಲಿ: ರೇಣುಕಾಚಾರ್ಯ

ಬೆಂಗಳೂರು/ಕೋಲಾರ: ‘ವಿಜಯಪುರದಲ್ಲಿ ಪ್ರಭಾವಿ ಸಚಿವರ ಜತೆಗೆ ಒಪ್ಪಂದ ಮಾಡಿಕೊಂಡು ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸದ ಮತ್ತು ತಾನು ಮಾತ್ರ ಹಿಂದೂಗಳ ಹೆಸರಿನಲ್ಲಿ ಗೆದ್ದ ಬಸನಗೌಡ ಯತ್ನಾಳ, ಹಿಂದೂ ಹುಲಿ ಅಲ್ಲ; ಇಲಿ. ಮುಖವಾಡ ಹಾಕಿಕೊಂಡಿರುವ ಗೋಮುಖ ವ್ಯಾಘ್ರ’ ಎಂದು ವಿಜಯೇಂದ್ರ ಬಣದ ಎಂ.ಪಿ.ರೇಣುಕಾಚಾರ್ಯ ಟೀಕಿಸಿದರು.

ಮುಳಬಾಗಿಲು ತಾಲ್ಲೂಕಿನ ಕುರುಡುಮಲೆ ಗಣೇಶನಿಗೆ ಶುಕ್ರವಾರ ಪೂಜೆ ಸಲ್ಲಿಸುವ ಮೂಲಕ ಯತ್ನಾಳ ವಿರುದ್ಧ ಹೋರಾಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಈ ಸ್ವಯಂ ಘೋಷಿತ ಹಿಂದೂ ಹುಲಿ, ಪಕ್ಷದಿಂದ ಅಮಾನತುಗೊಂಡಿದ್ದಾಗ ಇಪ್ತಿಯಾರ್ ಕೂಟ ಮಾಡಿ ಟಿಪ್ಪು ಖಡ್ಗ ಹಿಡಿದುಕೊಂಡು ಓಡಾಡಿದ್ದ. ಆತನಿಗೆ ನಾಚಿಕೆ, ಮಾನ ಮರ್ಯಾದೆ ಇಲ್ಲ. ಬಾಯಿ ಬಿಚ್ಚಿದರೆ ಹುಷಾರ್. ನಾನೂ ಹಳ್ಳಿ ಹೈದ, ನಾನೂ ನಾಟಿ. ಹಗುರ ಮಾತು ಮುಂದುವರೆಸಿದರೆ ಸುಮ್ಮನೇ ಕೇಳಿಸಿಕೊಂಡು ಕೂರುವ ವ್ಯಕ್ತಿ ನಾನಲ್ಲ’ ಎಂದು ಎಚ್ಚರಿಕೆ ನೀಡಿದರು.

‘ಶಿಗ್ಗಾವಿಯಲ್ಲಿ ಭರತ್ ಬೊಮ್ಮಾಯಿ ಸೋಲಲೂ ಯತ್ನಾಳ್ ಕಾರಣ. ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಸೋಲಲು ಆತನೇ ಕಾರಣ’ ಎಂದರು. `ಇದಕ್ಕೂ ಮುನ್ನ ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮನೆಯಲ್ಲಿ 20ಕ್ಕೂ ಹೆಚ್ಚು ಮಾಜಿ ಶಾಸಕರು ಶುಕ್ರವಾರ ಬೆಳಿಗ್ಗೆ ಸಭೆ ನಡೆಸಿದರು. ವಿಜಯೇಂದ್ರ ಅವರನ್ನು ಬೆಂಬಲಿಸಿ, ಯತ್ನಾಳ ಅವರನ್ನು ವಿರೋಧಿಸಿ ಹೋರಾಡಲು ತೀರ್ಮಾನಿಸಿದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ರೇಣುಕಾಚಾರ್ಯ, ‘ಪಕ್ಷ ವಿರೋಧಿ ಚಟುವಟಿಕೆ ನಡೆಸಲು ಬಸನಗೌಡ ಪಾಟೀಲ ಯತ್ನಾಳ ಅವರು ಸೋನಿಯಾ ಮತ್ತು ರಾಹುಲ್ ಗಾಂಧಿ ಅವರಿಂದ ಸುಪಾರಿ ಪಡೆದಿದ್ದಾರೆ. ಈ ಮೂಲಕ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಅವರನ್ನು ಪಕ್ಷದಿಂದ ಕೂಡಲೇ ಉಚ್ಚಾಟಿಸಿ’ ಎಂದು ಒತ್ತಾಯಿಸಿದರು.

ವಿಜಯೇಂದ್ರನ ಕಿತ್ತೊಗೆಯಲಿ: ಯತ್ನಾಳ

ವಿಜಯಪುರ: ಪಕ್ಷದ ರಾಜ್ಯ ಘಟಕ ಅಧ್ಯಕ್ಷ ಸ್ಥಾನದಿಂದ ಬಿ.ವೈ.ವಿಜಯೇಂದ್ರ ಅವರನ್ನು ತಕ್ಷಣವೇ ಕಿತ್ತೊಗೆಯಬೇಕು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ನಾವು ಕೊಟ್ಟ ಭಿಕ್ಷೆಯಿಂದ ವಿಜಯೇಂದ್ರ ಶಾಸಕರಾಗಿದ್ದಾರೆ’ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ವಿಜಯೇಂದ್ರಗೆ ನೈತಿಕತೆ, ಧಮ್ಮು, ಧೈರ್ಯ ಇದ್ದರೆ, ನಿನ್ನ ಭಿಕ್ಷೆಯಿಂದ ನಾನು ಶಾಸಕನಾಗಿಲ್ಲ ಎಂದು ರಾಜೀನಾಮೆ ಕೊಡಬೇಕಿತ್ತು’ ಎಂದು ಸವಾಲೆಸೆದರು.

‘ಒಳ್ಳೆಯ ರಾಜಕಾರಣದ ಬಗ್ಗೆ, ಮಾನ ಮರ್ಯಾದೆ ಇರುವವರ ಬಗ್ಗೆ ಪತ್ರಕರ್ತರು ಪ್ರಶ್ನೆ ಕೇಳಿದರೆ ಉತ್ತರಿಸುತ್ತೇನೆ. ಲಪೂಟರ ಯಾವುದೇ ಹೇಳಿಕೆಗಳಿಗೆ ಪ್ರತಿಕ್ರಿಯೆ ನೀಡುವುದಿಲ್ಲ’ ಎಂದರು.

‘ಮಂಡ್ಯ ಜಿಲ್ಲೆಯಿಂದ ಎಷ್ಟು ಜನ ಬಿಜೆಪಿಗರನ್ನು ಶಾಸಕರನ್ನಾಗಿ ಆಯ್ಕೆ ಮಾಡಿ ಕಳುಹಿಸಲಾಗಿದೆ? ಜಿಲ್ಲೆಯ ಬೂಕನಕೆರೆ ವಿಜಯೇಂದ್ರನ ಅಪ್ಪನ ಊರು. ಅಲ್ಲಿ ಮತ್ತು ಜಿಲ್ಲೆಯಲ್ಲಿ ಬಿಜೆಪಿ ಬೆಂಬಲಿತ ಗ್ರಾಮ ಪಂಚಾಯಿತಿ ಸದಸ್ಯರೇ ಇಲ್ಲ. ನನ್ನ ವಿರುದ್ಧ ರಕ್ತ ಚಳವಳಿ ಮಾಡಲು ಅವರಿಗೆ ಯಾವ ನೈತಿಕತೆ ಇದೆ’ ಎಂದು ಪ್ರಶ್ನಿಸಿದರು.

‘ರಾಜ್ಯಕ್ಕೆ ಬರುತ್ತಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯನ್ನು ನಾನು ಭೇಟಿಯಾಗುವುದಿಲ್ಲ. ಬೇಕಾದರೆ ನಮ್ಮ ಇಡೀ ಗುಂಪನ್ನು ಕರೆದರೆ ಹೋಗುತ್ತೇನೆ. ನನ್ನ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುತ್ತೇವೆ ಎಂದರೆ ತೆಗೆದುಕೊಳ್ಳಲಿ’ ಎಂದರು.

ವಿಜಯೇಂದ್ರ ಬೆಂಬಲಿಗರು ದಾವಣಗೆರೆಯಲ್ಲಿ ರ್‍ಯಾಲಿ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ನಾನು ಶೀಘ್ರದಲ್ಲೇ ಅವರ ಅಪ್ಪನಂತ ರ್‍ಯಾಲಿ ಮಾಡುತ್ತೇನೆ’ ಎಂದರು.

ಕುಮಾರ್ ಬೆಂಬಲಿಗರ ಉಚ್ಚಾಟನೆ

ಶಿವಮೊಗ್ಗ: ಬಿ.ವೈ.ವಿಜಯೇಂದ್ರ ವಿರುದ್ಧದ ಯತ್ನಾಳ ಬಣದಲ್ಲಿ ಗುರುತಿಸಿಕೊಂಡಿರುವ ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರ ಐವರು ಆಪ್ತರನ್ನು ಶಿವಮೊಗ್ಗ ಬಿಜೆಪಿ ಜಿಲ್ಲಾ ಘಟಕ ಶುಕ್ರವಾರ ಉಚ್ಚಾಟಿಸಿದೆ. ಬಿಜೆಪಿ ಹಿಂದುಳಿದ ವರ್ಗಗಳ ಸೊರಬ ತಾಲ್ಲೂಕು ಯುವ ಮೋರ್ಚಾ ಅಧ್ಯಕ್ಷ ಎಂ.ಡಿ.ಉಮೇಶ್, ವೃತ್ತಿಕೊಪ್ಪ ಮಲ್ಲಿಕಾರ್ಜುನ್, ಗುರುಕುಮಾರ ಪಾಟೀಲ, ಆನವಟ್ಟಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಶಿವನಗೌಡ ಹಾಗೂ ಉದ್ರಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಕೃಷ್ಣಮೂರ್ತಿ ಅವರನ್ನು ಜಿಲ್ಲಾ ಘಟಕದ ಅಧ್ಯಕ್ಷ ಟಿ.ಡಿ.ಮೇಘರಾಜ್ ಉಚ್ಚಾಟಿಸಿದ್ದಾರೆ.‘ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರು ಹಾಗೂ ಮಂಡಲ ಅಧ್ಯಕ್ಷರ ವಿರುದ್ಧ ಮಾತನಾಡಿದ್ದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ತಕ್ಷಣದಿಂದಲೇ ಐವರನ್ನೂ ಪಕ್ಷದಿಂದ ಉಚ್ಚಾಟಿಸಲಾಗಿದೆ’ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

‘ಬಿಜೆಪಿ ನಾಯಕರ ವಿರುದ್ಧ ಷಡ್ಯಂತ್ರ’

ಬೆಂಗಳೂರು: ‘ಯಡಿಯೂರಪ್ಪನವರ ವಿರುದ್ಧ ಖುಲಾಸೆಯಾದ ಪ್ರಕರಣವನ್ನು ಮತ್ತೆ ವಿಚಾರಣೆಗೆ ಅನುಮತಿ ನೀಡುವಂತೆ ಸಚಿವ ಸಂಪುಟ ಸಭೆ ತೀರ್ಮಾನಿಸಿರುವುದು ಕಾಂಗ್ರೆಸ್ ಸರ್ಕಾರದ ದ್ವೇಷ ರಾಜಕಾರಣದ ಮನೋಭಾವವನ್ನು ತೋರಿಸುತ್ತದೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಿಜೆಪಿ ನಾಯಕರ ವಿರುದ್ಧದ ಷಡ್ಯಂತ್ರ ಮತ್ತು ಹಗೆತನದ ರಾಜಕೀಯವಿದು’ ಎಂದು ಕಿಡಿಕಾರಿದರು.

‘ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಾಧಿಪತಿ ಅಧಿಕಾರವನ್ನು ರಾಜ್ಯಪಾಲರಿಂದ ಕಿತ್ತುಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸರ್ವಾಧಿಕಾರಿ ಧೋರಣೆ ತೋರಿಸಲು ಹೊರಟಿದ್ದಾರೆ’ ಎಂದೂ ಹೇಳಿದರು.

‘ರಾಜ್ಯ ಸರ್ಕಾರ ಭ್ರಷ್ಟಾಚಾರದಿಂದ ಕುಲಗೆಟ್ಟಿದೆ. ಕುಲಾಧಿಪತಿ ಸ್ಥಾನಕ್ಕೆ ಮುಖ್ಯಮಂತ್ರಿ ಯೋಗ್ಯರೇ’ ಎಂದು ಅವರು ಪ್ರಶ್ನಿಸಿದರು.

‘ಬಳ್ಳಾರಿಯಲ್ಲಿ ಬಾಣಂತಿಯರ ಸಾವು ಸಂಭವಿಸಿದೆ. ದಿನೇಶ್ ಗುಂಡೂರಾವ್ ಅವರು ಆರೋಗ್ಯ ಸಚಿವರಾಗಲು ಯೋಗ್ಯರೇ? ಅವರೇನು ವೈದ್ಯರೇ? ಎಂಬಿಬಿಎಸ್ ಓದಿದವರೇ? ಪಿಎಚ್‌ಡಿ ಆಗಿದೆಯೇ?’ ಎಂದ ಅವರು, ದಿನೇಶ್ ಗುಂಡೂರಾವ್ ಅವರನ್ನು ಸಚಿವ ಸ್ಥಾನದಿಂದ ತಕ್ಷಣ ವಜಾ ಮಾಡಬೇಕು’ ಎಂದು ಆಗ್ರಹಿಸಿದರು.

ಉಪಲೋಕಾಯುಕ್ತರ ಮಧ್ಯಪ್ರವೇಶ: 93ರ ವೃದ್ಧೆಗೆ ಪೆರೋಲ್

ಕಲಬುರಗಿ: ನಗರದ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ 93ರ ವೃದ್ಧೆ ನಾಗಮ್ಮ ಅಣ್ಣಾರಾವ್ ಅವರಿಗೆ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರ ಮಧ್ಯ ಪ್ರವೇಶದಿಂದಾಗಿ ಮೂರು ತಿಂಗಳ ಪೆರೋಲ್ ಸಿಕ್ಕಿದೆ. ಇಬ್ಬರು ಹೆಣ್ಣುಮಕ್ಕಳು ವೃದ್ಧೆಯನ್ನು ಮನೆಗೆ ಕರೆದುಕೊಂಡು ಹೋಗಿದ್ದಾರೆ.

ವೃದ್ಧೆಗೆ ಎದ್ದು ಓಡಾಡಲೂ ಆಗುತ್ತಿರಲಿಲ್ಲ. ಈಚೆಗೆ ಜೈಲಿಗೆ ಭೇಟಿ ನೀಡಿದ್ದ ನ್ಯಾ. ಬಿ.ವೀರಪ್ಪ ಅವರು ವೃದ್ಧೆಯ ಸ್ಥಿತಿ ಕಂಡು ಮರುಗಿದ್ದರು. ಅಜ್ಜಿಯ ಶಿಕ್ಷೆಯನ್ನು ಪುನರ್ ಪರಿಶೀಲಿಸಲು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಸುಪ್ರೀಂಕೋರ್ಟ್ ರಿಜಿಸ್ಟ್ರಾರ್ ಅವರಿಗೆ ಕರೆ ಮಾಡಿ ತಿಳಿಸಿದ್ದರು.

ತಾತ್ಕಾಲಿಕವಾಗಿ ವೃದ್ಧೆಯನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕಾರಾಗೃಹದ ಅಧೀಕ್ಷಕಿ ಆರ್. ಅನಿತಾ ಹಾಗೂ ಕಲಬುರಗಿ ಎಸ್ಪಿ ಅಡ್ಡೂರು ಶ್ರೀನಿವಾಸಲು ಅವರಿಗೆ ನ್ಯಾಯಮೂರ್ತಿ ಸೂಚಿಸಿದ್ದರು. ಅದರಂತೆ ಪೆರೋಲ್ ಕೋರಿ ವೃದ್ಧೆ ಅರ್ಜಿ ಸಲ್ಲಿಸಲು ನೆರವು ನೀಡಲಾಗಿತ್ತು. ಜೇವರ್ಗಿ ಪೊಲೀಸ್ ಠಾಣೆಯಿಂದ ವರದಿ ಪಡೆದುಕೊಂಡ ಎಸ್ಪಿ ಅವರು ನಾಗಮ್ಮ ಅವರನ್ನು ಮೂರು ತಿಂಗಳ ತನಕ ಪೆರೋಲ್ ಮೇಲೆ ಬಿಡುಗಡೆ ಮಾಡುವಂತೆ ಶಿಫಾರಸು ಮಾಡಿದ್ದರು. ಬಂದೀಖಾನೆ ಇಲಾಖೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ವೃದ್ಧೆಯನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲಾಯಿತು. 26 ವರ್ಷಗಳ ಹಿಂದಿನ ವರದಕ್ಷಿಣೆ ಪ್ರಕರಣದಲ್ಲಿ ವೃದ್ಧೆಗೆ ಮೂರು ವರ್ಷ ಜೈಲು ಶಿಕ್ಷೆ ವಿಧಿಸಲಾಗಿತ್ತು. ಕಳೆದ ಒಂದು ವರ್ಷದಿಂದ ನಾಗಮ್ಮ ಜೈಲಿನಲ್ಲಿದ್ದರು.

ಗೌರವ ಡಾಕ್ಟರೇಟ್ ಪ್ರದಾನ...

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆದ ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯದ ಆರನೇ ಘಟಿಕೋತ್ಸವದಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ. ವೈ. ಚಂದ್ರಚೂಡ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಕಾನೂನು ವಿ.ವಿ ಕುಲಪತಿ ಪ್ರೊ.ಸಿ.ಬಸವರಾಜು, ಪರೀಕ್ಷಾಂಗ ಕುಲಸಚಿವೆ ಪ್ರೊ. ರತ್ನಾ ಆರ್. ಭರಮಗೌಡರ್, ಕಾನೂನು ಸಚಿವ ಎಚ್.ಕೆ.ಪಾಟೀಲ ಪಾಲ್ಗೊಂಡಿದ್ದರು- ಪ್ರಜಾವಾಣಿ ಚಿತ್ರ

ಸಚಿವ ಸಂಪುಟ ಸಭೆಯಲ್ಲಿ ಅಸಮಾಧಾನ ಹೊರಹಾಕಿದ ಮುಖ್ಯಮಂತ್ರಿ

ಸಚಿವರ ನಡೆಗೆ ಸಿದ್ದರಾಮಯ್ಯ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ನಿರಂತರವಾಗಿ ಸುಳ್ಳು ಆರೋಪಗಳನ್ನು ಮಾಡುತ್ತಿದ್ದರೂ, ವಾಸ್ತವಾಂಶಗಳನ್ನು ಬಹಿರಂಗಪಡಿಸಿ ಸರ್ಕಾರವನ್ನು ಸಮರ್ಥಿಸಿಕೊಳ್ಳಬೇಕಾದ ಸಂಪುಟ ಸಹೋದ್ಯೋಗಿಗಳು ನಿಷ್ಕ್ರಿಯರಾಗಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳನ್ನು ಗುರುವಾರ ನಡೆದ ಸಚಿವರಿಗೆ ನೀಡಿ, ವಿಷಯ ಪ್ರಸ್ತಾಪಿಸಿದ ಮುಖ್ಯಮಂತ್ರಿ, ಸರ್ಕಾರದ ಬೆನ್ನಿಗೆ ಬಲವಾಗಿ ನಿಲ್ಲದ ಸಚಿವರ ಕಾರ್ಯವೈಖರಿ, ವರ್ತನೆಗೆ ಕಿಡಿಕಾರಿದರು ಎಂದು ಗೊತ್ತಾಗಿದೆ.

‘ಮುಡಾ ನಿವೇಶನ ಹಂಚಿಕೆ, ವಕ್ಫ್ ಆಸ್ತಿ ವಿಚಾರ, ವಾಲ್ಮೀಕಿ ಅಭಿವೃದ್ಧಿ ನಿಗಮದ ವಿಷಯವನ್ನು ಮುಂದಿಟ್ಟು, ವಿರೋಧ ಪಕ್ಷಗಳ ನಾಯಕರು ದಿನವೂ ಅಪಪ್ರಚಾರ ಮಾಡುತ್ತಲೇ ಇದ್ದಾರೆ. ನನ್ನ ಅಥವಾ ಸರ್ಕಾರದ ಕಡೆಯಿಂದ ಯಾವುದೇ ತಪ್ಪು ಆಗಿಲ್ಲ. ಈ ವಿಚಾರ ಎಲ್ಲರಿಗೂ ಗೊತ್ತಿದೆ. ಆದರೂ ಬಿಜೆಪಿ ನಾಯಕರು ಪದೇ ಪದೇ ಈ ವಿಚಾರಗಳನ್ನು ಪ್ರಸ್ತಾಪಿಸಿ, ತಪ್ಪು ಆಗಿದೆ ಎಂದು ಬಿಂಬಿಸಿ, ಸುಳ್ಳುಗಳ ಮೂಲಕವೇ ಜನರನ್ನು ನಂಬಿಸುತ್ತಿದ್ದಾರೆ. ಆ ಮೂಲಕ, ಸರ್ಕಾರದ ವಿರುದ್ಧ ಜನಾಭಿಪ್ರಾಯ ಮೂಡಿಸಲು ಯತ್ನಿಸುತ್ತಿದ್ದಾರೆ. ನಿಮಗೆ ಸಂಬಂಧಿಸಿದ ಇಲಾಖೆಗಳ ಕುರಿತಾಗಿ ಬಿಜೆಪಿಯವರ ಮಾಡುತ್ತಿರುವ ಸುಳ್ಳು ಆರೋಪಗಳಿಗೆ ನಾನೊಬ್ಬನೇ ಸಮರ್ಥನೆ ನೀಡಬೇಕೇ? ಸಚಿವರು ಸರ್ಕಾರದ ಭಾಗ ಅಲ್ಲವೇ? ನಿಮಗೂ ಜವಾಬ್ದಾರಿ ಇಲ್ಲವೇ’ ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು ಎಂದೂ ಹೇಳಲಾಗಿದೆ.

ಮುಖ್ಯಾಂಶಗಳು

- ಬಿಜೆಪಿ ಆರೋಪಗಳಿಗೆ ಉತ್ತರಿಸದ ಸಚಿವರು
- ನಾನೊಬ್ಬನೇ ಸಮರ್ಥನೆ ನೀಡಬೇಕೇ– ಸಿ.ಎಂ ಪ್ರಶ್ನೆ
- ಆಕ್ರಮಣಕಾರಿಯಾಗುವಂತೆ ಸಹೋದ್ಯೋಗಿಗಳಿಗೆ ಸೂಚನೆ

ಸರ್ಕಾರದ ವಿರುದ್ಧದ ಸುಳ್ಳು ಆರೋಪಗಳಿಗೆ ಸಮರ್ಥವಾಗಿ ಉತ್ತರ ನೀಡಬೇಕಾಗಿರುವುದು ಸಚಿವರ ಕರ್ತವ್ಯ. ಆದರೆ, ಈ ವಿಚಾರದಲ್ಲಿ ಬಹುತೇಕ ಸಚಿವರು ಮಾತನ್ನೇ ಆಡುವುದಿಲ್ಲ. ಈ ಉದಾಸೀನ ಅಥವಾ ನಿರ್ಲಕ್ಷ್ಯ ಸರಿಯಲ್ಲ. ನಿಮ್ಮ ವರ್ತನೆಯಿಂದ ಹೈಕಮಾಂಡ್‌ಗೆ ಏನೆಂದು ಸಂದೇಶ ಹೋಗಲಿದೆ. ಸಚಿವರ ಸಾಧನೆಯ ಕುರಿತು ವರಿಷ್ಠರಿಗೆ ಏನೆಂದು ವರದಿ ನೀಡಬೇಕು ಎಂದೂ ಕೇಳಿದರು.

ಬಿಜೆಪಿ ಸರ್ಕಾರದ ಆಡಳಿತ ಅವಧಿಯಲ್ಲಿ ಬಹುತೇಕ ಎಲ್ಲ ಇಲಾಖೆಗಳಲ್ಲಿ ಅಕ್ರಮ, ಅವ್ಯವಹಾರ ನಡೆದಿದೆ. ಗುತ್ತಿಗೆದಾರರು ಮಾಡಿದ್ದ ಶೇ 40 ಕಮಿಷನ್ ಆರೋಪ ವಿಚಾರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ದೊಡ್ಡ ಸದ್ದು ಮಾಡಿತ್ತು. ಆದರೆ, ಹಿಂದಿನ ಸರ್ಕಾರದ ಅವಧಿಯಲ್ಲಿ ಇಲಾಖೆಗಳಲ್ಲಿ ನಡೆದಿರುವ ಹಗರಣಗಳ ಕುರಿತು ಯಾವ ಸಚಿವರೂ ಬಹಿರಂಗವಾಗಿ ಮಾತನಾಡುತ್ತಿಲ್ಲ. ಈ ಅಕ್ರಮಗಳನ್ನು ಪತ್ತೆ ಮಾಡಿ ತನಿಖೆಗೆ ವಹಿಸುವ ಬಗ್ಗೆಯೂ ಗಮನ ಹರಿಸುತ್ತಿಲ್ಲ ಎಂದೂ ಮುಖ್ಯಮಂತ್ರಿ ಆಕ್ರೋಶ ವ್ಯಕ್ತಪಡಿಸಿದರು ಎಂದೂ ಗೊತ್ತಾಗಿದೆ.

‘ತಮ್ಮ ಇಲಾಖೆಯಲ್ಲಿನ ಸಾಧನೆಗಳಿಗೆ ಪ್ರಚಾರ ನೀಡುವ ಮೂಲಕ ಸರ್ಕಾರದ ವರ್ಚಸ್ಸು ಹೆಚ್ಚಿಸಲು ಎಲ್ಲರೂ ಕೈ ಜೋಡಿಸಬೇಕು. ಆದರೆ, ತಮ್ಮ ಇಲಾಖೆಯ ಸಾಧನೆಗಳನ್ನು ಹೇಳಿಕೊಳ್ಳಲು ಕೂಡಾ ಕೆಲವರು ಮುಂದೆ ಬರುತ್ತಿಲ್ಲ. ಎಲ್ಲವನ್ನೂ ನಾನೇ ಹೇಳಿಕೊಳ್ಳಬೇಕು. ಹಾಗಿದ್ದರೆ ನಿಮ್ಮ ಕೆಲಸವೇನು?’ ಎಂದು ಖಾರವಾಗಿ ಪ್ರಶ್ನಿಸಿದ ಮುಖ್ಯಮಂತ್ರಿ, ‘ಬೆಳಗಾವಿ ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಮುಗಿಬೀಳಲು ಬಿಜೆಪಿ– ಜೆಡಿಎಸ್ ಎಲ್ಲ ರೀತಿಯ ಸಿದ್ಧತೆಯಲ್ಲಿ ತೊಡಗಿದೆ. ವಿರೋಧ ಪಕ್ಷಗಳ ಆರೋಪಗಳಿಗೆ ಸಮರ್ಥವಾಗಿ, ಆಕ್ರಮಣಕಾರಿಯಾಗಿ ಉತ್ತರಿಸಲು ಎಲ್ಲ ಸಚಿವರು ತಯಾರಿ ಮಾಡಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಎಲ್ಲರೂ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಆ ಮೂಲಕ ಸರ್ಕಾರದ ವರ್ಚಸ್ಸು ಹೆಚ್ಚಿಸಬೇಕು’ ಎಂದೂ ಸಲಹೆ ನೀಡಿದರು ಎಂದೂ ಗೊತ್ತಾಗಿದೆ.

ಜಾಲಪ್ಪ ಅಕಾಡೆಮಿ: ಸ್ಪರ್ಧಾತ್ಮಕ ಪರೀಕ್ಷೆಗೆ ನಾಲ್ಕು ತಿಂಗಳ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಎಲ್.ಜಾಲಪ್ಪ ಅಕಾಡೆಮಿಯು ಕೆಎಎಸ್, ಪಿಎಸ್‌ಐ, ಎಫ್‌ಡಿಎ ಮತ್ತು ಎಸ್‌ಡಿಎ ಪರೀಕ್ಷೆಗಳಿಗೆ ಜನವರಿ 15ರಿಂದ ನಾಲ್ಕು ತಿಂಗಳ ಉಚಿತ ತರಬೇತಿ ಆರಂಭಿಸುತ್ತಿದೆ.

ಪದವೀಧರರಾದ ಬಡ ಮತ್ತು ಗ್ರಾಮೀಣ ಯುವಕ, ಯುವತಿಯರು ಈ ತರಬೇತಿಗೆ ಅರ್ಹರಾಗಿರುತ್ತಾರೆ. ದೂರದಿಂದ ಬರುವ ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ. ಆಸಕ್ತರು www:rljacademy.in ನಲ್ಲಿ ಜನವರಿ 10ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರಿನಲ್ಲಿರುವ ಅಕಾಡೆಮಿಯಲ್ಲಿ ಈ ತರಬೇತಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9900606042, 9731480759 ಅಥವಾ 7337705513

ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ

ಬೆಂಗಳೂರು: ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಕೃಷಿಕ್ ಸರ್ವೋದಯ ಫೌಂಡೇಷನ್ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ತರಗತಿಗಳು ಡಿಸೆಂಬರ್ 10ರಿಂದ ಪ್ರಾರಂಭವಾಗಲಿದ್ದು ಆನ್‌ಲೈನ್ ಮತ್ತು ಆಫ್‌ಲೈನ್ ಎರಡು ರೀತಿಯಲ್ಲೂ ನಡೆಯಲಿವೆ. ನುರಿತ ಪ್ರಾಧ್ಯಾಪಕರು ಬೋಧಿಸುವರು. ಪುರುಷರಿಗೆ ವಿದ್ಯಾರ್ಥಿ ವಸತಿ ನಿಲಯ ಲಭ್ಯವಿದೆ. ಆಸಕ್ತರು ಡಿ.5ರ ಒಳಗೆ ಅರ್ಜಿ ಸಲ್ಲಿಸುವಂತೆ ಫೌಂಡೇಶನ್ ಕಾರ್ಯದರ್ಶಿ ಟಿ. ತಿಮ್ಮೇಗೌಡ ತಿಳಿಸಿದ್ದಾರೆ.ವಿವರಗಳಿಗಾಗಿ ಎಚ್.ಎ.ಎಲ್. ಹಳೆ ವಿಮಾನ ನಿಲ್ದಾಣ ರಸ್ತೆಯ ಕೋಡಿಹಳ್ಳಿಯಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಶನ್‌ನ ಕೇಂದ್ರ ಕಚೇರಿಯನ್ನು ಸಂಪರ್ಕಿಸಬಹುದು. ಕಚೇರಿಯ ಇ-ಮೇಲ್: ksfbangalore@gmail.com, ವೆಬ್‌ಸೈಟ್: www.ksfkarnataka.com, ದೂರವಾಣಿ: 080-25202299, ಮೊಬೈಲ್:7625000990

ಸ್ವಾಮೀಜಿಯನ್ನು ಮುಟ್ಟಿದರೆ ಒಕ್ಕಲಿಗರ ಹೋರಾಟ: ಅಶೋಕ

ಪ್ರಜಾವಾಣಿ ವಾರ್ತೆ


ಆರ್. ಅಶೋಕ

ಬೆಂಗಳೂರು: ‘ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರನ್ನು ಮುಟ್ಟಲು ಸರ್ಕಾರ ಬಂದರೆ, ಇಡೀ ಒಕ್ಕಲಿಗ ಸಮುದಾಯವೇ ಸರ್ಕಾರದ ವಿರುದ್ಧ ತಿರುಗಿ ಬೀಳಲಿದೆ. ಬೀದಿಗಿಳಿದು ಹೋರಾಟ ನಡೆಸಲಿದೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಎಚ್ಚರಿಸಿದರು.

ಸ್ವಾಮೀಜಿ ಅವರನ್ನು ಶುಕ್ರವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಹಿಂದೂಗಳಿಗಾಗುತ್ತಿರುವ ಅನ್ಯಾಯದ ವಿರುದ್ಧ ಸ್ವಾಮೀಜಿ ಮಾತನಾಡಿದ್ದರು. ಬಳಿಕ ಅದರಲ್ಲಿ ಬಳಿಕ ಅದರಲ್ಲಿ ತಪ್ಪಿದ್ದರೆ ಕ್ಷಮೆ ಕೇಳುವುದಾಗಿ ಹೇಳಿದ್ದಾರೆ. ಇಷ್ಟಾದರೂ ಒಬ್ಬ ಮತಾಂಧ ದೂರು ನೀಡಿದ್ದಕ್ಕೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ’ ಎಂದು ಹರಿಹಾಯ್ದರು.

‘ಪಾಕಿಸ್ತಾನಕ್ಕೆ ಜೈಕಾರ ಹಾಕಿದವರ ವಿರುದ್ಧ ಕಾಂಗ್ರೆಸ್ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲ. ಆದರೆ ಹಿಂದೂಗಳ ಪರ ಮಾತನಾಡಿದರೆ ದೂರು ದಾಖಲಿಸುತ್ತದೆ. ದೇವೇಗೌಡರನ್ನೇ ಖರೀದಿ ಮಾಡುತ್ತೇನೆಂದು ಸಚಿವ ಜಮೀರ್ ಹೇಳಿದ್ದರು. ಸರ್ಕಾರ ಅವರ ವಿರುದ್ಧ ಕ್ರಮ ವಹಿಸಲಿಲ್ಲ. ಆದರೆ ಈಗ ಒಕ್ಕಲಿಗರ ವಿರುದ್ಧ ಕಾಂಗ್ರೆಸ್ ದ್ವೇಷ ಸಾಧಿಸುತ್ತಿದೆ’ ಎಂದರು.

‘ಡಿಸಿಎಂ ಡಿ.ಕೆ.ಶಿವಕುಮಾರ್ ಸಮಯಕ್ಕೆ ತಕ್ಕಂತೆ ಬದಲಾಗುತ್ತಾರೆ. ಒಮ್ಮೆ ಒಕ್ಕಲಿಗರ ಪರ ಮಾತಾಡಿದರೆ, ಮತ್ತೆ ಭಯೋತ್ಪಾದಕರನ್ನು ಬ್ರದರ್ ಎನ್ನುತ್ತಾರೆ. ಆದರೆ ಬಿಜೆಪಿ ಎಂದಿಗೂ ಹಿಂದೂಗಳ ಪರ ನಿಲ್ಲಲಿದೆ’ ಎಂದರು.

‘ಸ್ವಾಮೀಜಿಯವರಿಗೆ ತಿಳಿ ಹೇಳುವ ಬದಲು ಪೊಲೀಸರು ನೋಟಿಸ್ ನೀಡಿದ್ದಾರೆ. ಈಗ ಒಕ್ಕಲಿಗ ಸಮುದಾಯ ಎಚ್ಚೆತ್ತುಕೊಳ್ಳಬೇಕಿದೆ. ಸಮುದಾಯದ ವಿರುದ್ಧ ಸರ್ಕಾರ ಈ ರೀತಿ ದ್ವೇಷ ಕಾರುತ್ತಿರುವುದನ್ನು ಸಮುದಾಯದ ಜನರು ಗಮನಿಸಬೇಕಿದೆ’ ಎಂದರು.

‘ಸ್ವಾಮೀಜಿ ವಿರುದ್ಧ ಪ್ರಕರಣ ಹಿಂಪಡೆಯಿರಿ’

ವಿಜಯಪುರ: ‘ಮುಸ್ಲಿಮರಿಗೆ ಮತದಾನ ಹಕ್ಕು ಇಲ್ಲದಂತೆ ಮಾಡಬೇಕು’ ಎಂಬ ಹೇಳಿಕೆ ನೀಡಿರುವ ಚಂದ್ರಶೇಖರನಾಥ ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲಿಸಿರುವುದು ತಪ್ಪು. ಅವರ ವಿರುದ್ಧ ದಾಖಲಿಸಿದ ಪ್ರಕರಣವನ್ನುಹಿಂಪಡೆಯಬೇಕು’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಗ್ರಹಿಸಿದರು.

‘ಈ ದೇಶದ ಅನ್ನ ತಿಂದು, ನೀರು ಕುಡಿದು ಪಾಕಿಸ್ತಾನಕ್ಕೆ ಹುಟ್ಟಿದವರ ಹಾಗೆ ಮಾತನಾಡುವವರಿಗೆ ಮತದಾನದ ಹಕ್ಕು ಬೇಡ ಎಂದು ಸ್ವಾಮೀಜಿ ಹೇಳಿರುವುದು ಸ್ವಾಗತಾರ್ಹ. ಹಿಂದೂಗಳ ಪರವಾಗಿ ಮಾತನಾಡಿರುವ ಸ್ವಾಮೀಜಿ ಅವರನ್ನು ಬೆಂಬಲಿಸುತ್ತೇನೆ. ಸ್ವಾಮೀಜಿ ವಿರುದ್ಧ ದೂರು ದಾಖಲಾಗಿರುವುದನ್ನು ಒಕ್ಕಲಿಗ ಸಮಾಜ ಸರ್ಕಾರವನ್ನು ಪ್ರಶ್ನೆ ಮಾಡಬೇಕು’ ಎಂದರು.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ

ಸಾಹಸ ಮೆರೆದ ಚಿಣ್ಣರಿಗೆ ಶೌರ್ಯ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಪಾಠಿಗಳನ್ನು ಹಾವಿನಿಂದ ರಕ್ಷಿಸಿದ ಬಾಲಕ, ಬಾವಿಯಲ್ಲಿ ಬಿದ್ದ ಹಸು-ಕರು ಮತ್ತು ವ್ಯಕ್ತಿಯ ಪ್ರಾಣ ಉಳಿಸಿದ ಬಾಲ ಸಾಹಸಿಗರು, ಆಟೊರಿಕ್ಷಾ ಅಡಿಯಲ್ಲಿ ಸಿಲುಕಿದ ತಾಯಿಯನ್ನು ರಕ್ಷಿಸಿದ ಬಾಲಕಿ, ರೈಲ್ವೆ ಹಳಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ ತಾಯಿ ಮತ್ತು ಮಕ್ಕಳಿಬ್ಬರ ಜೀವ ಕಾಪಾಡಿದ ಉಳಿಸಿದ ಸಾಹಸಗಾರ್ತಿ...

ಹೀಗೆ ಧೈರ್ಯ, ಸಾಹಸ ಹಾಗೂ ಸಮಯ ಪ್ರಜ್ಞೆಯಿಂದ ಜೀವ ಕಾಪಾಡಿದ ಮಕ್ಕಳಿಗೆ ಶುಕ್ರವಾರ ನಡೆದ ಮಕ್ಕಳ ದಿನಾಚರಣೆಯಲ್ಲಿ ರಾಜ್ಯಮಟ್ಟದ ‘ಹೊಯ್ಸಳ ಹಾಗೂ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಏಳು ಮಕ್ಕಳಿಗೆ ಪುರಸ್ಕಾರ ನೀಡಲಾಯಿತು.

ಶಾಲಾ ಕೊಠಡಿಯಲ್ಲಿ ಕುಳಿತಿರುವಾಗ ಸಹಪಾಠಿಯ ಬ್ಯಾಗ್‌ಗೆ ನುಸುಳಿದ್ದ ಹಾವನ್ನು ಗಮನಿಸಿದ್ದ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಆನೆಕೆರೆ ಬಾಳೂರು ಗ್ರಾಮದ ಎರಡನೇ ತರಗತಿ ವಿದ್ಯಾರ್ಥಿ ಮಣಿಕಂಠ, ಆ ಬ್ಯಾಗ್‌ನ ಜಿಪ್ ಅನ್ನು ಹಾಕಿ ಶಾಲಾ ಮೈದಾನದಲ್ಲಿ ತಂದಿಡುವ ಮೂಲಕ ಸಹಪಾಠಿಗಳ ಜೀವ ಉಳಿಸಿದ್ದ.

ಸಮಯ ಪ್ರಜ್ಞೆಯಿಂದ ಇತರರ ಪ್ರಾಣ ರಕ್ಷಿಸಿದ (ಎಡದಿಂದ) ಸ್ಫೂರ್ತಿ ವಿಶ್ವನಾಥ, ವೈಭವಿ, ನಿಶಾಂತ್ ಎಲ್., ಮಣಿಕಂಠ ಆರ್., ಅಶ್ವಿನ್ ಎ.ಎನ್., ಬಿ. ಧೀರಜ್ ಐತಾಳ, ಮಹಮ್ಮದ ಸಮೀರ ಬುಕ್ಕಿಟಗಾರ, ವಿಶೇಷ ಸಾಧನೆ ಮಾಡಿದ ಅರುಣಿ ವಿ., ಅವರಿಗೆ ಲಕ್ಷ್ಮಿ ಹೆಬ್ಬಾಳಕರ ಅವರು ‘ಹೊಯ್ಸಳ ಹಾಗೂ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ’ ಪ್ರದಾನ ಮಾಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಶಮ್ಲಾ ಇಕ್ಬಾಲ್, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪದ್ಮಾವತಿ, ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಎನ್. ಎಚ್. ಕೋನರಡ್ಡಿ, ಬಾಲಭವನ ಸೊಸೈಟಿ ಅಧ್ಯಕ್ಷ ಬಿ. ಆರ್. ನಾಯ್ಡು, ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಅ. ಬಬಲೇಶ್ವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕ ಎನ್. ಸಿದ್ದೇಶ್ವರ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

55 ಅಡಿ ತೆರೆದ ಬಾವಿಯಲ್ಲಿ ಬಿದ್ದ ಹಸು–ಕರುವಿನ ಪ್ರಾಣ ರಕ್ಷಿಸಲು ಮನೆಯ ಯಜಮಾನ ಬಾವಿಗೆ ಧುಮುಕಿದ್ದ. ಆದರೆ, ಬಾವಿಗೆ ಕಟ್ಟಿದ ಹಗ್ಗ ತುಂಡಾಗಿ, ಹಸು–ಕರು ಮತ್ತು ಅದರ ಯಜಮಾನ ಮೇಲೆ ಬರಲು ಸಾಧ್ಯವಾಗದೇ ಸಹಾಯಕ್ಕಾಗಿ ಕೂಗಿಕೊಂಡಿದ್ದ. ಇದನ್ನು ಕೇಳಿದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆರೋಡಿ ಗ್ರಾಮದ ಚಿಣ್ಣರಾದ ನಿಶಾಂತ್-ಅಶ್ವಿನ್ ಆ ವ್ಯಕ್ತಿಗೆ ಹಗ್ಗವನ್ನು ನೀಡುವ ಮೂಲಕ ಪ್ರಾಣ ಕಾಪಾಡಿದ್ದರು. ಗ್ರಾಮಸ್ಥರನ್ನು ಸೇರಿಸಿ ಕರು ಮತ್ತು ಹಸುವಿನ ಜೀವ ರಕ್ಷಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿಯಲ್ಲಿ ನಡೆದ ಅಪಘಾತದಲ್ಲಿ ಆಟೊರಿಕ್ಷಾದ ಅಡಿಯಲ್ಲಿ ತನ್ನ ತಾಯಿ ಸಿಲುಕಿದ್ದರು. ಆಟೊ ರಿಕ್ಷಾವನ್ನು ಮೇಲೆತ್ತಿದ ವೈಭವಿ ಅಮ್ಮನ ಪ್ರಾಣ ಉಳಿಸಿದ್ದಳು. ಉಡುಪಿ ಜಿಲ್ಲೆಯ ಸಾಲಿಗ್ರಾಮದಲ್ಲಿ 16 ಅಡಿ ಉದ್ದದ 65 ಕೆ.ಜಿ ತೂಕದ ಹೆಬ್ಬಾವನ್ನು ಹಿಡಿದ ಬಿ. ಧೀರಜ್ ಐತಾಳ ಸಾರ್ವಜನಿಕರ ಪ್ರಾಣ ರಕ್ಷಣೆ ಮಾಡಿದ್ದ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಹನಮಾಪುರ ಗ್ರಾಮದ 5ನೇ ತರಗತಿ ಓದುತ್ತಿರುವ ಬಾಲಕ ಮಹಮ್ಮದ ಸಮೀರ ಹಾಗೂ ಆತನ ಅಜ್ಜನೊಂದಿಗೆ ಮೀನು ಹಿಡಿಯಲು ಹೋದ ಸಂದರ್ಭದಲ್ಲಿ ಬಾಲಕನ ಅಜ್ಜನಿಗೆ ವಿದ್ಯುತ್ ತಂತಿ ತಗುಲಿತ್ತು. ಸಮೀರ ಗಾಬರಿಯಾಗದೇ ತನ್ನಲ್ಲಿದ್ದ ಕೊಡೆಯ ಹಿಡಿಕೆಯಿಂದ ವಿದ್ಯುತ್ ತಂತಿ ದೂರ ಸರಿಸಿ, ಅಜ್ಜನ ಜೀವ ಕಾಪಾಡಿದ್ದ. ಬೆಳಗಾವಿಯ 9ನೇ ತರಗತಿಯ ವಿದ್ಯಾರ್ಥಿನಿ ಸ್ಫೂರ್ತಿ ತನ್ನ ತಂದೆ-ತಾಯಿಯೊಂದಿಗೆ ಕಾರಿನಲ್ಲಿ ತೆರಳುತ್ತಿದ್ದಾಗ ಬೆಳಗಾವಿ ಜಿಲ್ಲೆಯ ತಿಲಕವಾಡಿ ರೈಲ್ವೆ ಗೇಟ್ ಬಳಿ ತಾಯಿ ಮತ್ತು ಮಕ್ಕಳಿಬ್ಬರು ಆತ್ಮಹತ್ಯೆ ಪ್ರಯತ್ನಿಸುತ್ತಿದ್ದರು. ಇದನ್ನು ಗಮನಿಸಿದ್ದ ಸ್ಫೂರ್ತಿ ಪ್ರಾಣದ ಹಂಗು ತೊರೆದು ಅವರನ್ನು ರಕ್ಷಿಸಿದ್ದಳು.

ಸಾಹಸ ತೋರಿದ ಚಿಣ್ಣರಿಗೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ ಅವರು, ತಲಾ ₹10 ಸಾವಿರ ನಗದು ಪ್ರಶಸ್ತಿ ಪತ್ರ ನೀಡಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳಿಗೆ ಮಂಜೂರಾತಿ ಪತ್ರವನ್ನೂ ವಿತರಿಸಿದರು.

ನಾಲ್ಕು ಸಂಸ್ಥೆ, ವ್ಯಕ್ತಿಗಳಿಗೆ ರಾಜ್ಯ ಪ್ರಶಸ್ತಿ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ವಾಣಿಗೆರೆ ಗ್ರಾಮದ ಸಂತ ಗ್ರೆಗೋರಿಯಸ್ ದಯಾ ಭವನ, ಧಾರವಾಡದ ಶಾರದಾ ಕಾಲೊನಿಯಲ್ಲಿರುವ ಹೊಂಬೆಳಕು ಪ್ರತಿಷ್ಠಾನ, ಕೊಪ್ಪಳದ ಅಕ್ಕಮಹಾದೇವಿ ಮಹಿಳಾ ಮಂಡಳಿ ಹಾಗೂ ಕೋಲಾರದ ಜಯನಗರದ ಕರ್ನಾಟಕ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನೌಕರರ ಸಂಘಗಳಿಗೆ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ ತಲಾ ₹1 ಲಕ್ಷ ನಗದು, ನೆನಪಿನ ಕಾಣಿಕೆ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ಶಿವಮೊಗ್ಗದ ಆಲ್ಕೊಳದ ನಂದಿನಿ ಬಡಾವಣೆಯ ಎಚ್.ಪಿ. ಸುದರ್ಶನ್, ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕು ಹಳಿಯಾಳದ ಸುನೀಲ ಮ. ಕಮ್ಮಾರ್, ಬೀದರ್ ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನ ಕೊಡಂಬಲ್‌ನ ಸಂಗಮೇಶ್ ಹಾಗೂ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಜಂತಲಿ ಶಿರೂರಿನ ಗ್ರಾಮದ ಗವಿಸಿದ್ದಯ್ಯ ಜ. ಹಳ್ಳಿಕೇರಿಮಠ ಅವರು ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸಾಧನೆಗೈದಿದ್ದು, ಇವರಿಗೆ ತಲಾ ₹25 ಸಾವಿರ ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ರಾಜ್ಯದಲ್ಲಿ ಮಕ್ಕಳ ಆರೋಗ್ಯ, ಶಿಕ್ಷಣ, ಸುರಕ್ಷತೆಗೆ ಸರ್ಕಾರ ವಿಶೇಷ ಕಾಳಜಿ ವಹಿಸಿದ್ದು, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಜನಪರ ಯೋಜನೆಗಳನ್ನು ಜಾರಿಗೊಳಿಸಲಾಗುವುದು

ಲಕ್ಷ್ಮೀ ಹೆಬ್ಬಾಳಕರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಜತೆ ಸಮಾಲೋಚನೆ

ಸಂಪುಟ ಪುನರ್‌ರಚನೆ : ತಳ್ಳಿ ಹಾಕಿದ ಸಿ.ಎಂ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಚಿವ ಸಂಪುಟ ಪುನರ್‌ರಚನೆ ಸದ್ಯಕ್ಕಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ನವದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಶುಕ್ರವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದ ಬಳಿಕ ಸಿದ್ದರಾಮಯ್ಯ ಸುದ್ದಿಗಾರರ ಜತೆಗೆ ಮಾತನಾಡಿದರು.

ಸಚಿವ ಸಂಪುಟ ವಿಸ್ತರಣೆ, ಪುನರ್ ರಚನೆ ಕುರಿತ ಪ್ರಶ್ನೆಗೆ ಉತ್ತರ ಕೊಡಬೇಕಾದವರು ಮಾಧ್ಯಮದವರೇ ಹೊರತು ನಾನಲ್ಲ. ಮಾಧ್ಯಮಗಳೇ ಈ ಬಗ್ಗೆ ಸುದ್ದಿಗಳನ್ನು ಬಿತ್ತರಿಸುತ್ತಿವೆ. ಸಭಾನಾಯಕರು ಸಚಿವರ ಪಟ್ಟಿಯನ್ನೂ ಪ್ರಕಟಿಸುತ್ತಿವೆ. ಹೀಗಾಗಿ, ಈ ಪ್ರಶ್ನೆಗಳಿಗೆ ಮಾಧ್ಯಮಗಳೇ ಉತ್ತರಿಸಬೇಕು' ಎಂದರು.

'ಸಂಪುಟ ಪುನರ್ ರಚನೆ ಕುರಿತು ರಾಹುಲ್ ಗಾಂಧಿ ಅಥವಾ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚೆ ಮಾಡಿಲ್ಲ. ನಾಳೀದ್ದು ಅವರು ಸಂಪುಟಕ್ಕೆ ಸೇರಿದ ಆಗಲಿದ್ದಾರೆ. ಆದರೆ, ಈಗಲೇ ಅಲ್ಲ' ಎಂದರು.

ಡಿ.ಕೆ. ಶಿವಕುಮಾರ್ ಮಾತನಾಡಿ, 'ಸಂಪುಟ ಬಂದಾಗ ಸಂಪುಟ ಪುನರ್ ರಚನೆ ಆಗುತ್ತದೆ. ಆದರೆ ಈ ಸಂದರ್ಭ ಬಂದಿಲ್ಲವಲ್ಲ. ಒಂದು ಸಚಿವ ಸ್ಥಾನ ಖಾಲಿ ಇದ್ದು, ಅದನ್ನು ತುಂಬುವ ಬಗ್ಗೆಯೂ ಚರ್ಚೆ ನಡೆದಿಲ್ಲ' ಎಂದರು.

ರಾಹುಲ್ ಜತೆಗೆ ಚರ್ಚೆ: 'ಹಾಸನದಲ್ಲಿ ಡಿ. 5ರಂದು ಕಾಂಗ್ರೆಸ್ ಪಕ್ಷ ಹಾಗೂ ಹಿಂದುಳಿದ ವರ್ಗಗಳ ಒಕ್ಕೂಟದ ಆಶ್ರಯದಲ್ಲಿ ಸ್ವಾಭಿಮಾನಿ ಸಮಾವೇಶ ಆಯೋಜಿಸಲಾಗಿದೆ. ಸಮಾವೇಶಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನೂ ಸಂಘಟಕರು ಆಹ್ವಾನಿಸಿದ್ದಾರೆ' ಎಂದು ಸಿ.ಎಂ ತಿಳಿಸಿದರು.

ಸಮಾವೇಶ ಕುರಿತಂತೆ ಹೈಕಮಾಂಡ್‌ಗೆ ಅನಾಮಧೇಯ ಪತ್ರ ಬರೆದಿರುವ ಬಗ್ಗೆ ಮಾಹಿತಿ ಇಲ್ಲ. ಖರ್ಗೆ ಅವರೂ ಈ ಬಗ್ಗೆ ಚರ್ಚೆ ಮಾಡಲಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಶಿವಕುಮಾರ್ ಅವರು, 'ಅನಾಮಧೇಯ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವ ಕಾರಣಕ್ಕೆ ಸಮಾವೇಶ ಮಾಡಲಾಗುತ್ತಿದೆ ಎಂದು ಸಿ.ಎಂ ಮೊದಲೇ ತಿಳಿಸಿದ್ದಾರೆ. ಮಿಕ್ಕ ವಿಚಾರಗಳು ಗೊತ್ತಿಲ್ಲ. ಸಿ.ಎಂ ಹಾಗೂ ನಾನು ಭೇಟಿಯಾಗಿ 3-4 ದಿನಗಳಾಗಿವೆ. ಸಮಾವೇಶದಲ್ಲಿ ಪಕ್ಷದ ಭಾಗವಹಿಸುವಿಕೆ ಖಂಡಿತ ಇದ್ದೇ ಇರುತ್ತದೆ' ಎಂದರು.

ಹಾಸನ ಸಮಾವೇಶದ ಬಗ್ಗೆ ರಾಹುಲ್ ಗಾಂಧಿ ಅವರ ಜೊತೆ ಮುಖ್ಯಮಂತ್ರಿ ಚರ್ಚಿಸಿದರು. ಜೆಡಿಎಸ್ ಭದ್ರಕೋಟೆಯಲ್ಲಿ ಸಮಾವೇಶ ನಡೆಸಿದರೆ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಅನುಕೂಲ ಎಂದು ಸಿದ್ದರಾಮಯ್ಯ ವಿವರಿಸಿದರು ಎಂದೂ ಮಾಹಿತಿ ನೀಡಿದರು.

ಕೆಪಿಸಿಸಿ ಅಧ್ಯಕ್ಷನಾಗು ಎಂದರೆ ಸಚಿವ ಸ್ಥಾನ ಬಿಡುವೆ: ರಾಜಣ್ಣ

ಹಾಸನ: 'ನನ್ನ ಹೆಸರು ಕೇಳಿ ಬರಲಿ, ಬಾರದಿರಲಿ, ಪಕ್ಷದವರು ಹೇಳಿದರೆ ಸಚಿವ ಸ್ಥಾನ ಬಿಟ್ಟು, ಕೆಪಿಸಿಸಿ ಅಧ್ಯಕ್ಷನಾಗುತ್ತೇನೆ. ನಾನು ಯಾವತ್ತೂ ಅಧಿಕಾರಕ್ಕೆ ಅಂಟಿಕೊಳ್ಳುವವನಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸುವುದಾದರೆ, ಮುಂದುವರಿಸುವುದಾದರೆ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಕೆಪಿಸಿಸಿ ಅಧ್ಯಕ್ಷರ ಬಗ್ಗೆ ನಾವ್ಯಾರೂ ಚರ್ಚಿಸಿಲ್ಲ. ನಾವೇನೂ ಬದಲಾಯಿಸುವವರಲ್ಲ, ಇಟ್ಟುಕೊಳ್ಳುವವರೂ ಅಲ್ಲ' ಎಂದರು.

'ಸಿಎಂ ಆಗುವ ಆಸೆ ಇದೆ' ಎಂಬ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯಿಸಿ, 'ಸಿಎಂ ಜಾಗ ಖಾಲಿ ಇದೆಯಾ? ಖಾಲಿ ಇದ್ದಾಗ ಯಾರು ಎಂಬ ಪ್ರಶ್ನೆ ಬರುತ್ತದೆ. ಖಾಲಿ ಇಲ್ಲದೇ ಇದ್ದಾಗ ಏಕೆ ಪ್ರಶ್ನೆ ಬರುತ್ತದೆ' ಎಂದು ಕೇಳಿದರು.

ರಾಜಣ್ಣ ಹೇಳಿಕೆಗೆ ಡಿಕೆಶಿ ಗರಂ

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಕುರಿತು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿಕೆಗೆ ಅಸಮಾಧಾನ ವ್ಯಕ್ತಪಡಿಸಿದ ಡಿ.ಕೆ. ಶಿವಕುಮಾರ್, 'ಮಾಧ್ಯಮಗಳ ಮುಂದೆ ಮಾತನಾಡಿ ಚರ್ಚೆಯಿಂದ ರಾಜಕಾರಣ ನಡೆಯುವುದಿಲ್ಲ' ಎಂದರು.

'ಮಾಧ್ಯಮಗಳ ಮುಂದೆ ರಾಜಕೀಯ ಚರ್ಚೆ ಮಾಡುವುದು ಯಾವ ಪಕ್ಷದವರಿಗೂ ಹಾಗೂ ಯಾರಿಗೂ ಸೂಕ್ತವಾದುದಲ್ಲ' ಎಂದರು.

'ಮುಖ್ಯಮಂತ್ರಿ, ಅಧ್ಯಕ್ಷನಾಗುವ ಆಸೆ'

ಸತೀಶ ಜಾರಕಿಹೊಳಿ

ಹಾವೇರಿ: 'ಮುಖ್ಯಮಂತ್ರಿ ಆಗಬೇಕೆಂಬ ಆಸೆ ಇದೆ. ಕೆಪಿಸಿಸಿ ಅಧ್ಯಕ್ಷನಾಗಲು ಆಸಕ್ತಿಯೂ ಇದೆ. ಆದರೆ, ಅಂತಿಮವಾಗಿ ಪಕ್ಷವೇ ತೀರ್ಮಾನ ಮಾಡಬೇಕು' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಶಿಗ್ಗಾವಿಯಲ್ಲಿ ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಹಿಂದೆಯೂ ನಾನು ಮುಖ್ಯಮಂತ್ರಿಯಾಗುತ್ತೇನೆಂಬ ಸುದ್ದಿ ಹರಿದಾಡುತ್ತಿತ್ತು. ಈಗ, ಅಧ್ಯಕ್ಷನಾಗುತ್ತೇನೆಂಬ ಸುದ್ದಿ ಹರಿದಾಡುತ್ತಿದೆ. ಏನೇ ಆದರೂ ಪಕ್ಷದ ತೀರ್ಮಾನವೇ ಅಂತಿಮ' ಎಂದರು.

'ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಈ ಬಾರಿ ಅಹಿಂದ ನಾಯಕರಿಗೆ ಕೊಡಬೇಕೆಂಬ ಒತ್ತಡ ಇದೆಯೇ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಯಾರಿಗೆ ಕೊಡಬೇಕು? ಏಕೆ ಕೊಡಬೇಕು? ಅದರಿಂದಾಗುವ ಲಾಭ ಏನು? ಎಂದಿತ್ಯಾದಿ ಬಗ್ಗೆ ಚರ್ಚೆ ಮಾಡಿ ವರಿಷ್ಠರು ಅಂತಿಮ ತೀರ್ಮಾನ ಮಾಡುತ್ತಾರೆ' ಎಂದು ಹೇಳಿದರು.

'ಯಾವುದೇ ಸ್ಥಾನ ಹಾಗೂ ಹುದ್ದೆಗಾಗಿ ನಾನು ಒತ್ತಡ ಹಾಕುವುದಿಲ್ಲ. ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿರುವುದು ತೃಪ್ತಿ ತಂದಿದೆ. ಸಚಿವನಾಗಿಯೂ ಕೆಲಸ ಮಾಡುತ್ತಿರುವುದಕ್ಕೆ ತೃಪ್ತಿ ಇದೆ' ಎಂದರು.

'ಮುಖ್ಯಮಂತ್ರಿ ಅವಧಿಯ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವೈಯಕ್ತಿಕ ಹೇಳಿಕೆ ನೀಡಿದ್ದಾರೆ. ಈ ಐದು ವರ್ಷವೋ? ಮುಂದಿನ ಐದು ವರ್ಷವೂ ಗೊತ್ತಿಲ್ಲ. ಎಲ್ಲವನ್ನೂ ಹೈಕಮಾಂಡ್ ನಿರ್ಧರಿಸುತ್ತದೆ' ಎಂದು ತಿಳಿಸಿದರು.

ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ತಿರುಚಬಹುದು. ಹಾಗಾಗಿ, ದೇಶದಲ್ಲಿ ಇವಿಎಂಗಳ ಬಳಕೆ ರದ್ದುಗೊಳಿಸಿ ಬ್ಯಾಲೆಟ್ ಪೇಪರ್‌ಗೆ ಮರಳುವುದೇ ಉತ್ತಮ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಸಿದ್ದರಾಮಯ್ಯ ಡಿಕೆಶಿ ಬಳಿಕ ಜಾರಕಿಹೊಳಿ ಸರದಿ'

ಬಿಡದಿ (ರಾಮನಗರ): 'ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ಅವರ ಬಳಿಕ ಡಿ.ಕೆ.ಶಿವಕುಮಾರ್ ಬರುತ್ತಾರೆ. ಅವರ ಕೊಟಾ ಬಳಿಕ ಸತೀಶ್ ಜಾರಕಿಹೊಳಿ, ಎಂ.ಬಿ.ಪಾಟೀಲ ಸರದಿ. ಈ ನಂತರ ಮತ್ತೊಬ್ಬರಿಗೆ ಅವಕಾಶ. ಕಾಂಗ್ರೆಸ್‌ನಲ್ಲಿ ಮಾತ್ರ ಎಲ್ಲ ಜಾತಿ ನಾಯಕರಿಗೆ ಸಿಎಂ ಆಗುವ ಅವಕಾಶ ಸಿಗುತ್ತದೆ' ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

ಹೋಬಳಿಯಲ್ಲಿ ಶುಕ್ರವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಚನ್ನಪಟ್ಟಣದಲ್ಲಿ ಯೋಗೇಶ್ವರ್ ಗೆದ್ದರೆ ಡಿ.ಕೆ. ಶಿವಕುಮಾರ್ ಸಿ.ಎಂ ಆಗುತ್ತಾರೆ' ಎಂಬ ಹೇಳಿಕೆ ಕುರಿತ ಪ್ರಶ್ನೆಗೆ, 'ಸದ್ಯಕ್ಕೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರಿಗೆ ಅವಕಾಶವಿದೆ. ಮುಂದಿನದನ್ನು ಹೈಕಮಾಂಡ್ ನಿರ್ಧರಿಸಲಿದೆ' ಎಂದರು.

'ಅವಕಾಶ ಸಿಕ್ಕರೆ ಜೆಡಿಎಸ್ ಶಾಸಕರನ್ನು ಕಾಂಗ್ರೆಸ್‌ಗೆ ಕರೆ ತರುತ್ತೇನೆ ಎಂಬ ಹೇಳಿಕೆ ಕುರಿತು ಯೋಗೇಶ್ವರ್ ಅವರನ್ನೇ ಕೇಳಬೇಕು. ಅವರಿಗೆ ಶಾಸಕರನ್ನು ಕರೆತರುವ ಅಭ್ಯಾಸವಿದೆ. ಅದಕ್ಕೆ ಹೇಳಿದ್ದಾರೆ. ಸದ್ಯ ಆ ರೀತಿಯ ಟಾಸ್ಕ್ ಕೊಡುವ ಪರಿಸ್ಥಿತಿ ಮತ್ತು ಅಗತ್ಯ ಪಕ್ಷಕ್ಕಿಲ್ಲ' ಎಂದರು.

'ಕಾಂಗ್ರೆಸ್, ಒಕ್ಕೂಟಗಳ ಆಶ್ರಯದಲ್ಲಿ ಸಮಾವೇಶ'

ಪ್ರಜಾವಾಣಿ ವಾರ್ತೆ

ಹಾಸನ: 'ಪ್ರದೇಶ ಕಾಂಗ್ರೆಸ್ ಸಮಿತಿ ಹಾಗೂ ಶೋಷಿತ ಸಮುದಾಯಗಳ ಸಂಘಟನೆಗಳ ಒಕ್ಕೂಟದ ಆಶ್ರಯದಲ್ಲೇ ಡಿ.5ರಂದು ಸ್ವಾಭಿಮಾನಿ ಸಮಾವೇಶ ಮಾಡಲಾಗುತ್ತಿದೆ. ಗುಣಾತ್ಮಕ ನಾಯಕತ್ವ ಬಲಪಡಿಸುವ ಸಮಾವೇಶ ಇದು' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ಎಚ್.ಸಿ. ಮಹದೇವಪ್ಪ

ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಗಮನಕ್ಕೂ ಈ ವಿಷಯ ತಂದಿದ್ದೇವೆ. ಎಲ್ಲರೂ ಒಪ್ಪಿದ್ದಾರೆ' ಎಂದು ಸ್ಪಷ್ಟಪಡಿಸಿದರು.

'ಹಲವಾರು ವರ್ಷಗಳಿಂದ ಹಿಂದುಳಿದ ವರ್ಗಗಳು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಿವೆ. ಹಾಗಾಗಿ ಸಮಾವೇಶದಲ್ಲಿ ಕಾಂಗ್ರೆಸ್‌ನ ಚಿಹ್ನೆ, ಬಾವುಟಗಳೊಂದಿಗೆ ಶೋಷಿತ ಸಮುದಾಯಗಳ ಒಕ್ಕೂಟದ ಚಿಹ್ನೆ, ಬಾವುಟವನ್ನೂ ಹಾಕುತ್ತೇವೆ' ಎಂದರು.

'ಮೈಸೂರಿನಲ್ಲಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಹಾಸನದಲ್ಲೂ ಪಕ್ಷಕ್ಕೆ ಶಕ್ತಿ ತುಂಬಲೆಂದು ಆಯೋಜಿಸಲಾಗಿದೆ. ಯಾರ ವಿರುದ್ಧವೂ ಹೊಡೆ ತಟ್ಟುವ ಕಾರ್ಯಕ್ರಮವಲ್ಲ' ಎಂದು ಸಚಿವ ವೆಂಕಟೇಶ್ ಹೇಳಿದರು.

'ಸಿದ್ದರಾಮಯ್ಯ ಅವರಿಗೆ ಮಸಿ ಬಳಿಯಲು ಪ್ರತಿಪಕ್ಷಗಳು ಪ್ರಯತ್ನಿಸುತ್ತಿದ್ದು, ಷಿತಾರಿ ಮಾಡಿದರೆ ಸುಮ್ಮನಿರುವುದಿಲ್ಲವೆಂಬ ಸಂದೇಶ ನೀಡಲು ಹಮ್ಮಿಕೊಳ್ಳಲಾಗಿದೆ' ಎಂದು ಸಚಿವ ವೆಂಕಟೇಶ್ ಹಾಗೂ ಗೃಹ ಮಂಡಳಿ ಅಧ್ಯಕ್ಷ, ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

'ಸಂವಿಧಾನ ಮತ್ತು ಜಾತ್ಯತೀತತೆಯ ಪರವಾಗಿ ಹಾಗೂ ದ್ವೇಷ ರಾಜಕಾರಣದ ವಿರುದ್ಧವಾಗಿ ಕಾಂಗ್ರೆಸ್ ಸರ್ಕಾರ ನಿಲ್ಲುತ್ತದೆ ಎಂಬ ಸಂದೇಶ ನೀಡುತ್ತೇವೆ' ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

'ಯತ್ನಾಳ ಹೇಳಿದ್ದು ಶುದ್ಧ ಸುಳ್ಳು'

ಕೂಡಲಸಂಗಮ(ಬಾಗಲಕೋಟೆ ಜಿಲ್ಲೆ): 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಈಗ ವೈಚಾರಿಕತೆಯಿಲ್ಲದ ಸನಾತನ ಧರ್ಮ, ಹಿಂದೆ ಬಸವಣ್ಣನ ವರ ಸಾಮಾಜಿಕ ಕ್ರಾಂತಿಗೆ ಅಡ್ಡಿಯುಂಟು ಮಾಡಿತ್ತು, ಕಿರುಕುಳ ಕೊಟ್ಟಿತ್ತು ಎಂಬುದನ್ನು ಎಲ್ಲರೂ ಅರಿಯಬೇಕು' ಎಂದು ಕೂಡಲಸಂಗಮ ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಹೇಳಿದ್ದಾರೆ.

ಮಾತೆ ಗಂಗಾದೇವಿ

'ಸಾಮಾಜಿಕ ಕ್ರಾಂತಿಯ ಮೂಲಕ ಬದಲಾವಣೆ ತಂದ ಬಸವಣ್ಣನವರು ಕ್ರಾಂತಿಕಾರಿಯಾಗಿದ್ದರು. 'ಬಸವಣ್ಣನವರು ಹೊಳೆ ಹಾರಿ ಸತ್ತರು' ಎಂದು ಯತ್ನಾಳ ಹೇಳಿರುವುದು ಶುದ್ಧ ಸುಳ್ಳು. ಸನಾತನಿಗಳನ್ನು ವೈಭವೀಕರಿಸಲು ಪ್ರಚಾರದ ಹುಚ್ಚಿಗೆ ತಪ್ಪು ಮಾತನಾಡಬಾರದು. ಬಸವಣ್ಣನವರ ಜೀವನ, ವಚನಗಳ ಕುರಿತು ಅಧ್ಯಯನ ಮಾಡುವ ಕೆಲಸ ಮಾಡಬೇಕು' ಎಂದಿದ್ದಾರೆ.

'ಬಸವಣ್ಣನಿಗೆ ಜನ್ಮ ಕೊಟ್ಟ ಜಿಲ್ಲೆಯಲ್ಲಿಯೇ ಬಸವಣ್ಣನ ಹೆಸರು ಇಟ್ಟುಕೊಂಡು ಬದುಕುತ್ತಿರುವ ನೀವು (ಯತ್ನಾಳ) ಬಸವಣ್ಣನ ಚರಿತ್ರೆ ಅರಿಯುವ ಕೆಲಸ ಮಾಡಿ. ಇತಿಹಾಸಕ್ಕೆ ಅಪಚಾರ ಮಾಡಬೇಡಿ. ಬಸವಣ್ಣನ ಕುರಿತು ಮಾತನಾಡುವಾಗ ಎಚ್ಚರಿಕೆ ಇರಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಎಲ್ಲ ಬಸವಾಭಿಮಾನಿಗಳು ತಕ್ಕ ಉತ್ತರ ಕೊಡುತ್ತಾರೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಬಾರ್ಡ್ ನೆರವು ಹೆಚ್ಚಿಸಿ: ಪ್ರಧಾನಿಗೆ ಮೊರೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅಲ್ಪಾವಧಿ ಬೆಳೆ ಸಾಲ ವಿತರಣೆಗೆ ಸಾಧ್ಯವಾಗುವಂತೆ ಪ್ರಸಕ್ತ ಸಾಲಿನಲ್ಲಿ ರಾಜ್ಯಕ್ಕೆ ಒದಗಿಸಿರುವ ನಬಾರ್ಡ್ ನೆರವು ಕಡಿತಗೊಳಿಸಿರುವುದರಿಂದ ರೈತಾಪಿ ವರ್ಗ ಸಂಕಷ್ಟಕ್ಕೆ ಈಡಾಗಿದೆ. ಹೀಗಾಗಿ, ನಬಾರ್ಡ್ ನೆರವು ಹೆಚ್ಚಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಹವಾಲು ಸಲ್ಲಿಸಿದರು.

ರಾಜ್ಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರಧಾನಿ ಅವರಿಗೆ ಉಭಯ ನಾಯಕರು ಶುಕ್ರವಾರ ಮನವಿ ಸಲ್ಲಿಸಿದರು.

'ರಾಜ್ಯಕ್ಕೆ ನಬಾರ್ಡ್ 2023-24ರ ಸಾಲಿನಲ್ಲಿ ₹5,600 ಕೋಟಿಗಳನ್ನು ಮಂಜೂರು ಮಾಡಿತ್ತು.

2024 -25ರ ಸಾಲಿನಲ್ಲಿ ₹2,340 ಕೋಟಿ ನೀಡಿದೆ. ನಬಾರ್ಡ್ ನೆರವು ಪ್ರಸಕ್ತ ಸಾಲಿನಲ್ಲಿ ಶೇ 58 ರಷ್ಟು ಕಡಿತವಾಗಿದೆ. ಇದರಿಂದಾಗಿ, ರಾಜ್ಯದ ರೈತಾಪಿ ವರ್ಗದ ಆರ್ಥಿಕ ವೆಚ್ಚದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅಲ್ಲದೇ, ರಾಜ್ಯದ ಆರ್ಥಿಕ ಸ್ಥಿತಿಯ ಮೇಲೂ ಪರಿಣಾಮ ಬೀರಲಿದೆ. ಹೀಗಾಗಿ, ರಾಜ್ಯದ ರೈತರು ಅಲ್ಪಾವಧಿ ಬೆಳೆ ಸಾಲಗಳನ್ನು ಪಡೆಯಲು ತೊಂದರೆಯಾಗದಂತೆ ಹಣಕಾಸು ಸಚಿವಾಲಯಕ್ಕೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಅವರು ಒತ್ತಾಯಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಸ್ತಲಾಘವ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಚಿತ್ರದಲ್ಲಿದ್ದಾರೆ

'ಎಚ್‌ಡಿಡಿ, ಎಚ್‌ಡಿಕೆ ರಾಜೀನಾಮೆ ನೀಡಲಿ'

'ಮಹದಾಯಿ, ಮೇಕೆದಾಟು ಯೋಜನೆಗಳ ವಿಷಯದಲ್ಲಿ ರಾಜ್ಯಕ್ಕೆ ನ್ಯಾಯ ಕೊಡಿಸದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಲಿ' ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

ಪ್ರಧಾನಿ ಭೇಟಿಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ರಾಜ್ಯಕ್ಕೆ ನಿರಂತರ ಅನ್ಯಾಯ ಆಗುತ್ತಿದೆ. ಮಹದಾಯಿ, ಮೇಕೆದಾಟು ಯೋಜನೆಗಳಿಗೆ ಅನುಮತಿ ನೀಡುತ್ತಿಲ್ಲ. ಇಷ್ಟಾದರೂ ರಾಜ್ಯದಿಂದ ಆಯ್ಕೆ ಆಗಿರುವ ಬಿಜೆಪಿ ಸಂಸದರು ಬಾಯಿ ಬಿಡುತ್ತಿಲ್ಲ. ಮಣ್ಣಿನ ಮಗ ಅಂದುಕೊಂಡಿರುವ ಎಚ್.ಡಿ.ಕುಮಾರ ಸ್ವಾಮಿ ಅವರು ಏನು ಮಾಡುತ್ತಿದ್ದಾರೆ. ರಾಜ್ಯಸಭಾ ಸದಸ್ಯರಾದ ದೇವೇಗೌಡರೂ ರಾಜ್ಯಕ್ಕೆ ಆಗುತ್ತಲೇ ಇರುವ ಅನ್ಯಾಯಗಳ ವಿರುದ್ಧ ಬಾಯಿ ಬಿಡುತ್ತಿಲ್ಲ ಏಕೆ' ಎಂದು ಪ್ರಶ್ನಿಸಿದರು.

'ನಬಾರ್ಡ್ ಸಾಲದಲ್ಲಿ ಶೇ58 ರಷ್ಟು ಕಡಿತಗೊಳಿಸಿರುವುದರಿಂದ ರೈತರು ಅಧಿಕ ಬಡ್ಡಿಗೆ ಸಾಲ ಕೊಡುವ ಲೇವಾದೇವಿದಾರರ ಸುಳಿಗೆ ಸಿಲುಕಲಿದ್ದಾರೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ರೈತರಿಗೆ ನೀಡುತ್ತಿದ್ದ ಸಬ್ಸಿಡಿ ಸಾಲ ಕಡಿತಗೊಳಿಸಿದ್ದರಿಂದ ರಾಜ್ಯದಲ್ಲಿ ಮತ್ತು ದೇಶದಲ್ಲಿ ಆಹಾರ ಉತ್ಪಾದನೆಯ ಮೇಲೆ ಕೆಟ್ಟ ಪರಿಣಾಮ ಬೀರಲಿದೆ ಎಂದರು.

ಕರ್ನಾಟಕ ಸರ್ಕಾರದ ಬೇಡಿಕೆಗಳೇನು?

- ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ಪ್ರಕಟಿಸಿರುವ ₹5,300 ಕೋಟಿಯನ್ನು ಕೂಡಲೇ ಮಂಜೂರು ಮಾಡಬೇಕು.
- ಶುಷ್ಕ ವಲಯಕ್ಕೆ ಸೇರಿದ ಕರ್ನಾಟಕದಂತಹ ರಾಜ್ಯದಲ್ಲಿ ನೀರಾವರಿ ಸೌಲಭ್ಯ ಸಾಮರ್ಥ್ಯಗಳನ್ನು ಸಬಲಗೊಳಿಸುವುದು ಅತ್ಯಗತ್ಯ. ಈ ಕಾರ್ಯವನ್ನು ರಾಜ್ಯವು ತನ್ನ ಸಂಪನ್ಮೂಲಗಳಿಂದಲೇ ಭರಿಸುತ್ತಿದೆ. ಆದರೆ, ಜಲಶಕ್ತಿ ಹಾಗೂ ಅರಣ್ಯ ಸಚಿವಾಲಯಗಳಲ್ಲಿ ವಿವಿಧ ಅನುಮೋದನೆಗಳು ಬಾಕಿ ಇರುವುದರಿಂದ ಯೋಜನೆಗಳು ಅನುಷ್ಠಾನಗೊಳ್ಳುತ್ತಿಲ್ಲ. ಮೇಕೆದಾಟು ಹಾಗೂ ಮಹದಾಯಿ ಯೋಜನೆಗಳಿಗೆ ಜಲಶಕ್ತಿ ಹಾಗೂ ಅರಣ್ಯ ಸಚಿವಾಲಯಗಳಿಂದ ಶೀಘ್ರ ಅನುಮೋದನೆ ಕೊಡಿಸಬೇಕು.
- ಅಮೃತ್ ಯೋಜನೆಯಡಿ ರಾಜ್ಯದ 13 ಮಹಾನಗರ ಪಾಲಿಕೆಗಳಿಗೆ ₹10 ಸಾವಿರ ಕೋಟಿ ಅನುದಾನ ನೀಡಬೇಕು.
- *15ನೇ ಹಣಕಾಸು ಆಯೋಗದ ನಿಧಿ ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಬೇಕು.
- 15ನೇ ಹಣಕಾಸು ಆಯೋಗವು ರಾಜ್ಯಕ್ಕೆ ಅನುದಾನ ಹಂಚಿಕೆ ಕಡಿಮೆಯಾಗಿರುವುದಕ್ಕೆ ಪರಿಹಾರವಾಗಿ ₹5,495 ಕೋಟಿ ಅನುದಾನ ಬಿಡುಗಡೆಗೆ ಶಿಫಾರಸು ಮಾಡಿತ್ತು. ಪೆರಿಫೆರಲ್ ವರ್ತುಲ ರಸ್ತೆ ಮತ್ತು ನೀರಿನ ಮೂಲಗಳ ಪುನರುಜ್ಜೀವನಕ್ಕೆ ₹6 ಸಾವಿರ ಕೋಟಿ ವಿಶೇಷ ಅನುದಾನ ಶಿಫಾರಸು ಮಾಡಿತ್ತು. ಈ ಅನುದಾನಗಳನ್ನು ಬಿಡುಗಡೆ ಮಾಡಲು ನಿರ್ದೇಶನ ನೀಡಬೇಕು.
- 16ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ನ್ಯಾಯಯುತವಾಗಿ ಅನುದಾನ ಹಂಚಿಕೆ ಮಾಡಬೇಕು.

ನಾಲ್ಕು ದಿನ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಬಂಗಾಳ ಕೊಲ್ಲಿಯ ನೈರುತ್ಯದಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ಬೆಂಗಳೂರು ಸೇರಿ ಐದು ಜಿಲ್ಲೆಗಳಲ್ಲಿ ಶನಿವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ದಕ್ಷಿಣ ಒಳನಾಡಿನ ತುಮಕೂರು ಹಾಗೂ ಚಾಮರಾಜನಗರ ಜಿಲ್ಲೆಯ ಕೆಲವೆಡೆ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ. ಶನಿವಾರ ದಿಂದ 4 ದಿನ ವಿವಿಧೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಡಿ.2ರಂದು 3 ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಸೇರಿ 10 ಜಿಲ್ಲೆಗಳಿಗೆ ಭಾರಿ ಮಳೆಯ ಮುನ್ಸೂಚನೆ ನೀಡಲಾಗಿದೆ. ಡಿ.3 ರಂದು 12 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಅಂತರ ನಿಗಮ ವರ್ಗಾವಣೆ: ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಸಾರಿಗೆಯ ನಾಲ್ಕು ನಿಗಮಗಳಲ್ಲಿ ಅಂತರ ನಿಗಮ ವರ್ಗಾವಣೆಗೆ ಸಂಬಂಧಿಸಿದಂತೆ ಕೆಎಸ್‌ಆರ್‌ಟಿಸಿ ವೆಬ್‌ಸೈಟ್‌ನಲ್ಲಿ ಪಟ್ಟಿ ಪ್ರಕಟಿಸಲಾಗಿದೆ. ಆಕ್ಷೇಪಗಳಿದ್ದಲ್ಲಿ ಡಿ.4ರ ಒಳಗೆ ಸಲ್ಲಿಸಲು ಕೋರಲಾಗಿದೆ.

ದರ್ಜೆ 3 (ಮೇಲ್ವಿಚಾರಕರು), ದರ್ಜೆ-4ರ (ಸಿಬ್ಬಂದಿ) ಒಟ್ಟು 1,308 ನೌಕರರಿಗೆ ಅಂತರ ನಿಗಮ ವರ್ಗಾವಣೆ ಸೌಲಭ್ಯ ಕಲ್ಪಿಸಲಾಗಿದೆ. ಶೇ 40ಕ್ಕಿಂತ ಅಧಿಕ ಅಂಗವೈಕಲ್ಯ ಹೊಂದಿರುವ ನೌಕರರಿಗೆ, ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ನೌಕರರಿಗೆ ವರ್ಗಾವಣೆಯ ಶೇ 5ರಷ್ಟು ಹುದ್ದೆಗಳನ್ನು ಮೀಸಲಿಡಲಾಗಿದೆ.

1,175 ನೌಕರರು ಸಾಮಾನ್ಯ ವರ್ಗದಡಿ, 61 ಮಂದಿ ಅಂಗವೈಕಲ್ಯ ಮತ್ತು ಕಾಯಿಲೆಗೊಳಗಾಗಿರುವವರು, 72 ಜನರು ಪತಿ ಅಥವಾ ಪತ್ನಿ ನೌಕರಿ ಮಾಡುವ ಸ್ಥಳಗಳಿಗೆ ಹೋಗಲು ಅರ್ಜಿಸಲ್ಲಿದವರು ವರ್ಗಾವಣೆಗೊಂಡಿದ್ದಾರೆ. ಪಟ್ಟಿ ksrtc.karnataka.gov.inನಲ್ಲಿ ಪ್ರಕಟವಾಗಿದೆ. ಆಕ್ಷೇಪಣೆಗಳಿದ್ದರೆ ಲಿಖಿತವಾಗಿ ಸಂಬಂಧಪಟ್ಟ ವಿಭಾಗದ ಆಡಳಿತಾಧಿಕಾರಿಗೆ ಸಲ್ಲಿಸಿ ಸ್ವೀಕೃತಿ ಪಡೆದುಕೊಳ್ಳಬೇಕು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಅಶ್ವಿನಿ ಭಿಡೆಗೆ 'ಬಾಲೆಖಾನ್ ಸ್ಮಾರಕ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಅಶ್ವಿನಿ ಭಿಡೆ

ಕಾಳಿನಾಥ ಮಿಶ್ರಾ



ರಾಘವೇಂದ್ರ

ಧಾರವಾಡ: ಬೆಂಗಳೂರಿನ ಸಿತಾರ್ ನವಾಜ್ ಉಸ್ತಾದ್ ಬಾಲೆಖಾನ್ ಮೆಮೊರಿಯಲ್ ಫೌಂಡೇಷನ್ ಟ್ರಸ್ಟ್ ನೀಡುವ ಇನ್ಫೋಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೆಖಾನ್ ಮೆಮೊರಿಯಲ್ ಪ್ರಶಸ್ತಿಗೆ ಹಿಂದೂಸ್ತಾನಿ ಗಾಯಕಿ ಮುಂಬೈನ ಅಶ್ವಿನಿ ಭಿಡೆ ಆಯ್ಕೆಯಾಗಿದ್ದಾರೆ.

ಉಸ್ತಾದ್ ಬಾಲೆಖಾನ್ ಮೆಮೊರಿಯಲ್ ಅಕಂಪನಿಸ್ಟ್ ಪ್ರಶಸ್ತಿಗೆ ಮುಂಬೈನ ತಬಲಾ ವಾದಕ ಕಾಳಿನಾಥ ಮಿಶ್ರಾ ಹಾಗೂ ಜೀವಮಾನ ಸಾಧನೆ ಪ್ರಶಸ್ತಿಗೆ ಧಾರವಾಡದ ಸಿತಾರ್ ರತ್ನ ಸಮಿತಿಯ ರಾಘವೇಂದ್ರ ಆಯಿ ಆಯ್ಕೆಯಾಗಿದ್ದಾರೆ.

ಬಾಲೆಖಾನ್ ಮೆಮೊರಿಯಲ್ ಪ್ರಶಸ್ತಿಯು ₹ 1 ಲಕ್ಷ ಹಾಗೂ ಇತರ ಎರಡು ಪ್ರಶಸ್ತಿಗಳು ತಲಾ ₹ 25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ. ನಗರದ ಸೃಜನಾ ರಂಗಮಂದಿರದಲ್ಲಿ ಡಿಸೆಂಬರ್ 2ರಂದು ಬಾಲೆಖಾನ್ ಮೆಮೊರಿಯಲ್ ಪ್ರಶಸ್ತಿ ಪ್ರದಾನ ಹಾಗೂ ಇತರು ಎರಡು ಪ್ರಶಸ್ತಿಗಳ ಪ್ರದಾನ ಸಮಾರಂಭ ಡಿಸೆಂಬರ್ 7ರಂದು ನಡೆಯಲಿದೆ ಎಂದು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಹಫೀಜ್ ಖಾನ್ ತಿಳಿಸಿದ್ದಾರೆ.

ವೃದ್ಧೆ ಮೇಲೆ ಅತ್ಯಾಚಾರ ಆರೋಪಿ ಬಂಧನ

ಚಿಂಚೋಳಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರ 80 ವರ್ಷದ ವೃದ್ಧೆ ಮೇಲೆ ಅತ್ಯಾಚಾರ ನಡೆಸಿ ಬೆಳ್ಳಿ ಚೈನ್ ಹಾಗೂ ಮೊಬೈಲ್ ದೋಚಿದ್ದ ಆರೋಪಿಯನ್ನು ಚಿಂಚೋಳಿ ಪೊಲೀಸರು ಶುಕ್ರವಾರ ಹೈದರಾಬಾದ್‌ನಲ್ಲಿ ಬಂಧಿಸಿದ್ದಾರೆ.

ತಾಲ್ಲೂಕಿನ ಐನೋಳ್ಳಿ ಗ್ರಾಮದ ತಯ್ಯಬ್ ಮಿರನಶಹಾ ಫಕೀರ ಎಂಬಾತನನ್ನು ವಶಕ್ಕೆ ಪಡೆದ ಪೊಲೀಸರು, ಆತನ ಆರೋಗ್ಯ ತಪಾಸಣೆ ನಡೆಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕುಟುಂಬದಜತೆಗೆ ನಂಟು ಇಟ್ಟುಕೊಳ್ಳದ ತಯ್ಯಬ್, ಊರೂರು ಅಲೆಯುತ್ತ ಸಿಕ್ಕಸಿಕ್ಕ ಕೆಲಸ ಮಾಡುತ್ತಿದ್ದ. ಗೊಟ್ಟಮಗೊಟ್ಟ ಜಾತ್ರೆಗೆ ಬಂದಿದ್ದ ಈತ, ಸಮೀಪದ ಗ್ರಾಮದಲ್ಲಿ ನ.18ರಂದು ವೃದ್ಧೆಯ ಮೇಲೆ ಅತ್ಯಾಚಾರ ನಡೆಸಿ ಪರಾರಿಯಾಗಿದ್ದ.

ಈತನ ಬಂಧನಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಚಿಂಚೋಳಿ ಡಿವೈಎಸ್ಪಿ ಸಂಗಮನಾಥ ಹಿರೇಮಠ ಮಾರ್ಗದರ್ಶನದಲ್ಲಿ ನಾಲ್ಕು ತಂಡಗಳನ್ನು ರಚಿಸಲಾಗಿತ್ತು. ಆರೋಪಿಯ ವಿರುದ್ಧ ತೆಲಂಗಾಣದ ಮಿಯಾಪುರ ಠಾಣೆಯಲ್ಲಿ ಪೋಕ್ಸೊ ಹಾಗೂ ಎಸ್ಸಿ, ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣವಿದ್ದು ಬಂಧನದ ವಾರಂಟ್ ಸಹ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಿಜಿ ಆಯುಷ್: ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ

ಬೆಂಗಳೂರು: 'ಸ್ನಾತಕೋತ್ತರ (ಪಿಜಿ) ಆಯುಷ್ ಕೋರ್ಸ್ ಪ್ರವೇಶಕ್ಕೆ ಕನಿಷ್ಠ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿರುವ ಕಾರಣ ಆನ್‌ಲೈನ್‌ನಲ್ಲಿ ನೋಂದಣಿ, ಅರ್ಜಿ ಸಲ್ಲಿಕೆಗೆ ಪೋರ್ಟಲ್ ತೆರೆಯಲಾಗಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಭಾರತೀಯ ವೈದ್ಯ ಪದ್ಧತಿಯ ರಾಷ್ಟ್ರೀಯ ಆಯೋಗ ಪ್ರಸಕ್ತ ಸಾಲಿಗೆ ಪಿಜಿ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ 15 ಪರ್ಸೆಂಟೈಲ್ ಕಡಿಮೆ ಮಾಡಿರುವ ಕಾರಣ, ಎಲ್ಲಾ ಅರ್ಹರಿಗೂ ಮತ್ತೆ ಅವಕಾಶ ನೀಡಲಾಗಿದೆ. ಡಿ. 1ರವರೆಗೆ ಹೊಸದಾಗಿ ಅರ್ಜಿ ಸಲ್ಲಿಸಬಹುದು. ದಾಖಲೆಗಳ ಪರಿಶೀಲನೆ ಡಿ. 2ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ಗಂಟೆವರೆಗೆ ನಡೆಯಲಿದೆ. ಅಭ್ಯರ್ಥಿಗಳು ಮೂಲ ದಾಖಲೆಗಳ ಸಹಿತ ಬರಬೇಕು ಎಂದು ಅವರು ಹೇಳಿದ್ದಾರೆ.

'ಮಾಪ್ ಅಪ್ ಸುತ್ತಿನ ಸೀಟು ಹಂಚಿಕೆಗೆ ಆಪ್ಷನ್ ದಾಖಲಿಸಲು ಡಿ. 3ರವರೆಗೆ ಅವಕಾಶ ನೀಡಲಾಗಿದೆ. ಅದೇ ದಿನ ಸಂಜೆ 7 ಗಂಟೆಗೆ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಹಾಗೂ ಡಿ.4ರಂದು ಬೆಳಿಗ್ಗೆ 11ಕ್ಕೆ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಸೀಟು ಹಂಚಿಕೆಯಾದವರು ಚಲನ್ ಡೌನ್‌ಲೋಡ್ ಮಾಡಿಕೊಂಡು 6ರೊಳಗೆ ಶುಲ್ಕ ಪಾವತಿಸಬೇಕು. ಕಾಲೇಜುಗಳಿಗೆ ವರದಿ ಮಾಡಿಕೊಳ್ಳಲು ಡಿ.7 ಕೊನೆ ದಿನ' ಎಂದಿದ್ದಾರೆ.

ದಿನಾಂಕ ವಿಸ್ತರಣೆ: ಎಂಬಿಎ, ಎಂಸಿಎ, ಎಂ.ಟೆಕ್ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ಎರಡನೇ ಸುತ್ತಿನ ಸೀಟು ಹಂಚಿಕೆಗೆ ಆಪ್ಷನ್ಸ್ ದಾಖಲಿಸಲು ನ. 30ರ ಮಧ್ಯಾಹ್ನ 12 ಗಂಟೆವರೆಗೆ ಸಮಯ ವಿಸ್ತರಿಸಲಾಗಿದೆ.

ಅರ್ಜಿ ಸಲ್ಲಿಸಲು ಡಿ. 2 ಕೊನೆ ದಿನ: ಎಂಎಸ್ಸಿ ನರ್ಸಿಂಗ್, ಎಂಪಿಟಿ, ಎಂಎಸ್ಸಿ ಅಲೈಡ್ ಹೆಲ್ತ್ ಸೈನ್ಸ್‌ನ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡು ಅರ್ಜಿ ಸಲ್ಲಿಸಲು ಶುಕ್ರವಾರದಿಂದ (ನ. 29) ಅವಕಾಶ ಕಲ್ಪಿಸಲಾಗಿದೆ. ಡಿ. 2ರೊಳಗೆ ಅರ್ಜಿ ಸಲ್ಲಿಸಬೇಕು. ರಾಜ್ಯದ ಅಭ್ಯರ್ಥಿಗಳು ಪದವಿ ಕೋರ್ಸ್‌ಗಳಲ್ಲಿ ಪಡೆದಿರುವ ಅಂಕಗಳ ಆಧಾರದ ಮೇಲೆ ಮೆರಿಟ್ ಪಟ್ಟಿ ಸಿದ್ಧಪಡಿಸಿ, 2024-25ನೇ ಸಾಲಿಗೆ ಸೀಟು ಹಂಚಿಕೆ ಮಾಡಲಾಗುವುದು ಎಂದೂ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, ಫ್ಯಾಕ್ಸ್ : 22215602

ಸಂಖ್ಯೆ:ಕಕ್ರೀಪ್ರಾ/ಸಿ5/53/2024–25 ದಿನಾಂಕ: 29.11.2024

ಪತ್ರಿಕಾ ಪ್ರಕಟಣೆ

ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ತರಬೇತಿ ನೀಡುವ ಸಲುವಾಗಿ ತರಬೇತುದಾರರ ಸೇವೆ ಪಡೆಯಲು ನೇಮಕಾತಿ ಆದೇಶ ನೀಡುವ ದಿನಾಂಕದಿಂದ ಸೆಪ್ಟಂಬರ್–2025 ರ ಅಂತ್ಯದವರೆಗೆ ತಾತ್ಕಾಲಿಕವಾಗಿ ಮಾಸಿಕ ಸಂಚಿತ ವೇತನ, ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಭಾರತದ ಅರ್ಹ ನಾಗರೀಕರಿಂದ ಅರ್ಜಿಯನ್ನು ಆಹ್ವಾನಿಸಿದೆ. ವಿವರಗಳು ಈ ಕೆಳಕಂಡಂತಿದೆ.
ಅಥ್ಲೆಟಿಕ್ಸ್, ಚಿಕ್ಕಮಗಳೂರು ಜಿಲ್ಲೆ–01, ಅಥ್ಲೆಟಿಕ್ಸ್, ಕಾರವಾರ ಜಿಲ್ಲೆ–01, ಅಥ್ಲೆಟಿಕ್ಸ್, ಮಂಡ್ಯ ಜಿಲ್ಲೆ–01, ಅಥ್ಲೆಟಿಕ್ಸ್, ಬಳ್ಳಾರಿ ಜಿಲ್ಲೆ–01, ಬಾಕ್ಸಿಂಗ್, ವಿದ್ಯಾನಗರ ತರಬೇತಿ ಕೇಂದ್ರ, ಬೆಂಗಳೂರು ನಗರ ಜಿಲ್ಲೆ–01, ಫುಟ್ಬಾಲ್, ಚಿಕ್ಕಬಳ್ಳಾಪುರ ಜಿಲ್ಲೆ–01, ಹಾಕಿ, ಶಿವಮೊಗ್ಗ ಜಿಲ್ಲೆ–01.
ಮಾಸಿಕ ಸಂಚಿತ ವೇತನ, ವಿದ್ಯಾರ್ಹತೆ ಮತ್ತು ಇತರೆ ಅರ್ಹತೆ ಮಾನದಂಡ ವಿವರಗಳು ಈ ಕೆಳಕಂಡಂತಿದೆ.
ತರಬೇತುದಾರರು :– 1. ಪದವಿ ಮತ್ತು ರಾಷ್ಟ್ರೀಯ ಕ್ರೀಡಾ ಸಂಸ್ಥೆ (ಎನ್ ಎಸ್–ಎನ್‌ಐಎಸ್) / ಭಾರತೀಯ ಕ್ರೀಡಾ ಪ್ರಾಧಿಕಾರ ಸಂಸ್ಥೆಯಿಂದ ಆಯಾ ಕ್ರೀಡೆಯಲ್ಲಿ ಒಂದು ವರ್ಷದ ಅವಧಿ ತರಬೇತಿಯಲ್ಲಿ ಡಿಪ್ಲೊಮೊ ಪಡೆದಿರಬೇಕು ಅಥವಾ ಏಷಿಯನ್ ಕ್ರೀಡಾಕೂಟ ಮತ್ತು ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಪಡೆದಿರಬೇಕು ಅಥವಾ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿರಬೇಕು. (ಮಾಸಿಕ ಸಂಚಿತ ವೇತನ ರೂ 39,960–00)
ಅರ್ಜಿ ಮತ್ತು ಇನ್ನಿತರೆ ಪೂರಕ ದಾಖಲೆಗಳನ್ನು ದಿನಾಂಕ 16–12–2024 ರಂದು ಸಂಜೆ 4.00 ಗಂಟೆಯೊಳಗೆ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–56001 ಇವರಿಗೆ ಸಲ್ಲಿಸಬೇಕಾಗಿರುತ್ತದೆ. ಈ ಸಂಬಂಧ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಸಂದರ್ಶನವನ್ನು ದಿನಾಂಕ 21–12–2024 ರಂದು ಮಧ್ಯಾಹ್ನ 3.30 ಗಂಟೆಗೆ ಮೇಲೆ ತಿಳಿಸಿರುವ ಸ್ಥಳದಲ್ಲಿ ನಡೆಸಲಾಗುವುದು. ಅರ್ಜಿ ನಮೂನೆ ಮತ್ತು ಹೆಚ್ಚಿನ ಮಾಹಿತಿಯ ಅಧಿಸೂಚನೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೆಬ್‌ಸೈಟ್ dyes.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/–
ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಹಾಗೂ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ
ಬೆಂಗಳೂರು
DIPR/CP/3511/Zen/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
ಟೆಂಡರ್ ಪ್ರಕಟಣೆ ಸಂಖ್ಯೆ:12/2024–25 ದಿನಾಂಕ: 28.11.2024

–:ಟೆಂಡರ್ ಪ್ರಕಟಣೆ :–

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಕೊಪ್ಪ, ಮೂಡಿಗೆರೆ, ನ.ರಾ.ಪುರ, ಶೃಂಗೇರಿ ಮತ್ತು ತರೀಕೆರೆ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ.47.73 ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ ರೂ.3.00 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KW-1&2 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ,ಡಾಕ್ಯೂಮೆಂಟ್ ಗಳನ್ನು ದಿನಾಂಕ:28.11.2024 ರಿಂದ ದಿನಾಂಕ:13.12.2024 ರ ವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:16.12.2024 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:19.12.2024 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್,ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆಂಗೇರಿ ವಿಭಾಗ, ಆರ್‌ಆರ್ ನಗರ ವಲಯ,
ಬಿಬಿಎಂಪಿ ಕಛೇರಿ ಕಟ್ಟಡ, ಸಿಎ ನಂ. 3, 1ನೇ ಮುಖ್ಯರಸ್ತೆ, ಹೊರ ವರ್ತುಲ ರಸ್ತೆ,
ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು–560 060.
ಸಂ: ಕಾಪಾಅ/ಕೆಂವಿ/ಟೆಂಡರ್/14/2024–25 ದಿನಾಂಕ: 29.11.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಆರ್‌ಆರ್ ನಗರ ವಲಯ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ
1	ವಾರ್ಡ್ ಸಂಖ್ಯೆ 26, ದೊಡ್ಡಬಿದರಕಲ್ಲಿನ ಪೂರ್ಣಪ್ರಜ್ಞ ಬಡಾವಣೆ, ಸುಪ್ರಭಾತ ಬಡಾವಣೆ ಮತ್ತು ಪಿಳ್ಳಣ್ಣ ಬಡಾವಣೆಯಲ್ಲಿ ಚರಂಡಿ, ರಸ್ತೆಗಳು ಮತ್ತು ಇತರ ಮೂಲಭೂತ ಸೌಕರ್ಯಗಳ ಸುಧಾರಣಾ ಕಾಮಗಾರಿ. ಟೆಂಡರ್‌ನ ಅಂದಾಜು ಮೌಲ್ಯ: ರೂ. 398.71 ಲಕ್ಷಗಳು. ಇಎಂಡಿ: ರೂ. 5,98,500/–
2	ವಾರ್ಡ್ ಸಂಖ್ಯೆ 27, ಲಿಂಗಧೀರನಹಳ್ಳಿಯ ಅಂದ್ರಹಳ್ಳಿ, ಬಾಲಾಜಿ ಬಡಾವಣೆ, ವಿದ್ಯಮಾನ್ಯ ನಗರ ಬಡಾವಣೆಯಲ್ಲಿ ಚರಂಡಿ, ರಸ್ತೆಗಳು ಮತ್ತು ಇತರ ಮೂಲಭೂತ ಸೌಕರ್ಯಗಳ ಸುಧಾರಣಾ ಕಾಮಗಾರಿ. ಟೆಂಡರ್‌ನ ಅಂದಾಜು ಮೌಲ್ಯ: ರೂ. 398.70 ಲಕ್ಷಗಳು. ಇಎಂಡಿ: ರೂ. 5,98,500/–

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್‌ನಿಂದ ದಿನಾಂಕ: 02.12.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2)ಪೂರ್ವಭಾವಿ ಸಭೆ ದಿನಾಂಕ: 07.12.2024ರ ಅಪರಾಹ್ನ 3.00 ಗಂಟೆಗೆ. 3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.12.2024ರ ಸಂಜೆ 4.00 ಗಂಟೆಯವರೆಗೆ. 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 12.12.2024ರ ಸಂಜೆ 4.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಅಥವಾ ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ ಜಿಲ್ಲೆ, ಯಾದಗಿರಿ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ: 08473 253288 E-mail : ka.yadgiri.dudc@gmail.com
ಫ್ಯಾಕ್ಸ್: 08473 253701 : dudc_yadgiri@yahoo.com
Website : www.yadgiridudc.mrc.gov.in
ಕಡತ ಸಂಖ್ಯೆ/ಜಿನಕೋ/ಯೋಜನೆ/ನ.ಹಂ–4/ /2024–25 ದಿನಾಂಕ: 28.11.2024

~:ಅಲ್ಪಾವಧಿ ಇ–ಟೆಂಡರ ಪ್ರಕಟಣೆ:~(ಇ–ಪ್ರೋಕ್ಯುರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು – 1999 ಹಾಗೂ ನಿಯಮಾವಳಿಗಳು –2000 ರಂತೆ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೋದಾಯಿಸಿದ (ರೆಜಿಸ್ಟ್ರೇಷನ್) ಏಜೆನ್ಸಿದಾರರಿಂದ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ kppp.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಅಧಿಕಾರಿಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
01) ಟೆಂಡರ್‌ಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: 28.11.2024 02) ಪೂರ್ವಭಾವಿ ಸಭೆ ದಿನಾಂಕ: 30.11.2024 03) ಟೆಂಡರ್ ಬಗ್ಗೆ ಮಾಹಿತಿ ಮತ್ತು ಸ್ಪಷ್ಟಿಕರಣ ಕೋರುವ ಕೊನೆಯ ದಿನಾಂಕ: 03.12.2024 04) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 07.12.2024 Time :04.00PM 05) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 09.12.2024 Time :11.30 AM 06) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ (ಸಾಧ್ಯವಾದಲ್ಲಿ): 11.12.2024 Time :11.30 AM.
1) ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT19082/Call-4. ವಿವರ: Construction of Toilet Room in Rakangera area Community ward No-21,Samudaya Bhavana Ganganagara at Ward No-16, Samudaya Bhavana Ganganagara at Ward No-19, Bus Shelter Near Degree College at Ward No-08, Providing Street light From BB Main Road CB Kaman to diggi Agasi Road at Ward No-07 and From Sangameshwara school (Halabhavi Road Near Nala Culvert) to Palki House at Ward No-31 and Arch Construction of the Road Leading Bapunagar at Ward No-08 in Shahapur Town. ಅಂದಾಜು ಮೊತ್ತ (ಲಕ್ಷಗಳಲ್ಲಿ): 107.81. ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ): 1,34,150/-.
ಷರತ್ತು: ಟೆಂಡರ್ ಡಾಕ್ಯೂಮೆಂಟ್‌ನ ಷರತ್ತಗಳ ಪ್ರಕಾರ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/315/ಕೆ.ಎಸ್.ಎಂ.ಸಿ.&ಎ/2024–25



ಕಾಳಜಿ

ವಯಸ್ಸಾಗುವ ಭಯವಿದ್ದರೆ...

ಡಾ. ಬ್ರಹ್ಮಾನಂದ ನಾಯಕ

ಬೆಳಿಗ್ಗೆ ಕನ್ನಡಿಯ ಮುಂದೆ ನಿಂತಾಗ ಮೊದಲ ಸುಕ್ಕು ಕಾಣಿಸಿತು. ಹೊಸ ಬಿಳಿ ಕೂದಲು ಬೆಳಕಿಗೆ ಹೊಳೆಯಿತು. ಮಂಜುಳಾಳ ಕೈಗಳು ನಡುಗಿದವು. ಕಣ್ಣುಗಳು ಒದ್ದೆಯಾದವು. ನಲವತ್ತೇಳರ ಹರೆಯದಲ್ಲಿ ಸಿಇಒ ಆಗಿದ್ದರೂ, ಆಕೆಯ ವಿಶ್ವಾಸ ಕುಸಿಯುತ್ತಿತ್ತು. ಆದರೆ ಮಂಜುಳಾ ಒಬ್ಬಳೇ ಅಲ್ಲ - ಪ್ರತಿ ಮಹಿಳೆಯ ಕನ್ನಡಿಯೂ ಒಂದು ದಿನ ಇಂತಹ ಸತ್ಯವನ್ನು ಹೇಳುತ್ತದೆ. ಆದರೆ ಈ ಸುಕ್ಕುಗಳು? ಇವು ನಮ್ಮ ನಗುವಿನ ಗೆರೆಗಳು. ಈ ನರೆ ಕೂದಲುಗಳು? ಇವು ನಮ್ಮ ಅನುಭವದ ಕಿರೀಟ. ಹೌದು, ವಯಸ್ಸಾಗುವುದು ಒಂದು ಅಧ್ಯಾಯದ ಮುಕ್ತಾಯವಲ್ಲ - ಅದು ಹೊಸ ಕಥೆಯ ಆರಂಭ.

ಇತ್ತೀಚಿನ ಮನೋವೈಜ್ಞಾನಿಕ ಸಂಶೋಧನೆಗಳು ಒಂದು ಆಶ್ಚರ್ಯಕರ ಸತ್ಯವನ್ನು ಬಯಲುಮಾಡಿವೆ. ನಲವತ್ತರ ನಂತರದ ವರ್ಷಗಳು ಮಹಿಳೆಯರ 'ಸುವರ್ಣ ಕಾಲ'. ಈ ವಯಸ್ಸಿನಲ್ಲಿ ಅವರ ಆತ್ಮವಿಶ್ವಾಸ ತನ್ನ ಪರಾಕಾಷ್ಠೆಗೆ ತಲುಪುತ್ತದೆ. ಅನುಭವದ ಪರಿಪಕ್ವತೆ, ಆರ್ಥಿಕ ಸ್ವಾವಲಂಬನೆ, ಮತ್ತು ಮಾನಸಿಕ ದೃಢತೆ ಒಟ್ಟುಗೂಡಿ ಅವರನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತವೆ. ಇದು ಕೇವಲ ಸ್ವಾತಂತ್ರ್ಯದ ಕಾಲವಲ್ಲ - ಇದು ಸ್ವಪ್ನಗಳನ್ನು ನನಸಾಗಿಸುವ ಕಾಲ.

ನಮ್ಮ ಪರಂಪರಾಗತ ಆಯುರ್ವೇದದಲ್ಲಿ ವಯಸ್ಸಾಗುವುದನ್ನು ಒಂದು ಸಹಜ ಪ್ರಕ್ರಿಯೆಯಾಗಿ ನೋಡಲಾಗಿದೆ. ನನ್ನ 25 ವರ್ಷಗಳ ವೈದ್ಯಕೀಯ ಅನುಭವದಲ್ಲಿ, ಈ ಭಯವನ್ನು ಜಯಿಸಿದ ಅನೇಕ ಮಹಿಳೆಯರನ್ನು ನೋಡಿದ್ದೇನೆ. 65 ವರ್ಷದ ಲತಾ ಮೇಡಂ ಇಂದು ಯೋಗ ಶಿಕ್ಷಕಿಯಾಗಿ ಯಶಸ್ವಿ ಜೀವನ ನಡೆಸುತ್ತಿದ್ದಾರೆ. 'ವಯಸ್ಸು ಕೇವಲ ಸಂಖ್ಯೆ' ಎನ್ನುತ್ತಾರೆ ಅವರು ನಗುತ್ತಾ.

ವಯಸ್ಸಾಗುವುದು ಜೀವನದ ಸಹಜ ಹರಿವು ಎಂದು ಆಯುರ್ವೇದ ಹೇಳುತ್ತದೆ. ಈ ನೈಸರ್ಗಿಕ ಪಯಣವನ್ನು ಆರೋಗ್ಯಕರವಾಗಿ ಸ್ವೀಕರಿಸಲು ಪುರಾತನ ಗ್ರಂಥಗಳು ಸರಳ ಮಾರ್ಗವನ್ನು ತೋರುತ್ತವೆ. ಪ್ರತಿ ದಿನ ಅಭ್ಯಂಗ ಸ್ನಾನ, ತ್ರಿಫಲಾ-ಅಶ್ವಗಂಧ ಸೇವನೆ, ಮತ್ತು ಯೋಗ-ಧ್ಯಾನ ಅಭ್ಯಾಸದಿಂದ ದೇಹ-ಮನಸ್ಸುಗಳ ಸಮತೋಲನ ಸಾಧ್ಯ. ಇದರಿಂದ ವಯೋಸಹಜ ಬದಲಾವಣೆಗಳನ್ನು ಆತ್ಮವಿಶ್ವಾಸದಿಂದ ಎದುರಿಸಬಹುದು.

ಸ್ಟಾಕ್‌ಹೋಮ್ ವಿಶ್ವವಿದ್ಯಾಲಯದ 2023ರ ಅಧ್ಯಯನವು ತೋರಿಸಿದಂತೆ, ನಿಯಮಿತ ವ್ಯಾಯಾಮ, ಸಮತೋಲಿತ ಆಹಾರ, ಮತ್ತು ಸಕಾರಾತ್ಮಕ ಮನೋಭಾವ ಹೊಂದಿರುವ ಮಹಿಳೆಯರು ವಯಸ್ಸಾಗುವ ಭಯವನ್ನು ಉತ್ತಮವಾಗಿ ನಿಭಾಯಿಸುತ್ತಾರೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ವಯೋವೃದ್ಧರನ್ನು ಗೌರವಿಸುವ ಪರಂಪರೆ ಇದೆ. ಆದರೆ, ಆಧುನಿಕ ಜಗತ್ತಿನಲ್ಲಿ ಸೌಂದರ್ಯದ ಮಾನದಂಡಗಳು ಅನೇಕ ಮಹಿಳೆಯರ ಮೇಲೆ ಒತ್ತಡ ಹೇರುತ್ತಿವೆ.

ಸಾಮಾಜಿಕ ಬೆಂಬಲ ಗುಂಪುಗಳು, ಧ್ಯಾನ, ಮತ್ತು ಮಾನಸಿಕ ಆರೋಗ್ಯತಜ್ಞರ ಸಹಾಯ ಪಡೆಯುವುದರಿಂದ ಈ ಭಯವನ್ನು ನಿವಾರಿಸಬಹುದು. ಮುಂಬೈನ ಡಾ. ಮೀನಾಕ್ಷಿ ಶರ್ಮಾ ಅವರ ಸಂಶೋಧನೆ ತೋರಿಸುವಂತೆ, ಮಧ್ಯವಯಸ್ಸಿನ ಮಹಿಳೆಯರಲ್ಲಿ ಹೊಸ ಕೌಶಲಗಳನ್ನು ಕಲಿಯುವುದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ.

ಇತ್ತೀಚಿನ ಜಾಗತಿಕ ಅಧ್ಯಯನವೊಂದರ ಪ್ರಕಾರ, ಸಕ್ರಿಯ ಜೀವನಶೈಲಿ, ಸಾಮಾಜಿಕ ಸಂಪರ್ಕಗಳು, ಮತ್ತು ನಿರಂತರ ಕಲಿಕೆಯಿಂದ ವಯಸ್ಸಾಗುವ ಪ್ರಕ್ರಿಯೆಯನ್ನು ಸಕಾರಾತ್ಮಕವಾಗಿ ಎದುರಿಸಬಹುದು. ವಯಸ್ಸಾಗುವುದು ಒಂದು ಹೊಸ ಅಧ್ಯಾಯದ ಆರಂಭ. ಈ ಸತ್ಯವನ್ನು ಅರ್ಥಮಾಡಿಕೊಂಡಾಗ, ಭಯ ಕರಗಿ ಹೋಗುತ್ತದೆ, ಆತ್ಮವಿಶ್ವಾಸ ಮೂಡುತ್ತದೆ.

ಹಾರ್ವರ್ಡ್ ವಿಶ್ವವಿದ್ಯಾಲಯದ ಇತ್ತೀಚಿನ ಅಧ್ಯಯನದ ಪ್ರಕಾರ, ನಮ್ಮ ಮನಸ್ಥಿತಿ ನಮ್ಮ ದೇಹದ ವಯಸ್ಸಾಗುವ ಪ್ರಕ್ರಿಯೆಯ ಮೇಲೆ ನೇರ ಪ್ರಭಾವ ಬೀರುತ್ತದೆ. 'ನಾನು ಮುದುಕಿಯಾಗುತ್ತಿದ್ದೇನೆ' ಎಂಬ ನಕಾರಾತ್ಮಕ ಆಲೋಚನೆಗಳು ಶರೀರದ ರೋಗನಿರೋಧಕ ಶಕ್ತಿಯನ್ನು ಕುಗ್ಗಿಸುತ್ತವೆ.

ನನ್ನ ಕ್ಲಿನಿಕ್‌ಗೆ ಬರುವ 58 ವರ್ಷದ ಕಮಲಾ ಅವರು ಹೇಳುತ್ತಾರೆ: 'ನನ್ನ ಮೊಮ್ಮಕ್ಕಳ ಜೊತೆ ಆಟವಾಡುವಾಗ, ನನ್ನ ವಯಸ್ಸು ಮರೆತೇ ಹೋಗುತ್ತದೆ!' ಅವರ ಈ ಮಾತು ವಯಸ್ಸಾಗುವುದನ್ನು ಸ್ವೀಕರಿಸುವ ಸಕಾರಾತ್ಮಕ ದೃಷ್ಟಿಕೋನದ ಉದಾಹರಣೆ.

ಯೌವನವೆಂಬುದು ಜನ್ಮಪತ್ರದ ದಿನಾಂಕವಲ್ಲ, ಅದು ಮನಸ್ಸಿನ ಮಿಡಿತ. ಕಾಲದ ಹೆಜ್ಜೆಗಳು ಮುಂದೆ ಸಾಗಿದಂತೆ, ನಮ್ಮೊಳಗಿನ ಚೈತನ್ಯದ ಬೆಳಕು ಮತ್ತಷ್ಟು ಪ್ರಜ್ವಲಿಸುತ್ತದೆ. ವಯಸ್ಸಾದಂತೆ ದೊರೆಯುವ ಸಮಯವು ಕೇವಲ ವಿಶ್ರಾಂತಿಯ ಅವಧಿಯಲ್ಲ - ಅದು ನಮ್ಮ ಎರಡನೇ ವಸಂತದ ಆರಂಭ. ಇದನ್ನು ಸದುಪಯೋಗಿಸಿಕೊಳ್ಳಲು ಕೆಲವು ಸುವರ್ಣ ಸೂತ್ರಗಳಿವೆ: ನಿಮ್ಮ ಪ್ರತಿ ದಿನವನ್ನು ಸಾಹಸದ ಕಥೆಯನ್ನಾಗಿಸಿ! ಬೆಳಗ್ಗೆ ಸೂರ್ಯನ ಮೊದಲ ಕಿರಣಗಳೊಂದಿಗೆ ಎದ್ದು, ಉದ್ಯಾನದಲ್ಲಿ ಹೊಸ ಮಿತ್ರರೊಂದಿಗೆ ನಡೆದಾಡಿ. ಮನೆಯ ತೋಟದಲ್ಲಿ ಯೋಗಾಸನ ಮಾಡಿ, ಮಕ್ಕಳಿಂದ ಹೊಸ ತಂತ್ರಜ್ಞಾನ ಕಲಿಯಿರಿ. ಸಂಜೆ ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ - ಇದು ಮನಸ್ಸಿಗೆ ನಿತ್ಯ ಚೈತನ್ಯ. ವಾರಾಂತ್ಯದಲ್ಲಿ ಹೊಸ ಸವಾಲುಗಳನ್ನು ಸ್ವೀಕರಿಸಿ - ಒಂದು ದಿನ ರಂಗೋಲಿ, ಮತ್ತೊಂದು ದಿನ ಕಥೆ ಹೇಳುವ ಕಲೆ, ಮುಂದಿನ ಸಲ ಸಂಗೀತ ವಾದ್ಯ. ತಿಂಗಳಿಗೊಮ್ಮೆ ಹೊಸ ಸ್ಥಳ, ಹೊಸ ರುಚಿ, ಹೊಸ ಕಲೆ - ಇದು ಜೀವನಕ್ಕೆ ನವಚೈತನ್ಯ. ನಿಮ್ಮ ನಗು ಮತ್ತು ಆನಂದವೇ ನಿಮ್ಮ ಯೌವನದ ದೀಪ - ಅದನ್ನು ನಿತ್ಯ ಹೊತ್ತಿಸಿ ಇಡಿ! ನಿಮ್ಮ ವಯಸ್ಸು ಕೇವಲ ಸಂಖ್ಯೆ; ನಿಮ್ಮ ಉತ್ಸಾಹವೇ ನಿಮ್ಮ ನಿಜವಾದ ವಯಸ್ಸು.

> ವಯಸ್ಸಾಗುವುದು ಜೀವನದ ಸಹಜ ಪ್ರಕ್ರಿಯೆ. ಪ್ರತಿ ಸುಕ್ಕೂ ನಮ್ಮ ಜೀವನದ ಕಥೆ ಹೇಳುತ್ತದೆ, ಪ್ರತಿ ನರೆಕೂದಲೂ ನಮ್ಮ ಅನುಭವದ ಸಾಕ್ಷಿ

ಮುಂಬೈನ ವೃದ್ಧಾಶ್ರಮದಲ್ಲಿ ನಡೆದ ಅಧ್ಯಯನವು ತೋರಿಸಿದಂತೆ, ದಿನಾಲು 30 ನಿಮಿಷ ಯೋಗ ಮತ್ತು ಧ್ಯಾನ ಮಾಡುವ ಮಹಿಳೆಯರಲ್ಲಿ ಒತ್ತಡ ಮತ್ತು ಆತಂಕ ಗಣನೀಯವಾಗಿ ಕಡಿಮೆಯಾಗಿದೆ. ನಮ್ಮ ಭಾರತೀಯ ಪರಂಪರೆಯಲ್ಲಿರುವ ಪ್ರಾಣಾಯಾಮ ಮತ್ತು ಧ್ಯಾನದ ತಂತ್ರಗಳು ಇಂದು ವೈಜ್ಞಾನಿಕವಾಗಿ ಸಾಬೀತಾಗಿವೆ.

ಯೌವನದ ರಹಸ್ಯ ನಿಮ್ಮ ಅಡುಗೆಮನೆಯಲ್ಲಿದೆ! ಬಣ್ಣಬಣ್ಣದ ಹಣ್ಣುಗಳೇ ನಮ್ಮ ಯೌವನದ ಮಂತ್ರ - ಕೆಂಪು ದ್ರಾಕ್ಷಿ, ಬ್ಲೂಬೆರಿ, ಸ್ಟ್ರಾಬೆರಿ, ಕಿವಿ, ಮತ್ತು ದಾಳಿಂಬೆಯಲ್ಲಿರುವ ಆ್ಯಂಟಿ ಆಕ್ಸಿಡೆಂಟ್‌ಗಳು ಚರ್ಮವನ್ನು ಯುವವಾಗಿಡುತ್ತವೆ. ಹಸಿರು ತರಕಾರಿಗಳ ಶಕ್ತಿ ಅಪಾರ - ಪಾಲಕ್, ಬ್ರೊಕೊಲಿ, ಮೊಳಕೆ ಕಾಳುಗಳು, ಮತ್ತು ಮೂಲಂಗಿ ಎಲೆಗಳು ರಕ್ತವನ್ನು ಶುದ್ಧಗೊಳಿಸುತ್ತವೆ. ನಮ್ಮ ಪಾರಂಪರಿಕ ಸಿರಿಧಾನ್ಯಗಳಾದ ರಾಗಿ, ನವಣೆ, ಸಜ್ಜೆ ಮೂಳೆಗಳನ್ನು ಬಲಪಡಿಸುತ್ತವೆ. ಬೇವು, ಮೆಂತ್ಯ, ಸಬ್ಬಾ, ಮತ್ತು ತುಳಸಿ - ಇವು ನಮ್ಮ ದೇಹದ ನೈಸರ್ಗಿಕ ಔಷಧಿಗಳು. ಪ್ರತಿದಿನ ಒಂದು ಬಾಳೆಹಣ್ಣು, ಎರಡು ಬಾದಾಮಿ, ಮತ್ತು ಮೂರು ಅಂಜೂರ - ಇದು ಯೌವನದ ಸರಳ ಸೂತ್ರ. ಆದರೆ, ಜಾಗರೂಕರಾಗಿ - ಸಕ್ಕರೆ, ಸಂಸ್ಕರಿಸಿದ ಆಹಾರ, ಮತ್ತು ಪ್ಯಾಕೇಜ್ಡ್ ಸ್ನ್ಯಾಕ್ಸ್ ನಮ್ಮ ಯೌವನದ ವೈರಿಗಳು. ನೆನಪಿಡಿ: ನಿಮ್ಮ ಆರೋಗ್ಯದ ಕೈಗಡಿಯಾರ ನಿಮ್ಮ ಊಟದ ತಟ್ಟೆಯಲ್ಲಿದೆ!

ದೆಹಲಿಯ 62 ವರ್ಷದ ಸರೋಜಾ ಗುಪ್ತಾ ಅವರು ಆನ್‌ಲೈನ್ ವ್ಯಾಪಾರ ಆರಂಭಿಸಿದರು. 'ವಯಸ್ಸು ನಮ್ಮನ್ನು ತಡೆಯಲಾರದು' ಎನ್ನುತ್ತಾರೆ ಅವರು. ಅಂತರ್ಜಾಲದ ಮೂಲಕ ಅವರು ಹೊಸ ಪೀಳಿಗೆಯೊಂದಿಗೆ ಸಂಪರ್ಕದಲ್ಲಿದ್ದಾರೆ.

ಜಾಗತಿಕ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ, 2025ರ ವೇಳೆಗೆ ಭಾರತದಲ್ಲಿ 60 ವರ್ಷ ಮೇಲ್ಪಟ್ಟ ಮಹಿಳೆಯರ ಸಂಖ್ಯೆ 18 ಕೋಟಿ ದಾಟಲಿದೆ. ಈ ಬದಲಾವಣೆಯನ್ನು ಸ್ವಾಗತಿಸಲು ನಾವು ಸಿದ್ಧರಾಗಬೇಕು.

ನಮ್ಮ ಅಜ್ಜಿಯರ ಸೌಂದರ್ಯ ರಹಸ್ಯಗಳು ಇಂದಿನ ವಿಜ್ಞಾನದಲ್ಲೂ ಸಾಬೀತಾಗಿವೆ. ಪ್ರಮುಖವಾದ ಕೆಲವು ಸರಳ ಮನೆಮದ್ದುಗಳು: ತೆಂಗಿನೆಣ್ಣೆ ಮತ್ತು ಅರಿಶಿನ ಪುಡಿಗೆ ಒಂದು ಹನಿ ನಿಂಬೆರಸ ಸೇರಿಸಿ ಮುಖಕ್ಕೆ ಹಚ್ಚಿದರೆ ಚರ್ಮ ಮೃದುವಾಗುತ್ತದೆ. ಇಲ್ಲವೇ ಅಲೋವೇರಾ ಜೆಲ್ ಮತ್ತು ಗ್ಲಿಸರಿನ್ ಮಿಶ್ರಣ ಬಳಸಬಹುದು. ಈ ಎರಡೂ ವಿಧಾನಗಳು ದುಬಾರಿ ಕ್ರೀಮ್‌ಗಳಿಗಿಂತ ಹೆಚ್ಚು ಪರಿಣಾಮಕಾರಿ.

ಹಾಲಿನಲ್ಲಿ ಶತಾವರಿ ಪುಡಿ, ಕೇಸರಿ ಮತ್ತು ಬಾದಾಮಿ ಬೆರೆಸಿ ಕುಡಿದರೆ ಒಳಗಿನಿಂದ ಕಾಂತಿ. ನವಣೆ, ಮೆಂತ್ಯ ಮತ್ತು ಕಾಮ ಕಸ್ತೂರಿ ಬೀಜಗಳ ಪೇಸ್ಟ್ ಸುಕ್ಕುಗಳನ್ನು ನಿವಾರಿಸುತ್ತದೆ. ಖರ್ಜೂರ-ಬಾದಾಮಿ-ಎಳನೀರಿನ ಪಾನೀಯ ಚರ್ಮಕ್ಕೆ ಪೋಷಣೆ ನೀಡುತ್ತದೆ. ಗುಲಾಬಿ ಹೂವಿನ ನೀರು ಮತ್ತು ಮೆಂತ್ಯ ನೀರಿನ ಸ್ಪ್ರೇ ಚರ್ಮವನ್ನು ತಂಪಾಗಿಡುತ್ತದೆ. ಆದರೆ ನೆನಪಿರಲಿ - ಸರಿಯಾದ ನಿದ್ರೆ, ನಿಯಮಿತ ಯೋಗಾಭ್ಯಾಸ, ಸಾಕಷ್ಟು ನೀರಿನ ಸೇವನೆ, ಮತ್ತು ಸಂತೋಷದ ಜೀವನ - ಇವೇ ನಿಜವಾದ ಸೌಂದರ್ಯದ ಮೂಲಮಂತ್ರಗಳು.

ಪ್ರತಿ ಸುಕ್ಕೂ ನಮ್ಮ ಜೀವನದ ಕಥೆ ಹೇಳುತ್ತದೆ, ಪ್ರತಿ ನರೆಕೂದಲೂ ನಮ್ಮ ಅನುಭವದ ಸಾಕ್ಷಿ. ಇಂದಿನ ಆಧುನಿಕ ಮಹಿಳೆ ಈ ಜೀವನ ಯಾತ್ರೆಯ ಪ್ರತಿ ಕ್ಷಣವನ್ನು ಹೆಮ್ಮೆಯಿಂದ ಆಲಿಂಗಿಸಬೇಕು. ವಯಸ್ಸಾಗುವುದು ಒಂದು ಕನ್ನಡಿಯಲ್ಲ, ಅದು ಹೊಸ ಕನಸುಗಳ ಕಿಟಕಿ. ❖

ಆಡು ಹುಲಿ ಆಟ

ಬರಲಿ ಮನೆಗೆ 'ಆಡು-ಹುಲಿ'

ರೂಪಾ ಕೆ.ಎಂ.

ಈಗೀಗ ಮೊಬೈಲ್ ಹಿಡಿದು ದ್ವೀಪಗಳಂತೆ ಬದುಕುವುದು, ಆ ಬದುಕಿನಲ್ಲಿಯೇ ಎಲ್ಲ ತರಹದ ಖುಷಿ, ಸಂತೋಷ ಕಾಣುವುದು ಸಾಮಾನ್ಯವೆಂಬಂತಾಗಿದೆ. ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ಕಲೆತು, ಬೆರೆತಾಗಲೂ ಮೊಬೈಲ್ ಎಂಬ ಮಾಯಾವಿ ಆಗ್ಗಾಗ್ಗೆ ಮಿಣುಕಿ ತನ್ನ ಇರುವಿಕೆಯನ್ನು ತೋರ್ಪಡಿಸುತ್ತದೆ. ಎಂಥ ಜನಸಂದಣಿಯೇ ಇರಲಿ; ಕುಟುಂಬದ ಸಮಾರಂಭಗಳೇ ಆಗಲಿ, 'ನನ್ನನ್ನು ನೋಡು' ಎಂದು ಮೊಬೈಲ್ ಹೇಳುವಂತೆ, ನಾವು ಪದೇ ಪದೇ ಅದನ್ನೊಮ್ಮೆ ಮುಟ್ಟಿ, ಮಾತನಾಡಿಸಿ ಸಮಾಧಾನಗೊಂಡಂತೆ ಕಾಣುತ್ತೇವೆ.

ತನುಶ್ರೀ

ಸಂಬಂಧಗಳೆಲ್ಲ ಸಡಿಲವಾಯ್ತು, ಆ ಕಾಲ ಈಗಿಲ್ಲ. ಒಟ್ಟಾಗಿ ಕುಳಿತು, ಪಟ್ಟಾಗಿ ಆಡುತ್ತಿದ್ದ ಚನ್ನಮಣೆ, ಅಳುಗುಳಿ ಮನೆ, ಗುಡ್ನ, ಪಗಡೆಯಾಟ ಎಲ್ಲಿ ಮಾಯವಾದವು? ಎಂದು ಹಳೆಯದರ ಕುರಿತ ಹಳಹಳಿಕೆ ನಿಂತಿಲ್ಲ. ಮೊಬೈಲ್‌ನಲ್ಲಿ 'ವರ್ಚುವಲ್ ಪಗಡೆ'ಯಾಟ ಇರುವ ಆ್ಯಪ್‌ಗಳೇನೋ ಸಿಗುತ್ತವೆ. ಆದರೆ, ಒಟ್ಟಾಗಿ ಕುಳಿತು, ಪಗಡೆ ಹಾಕಿ ಆಡುತ್ತಿದ್ದ ಪಗಡೆ ಹಾಸು ಎಲ್ಲಿ ಹೋದವು.

ಚೌಕಾಬಾರಾ

ಇಂಥ ಪಾರಂಪರಿಕ ಆಟ ಹಾಗೂ ಅವುಗಳ ಪರಿಕರಗಳನ್ನು ಆಧುನೀಕರಣಕ್ಕೆ ಒಗ್ಗಿಸಿ, ಹೊಸ ವಿನ್ಯಾಸ ನೀಡಿದ್ದಾರೆ ಮೈಸೂರಿನ ತನುಶ್ರೀ ಎಸ್.ಎನ್.

ಹೊಸತನದ ಅಗತ್ಯಗಳನ್ನು ಮನಗಂಡು ತಾಪ್ಲಾ, ನವಕಂಕರಿ (ಸಾಲು ಮನೆಯಾಟ, ಟಿಕ್ ಟ್ಯಾಕ್‌ನ ಆಧುನಿಕ ರೂಪ), ಚೌಕಾಬಾರ (ಐದು, ಏಳು, ಒಂಬತ್ತು, ಹನ್ನೊಂದು) ದಕ್ಷಿಣ ಭಾರತ ಹಾಗೂ ಉತ್ತರ ಭಾರತದಲ್ಲಿ ಆಡುವ ವಿಭಿನ್ನ ಪಗಡೆಯಾಟಗಳು, ಹಾವು ಏಣಿಯಾಟ, ವಿಮಾನಂ, ತಾಂಜಾವೂರಂ ಕಟ್ಟಂ, ಶೊಲೋ ಗುಟ್ಟಿ ಹೀಗೆ ಇಪ್ಪತ್ತಕ್ಕೂ ಹೆಚ್ಚು ಆಟಗಳ ಮಾದರಿಯನ್ನು, ಅವುಗಳಿಗೆ ಬೇಕಾದ ಪರಿಕರಗಳನ್ನು ವಿನ್ಯಾಸಗೊಳಿಸಲಾಗಿದೆ.

ಈ ಪಾರಂಪರಿಕ ಒಳಾಂಗಣ ಆಟಗಳು ಮಿದುಳನ್ನು ಚುರುಕುಗೊಳಿಸುವ ಆಟಗಳೆಂದೇ ಪ್ರಸಿದ್ಧಿ ಪಡೆದುಕೊಂಡಿವೆ. ಮಗಳೊಮ್ಮೆ ದೇಗುಲದ ಹೊರಾಂಗಣದ ಕೆತ್ತನೆಯಲ್ಲಿ ಕಂಡ 'ಗುಳಿ'ಯನ್ನು ಕಂಡು ಇದೇನು? ಎಂದು ಕೇಳಿದ್ದಳು. ಅಲ್ಲಿಂದ ಪ್ರೇರಣೆ ಪಡೆದು, ಬೇಲೂರು, ಹಳೆಬೀಡು, ಚಾಮುಂಡಿ ಬೆಟ್ಟ, ಬಳ್ಳಿಗಾವೆ, ಕುರುವತ್ತಿ ಹೀಗೆ ಯಾವುದೇ ದೇಗುಲಕ್ಕೆ ಭೇಟಿ ಕೊಟ್ಟರೂ ಅಲ್ಲಿನ ಕೆತ್ತನೆಯಲ್ಲಿದ್ದ ದೇಸಿ ಆಟಗಳ ಕಡೆಗೆ ಗಮನ ಹೋಗುತ್ತಿತ್ತು. ಪಾರಂಪರಿಕ ಆಟಗಳ ಬಗ್ಗೆ ಇದ್ದ ಕುತೂಹಲ, ಸಂಶೋಧನೆ ಹೆಚ್ಚಾಯಿತು. ಅದರ ಫಲವೇ ಪಾರಂಪರಿಕ ಆಟಗಳ ಹೊಸ ವಿನ್ಯಾಸದ ಉದ್ಯಮ ಎನ್ನುತ್ತಾರೆ ತನುಶ್ರೀ .

ಪಗಡೆಯಾಟ

ಮಕ್ಕಳಿಗಾಗಿ ಗೇಮ್ ಬೋರ್ಡ್

ಬಹುತೇಕ ಮಕ್ಕಳಿಗೆ ಚೆಸ್ ಕಲಿಸಲು ಪೋಷಕರು ಉತ್ಸುಕರಾಗಿರುತ್ತಾರೆ. ಆದರೆ, ಚೆಸ್‌ಗೆ ಪೂರ್ವ ತಯಾರಿಯಾಗಿ ನವಕಂಕರಿ ಮತ್ತು ಶೊಲೋ ಗುಟ್ಟಿ ಆಟಗಳನ್ನು ಆಡಲು ಕಲಿತರೆ ಚೆಸ್ ಆಟಕ್ಕೆ ಅಗತ್ಯವಿರುವ ಪಟ್ಟುಗಳನ್ನು ಕಲಿಯಲು ಸಹಾಯವಾಗುತ್ತದೆ. ಶೊಲೋ ಗುಟ್ಟಿ 16 ಯೋಧರ ದಾಳವಿರುವ ಆಟ. ಮಿದುಳನ್ನು ಕ್ರಿಯಾಶೀಲಗೊಳಿಸಲು ಅಗತ್ಯವಿರುವ ದೇಸಿ ಆಟಗಳಿವು. ಆಡು –ಹುಲಿಯಾಟ ತಂತ್ರಗಾರಿಕೆಯ ಆಟವಾಗಿದ್ದರಿಂದ ಮಿದುಳು ಚುರುಕಾಗಲು, ಒತ್ತಡ ನಿವಾರಣೆಗೆ ಸಹಕಾರಿ. ಹಿರಿಯ ನಾಗರಿಕರಲ್ಲಿ ಮರೆವಿನ ಶಕ್ತಿಯಿದ್ದರೆ, ಇದರ ಬಳಕೆಯಿಂದ ಲಾಭವಾಗುತ್ತದೆ. ತರ್ಕಿಸುವ ಮನೋಭಾವ ಹೆಚ್ಚಿಸುತ್ತದೆ ಎನ್ನುತ್ತಾರೆ ತನುಶ್ರೀ.

ದೇಶದ ಯಾವುದೇ ಭಾಗಗಳಿಗೆ ಹೋದರೂ ಒಳಾಂಗಣದ ಆಟಗಳೆಲ್ಲವೂ ಬೇರೆ ಬೇರೆ ಹೆಸರಿನಲ್ಲಿ ಕರೆದರೂ ಬಹುತೇಕ ಒಂದೇ ರೀತಿ ಇರುತ್ತವೆ. ಆದರೆ, ಆಡುವ ವಿಧಾನ, ನಿಯಮಗಳು ತುಸು ಭಿನ್ನವಾಗಿರುತ್ತವೆ.

ಪೌರಾಣಿಕ ಕಥೆ ಹೇಳುವ ಪಝಲ್

ಮಕ್ಕಳಿಗಾಗಿ ವಿಷ್ಣುವಿನ ದಶಾವತಾರ, ರಾಮಾಯಣ, ಮಹಾಭಾರತ ಪಝಲ್ಸ್, ಚೆಸ್, ಬೋರ್ಡ್‌ಗಳಿವೆ. ಚಿಕ್ಕವಯಸ್ಸಿನ ಮಕ್ಕಳಿಗೆ ಬಾರ್ಬಿ, ಸ್ಪೈಡರ್ ಮ್ಯಾನ್, ಸೂಪರ್‌ಮ್ಯಾನ್ ಗಳಿರುವ ಪಝಲ್ ಬೋರ್ಡ್ ಗೊತ್ತು. ಆದರೆ, ಈ ನೆಲದ ಕಥೆಗಳನ್ನು, ಪೌರಾಣಿಕ ಕಥೆಗಳನ್ನು ಈ ಪಝಲ್ಸ್ ಬೋರ್ಡ್ ಮೂಲಕ ಕಲಿಸಬಹುದು. ಇದರ ಜತೆಗೆ ಬಣ್ಣ ಹಚ್ಚುವ ಶೀಟ್‌ಗಳಿರುತ್ತವೆ. ಹೆಚ್ಚಿನ ಮಾಹಿತಿಗೆ ಕ್ಯುಆರ್ ಕೋಡ್ ಕೂಡ ನೀಡಲಾಗಿದೆ.



ರಾಮಾಯಣದ ಪಝಲ್ ಬೋರ್ಡ್

ಐದು ವರ್ಷಗಳಿಂದ ಈ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ಸಾಫ್ಟ್‌ವೇರ್ ಎಂಜಿನಿಯರ್ ಹುದ್ದೆ ಬಿಟ್ಟು ಪತಿ ಶಶಿಶೇಖರ. ಎಸ್ ಅವರೊಂದಿಗೆ ಈ ಕೆಲಸದಲ್ಲಿ ನಿರತರಾಗಿದ್ದಾರೆ. ಈ ಪರಿಕರಗಳೆಲ್ಲವೂ ಪರಿಸರಸ್ನೇಹಿಯಾಗಿದ್ದು, ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಕೊಡುವಷ್ಟು ಬಾಳಿಕೆ ಬರುತ್ತದೆ ಎನ್ನುವ ಖಚಿತತೆ ಅವರದ್ದು. ವೈವಿಧ್ಯ ಆಟಗಳ ಪರಿಕರಗಳನ್ನು ನೋಡಲು https://rollthedice.in/collections/all ಸಂಪರ್ಕಿಸಬಹುದು. ಹೊಸ ವರ್ಷ ಸಮೀಪದಲ್ಲಿದೆ. ಮನೆಮಂದಿಯೆಲ್ಲ ಸೇರಿ, ಹೊಸ ವರ್ಷವನ್ನು ಬರಮಾಡಿಕೊಳ್ಳುವಾಗ ಇಂಥ ದೇಸಿ ಆಟಗಳ ಪರಿಕರಗಳಿದ್ದರೆ ಎಷ್ಟು ಚಂದ ಅಲ್ವಾ. ❖

ಚಳಿಗೆ ಓಂಕಾಳಿನ ವೈವಿಧ್ಯ

ರಸಾಸ್ವಾದ

ಕೆ.ವಿ.ರಾಜಲಕ್ಷ್ಮಿ

ಅಜವಾನ, ಓಂಕಾಳು ಹೀಗೆ ನಾನಾ ಹೆಸರುಗಳಿಂದ ಕರೆಸಿಕೊಳ್ಳುವ ಓಂಕಾಳು ಚಳಿಯ ವಾತಾವರಣಕ್ಕೆ ಉತ್ತಮವಾದದ್ದು. ಚಳಿಗಾಲದಲ್ಲಿ ಇದರ ಸೇವನೆಯಿಂದ ಜೀರ್ಣಶಕ್ತಿಯನ್ನು ಕಾಪಾಡಿಕೊಳ್ಳುವುದಲ್ಲದೇ, ಚರ್ಮಕ್ಕೂ ಉತ್ತಮ. ಇವುಗಳ ರೆಸಿಪಿ ಹೀಗಿವೆ.

ಜೀರ್ಣಕಾರಕ ಪುಡಿ

ಬೇಕಾಗುವ ಸಾಮಗ್ರಿ : ಓಂಕಾಳು 1/2 ಕಪ್, ಜೀರಿಗೆ 1/4 ಕಪ್, ಸೋಂಪು 1/4 ಕಪ್.

ಮಾಡುವ ವಿಧಾನ: ಬಾಣಲೆಯಲ್ಲಿ ಓಂಕಾಳನ್ನು 1 ಚಮಚ ತುಪ್ಪದಲ್ಲಿ ಸಣ್ಣ ಉರಿಯಲ್ಲಿ ಪರಿಮಳ ಬರುವವರೆಗೆ ಹುರಿದುಕೊಳ್ಳಿ. ನಂತರ ಅದೇ ಬಾಣಲಿಯಲ್ಲಿ ಜೀರಿಗೆ ಮತ್ತು ಸೋಂಪನ್ನು ಹುರಿಯಿರಿ. ಮೂರೂ ಪದಾರ್ಥಗಳು ತಣಿದ ನಂತರ ನುಣ್ಣಗೆ ಅರೆದರೆ ಸುವಾಸನೀಯ, ಆರೋಗ್ಯಕರ ಜೀರ್ಣವರ್ಧಕ ಪುಡಿ ಸಿದ್ಧ. ಗಾಳಿಯಾಡದ ಡಬ್ಬದಲ್ಲಿ ಶೇಖರಿಸಿಟ್ಟುಕೊಳ್ಳಬಹುದು. ಊಟವಾದ ಬಳಿಕ ಈ ಪುಡಿಯನ್ನು ತುಸು ಬೆಲ್ಲದೊಂದಿಗೆ ಮೆಲ್ಲಬಹುದು. ಪಾನೀಯ ಬೇಕಾದಲ್ಲಿ ಒಂದು ಲೋಟ ನೀರಿಗೆ ಒಂದು ಚಮಚ ಪುಡಿ ಹಾಕಿ ಕುದಿಸಿ, ಶೋಧಿಸಿ ಅರ್ಧ ಚಮಚ ಜೇನುತುಪ್ಪ ಸೇರಿಸಿ ಸೇವಿಸಬಹುದು.

ತೆಂಗಿನತುರಿ ಭಾತ್

ಬೇಕಾಗುವ ಸಾಮಗ್ರಿ: ಉದುರು ಅನ್ನ 2 ಕಪ್, ಹಸಿ ತೆಂಗಿನ ತುರಿ, ಒಣಕೊಬ್ಬರಿ ತುರಿ ತಲಾ 4 ಚಮಚ, ಸಣ್ಣಗೆ ಹೆಚ್ಚಿದ ಕಾಪ್ಸಿಕಮ್ 2 ಚಮಚ, ಗೋಡಂಬಿ 8-10, ಓಂಕಾಳು 1 ಚಮಚ, ರುಚಿಗೆ ತಕ್ಕಷ್ಟು ಉಪ್ಪು. ತುಪ್ಪ 2 ಚಮಚ. .

ಮಾಡುವ ವಿಧಾನ: ಒಣಕೊಬ್ಬರಿ ಮತ್ತು ಹಸಿಕೊಬ್ಬರಿಯನ್ನು ಅರೆದುಕೊಳ್ಳಿ. ಬಾಣಲಿಗೆ ತುಪ್ಪ ಹಾಕಿ ಓಂಕಾಳು, ಗೋಡಂಬಿಯನ್ನು ಹುರಿದು ನಂತರ ಕಾಪ್ಸಿಕಮ್ ಸೇರಿಸಿ ಬಾಡಿಸಿ, ಅರೆದ ತೆಂಗಿನ ಮಿಶ್ರಣ, ಉಪ್ಪು ಸೇರಿಸಿ ಹೊಂಬಣ್ಣ ಬರುವವರೆಗೆ ಹುರಿಯಿರಿ. ನಂತರ ಉರಿಯಾರಿಸಿ ಅನ್ನ ಸೇರಿಸಿ ಮಿಶ್ರಣ ಮಾಡಿ.

ಓಂಕಾಳಿನ ಸಾಗು

ಬೇಕಾಗುವ ಸಾಮಗ್ರಿ: ಅಲಸಂದಿ ಕಾಯಿ 5-6,, ಕ್ಯಾರೆಟ್1, ಆಲೂಗಡ್ಡೆ1, ಈರುಳ್ಳಿ1,ಕ್ಯಾಪ್ಸಿಕಮ್1/2, ಟೊಮೆಟೊ 1 ಮತ್ತು ಸ್ವೀಟ್ ಕಾರ್ನ್ 1/4 ಕಪ್, ಓಂಕಾಳು 1 ಚಮಚ, ಹುರಿಗಡಲೆ 2 ಚಮಚ, ತೆಂಗಿನತುರಿ 1/4 ಕಪ್, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಮೇಲೆ ಹೇಳಿದ ತರಕಾರಿಗಳನ್ನು ಸಣ್ಣಗೆ ಹೆಚ್ಚಿಕೊಳ್ಳಿ. ಮಸಾಲೆಗೆ, ತೆಂಗಿನತುರಿ, ಓಂಕಾಳು ಮತ್ತು ಹುರಿಗಡಲೆಗೆ ಸ್ವಲ್ಪ ನೀರು ಸೇರಿಸಿ ನುಣ್ಣಗೆ ಅರೆದುಕೊಳ್ಳಿ. ಕುಕ್ಕರಿನಲ್ಲಿ ಒಗ್ಗರಣೆಗೆ ಸಾಸಿವೆ ಸಿಡಿಸಿ, ತರಕಾರಿ, ಉಪ್ಪು ಹಾಕಿ ಒಂದೆರಡು ನಿಮಿಷ ಹುರಿದು ನಂತರ ರುಬ್ಬಿದ ಮಸಾಲೆ, ಎರಡು ಕಪ್ ನೀರು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಮುಚ್ಚಳ ಮುಚ್ಚಿ, ಮಧ್ಯಮ ಉರಿಯಲ್ಲಿ ಒಂದು ಸೀಟಿ ಕೂಗಿಸಿ.

ಓಂಕಾಳಿನ ಪೂರಿ

ಬೇಕಾಗುವ ಸಾಮಗ್ರಿ: ಗೋಧಿಹಿಟ್ಟು 2 ಕಪ್, ಓಂಕಾಳು 1 ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಎಣ್ಣೆ.

ಮಾಡುವ ವಿಧಾನ : ಗೋಧಿಹಿಟ್ಟಿಗೆ, ಅಂಗೈಯಲ್ಲಿ ಮಸೆದ ಓಂಕಾಳು, ಉಪ್ಪು ನಾಲ್ಕರಿಂದ ಐದು ಚಮಚದಷ್ಟು ಎಣ್ಣೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿಕೊಂಡು ನಂತರ ಸ್ವಲ್ಪ ನೀರುಸೇರಿಸಿ ಹಿಟ್ಟು ಅಣಿಮಾಡಿಕೊಳ್ಳಿ. ನಂತರ ಸಣ್ಣ ಸಣ್ಣ ಉಂಡೆಗಳನ್ನು ಮಾಡಿಕೊಂಡು ಸ್ವಲ್ಪ ಮಂದವಾಗಿ ಲಟ್ಟಿಸಿ ಕಾದ ಎಣ್ಣೆಯಲ್ಲಿ ಕರಿದರೆ ಪರಿಮಳಯುಕ್ತ ಪೂರಿ ರೆಡಿ.

ಒಣಚರ್ಮದ ಆರೈಕೆ

ಚಳಿಗಾಲದಲ್ಲಿ ಚರ್ಮ ಒಣಗಿದಂತಾಗಿ, ಬಿರುಕು ಬಿಡುವುದು, ಉರಿ , ತುರಿಕೆ ಕಾಣಿಸಿಕೊಳ್ಳುವುದರಿಂದ ಆದಷ್ಟು ಚರ್ಮದ ಆರೈಕೆ ಮಾಡುವುದು ಅತ್ಯವಶ್ಯ.

ಒಣ ಚರ್ಮವನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಪೂರಕವಾದ ಆಹಾರ ಸೇವನೆ ಮಾಡುವುದು ತುಂಬಾ ಮುಖ್ಯ. ಅತಿಯಾದ ಚಳಿ ಇರುವುದರಿಂದ ನೀರು ಕುಡಿಯುವ ಅಭ್ಯಾಸವನ್ನು ಗೊತ್ತಿಲ್ಲದ ಹಾಗೆ ಕಡಿಮೆ ಮಾಡಿಕೊಂಡಿರುತ್ತೇವೆ. ಇದರಿಂದ ನಿರ್ಜಲೀಕರಣ ಸಮಸ್ಯೆ ಉಂಟಾಗಿ ಚರ್ಮ ಇನ್ನಷ್ಟು ಒಣಗಿದಂತಾಗುತ್ತದೆ. ಚರ್ಮವನ್ನು ಆರೋಗ್ಯವಾಗಿಡಲು ದೇಹಕ್ಕೆ ಅಗತ್ಯವಿರುವಷ್ಟು ನೀರು ಕುಡಿಯಲೇಬೇಕು. ಕನಿಷ್ಠ ಎರಡು ಲೀಟರ್ ನೀರಿನ ಸೇವನೆ ಅಗತ್ಯ. ಚಳಿಗಾಲದಲ್ಲಿ ಋತುಮಾನಕ್ಕೆ ಸಿಗುವ ವಿವಿಧ ಹಣ್ಣುಗಳ ರಸ ಸೇವನೆ, ಮಜ್ಜಿಗೆ ಹುಲ್ಲು, ಶುಂಠಿ ಹಾಗೂ ಒಂದೆರಡು ಗಾಂಧಾರಿ ಮೆಣಸನ್ನು ಅರೆದು, ಅದರ ರಸವನ್ನು ಹದವಾಗಿ ಬೆರೆಸಿ ಮಾಡಿದ ನೀರು ಮಜ್ಜಿಗೆಯ ಸೇವನೆಯೂ ಒಳ್ಳೆಯದು. ಪಾಲಕ್, ಒಂದೆಲಗದ ತಂಬುಳಿಗಳು ಕೂಡ ಚಳಿಗಾಲಕ್ಕೆ ಒಳ್ಳೆಯದು. ತೆಂಗಿನ ಕಾಯಿ ತುರಿಯನ್ನು ಚೆನ್ನಾಗಿ ಅರೆದು, ಅದರಿಂದ ಬರುವ ಹಾಲಿಗೆ ಸ್ವಲ್ಪ ಬೆಲ್ಲ ಮಿಶ್ರಣ ಮಾಡಿ ನಿಯಮಿತವಾಗಿ ಸೇವನೆ ಮಾಡಿದರೆ ಒಣ ಚರ್ಮದ ಸಮಸ್ಯೆಯನ್ನು ನೀಗಿಸಬಹುದು. ಚಳಿಗೆ ವಾತಾವರಣದಲ್ಲಿ ತೇವಾಂಶ ಹೆಚ್ಚಿದ್ದರೆ, ಬ್ಯಾಕ್ಟೀರಿಯಾ ಹಾಗೂ ಶಿಲೀಂಧ್ರಗಳು ಕ್ರಿಯಾಶೀಲವಾಗಿರುತ್ತವೆ. ಅವುಗಳಿಂದ ಚರ್ಮದ ಸೋಂಕು ಉಂಟಾಗಬಹುದು. ದೇಹದೊಳಗೆ ನಂಜಿನ ಅಂಶ ಹೆಚ್ಚಾಗಿ ಚರ್ಮದ ಮೇಲೆ ಸಣ್ಣ ಸಣ್ಣ ಗುಳ್ಳೆಗಳು, ಅಲರ್ಜಿ ಉಂಟಾಗಬಹುದು. ಇದಕ್ಕಾಗಿ ವಾರಕ್ಕೊಮ್ಮೆ ಹಾಗಲಕಾಯಿ ರಸವನ್ನು ಒಂದು ಕಾಳು ಉಪ್ಪಿನೊಂದಿಗೆ ಸೇವಿಸಬಹುದು.

ಸ್ನಾನಕ್ಕೆ ಆದಷ್ಟು ಬೆಚ್ಚಗಿನ ನೀರು ಬಳಸಿ. ತೆಂಗಿನ ಎಣ್ಣೆ ಅಥವಾ ಬೇವಿನ ಎಣ್ಣೆಯ ಕೆಲವು ಹನಿಗಳನ್ನು ಬೆರೆಸಿದ ನೀರಿನಲ್ಲಿ ಸ್ನಾನ ಮಾಡುವುದು ಇನ್ನೂ ಒಳ್ಳೆಯದು. ಸಾಧ್ಯವಾದಷ್ಟು ಮೃದುವಾದ ಸೋಪು ಹಾಗೂ ಶ್ಯಾಂಪುಗಳನ್ನು ಬಳಸಿ. ರಾಸಾಯನಿಕಮುಕ್ತ, ಸುವಾಸನೆ ಮುಕ್ತ ಸೋಪುಗಳನ್ನು ಬಳಸಿ. ಆದಷ್ಟು ಗ್ಲಿಸರಿನ್‌ಯುಕ್ತ, ಆಡಿನ ಹಾಲು, ಶಿಯಾ ಬಟರ್ ಅಥವಾ ಆಲಿವ್ ಎಣ್ಣೆಗಳಿಂದ ಮಾಡಿದ ಸೋಪುಗಳನ್ನು ಬಳಸಿ.

ಸ್ನಾನ ದೀರ್ಘವಾಗಿದ್ದರೆ, ನೀರು ಬಿಸಿಯಾಗಿದ್ದರೆ ಚರ್ಮಕ್ಕೆ ಹಾನಿ ಹೆಚ್ಚು. ಮೃದುತ್ವ ಕಳೆದುಕೊಂಡು ಚರ್ಮ ಒರಟು ಎನಿಸುತ್ತದೆ. ಸಾಧ್ಯವಾದಷ್ಟು ಹಗುರವಾದ, ಸಡಿಲವಾದ ಬಟ್ಟೆಯನ್ನು ಧರಿಸಿ. ವೈದ್ಯರ ಶಿಫಾರಸ್ಸಿಲ್ಲದೇ ಕಂಡ ಕಂಡ ಕ್ರೀಮು, ಸೋಪುಗಳನ್ನೆಲ್ಲ ಹಚ್ಚಬೇಡಿ. ಮನೆ ಮದ್ದಿನಲ್ಲಿ ಅಡ್ಡಪರಿಣಾಮಗಳಿಲ್ಲವೆಂದು ಚರ್ಮದ ಮೇಲೆ ಪ್ರಯೋಗ ಮಾಡಿದರೆ, ಚರ್ಮದ ನೈಸರ್ಗಿಕ ಗುಣವೇ ಅಳಿದು ಹೋಗುವ ಸಾಧ್ಯತೆ ಇರುತ್ತದೆ. ಸಾಧ್ಯವಾದಷ್ಟು ಹೊರಗೆ ಹೋಗುವಾಗ ಬೆಚ್ಚಗಿನ ಬಟ್ಟೆಗಳನ್ನು ತೊಡಿ. ಎಸ್‌ಪಿಎಫ್ 30 ಅಥವಾ ಅದಕ್ಕಿಂತ ಹೆಚ್ಚಿರುವ ಸನ್‌ಸ್ಕ್ರೀನ್ ಬಳಸಲು ಮರೆಯದಿರಿ. ❖

ಬಹುಬೇಗ ಹರೆಯ ಆತಂಕ ಬೇಡ

ಸ್ಪಂದನ

ಡಾ. ವೀಣಾ ಎಸ್. ಭಟ್

- **ನನ್ನ ಎರಡನೇ ಮಗಳಿಗೆ 9 ವರ್ಷ. ಸ್ತನಗಳು ಬೆಳವಣಿಗೆಯಾಗಿವೆ. ಋತುಚಕ್ರ ಆರಂಭವಾಗಬಹುದು ಎಂದು ಅನಿಸುತ್ತದೆ. ದೊಡ್ಡ ಮಗಳಿಗೆ 13ನೇ ವಯಸ್ಸಿಗೆ ಆಗಿತ್ತು. ಈ ಬಗ್ಗೆ ಮುಂಜಾಗ್ರತೆ ವಹಿಸಬೇಕೇ?**

ಇದು ಹಲವು ಪಾಲಕರ ಸಮಸ್ಯೆ. ಮಕ್ಕಳು ಹರೆಯಕ್ಕೆ ಬೇಗನೇ ಕಾಲಿಡುತ್ತಿದ್ದು, ಬಾಲ್ಯದ ಅವಧಿ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಮಕ್ಕಳಲ್ಲಿ ಕಡಿಮೆಯಾಗುತ್ತಿರುವ ದೈಹಿಕ ಚಟುವಟಿಕೆ ಮತ್ತು ಜಂಕ್‌ಫುಡ್ ಸೇವನೆ. ಅತಿ ಕೊಬ್ಬಿನಿಂದಾಗಿ ಹೆಣ್ತನಕ್ಕೆ ಕಾರಣವಾಗುವ ಈಸ್ಟ್ರೋಜನ್ ಹಾರ್ಮೋನ್ ಹೆಚ್ಚಳಗೊಂಡು, ಬೇಗನೇ ಋತುಚಕ್ರ ಆರಂಭಕ್ಕೆ ಕಾರಣವಾಗುತ್ತದೆ. ಆಹಾರದಲ್ಲಿ ಯಥೇಚ್ಛವಾಗಿ ಬಳಕೆಯಾಗುತ್ತಿರುವ ರಾಸಾಯನಿಕಗಳು ಜತೆಗೆ ಹೆಚ್ಚು ಬಳಕೆಯಾಗುವ ಸೌಂದರ್ಯವರ್ಧಕಗಳು, ಸುಗಂಧದ್ರವ್ಯಗಳು ಹಾರ್ಮೋನಿನ ಅಸಮತೋಲನಕ್ಕ ಕಾರಣವಾಗುತ್ತದೆ. ಇನ್ನು ಕಡಿಮೆ ತೂಕದ ಮಕ್ಕಳು ಹುಟ್ಟಿ, ನಂತರ ಅತಿ ತೂಕ ಗಳಿಸುವ ಮಕ್ಕಳಲ್ಲಿ ಹರೆಯ ಬೇಗ ಕಾಣಿಸಿಕೊಳ್ಳುತ್ತದೆ. 8 ವರ್ಷದ ಒಳಗೆ ಹೆಣ್ಣುಮಕ್ಕಳು ಋತುಮತಿಯಾದರೆ, ಅದು ಅಕಾಲಿಕ ಹರೆಯ ಎನಿಸಿಕೊಳ್ಳುತ್ತದೆ. ನಿಮ್ಮ ಮಗಳಿಗೆ 9 ವರ್ಷ ಆಗಿರುವುದರಿಂದ 10 ವರ್ಷಕ್ಕೆ ಋತುಚಕ್ರ ಆರಂಭಗೊಳ್ಳಬಹುದು. ಇದು ಸಹಜ. ಚಿಂತೆ ಬೇಡ. ಬೊಜ್ಜು ಉಂಟಾಗದಂತ ಆಹಾರ ಸೇವನೆಯ ಬಗ್ಗೆ ಕಾಳಜಿ ವಹಿಸಿ. ಹೊರಾಂಗಣ ಆಟಗಳನ್ನು ಆಡುವಂತೆ ಉತ್ತೇಜಿಸಿ. ಸ್ಕ್ರೀನ್ ಬಳಕೆ ಕಡಿಮೆ ಮಾಡಿಸಿ. ಋತುಚಕ್ರ ಆರಂಭವಾದ ಮೇಲೆ ಸ್ವಚ್ಛತೆಯ ಕಡೆಗೆ ಗಮನ ನೀಡುವಂತೆ ಹೇಳಿ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

'ಮಹಾಯುತಿ' ಸಭೆ ನಾಳೆ ನಡೆಯುವ ಸಾಧ್ಯತೆ • ವೀಕ್ಷಕರ ನಿರೀಕ್ಷೆಯಲ್ಲಿ ಬಿಜೆಪಿ ಮುಖಂಡರು

'ಮಹಾ' ಸರ್ಕಾರ ರಚನೆ ಇನ್ನಷ್ಟು ವಿಳಂಬ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಫಲಿತಾಂಶ ಬಂದು ವಾರ ಕಳೆದರೂ 'ಮಹಾಯುತಿ' ಒಕ್ಕೂಟದ ಸರ್ಕಾರ ರಚನೆ ಇನ್ನೂ ಸ್ಪಷ್ಟರೂಪ ಪಡೆದಿಲ್ಲ. ಶುಕ್ರವಾರ ನಡೆಯಬೇಕಿದ್ದ ಮಿತ್ರಪಕ್ಷಗಳ ಸಭೆ ರದ್ದಾಗಿದ್ದು, ಭಾನುವಾರ ನಡೆಯುವ ಸಂಭವವಿದೆ.

ಮಿತ್ರಪಕ್ಷಗಳ ಚುನಾಯಿತ ಶಾಸಕರ ಸಭೆ ರದ್ದಾದ ಬೆನ್ನಲ್ಲೇ ಉಸ್ತುವಾರಿ ಸಿ.ಎಂ ಏಕನಾಥ ಶಿಂದೆ ಅವರು ದಿಢೀರ್ ತಮ್ಮ ಹುಟ್ಟೂರಿಗೆ ತೆರಳಿದರು.

'ಸಿ.ಎಂ ಯಾರು' ಎಂಬ ಕುತೂಹಲ ಮುಂದುವರಿದಿರುವಂತೆಯೇ, 'ನೂತನ ಸಿ.ಎಂ ಅವರ ಸಂಪುಟ ಸದಸ್ಯರ ಪ್ರಮಾಣವಚನ ಮುಂದಿನ ವಾರ ನಡೆಯಲಿದೆ' ಎಂದು ಮೂಲಗಳು ತಿಳಿಸಿವೆ. ಆದರೆ, ದಿನಾಂಕ ಸ್ಪಷ್ಟವಾಗಿಲ್ಲ.

ನವದೆಹಲಿಯಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಶಿಂದೆ ಅವರು, 'ಸರ್ಕಾರ ರಚನೆ ಕುರಿತು ಅಮಿತ್ ಶಾ ಅವರೊಂದಿಗೆ ಒಂದು ಸುತ್ತಿನ ಚರ್ಚೆ ನಡೆದಿದೆ. ಶುಕ್ರವಾರ ಮತ್ತೊಂದು ಸುತ್ತಿನ ಚರ್ಚೆ ನಡೆಯಲಿದೆ ಎಂದಿದ್ದರು.

ಮುಖ್ಯಾಂಶಗಳು
- ನವದೆಹಲಿ ಭೇಟಿ ಬಳಿಕ ರಾಜಧಾನಿಗೆ ಮರಳಿದ ಮಿತ್ರ ಪಕ್ಷಗಳ ನಾಯಕರು
- ಸತಾರಾ ಜಿಲ್ಲೆಯ ಹುಟ್ಟೂರಿಗೆ ತೆರಳಿದ ಉಸ್ತುವಾರಿ ಸಿ.ಎಂ ಏಕನಾಥ ಶಿಂದೆ
- ಡಿಸೆಂಬರ್ ಮೊದಲ ವಾರ ಸರ್ಕಾರ ರಚನೆ, ದಿನಾಂಕ ಅಸ್ಪಷ್ಟ

ಆದರೆ ಅಂತಹ ಸಭೆ ನಡೆಯಲಿಲ್ಲ. ನವದೆಹಲಿಯಿಂದ ವಾಪಸಾದ ಶಿಂದೆ ಶುಕ್ರವಾರ ಸಂಜೆಯೇ ಸತಾರಾ ಜಿಲ್ಲೆಯ ತಮ್ಮ ಹುಟ್ಟೂರಿಗೆ ತೆರಳಿದರು. 'ಹೊಸ ಸರ್ಕಾರ ರಚನೆಯ ಪ್ರಕ್ರಿಯೆಗೆ ಶಿಂದೆ ಅವರು ಅಡ್ಡಿ ಆಗುವುದಿಲ್ಲ' ಎಂದು ಶಿವಸೇನೆ ಬಣದ ನಾಯಕರು ಮತ್ತೊಮ್ಮೆ ಪುನರುಚ್ಚರಿಸಿದ್ದಾರೆ.

ಆದರೆ, ಹೊಸ ಸರ್ಕಾರದಲ್ಲಿ ಶಿಂದೆ ಪಾತ್ರ ಏನು ಎಂಬ ಬಗ್ಗೆ ಭಿನ್ನ ಅಭಿಪ್ರಾಯಗಳು ಕೇಳಿಬರುತ್ತಿವೆ. ಡಿಸಿಎಂ ಸ್ಥಾನ ಒಪ್ಪಿಕೊಳ್ಳಬೇಕು ಎಂದು ಒಂದು

ಏಕನಾಥ ಶಿಂದೆ

ಫಡಣವೀಸ್

ವರ್ಗ ಒತ್ತಾಯಿಸಿದರೆ, ಮತ್ತೊಂದು ವರ್ಗವು, 'ಎರಡೂವರೆ ವರ್ಷ ಸಿ.ಎಂ ಆಗಿದ್ದು, ಈಗ ಸಂಪುಟದಲ್ಲಿ ಎರಡನೇ ಸ್ಥಾನ ಒಪ್ಪಿಕೊಳ್ಳುವುದು ಸೂಕ್ತವಲ್ಲ' ಎಂಬ ವಾದವನ್ನು ಮುಂದಿಡುತ್ತಿದೆ.

'ಉಪ ಮುಖ್ಯಮಂತ್ರಿ ಸ್ಥಾನವನ್ನು ಒಪ್ಪುವ ಕುರಿತು ಶಿಂದೆ ಅವರೇ ಶೀಘ್ರ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ಒಂದು ವೇಳೆ ಅವರು ಡಿಸಿಎಂ ಸ್ಥಾನ ಒಪ್ಪದಿದ್ದರೆ, ಅದು ಪಕ್ಷದ ಮತ್ತೊಬ್ಬರಿಗೆ ದಕ್ಕಲಿದೆ' ಎಂದು ಮುಖಂಡ ಸಂಜಯ್ ಶಿರ್ಸಾಠ್ ಹೇಳಿದರು.

ಇನ್ನೊಂದೆಡೆ ರಾಜಧಾನಿ ಭೇಟಿ ಬಳಿಕ ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ಮುಂಬೈಗೆ ಮರಳಿದರು. ಬಿಜೆಪಿ ರಾಜ್ಯ ಘಟಕ ಈಗ ಕೇಂದ್ರ ವೀಕ್ಷಕರ ನಿರೀಕ್ಷೆಯಲ್ಲಿದೆ. ಫಡಣವೀಸ್ ಹಾಗೂ ಎನ್‌ಸಿಪಿ ನಾಯಕ ಅಜಿತ್ ಪವಾರ್ ಇಬ್ಬರೂ ದೆಹಲಿಯಲ್ಲಿ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಅಮಿತ್ ಶಾ ಅವರನ್ನು ಭೇಟಿಯಾಗಿ ಚರ್ಚಿಸಿದ್ದರು.

ಕಾಂಗ್ರೆಸ್ ಮುಖಂಡ ವಿಜಯ್ ವಡೆಟ್ಟಿವಾರ್ ಅವರು, 'ಒಂದು ವೇಳೆ ಫಡಣವೀಸ್ ಅವರೇ ಮುಖ್ಯಮಂತ್ರಿ ಯಾದರೆ, ಅವರು ತಮಗಿಂತಿರುವ 'ದ್ವೇಷದ ರಾಜಕಾರಣ' ಮಾಡುತ್ತಾರೆ ಎಂಬ ಅಭಿಪ್ರಾಯ ತೊಡೆದು ಹಾಕಬಹುದು ಎಂದು ಆಶಯ ವ್ಯಕ್ತಪಡಿಸಿದ್ದಾರೆ.

'ರಾಜಕಾರಣ ಎಂದಿಗೂ ಸಿದ್ಧಾಂತಗಳ ಹೋರಾಟ. ಅದು ವೈಯಕ್ತಿಕವಾದುದಲ್ಲ' ಎಂದು ಅವರು ಇದೇ ಸಂದರ್ಭದಲ್ಲಿ ಹೇಳಿದರು.

ಶಿಂದೆಗೆ ಬೇಸರವಾಗಿಲ್ಲ, ಆರೋಗ್ಯ ಹದಗೆಟ್ಟಿದೆ –ಶಿವಸೇನಾ ನಾಯಕ

ಮುಂಬೈ (ಪಿಟಿಐ): ಉಸ್ತುವಾರಿ ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ಬೇಸರವಾಗಿದೆ. ಅದೇ ಕಾರಣಕ್ಕೆ ಅವರು ದಿಢೀರ್ ತಮ್ಮ ಹುಟ್ಟೂರಿಗೆ ತೆರಳಿದ್ದಾರೆ ಎಂಬ ಅಭಿಪ್ರಾಯವನ್ನು ಶಿವಸೇನಾ ನಿರಾಕರಿಸಿದೆ.

ಸುದ್ದಿಗಾರರ ಜೊತೆಗೆ ಮಾತನಾಡಿದ ಶಿವಸೇನಾ ನಾಯಕ ಉದಯ್ ಸಾಮಂತ್ ಅವರು, 'ದೆಹಲಿಯಲ್ಲಿ ಅಮಿತ್ ಶಾ ಭೇಟಿಗೆ ತೆರಳಿದ್ದಾಗಲೇ ಅವರಿಗೆ ಆರೋಗ್ಯ ಸರಿ ಇರಲಿಲ್ಲ. ಅದಕ್ಕೆ ಅವರು ಹುಟ್ಟೂರಿಗೆ ತೆರಳಿದ್ದಾರೆ' ಎಂದರು.

ಮುಂದಿನ ಮುಖ್ಯಮಂತ್ರಿ ಯಾರು ಎಂಬ ಬಗ್ಗೆ ಬಿಜೆಪಿ ವರಿಷ್ಠರ ತೀರ್ಮಾನವನ್ನು ಒಪ್ಪಿಕೊಳ್ಳುವೆ ಎಂದು ಶಿಂದೆ ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಎಂದು ಅವರು ಉಲ್ಲೇಖಿಸಿದರು. ಮುಂಬೈನಲ್ಲಿ ಶಿಂದೆ, ಫಡಣವೀಸ್ ಮತ್ತು ಅಜಿತ್ ಪವಾರ್ ನಡುವೆ ನಡೆಯಬೇಕಿದ್ದ ಸಭೆ ಕುರಿತು ಗಮನಸೆಳೆದಾಗ, ಭೌತಿಕವಾಗಿ ಸಭೆ ನಡೆಸಲು ಆಗದಿದ್ದರೆ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾಡುತ್ತಾರೆ ಎಂದರು.

ಮತದಾರರ ಪಟ್ಟಿ ಪರಿಷ್ಕರಣೆ: ಅಕ್ರಮದ ಘಾಟು

ಮಹಾರಾಷ್ಟ್ರ: ಆಯೋಗಕ್ಕೆ ಕಾಂಗ್ರೆಸ್ ಪತ್ರ • ಆಡಳಿತಾರೂಢ ಪಕ್ಷಗಳಿಗೆ ಹೆಚ್ಚಿನ ಅನುಕೂಲ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮಹಾರಾಷ್ಟ್ರ ವಿಧಾನ ಸಭಾ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಭಾರಿ ಪ್ರಮಾಣದ ಪರಿಷ್ಕರಣೆ ಆಗಿರುವುದು ಅನುಮಾನ ಮೂಡಿಸಿದೆ. ಹಲವು ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದಿದ್ದರೆ, ಭಾರಿ ಸಂಖ್ಯೆಯಲ್ಲಿ ಮತದಾರರನ್ನು ಸೇರಿಸಲಾಗಿದೆ' ಎಂದು ಕಾಂಗ್ರೆಸ್ ಆರೋಪ ಮಾಡಿದೆ.

ಚುನಾವಣಾ ಆಯೋಗಕ್ಕೆ ಪತ್ರ ಬರೆದಿರುವ ಕಾಂಗ್ರೆಸ್, ಮತದಾರರ ಪಟ್ಟಿಯಲ್ಲಿ ಸುಮಾರು 50,000 ಮತದಾರರ ಹೆಸರು ಸೇರ್ಪಡೆಯಾಗಿದೆ. ಇಂತಹ 50 ಕ್ಷೇತ್ರಗಳ ಪೈಕಿ 47ರಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಜಯಗಳಿಸಿವೆ ಎಂದು ಹೇಳಿದೆ.

ಕೊನೆ ಗಂಟೆಯಲ್ಲಿ 76 ಲಕ್ಷ ಮತದಾನ: ಮತದಾನದ ದಿನವಾದ ನವೆಂಬರ್ 20ರಂದು ಸಂಜೆ 5ಕ್ಕೆ ಮತ್ತು ರಾತ್ರಿ 11.30ಕ್ಕೆ ಆಯೋಗ ಪ್ರಕಟಿಸಿದ ಶೇಕಡವಾರು ಮತದಾನದ ಅಂಕಿಅಂಶಗಳಲ್ಲಿ ಭಾರಿ ಪ್ರಮಾಣದ ಏರಿಕೆ ದಾಖಲಾಗಿರುವುದನ್ನು ಗುರುತಿಸಬಹುದಾಗಿದೆ. ಅದರ ಪ್ರಕಾರ ಮತದಾನದ ಕೊನೆಯ ಗಂಟೆಯಲ್ಲಿ 76 ಲಕ್ಷದಷ್ಟು ಜನರು ಮತ ಚಲಾಯಿಸಿದ್ದಾರೆ. ಈ ಬಗ್ಗೆ ಆಯೋಗ ಸ್ಪಷ್ಟ ಚಿತ್ರಣ ನೀಡಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಇದು ರಾಜ್ಯದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಆಗಿದೆಯೇ ಎಂಬುದರ ಬಗ್ಗೆ ಅನುಮಾನ ಮೂಡಿಸುತ್ತದೆ. ಈ ಬಗ್ಗೆ ಆಯೋಗ ಸ್ಪಷ್ಟನೆ ನೀಡಿ, ತನ್ನ ಹೊಣೆಗಾರಿಕೆಯನ್ನು ತೋರಬೇಕು ಎಂದು ಅದು ಒತ್ತಾಯಿಸಿದೆ. ಈ ಕುರಿತು ಕಾಂಗ್ರೆಸ್‌ನ ಹಿರಿಯ ನಾಯಕರಾದ ನಾನಾ ಪಟೋಲೆ, ರಮೇಶ್ ಚೆನ್ನಿತ್ತಲ ಮತ್ತು ಮುಕುಲ್ ವಾಸ್ನಿಕ್ ಅವರು ಆಯೋಗಕ್ಕೆ ಪತ್ರ ಬರೆದಿದ್ದಾರೆ.

ಪ್ರತಿ ಕ್ಷೇತ್ರದಲ್ಲೂ 10,000ದಷ್ಟು ಪರಿಷ್ಕರಣೆ: ಪ್ರತಿ ಕ್ಷೇತ್ರಗಳಲ್ಲೂ ಮತದಾರರ ಪಟ್ಟಿಯಲ್ಲಿನ ಮತದಾರರ ಸಂಖ್ಯೆಯಲ್ಲಿ ಸುಮಾರು 10,000ದಷ್ಟು ಪರಿಷ್ಕರಣೆಗಳಾಗಿವೆ. ಹಲವು ಮತದಾರರನ್ನು ಕೈಬಿಟ್ಟು ಮತ್ತು ಹಲವರನ್ನು ಸೇರಿಸಿರುವ ನಿದರ್ಶನಗಳಿವೆ. ಇದರ ಪರಿಣಾಮ ಈ ವರ್ಷದ ಜುಲೈ ಮತ್ತು ನವೆಂಬರ್ ನಡುವೆ ಸುಮಾರು 47 ಲಕ್ಷದಷ್ಟು ಮತದಾರರ ಸಂಖ್ಯೆಯಲ್ಲಿ ಏರಿಕೆ ಕಂಡು ಬಂದಿತ್ತು. ಈ ಬಗ್ಗೆ ಅಕ್ಟೋಬರ್ 19ರಂದು ಆಯೋಗಕ್ಕೆ ದೂರು ನೀಡಲಾಗಿತ್ತು. ಆದರೆ ಆಯೋಗ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಕಾಂಗ್ರೆಸ್ ಹೇಳಿದೆ.

ಲೋಕಸಭಾ ಮತ್ತು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗಳ ನಡುವಿನ ಐದು ತಿಂಗಳ ಅಂತರದಲ್ಲಿ ಮತದಾರರ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಇದು ಹೇಗೆ ಸಾಧ್ಯವಾಯಿತು? ಈ ರೀತಿಯ ಚುನಾವಣಾ ವಂಚನೆಯನ್ನು ತಡೆಯಲು ಆಯೋಗಕ್ಕೆ ಏಕೆ ಸಾಧ್ಯವಾಗಲಿಲ್ಲ ಎಂದು ಅದು ಪ್ರಶ್ನಿಸಿದೆ.

ಮತದಾನ ಪ್ರಮಾಣದಲ್ಲಿ ಏರಿಕೆ: ಮತದಾನದ ದಿನವಾದ ನವೆಂಬರ್ 20ರಂದು ಸಂಜೆ 5 ಗಂಟೆಗೆ ಶೇ 58.22ರಷ್ಟು ಮತದಾನ ನಡೆದಿತ್ತು ಎಂದು ಆಯೋಗ ಪ್ರಕಟಿಸಿತ್ತು. ಅದು ರಾತ್ರಿ 11.30ಕ್ಕೆ ಪ್ರಕಟಿಸಿದ ಮಾಹಿತಿ ಪ್ರಕಾರ ಮತದಾನದ ಪ್ರಮಾಣ ಶೇ 65.02ಕ್ಕೆ ಏರಿಕೆಯಾಗಿತ್ತು. ಅಲ್ಲದೆ ನವೆಂಬರ್ 23ರ ಮತ ಎಣಿಕೆ ದಿನದಂದು ಆಯೋಗವು ಮತದಾನದ ಪ್ರಮಾಣವನ್ನು ಶೇ 66.05ಕ್ಕೆ ಪರಿಷ್ಕರಿಸಿತ್ತು ಎಂದು ಕಾಂಗ್ರೆಸ್ ಅಂಕಿಅಂಶವನ್ನು ಉಲ್ಲೇಖಿಸಿದೆ.

ಅಲ್ಲದೆ ಮತಗಳ ಎಣಿಕೆಗೂ ಕೆಲವೇ ಗಂಟೆಗಳ ಮೊದಲು ಇನ್ನೂ ಸುಮಾರು 10 ಲಕ್ಷದಷ್ಟು ಮತಗಳು ಹೆಚ್ಚಳವಾಗಿವೆ. ಚುನಾವಣಾ ಇತಿಹಾಸದಲ್ಲಿಯೇ ಈ ರೀತಿಯದ್ದನ್ನು ಕೇಳಿರಲಿಲ್ಲ ಎಂದು ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿದೆ.

ನವದೆಹಲಿಯಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯಲ್ಲಿ ಪಕ್ಷದ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಚರ್ಚಿಸಿದರು. ಪಕ್ಷದ ನಾಯಕರಾದ ಕೆ.ಸಿ. ವೇಣುಗೋಪಾಲ್, ಅಜಯ್ ಮಾಕನ್ ಪಾಲ್ಗೊಂಡಿದ್ದರು– ಪಿಟಿಐ ಚಿತ್ರ

ಪಕ್ಷ ಬಲಪಡಿಸಲು 'ಕಠಿಣ ನಿರ್ಧಾರ' ಅಗತ್ಯ: ಖರ್ಗೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪಕ್ಷದಲ್ಲಿ ನವೋತ್ಸಾಹ ಮೂಡಿಸಿ, ಸಂಘಟನೆ ಬಲಪಡಿಸಲು, ಚುನಾವಣೆಗಳಲ್ಲಿ ಪಕ್ಷದ ಹೋರಾಟದ ಶೈಲಿಯನ್ನೇ ಬದಲಿಸಲು 'ಕಠಿಣ ನಿರ್ಧಾರ' ತೆಗೆದುಕೊಳ್ಳುವುದು ಅಗತ್ಯ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಪ್ರತಿಪಾದಿಸಿದ್ದಾರೆ.

ಏಕತೆಯ ಕೊರತೆ, ಪರಸ್ಪರರ ವಿರುದ್ಧ ಹೇಳಿಕೆ ನೀಡುವುದು, ನಕಾರಾತ್ಮಕ ಅಥವಾ ನಿರಾಸೆಯಿಂದ ಮಾತನಾಡುವ ಬೆಳವಣಿಗೆಗಳನ್ನು ಉಲ್ಲೇಖಿಸಿದ ಖರ್ಗೆ, 'ಪಕ್ಷಕ್ಕೆ ತನ್ನದೇ ಸಂಕಥನ ಇಲ್ಲದಿರುವುದು ಸಂಘಟನೆಗೆ ಪೆಟ್ಟು ನೀಡುತ್ತಿದೆ' ಎಂದು ಹೇಳಿದರು.

ಇಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ರಾಷ್ಟ್ರಮಟ್ಟದಲ್ಲಿ ಪಕ್ಷವು ಕೈಗೊಂಡ ನಿಲುವು ಮತ್ತು ಹೋರಾಟದ ಶೈಲಿಯನ್ನು ಸಮರ್ಥಿಸಿಕೊಂಡರು. ಕೆಲವರು ಪರಸ್ಪರರ ವಿರುದ್ಧ ನಕಾರಾತ್ಮಕವಾಗಿ ಮಾತನಾಡುತ್ತಿದ್ದಾರೆ. ಇದರಿಂದ ಪಕ್ಷದ ಹಿತಾಸಕ್ತಿಗೆ ಧಕ್ಕೆಯಾಗುತ್ತಿದೆ ಎಂದು ಹೇಳಿದರು.

ಇವಿಎಂ ಬಳಕೆ ಕುರಿತು ಪಕ್ಷದ ಟೀಕೆಗೂ ಆಕ್ಷೇಪಿಸಿದವರನ್ನು ಉದ್ದೇಶಿಸಿ, 'ಇ.ವಿ.ಎಂಗಳ ಬಳಕೆಯಿಂದಾಗಿ ಚುನಾವಣಾ ಪ್ರಕ್ರಿಯೆಯನ್ನೇ ಶಂಕಿಸುವಂತೆ ಆಗಿದೆ. ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಉತ್ತಮ ಸಾಧನೆಯ ಬಳಿಕ ಮಹಾರಾಷ್ಟ್ರದ ಫಲಿತಾಂಶದ ಸಮರ್ಥನೆಗೆ ಯಾವುದೇ ಅಂಕಗಣಿತ ಲೆಕ್ಕಾಚಾರದಿಂದ ಅಸಾಧ್ಯ' ಎಂದರು.

'ಲೋಕಸಭೆ ಚುನಾವಣೆಯ ಉತ್ತಮ ಫಲಿತಾಂಶದ ಬಳಿಕ ವಿಧಾನ ಸಭೆ ಚುನಾವಣೆಗಳಲ್ಲಿ ಹಿನ್ನಡೆ ಆಯಿತು. ಅದೇ ಕಾರಣಕ್ಕೆ ಈಗ ಕಠಿಣ ನಿರ್ಧಾರ ಅಗತ್ಯ. ರಾಜಕೀಯ ಪ್ರತಿಸ್ಪರ್ಧಿಗಳ ನಡೆಗಳನ್ನು ನಿತ್ಯ ಗಮನಿಸಬೇಕು ಸಕಾಲದಲ್ಲಿ ನಿರ್ಧಾರ ಕೈಗೊಳ್ಳಬೇಕಾಗಿದೆ' ಎಂದರು.

ಕಾರ್ಯಕಾರಿಣಿ ನಿರ್ಣಯ
- 'ಹೊಂದಾಣಿಕೆ ಚುನಾವಣಾ ಪ್ರಕ್ರಿಯೆ' ವಿರುದ್ಧ ರಾಷ್ಟ್ರೀಯ ಅಭಿಯಾನ ನಡೆಸಲು ನಿರ್ಧಾರ
- ವಿದ್ಯುನ್ಮಾನ ಮತಯಂತ್ರಗಳ ಬದಲಿಗೆ ಮತಪತ್ರ ಬಳಕೆ ಮರುಚಾಲನೆಗೆ ಆಗ್ರಹ
- ಸಂವಿಧಾನಕ್ಕೆ ಅನುಗುಣವಾಗಿ ಮುಕ್ತ, ನ್ಯಾಯಸಮ್ಮತ ಚುನಾವಣೆ ಅಗತ್ಯ

ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಸೋತಿರಬಹುದು. ಆದರೆ, ನಿರುದ್ಯೋಗ, ಆರ್ಥಿಕ ಅಸಮಾನತೆ, ಹಣದುಬ್ಬರ 'ಜ್ವಲಂತ ಸಮಸ್ಯೆ'ಗಳನ್ನು ಎಂದೂ ಮರೆಯಬಾರದು. ಜಾತಿಗಣತಿ ಕೂಡಾ ಮುಖ್ಯವಾದುದು
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

'ಹರಿಯಾಣ, ಮಹಾರಾಷ್ಟ್ರ, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್‌ನಲ್ಲಿ ಪಕ್ಷದ ಸಾಧನೆ ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಚುನಾವಣಾ ಫಲಿತಾಂಶದಿಂದ ಪಾಠ ಕಲಿತು ಲೋಪ, ದೌರ್ಬಲ್ಯಗಳನ್ನು ತಕ್ಷಣ ಸರಿಪಡಿಸಿಕೊಳ್ಳುವುದು ಈಗಿರುವ ಸವಾಲು' ಎಂದು ಹೇಳಿದರು.

ಒಗ್ಗಟ್ಟು ಇರಬೇಕು. ಒಗ್ಗಟ್ಟಿನಿಂದ ಎದುರಿಸದಿದ್ದರೆ, ಪರಸ್ಪರ ವಿರುದ್ಧದ ಹೇಳಿಕೆ ನಿಲ್ಲಿಸದಿದ್ದರೆ ರಾಜಕೀಯ ವಿರೋಧಿಗಳನ್ನು ಸೋಲಿಸುವುದಾದರೂ ಹೇಗೆ ಎಂದು ಖರ್ಗೆ ಪ್ರಶ್ನಿಸಿದರು.

ಪಕ್ಷದಲ್ಲಿ ಶಿಸ್ತಿನ ಅಸ್ತ್ರವಿದೆ. ಆದರೆ, ಅದನ್ನು ಪ್ರಯೋಗಿಸಲು ಬಯಸುವುದಿಲ್ಲ. ಪಕ್ಷದ ಒಟ್ಟು ಶಕ್ತಿಯಲ್ಲಿಯೇ ನಮ್ಮ ಶಕ್ತಿಯೂ ಇದೆ ಎಂದು ಅರ್ಥಮಾಡಿಕೊಳ್ಳಬೇಕು ಎಂದು ಖರ್ಗೆ ಅವರು ಪಕ್ಷದ ನಾಯಕರಿಗೆ ಕಟುವಾಗಿ ಹೇಳಿದರು.

ಅಭಿಯಾನ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಜೀವನೋಪಾಯ ಅಭಿಯಾನ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ.
4, ಮೈಶುಗರ್ ಕಟ್ಟಡ, ಜೆ.ಸಿ. ರಸ್ತೆ, ಟೌನ್ ಹಾಲ್ ಹತ್ತಿರ, ಬೆಂಗಳೂರು-560002.
ಇ-ಮೇಲ್: nrlmkarnataka@gmail.com
ಸಂಖ್ಯೆ: KSRLPS/DDUG/GEN/43/2024-DDUGKY ದಿನಾಂಕ: 28-11-2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದಲ್ಲಿ ಸಂಜೀವಿನಿ–ಕೆ.ಎಸ್.ಆರ್.ಎಲ್.ಪಿ.ಎಸ್‌ನ ಡಿಡಿಯು–ಜಿಕೆವೈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ತಾಂತ್ರಿಕ ಬೆಂಬಲ ಸೇವೆಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಪಡೆಯುವ ಸಂಬಂಧ ಅರ್ಹ ಆಸಕ್ತ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ದಿನಾಂಕ: 28.11.2024 ರಂದು ಆಹ್ವಾನಿಸಿದ್ದು, ಆಸಕ್ತ ಸಂಸ್ಥೆಗಳು/ ಬಿಡ್ಡುದಾರರು https://www.kppp.karnataka.gov.in ವೆಬ್‌ಸೈಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ: 27.12.2024 ರ ಸಂಜೆ 5.00ರೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದ್ದು, Tender Reference No:KSRLPS/ 2024-25/SE0030 ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/–
ಅಪರ ಅಭಿಯಾನ ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/3503/ಆಕಾರ್/2024–25 ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.

ಕರ್ನಾಟಕ ಉಚ್ಚ ನ್ಯಾಯಾಲಯ,
ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–01
ಹೆಚ್‌ಸಿಸಿ ಸಂ.53/2024 ದಿನಾಂಕ: 27.11.2024

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ಬೆಂಗಳೂರು, ಪೀಠಗಳಾದ ಧಾರವಾಡ ಮತ್ತು ಕಲಬುರಗಿಗೆ ಒಟ್ಟು 64 ಸಂಖ್ಯೆಗಳ Advanced Facial and fingerprint Biometric Devices (50 ಸಂಖ್ಯೆಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, 8 ಸಂಖ್ಯೆಗಳಲ್ಲಿ ಧಾರವಾಡ ಪೀಠ ಮತ್ತು 6 ಸಂಖ್ಯೆಗಳಲ್ಲಿ ಕಲಬುರಗಿ ಪೀಠ) ಖರೀದಿಸಿ ಅಳವಡಿಸಲು ನಿರ್ಧರಿಸಿದ್ದು, ಅದಕ್ಕಾಗಿ ಟೆಂಡರನ್ನು Karnataka Public Procurement Portal ನಲ್ಲಿ ಆಹ್ವಾನಿಸಲಾಗಿದೆ. ಟೆಂಡರನ್ನು ದಿನಾಂಕ 05.12.2024ರ, 4.00 ರೊಳಗೆ ಆಸಕ್ತರು upload ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು https://kppp.karnataka.gov.in/#/portal/searchTender/ live ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

(ಎನ್.ಜಿ.ದಿನೇಶ್)
ರಿಜಿಸ್ಟ್ರಾರ್ (ಗಣಕ) ಮತ್ತು
ಟೆಂಡರ್ ಅಹ್ವಾನಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು.
ವಾಸಾಸಂಇ/ಉನಿ–ಸಿ.ಪಿ./3491/ಕೆಎಸ್‌ಎಂಸಿಎ/2024–25

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ.
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ 571 402.
GM/AM(C)/Sug/52/2024-25 Date:29.11.2024
Telephone:08232-224036

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿಯ ಉತ್ಪನ್ನವಾದ ಎಸ್.30 ಸಕ್ಕರೆ ಮಾರಾಟ ಮಾಡಲು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ: 01. ಸಾಮಗ್ರಿ ವಿವರ : ಸಕ್ಕರೆ ಎಸ್–30 ಉತ್ಪಾದನೆ 2024–25 ನೇ ಸಾಲು. ಮಾರಾಟದ ಪ್ರಮಾಣ : 37,150 ಕ್ವಿಂಟಾಲ್(ಅಂದಾಜು). ಇ.ಎಂ.ಡಿ ಹಣ (ಪ್ರತಿ ಮೆ.ಟನ್ ಹಾಗೂ ಕ್ವಿಂಟಾಲಿಗೆ) : ರೂ.50/–. ಟೆಂಡರ್ ಫೀ. : ಇ– ಪೋರ್ಟ್‌ಲ್‌ನಿಯಮಾವಳಿ
ಸೂಚನೆ: ಬಿಡ್‌ದಾರರು ಮೈಸೂರು ಸಕ್ಕರೆ ಕಂಪನಿಯ, ಮಂಡ್ಯಕ್ಕೆ ಭೇಟಿ ನೀಡಿ, ಕಾಕಂಬಿ ಮತ್ತು ಸಕ್ಕರೆ ಗೋದಾಮಿಗೆ ಭೇಟಿ ನೀಡಿ ಗುಣಮಟ್ಟವನ್ನು ಪರಿಶೀಲಿಸಿಕೊಂಡು ನಂತರ ದರವನ್ನು ನಮೂದಿಸುವುದು. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು (https://Kppp.Karnataka.gov.in) ತುಂಬುವುದು. ಇ– ಪೋರ್ಟ್‌ಲ್ ಟೆಂಡರ್‌ನ್ನು ತುಂಬಲು ಪ್ರಾರಂಭದ ದಿನಾಂಕ:30.11.2024 ಮತ್ತು ಕೊನೆಯ ದಿನಾಂಕ:07–12–2024 ರ ಮಧ್ಯಾಹ್ನ 03.00 ಗಂಟೆ ಆಗಿರುತ್ತದೆ.(1) ಆನ್‌ಲೈನ್‌ನಲ್ಲಿ ಬಿಡ್ ಮಾಡಲು ದಿನಾಂಕ:09–12–2024 ಸಮಯ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಮಾತ್ರ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 9845937173/ 7353328103/9844766773. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರವರ ತೀರ್ಮಾನವೇ ಅಂತಿಮವಾಗಿರುತ್ತದೆ.
ದಿನಾಂಕ:29.11.2024 ಸಹಿ/– ಮುಖ್ಯ ಆಡಳಿತಾಧಿಕಾರಿ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/479/2024–25

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು –560 052. ದೂರವಾಣಿ: 080–22283366, ಟೆಲಿಫ್ಯಾಕ್ಸ್: 080–22262288

ಟೆಂಡರ್ ಪ್ರಕಟಣೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿನ ಕಾನೂನು ಶಾಖೆಗೆ ಗೌರವ ಧನದ ಆಧಾರದ ಮೇಲೆ ಕಾನೂನು ಸಲಹೆಗಾರರು (Legal Adviser) –01 ಹುದ್ದೆ ಹಾಗೂ ಕಾನೂನು ಸಹಾಯಕರು (Legal Assistant)–01 ಹುದ್ದೆ ನೇಮಕಾತಿಗೊಳಿಸಲಾಗುತ್ತಿದ್ದು, ಕ್ರಮವಾಗಿ ಸೇವಾ ವಿಷಯದಲ್ಲಿ ಪರಿಣತಿ ಹೊಂದಿರುವ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಮತ್ತು ಸೇವಾ ವಿಷಯದಲ್ಲಿ ವೃತ್ತಿ ಅನುಭವವುಳ್ಳ ವಕೀಲರು ದಿನಾಂಕ : 08.12.2024 ರಂದು ಸಂಜೆ: 5.30 ರೊಳಗೆ ಅಗತ್ಯ ದಾಖಲೆಗಳೊಂದಿಗೆ ಸಂಘದ ಕೇಂದ್ರ ಕಛೇರಿಯನ್ನು ಸಂಪರ್ಕಿಸಲು ತಿಳಿಸಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಂಘದ ವೆಬ್‌ಸೈಟ್ https://kreis.karnataka.gov.in/ ಅನ್ನು ಅವಲೋಕಿಸಬುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
DIPR/CP/3486/Zen/2024-25 ಕವಶಿಸಸಂ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ದಾವಣಗೆರೆ ವಿಭಾಗ, ದಾವಣಗೆರೆ
ಸಂಖ್ಯೆ:ಕರಾಸಾ/ದಾವಿ/ವಿನಿ/356/2024–25 ದಿನಾಂಕ:27.11.2024

ಇ–ಟೆಂಡರ್ ಪ್ರಕಟಣೆ ಸಂಖ್ಯೆ : 01/2024–25
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ದಾವಣಗೆರೆ ನಗರದ ಹೈಸ್ಕೂಲ್ ಮೈದಾನದಲ್ಲಿರುವ ಕ.ರಾ.ರ.ಸಾ. ನಿಗಮದ ತಾತ್ಕಾಲಿಕ ಬಸ್ ನಿಲ್ದಾಣವನ್ನು ಒಡೆದು ಹಾಕಿ ಅದರಲ್ಲಿ ಬಂದಂತಹ ಉಪಯೋಗವಾಗುವ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ಹರಾಜು ಕಮ್ ಟೆಂಡರ್ ಮಾದರಿಯಲ್ಲಿ (Auction cum Tender) ವಿಲೇವಾರಿ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಅಹ್ವಾನಿಸಲಾಗಿದೆ.
ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಹಾಗೂ ನಿಗಮದ ವೆಬ್‌ಸೈಟ್ https://ksrtc.karnataka.gov.in ನಲ್ಲಿ ದಿನಾಂಕ: 28.11.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಹೆಚ್ಚಿನ ವಿವರಗಳಿಗಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕಾಮಗಾರಿ ಉಪ ವಿಭಾಗ, ದಾವಣಗೆರೆ ವಿಭಾಗ–577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ : ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು–7760990457.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ವಾಸಾಸಂಇ/ವಾಪ್ರ/ಜಿಎ/3509/2024–25 ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ನಂ.ಮುಇಂವಿ(ಟಿ&ಪಿ)/ಅಇಂವಿ1/ಕಸಇಂ-ಟಿ2/ಕೆಸಿಎ.153/2024-25/5957-72 ದಿನಾಂಕ: 29.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ / ಕಾಮಗಾರಿ ವಿವರ
ವಿಚಾರಣಾ ಸಂಖ್ಯೆ: ಕವಿಪ್ರನಿನಿ/2024–25/ಎಸ್‌ಎಸ್/ವರ್ಕ್_ಇಂಡೆಂಟ್1589ರ ಮೂಲಕ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಬನಶಂಕರಿ 6ನೇ ಹಂತದಲ್ಲಿ 2x150ಎಂವಿಎ, 220/66ಕೆವಿ ಮತ್ತು 2x31.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಹಾಗೂ ಸಂಬಂಧಿತ 220ಕೆವಿ ಮತ್ತು 66ಕೆವಿ ಭೂಗತ ಕೇಬಲ್ ಪ್ರಸರಣ ಮಾರ್ಗಗಳ ನಿರ್ಮಾಣ 66ಕೆವಿ ಟರ್ಮಿನಲ್ ಬೇ ಸ್ಥಾಪನೆ ಒಳಗೊಂಡಂತೆ ಭಾಗಶಃ ಟರ್ನ್ ಕೀ ಆಧಾರದ ಮೇಲೆ (ಭಾಗ–ಎ).

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ 30.11.2024 ರಂದು ಅಪರಾಹ್ನ 15:00 ಗಂಟೆ ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ 12.12.2024 ರಂದು ಅಪರಾಹ್ನ 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/-, ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು-560 009.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com
ಸಂಖ್ಯೆ : ಕೆಎಸ್‌ಎಪಿಎಸ್/ಪಿಆರ್‌ಸಿ/13/2024–25 ದಿನಾಂಕ: 28.11.2024

ಇ–ಸಂಗ್ರಹಣ ವೇದಿಕೆ ಮೂಲಕ ಟೆಂಡರ್ (ದ್ವಿ–ಲಕೋಟೆ) ಆಹ್ವಾನ ಪ್ರಕಟಣೆ

ಐಸಿಟಿಸಿ ಕೇಂದ್ರಗಳಿಗೆ ಅವಶ್ಯಕತೆ ಇರುವ Routine Lab. Consumables ಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ (ದ್ವಿ–ಲಕೋಟೆ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 20.12.2024ರ ಸಂಜೆ 5.30 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ https://kppp.karnataka.gov.in

ಸಹಿ/– ಯೋಜನಾ ನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/3487/2024–25 ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ.

ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಹೊಸದುರ್ಗ.
Email Id: eo.hosadurga@gmail.com Mob No: 9480861120
ಸಂ.ತಾ.ಪಂ.ಹೊ/ಇ–ಟೆಂಡರ್/ಸಿಆರ್–08/2024–25 ದಿ: 26.11.2024

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಮೂಲಕ ನೊಂದಾಯಿತ ಅಧಿಕೃತ ಗುತ್ತಿಗೆದಾರರು/ ಏಜೆನ್ಸಿಗಳಿಂದ ಹೊಸದುರ್ಗ ತಾಲ್ಲೂಕು ಪಂಚಾಯಿತಿ 2024–25ನೇ ಸಾಲಿನ ಅನಿರ್ಬಂಧಿತ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ–ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ನಿಗಧಿತ ಸಮಯದ ಒಳಗಾಗಿ ಟೆಂಡರ್ ಫಾರಂಗಳನ್ನು ಪಡೆದು ಅರ್ಜಿ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ರಲ್ಲಿ ನೋಡಬಹುದಾಗಿದೆ.
ಕಾಮಗಾರಿ ಹೆಸರು (1) ಕೈನಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಮಾಳಪ್ಪನಹಳ್ಳಿ ಗೇಟ್‌ನಲ್ಲಿರುವ ಮೂರಾರ್ಜಿ ದೇಸಾಯಿ ಶಾಲೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರ ವಿದ್ಯಾರ್ಥಿಗಳಿಗೆ 2 ಟೈರ್ ಕಾಟ್ ಪೂರೈಕೆ (ರೂ.21,25,000/–) ಟೆಂಡರ್ ಸಂಖ್ಯೆ:–RDPR/2024-25/IND5929
Tender closing date:- 12-12-2024.
(2) ಕೈನಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾಳಪ್ಪನಹಳ್ಳಿ ಗೇಟ್ ನಲ್ಲಿನ ಮೂರಾರ್ಜಿ ದೇಸಾಯಿ ಶಾಲೆಯಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ವಿದ್ಯಾರ್ಥಿನಿಯರಿಗೆ ಹಾಸಿಗೆ ಮತ್ತು ದಿಂಬುಗಳ ಪೂರೈಕೆ (ರೂ. 12,50,000/–) ಟೆಂಡರ್ ಸಂಖ್ಯೆ:–RDPR/2024-25/IND5931
Tender closing date:- 12-12-2024.
(3) ಹೊಸದುರ್ಗ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಿಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಇತರೆ ಕಛೇರಿ ದಾಖಲೆಗಳನ್ನು ಸಂಗ್ರಹಿಸಿಡಲು ಬೇಕಾದ ಅಲ್ಮೇರಾ ಖರೀದಿ (ರೂ. 8,72,797/–) ಟೆಂಡರ್ ಸಂಖ್ಯೆ:– RDPR/2024-25/IND5933
Tender closing date:- 12-12-2024.
DIPR/CTA/KSMCA/405/2024-25 ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೊಸದುರ್ಗ.

ಶ್ರೀ ನಿಯಾಜ್ ಅಹಮದ್ ಎಸ್ ದಫೇದಾರ್, ಇಲಾಖಾ ವಿಚಾರಣಾಧಿಕಾರಿಗಳು ಮತ್ತು ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಸಮ್ಮುಖದಲ್ಲಿ
ಆದೇಶ ಸಂಖ್ಯೆ: ಅಪಜೀ 122 ಅಇವಿ 2021, ಬೆಂಗಳೂರು, ದಿನಾಂಕ:19.10.2024
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ –ಶಿಸ್ತುಪ್ರಾಧಿಕಾರಿಗಳು
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು.
ವಿರುದ್ಧ
ಶ್ರೀಮತಿ.ಕವಿತಾ.ಕೆ.ಗೌಡ – ಆಪಾದಿತ ಸರ್ಕಾರಿ ನೌಕರರು
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ
ಬೆಂಗಳೂರು.
ಕರ್ನಾಟಕ ಸೇವಾ ನಿಯಮಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ), ನಿಯಮಗಳು 1957ರ ನಿಯಮ 11 ಉಪನಿಯಮ 7 ರಲ್ಲಿ ಹಾಜರಾತಿಗಾಗಿ ನೀಡಿದ ನೋಟೀಸು
ಹಾಜರಾತಿ ನೋಟೀಸು
ಶ್ರೀಮತಿ ಕವಿತಾ.ಕೆ.ಗೌಡ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅದ ನೀವು ಯೋಜನಾ ನಿರ್ದೇಶಕರು, ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್.ವೃತ್ತ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ದಿನಾಂಕ: 01.02.2018 ರಿಂದ ದಿನಾಂಕ: 01.11.2018 ರವರೆಗೆ ಕರ್ತವ್ಯಕ್ಕೆ ಗೈರು ಹಾಜರಾಗಿದ್ದು, ದಿನಾಂಕ: 19.02.2019ರ ಅಧಿಸೂಚನೆಯನ್ವಯ ನಿಮ್ಮನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ (ವನ್ಯಜೀವಿ) ಇಲ್ಲಿಗೆ ವರ್ಗಾವಣೆ ಮಾಡಿದ್ದು, ಕರ್ನಾಟಕ ಹೆದ್ದಾರಿ ಅಭಿವೃದ್ಧಿ ಯೋಜನೆಯಿಂದ ವಿಮುಕ್ತಿ ಮಾಡಲಾಗಿದ್ದರೂ ಕೂಡ ಸರ್ಕಾರದಲ್ಲಾಗಲೀ, ವರ್ಗಾವಣೆ ಮಾಡಿದ ಸ್ಥಳದಲ್ಲಾಗಲೀ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ದಿನಾಂಕ:01.02.2018 ರಿಂದ ಇಲ್ಲಿಯವರೆಗೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುತ್ತೀರಿ.
ಮುಂದುವರಿದು, ಸರ್ಕಾರದ ಕಚೇರಿಗಳಿಗೆ ಮನೆ ವಿಳಾಸವನ್ನು ತಪ್ಪಾಗಿ ಸಲ್ಲಿಸಿ, ಸಕ್ಷಮ ಪ್ರಾಧಿಕಾರಕ್ಕೆ ಸೂಕ್ತ ವಿಳಾಸ ನೀಡಿರುವುದಿಲ್ಲ ಹಾಗೂ ಸರ್ಕಾರದ ಕಚೇರಿಗಳಿಗೆ ಇ–ಮೇಲ್ ಮುಖಾಂತರ ಸಲ್ಲಿಸಿರುವ ಎಲ್ಲಾ ರಜಾ ಅರ್ಜಿಗಳಲ್ಲಿ ಮನೆ ವಿಳಾಸವನ್ನು ಉದ್ದೇಶ ಪೂರ್ವಕವಾಗಿ ಮರೆಮಾಚಲು ಯತ್ನಿಸಿರುತ್ತೀರಿ ಎಂದೂ ಸಹ ಶಿಸ್ತು ಪ್ರಾಧಿಕಾರದವರು ಆರೋಪಿಸಿದ್ದಾರೆ.
ಅನಧಿಕೃತವಾಗಿ ಕರ್ತವ್ಯಕ್ಕೆ ಗೈರು ಹಾಜರಾಗಿದ್ದು ಮತ್ತು ತಪ್ಪಾದ ಮನೆ ವಿಳಾಸ ನೀಡಿರುವುದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 2021ರ ನಿಯಮ 3 (1)(i)(ii)(iii); 3(2)(i); 3(5)(ix)(x)(xi) ಮತ್ತು (iv) ರಡಿ ಕರ್ತವ್ಯಲೋಪವಾಗಿದ್ದು, ಇದು ಸರ್ಕಾರಿ ನೌಕರರಿಗೆ ತರವಲ್ಲದ ವರ್ತನೆಯಾಗಿದ್ದು, ಈ ಬಗ್ಗೆ ದಿನಾಂಕ: 09.12.2024, ಸೋಮವಾರದಂದು ಬೆಳಗ್ಗೆ 11 ಗಂಟೆಗೆ ಕೊಠಡಿ ಸಂಖ್ಯೆ: 252; ಎರಡನೇ ಮಹಡಿ, ಎರಡನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು – 560001 ಇಲ್ಲಿ ನಿಗದಿಯಾಗಿರುವ ವಿಚಾರಣೆಗೆ ಹಾಜರಾಗಲು ಈ ಮೂಲಕ ಆದೇಶಿಸಲಾಗಿದೆ. ನಿಮ್ಮನ್ನು ರಕ್ಷಿಸಿಕೊಳ್ಳಲು ರಕ್ಷಣಾ ಸಹಾಯಕರ ಸೇವೆ ಪಡೆಯಬಹುದಾಗಿದೆ. ಒಂದು ವೇಳೆ ನಿಗದಿತ ದಿನಾಂಕ ಮತ್ತು ಸಮಯದಂದು ಹಾಜರಾಗದೇ ಇದ್ದಲ್ಲಿ, ನಿಮ್ಮ ಗೈರುಹಾಜರಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ಮಾಡಿ ವಿಚಾರಣಾ ವರದಿಯನ್ನು ಶಿಸ್ತುಪ್ರಾಧಿಕಾರದವರಿಗೆ ಕಳುಹಿಸಲಾಗುವುದು.
ಸಹಿ/–
ಸ್ಥಳ: ಬೆಂಗಳೂರು ವಿಚಾರಣಾಧಿಕಾರಿಗಳು ಹಾಗೂ
ದಿನಾಂಕ: 22.11.2024 ವಾಸಾಸಂಇ/ವಾಪ್ರ/ಜಿಎ/3501/2024–25 ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

TAMILNADU NEWSPRINT AND PAPERS LIMITED
Mondipatti, Manapparai Tk, Trichy Dist. - 621 306.
Ph.: 04324 - 277001 (10 Lines). Email : purchase.wood@tnpl.co.in

NOTICE INVITING TENDER

Tender No.	Scope of Work	Due date
242523 002982	Procurement of Debarked Eucalyptus pulpwood from open market sources of Karnataka to TNPL Unit - II, Mondipatti, Trichy Dist.	14.12.2024

Corrigendum if any will be issued in TNPL Website only. Detailed requirements, Period, Terms & conditions, Tender fee, EMD, etc., are available in the tender document which can be downloaded from website: www.tnpl.com
DIPR/5220/Tender/2024 TNPL - Maker of bagasse based eco-friendly Paper

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಚೇರಿ, ನಂ.2 ಹಾರಂಗಿ ಬಲದಂಡೆ ನಾಲಾ ವಿಭಾಗ, ಹುಣಸೂರು, ಮೈಸೂರು ಜಿಲ್ಲೆ– 571 105.
Ph: 08222-252211 Fax: 252211
Email: eeharangi@yahoo.co.in
ಸಂಖ್ಯೆ: ಕಾ.ಇಂ/ ನಂ.2 ಹಾ.ಬ.ನಾ.ವಿ–ಹು/ ಸ.ಇಂ/ ಅಲ್ಪಾವಧಿ ಟೆಂಡರ್–06/2024–25/ ದಿನಾಂಕ: 28.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.06/2024–25, ದಿ: 28.11.2024
(KPPP ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ರೂ.3.55 ಕೋಟಿ ಶ್ರೇಣಿಯ 2 ಕಾಮಗಾರಿಗೆ ಸೂಚಿತ ದರ್ಜೆ ಗುತ್ತಿಗೆದಾರರಿಂದ KPPP ಪದ್ಧತಿ ಮುಖಾಂತರ ಶೇಕಡವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿ: 29.11.2024ರ ಪೂರ್ವಾಹ್ನ 11.00 ಗಂಟೆಯಿಂದ ಟೆಂಡರ್ ದಸ್ತಾವೇಜುಗಳನ್ನು KPPP ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು KPPP ಮುಖಾಂತರ ದಿ: 12.12.2024 ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿ: 13.12.2024 ರ ಅಪರಾಹ್ನ 4.30 ಗಂಟೆಯ ನಂತರ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ದಿ: 20.12.2024 ರಂದು ಅಥವಾ ಮುಂದಿನ ದಿನಗಳಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ KPPP ವೆಬ್‌ಸೈಟ್ ವಿಳಾಸ https://kppp.karnataka.gov.in/kppp ರಲ್ಲಿ ಪಡೆಯಬಹುದಾಗಿದೆ. ಕಾಮಗಾರಿಗಳಿಗೆ KPPP ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ 6 ತಿಂಗಳು (ಮಳೆಗಾಲ ಸೇರಿ). ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.2 ಹಾರಂಗಿ ಬಲದಂಡೆ ನಾಲಾ ವಿಭಾಗ, ಹುಣಸೂರು, ಮೈಸೂರು ಜಿಲ್ಲೆ – 571105
DIPR/DDMYS-870/KSMCA-594/2024-25

ಪೊಲೀಸ್ ಇಲಾಖೆ
ಪೊಲೀಸ್ ಮಹಾನಿರ್ದೇಶಕರ ಕಾರ್ಯಾಲಯ, ಸಿಐಡಿ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಕಾರ್ಲಟನ್ ಭವನ, ನಂ.1, ಅರಮನೆ ರಸ್ತೆ, ಬೆಂಗಳೂರು – 01.
ಸಂಖ್ಯೆ: 06/ಸಿಬ್ಬಂದಿ–1/ಸಿಐಡಿ/2023–24 (ಫೈ.ಅ) ದಿನಾಂಕ: 25.11.2024

ಪ್ರಕಟಣೆ

ಸಿಐಡಿ ಘಟಕದಲ್ಲಿ ಕೈಗೊಳ್ಳುವ ತನಿಖಾ ಪ್ರಕರಣಗಳಾದ ಹಣಕಾಸು ದುರುಪಯೋಗ, ಕೆ.ಪಿ.ಐ.ಡಿ & ಬಡ್ಸ್ ಪ್ರಕರಣ, ಆರ್ಥಿಕ ಅಪರಾಧಗಳು, ಖಾಸಗಿ ಕಂಪನಿಗಳಲ್ಲಿ ದಾಖಲಾಗುವ ವಂಚನೆ ಪ್ರಕರಣಗಳು, ಷೇರುಗಳು ಮತ್ತು ಡಿಬೆಂಚರ್‌ಗಳಿಗೆ ಸಂಬಂಧಿಸಿದ ಸ್ಟಾಕ್ ಬ್ರೋಕಿಂಗ್ ವ್ಯವಸ್ಥೆ, ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ಪ್ರಕರಣಗಳಲ್ಲಿ ಖಾತೆಗಳು ತ:ಖ್ತೆ ಪುಸ್ತಕಗಳ (Books of Accounts) ಪರಿಶೋಧನೆ ಮತ್ತು ಆರ್ಥಿಕ ವಿಶ್ಲೇಷಣೆ ನಡೆಸಿ ತನಿಖಾಧಿಕಾರಿಗಳಿಗೆ ಸಲಹೆ ಮತ್ತು ಅಭಿಪ್ರಾಯಗಳನ್ನು ನೀಡುವ ಸಂಬಂಧ ಒಬ್ಬ ಆರ್ಥಿಕ ವಿಶ್ಲೇಷಕರನ್ನು (Financial Analyst) ಹೊರಗುತ್ತಿಗೆ ಆಧಾರದ ಮೇಲೆ ಫೈನಾನ್ಸಿಯಲ್ ಅನಾಲಿಸಿಸ್, ಫೋರೆನ್ಸಿಕ್ ಅಕೌಂಟಿಂಗ್ ಅಥವಾ ಸಂಬಂಧಿತ ಕ್ಷೇತ್ರದಲ್ಲಿ ವಿಶೇಷವಾಗಿ ಕಾನೂನು ಜಾರಿಗೆ ಸಂಬಂಧಿಸಿದಂತೆ 05 ವರ್ಷ ಕಡಿಮೆ ಇಲ್ಲದಂತೆ ಕರ್ತವ್ಯ ನಿರ್ವಹಿಸಿರುವ ಅನುಭವವನ್ನು (Chartered Accountant with an experience of five years at least) ಹೊಂದಿರುವವರನ್ನು ಉತ್ತಮ ಸಂಭಾವನೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಹತೆ ಮತ್ತು ಹುದ್ದೆಯ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

Sl. No.	Particulars	Vacancy
1	Financial Analyst on outsource basis for providing opinion on Accounts matter to Investigating Officers and other work assigned by Superior Officers.	01 No.

Last date for submission of Application: 16.12.2024 ರ ಸಂಜೆ 5–00 ಗಂಟೆ.

ಹೆಚ್ಚಿನ ವಿವರಗಳಿಗೆ ಕರ್ನಾಟಕ ರಾಜ್ಯ ಪೊಲೀಸ್ ವೆಬ್‌ಸೈಟ್ ksp.gov.in ನೋಡಲು ಸೂಚಿಸಲಾಗಿದೆ. ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.12.2024 ರ ಸಂಜೆ 5.00 ಗಂಟೆ ಆಗಿರುತ್ತದೆ. ಅರ್ಜಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಪೊಲೀಸ್ ಉಪ ಮಹಾನಿರೀಕ್ಷಕರು, ಆರ್ಥಿಕ ಅಪರಾಧಗಳು, ನಂ.01, ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು–560 001 ರವರ ಕಛೇರಿಗೆ ಸಲ್ಲಿಸುವುದು. ನಿಗದಿತ ದಿನಾಂಕ ಮತ್ತು ಸಮಯವನ್ನು ಮೀರಿದ ನಂತರದ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಯಾವುದೇ ತಿದ್ದುಪಡಿಗಳಿದ್ದಲ್ಲಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
ಹೆಚ್ಚಿನ ವಿವರಗಳಿಗೆ https://ksp.gov.in ಅಥವಾ ದೂರವಾಣಿ ಸಂಖ್ಯೆ: 080–22094455 ಕ್ಕೆ ಕಛೇರಿ ಕರ್ತವ್ಯ ನಿರ್ವಹಿಸುವ ವೇಳೆ ಸಂಪರ್ಕಿಸಬಹುದು.
ಸಹಿ/–
ಪೊಲೀಸ್ ಮಹಾನಿರ್ದೇಶಕರು, ಸಿಐಡಿ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ಮತ್ತು ಸಮಿತಿಯ ಅಧ್ಯಕ್ಷರುರವರ ಪರವಾಗಿ
DIPR/CP/3417/Maa/24-25

ಸುಭಾಷಿತ

ದೇಹ ಸುಂದರವಾಗಿದ್ದ ಮಾತ್ರಕ್ಕೆ ಬದುಕೂ ಸುಂದರವಾಗಿ ಇರುತ್ತದೆಂದು ಹೇಳಲಾಗದು. ದೇಹ ಕುರೂಪವಾಗಿದ್ದರೂ ಬದುಕನ್ನು ಸುಂದರವಾಗಿಸಿಕೊಂಡವರು ಬಹಳಷ್ಟು ಮಂದಿ ಇದ್ದಾರೆ.

–ಸಿದ್ಧೇಶ್ವರ ಸ್ವಾಮೀಜಿ

ಸ್ಥಳೀಯ ಸಂಸ್ಥೆ: ಸಕಾಲಕ್ಕೆ ಚುನಾವಣೆ ನಡೆಸದಿರುವುದು ಜನವಿರೋಧಿ ನಡೆ

ದೇಶದಲ್ಲಿನ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗದಿತ ಅವಧಿಯಲ್ಲಿ ಚುನಾವಣೆ ನಡೆಸುವುದು ರಾಜ್ಯ ಚುನಾವಣಾ ಆಯೋಗಗಳ ಸಾಂವಿಧಾನಿಕ ಜವಾಬ್ದಾರಿ. ಸಂವಿಧಾನದ 243ನೇ ವಿಧಿಯಲ್ಲಿ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ. ಯಾವುದೇ ಗ್ರಾಮೀಣ ಅಥವಾ ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಆಡಳಿತ ಮಂಡಳಿಯ ವಿಸರ್ಜನೆಯಾದ ಆರು ತಿಂಗಳೊಳಗೆ ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು ಕಡ್ಡಾಯ ಎಂಬುದು ಸಂವಿಧಾನದಲ್ಲಿದೆ. ಆದರೆ, ಬಹುತೇಕ ರಾಜ್ಯಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಕಾಲಕ್ಕೆ ನಡೆಯುತ್ತಿಲ್ಲ. ನ್ಯಾಯಾಲಯಗಳ ಛೀಮಾರಿ ಹಾಕಿದರೂ ರಾಜ್ಯ ಚುನಾವಣಾ ಆಯೋಗಗಳು ಮತ್ತು ವಿವಿಧ ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದವರು ನಿಗದಿತ ಕಾಲಮಿತಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಆಸಕ್ತಿ ತೋರುತ್ತಿಲ್ಲ. ಕರ್ನಾಟಕದ ಎಲ್ಲ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾಯಿತ ಸದಸ್ಯರ ಅಧಿಕಾರದ ಅವಧಿ 2021ರ ಏಪ್ರಿಲ್–ಮೇ ತಿಂಗಳಲ್ಲಿ ಮುಕ್ತಾಯವಾಗಿತ್ತು. ಮೂರೂವರೆ ವರ್ಷಗಳು ಕಳೆದರೂ ಈ ಸ್ಥಳೀಯ ಸಂಸ್ಥೆಗಳ ಚುನಾವಣಾ ಪ್ರಕ್ರಿಯೆ ಆರಂಭವೇ ಆಗಿಲ್ಲ. ಅದೇ ರೀತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಚುನಾಯಿತ ಸದಸ್ಯರ ಅವಧಿ ಪೂರ್ಣಗೊಂಡು ನಾಲ್ಕು ವರ್ಷವಾಯಿತು. ಬಿಬಿಎಂಪಿ ಚುನಾವಣೆ ಪ್ರಕ್ರಿಯೆಗೆ ಚಾಲನೆ ದೊರೆತಿಲ್ಲ. ಈಗ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳಿಗೆ ಮೀಸಲಾತಿ ನಿಗದಿಗೆ ಇನ್ನಷ್ಟು ಕಾಲಾವಕಾಶ ನೀಡುವಂತೆ ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮನವಿ ಮಾಡಿದೆ. ಇದರಿಂದಾಗಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಮತ್ತಷ್ಟು ವಿಳಂಬವಾಗುವ ಸಾಧ್ಯತೆಯಿದೆ.

ಸ್ಥಳೀಯ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ನಡೆಸದೇ ಇರುವುದರಿಂದ ಅಧಿಕಾರ ವಿಕೇಂದ್ರೀಕರಣದ ಆಶಯಕ್ಕೆ ಕೊಡಲಿಪೆಟ್ಟು ಬಿದ್ದಿದೆ

ಆಡಳಿತದಲ್ಲಿ ಜನರ ನೇರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ರೂಪಿಸಲಾಯಿತು. ಚುನಾವಣೆ ನಡೆಸುವಲ್ಲಿ ವಿಳಂಬ ಧೋರಣೆ ತಳೆಯುತ್ತಿರುವುದರಿಂದ ಅಧಿಕಾರ ವಿಕೇಂದ್ರೀಕರಣದ ಉದ್ದೇಶವೇ ವಿಫಲವಾಗುತ್ತಿದೆ. ಕ್ಷೇತ್ರಗಳ ಪುನರ್ವಿಂಗಡಣೆ ಮತ್ತು ಮೀಸಲಾತಿ ನಿಗದಿಯಲ್ಲಿನ ತಾಂತ್ರಿಕ ಅಂಶಗಳನ್ನೇ ನೆಪವಾಗಿಸಿಕೊಂಡು ಚುನಾವಣೆಯನ್ನು ಮುಂದೂಡುವ ಪರಿಪಾಟವನ್ನು ಎಲ್ಲ ರಾಜಕೀಯ ಪಕ್ಷಗಳ ನೇತೃತ್ವದ ಸರ್ಕಾರಗಳೂ ಅನುಸರಿಸಿಕೊಂಡು ಬಂದಿವೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ನಿಖರ ದತ್ತಾಂಶಗಳ ಆಧಾರದಲ್ಲಿ ಗುರುತಿಸಿ, ಅದರ ಆಧಾರದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಬೇಕು ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪಾಲನೆಯನ್ನು ಈಗ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬಕ್ಕೆ ಬಳಸಿಕೊಳ್ಳಲಾಗುತ್ತಿದೆ. ಮೂರು ವರ್ಷಗಳ ಹಿಂದೆಯೇ ಈ ಪ್ರಕ್ರಿಯೆ ಆರಂಭವಾಗಿದ್ದರೂ ಒಂದಿಷ್ಟು ಮುಂದಕ್ಕೆ ಸಾಗದಿರುವುದು ಇದಕ್ಕೆ ನಿದರ್ಶನ. ಕ್ಷೇತ್ರಗಳ ಪುನರ್ವಿಂಗಡಣೆ ಮತ್ತು ಮೀಸಲಾತಿ ನಿಗದಿ ಅಧಿಕಾರ ರಾಜ್ಯ ಚುನಾವಣಾ ಆಯೋಗದಿಂದ ಕಿತ್ತುಕೊಂಡು ಸರ್ಕಾರವೇ ತನ್ನ ಬಳಿ ಇರಿಸಿಕೊಂಡಿದೆ. ರಾಜ್ಯ ಸರ್ಕಾರ ಈ ಎರಡೂ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ಬಳಿಕವಷ್ಟೇ ಚುನಾವಣಾ ಪ್ರಕ್ರಿಯೆ ಆರಂಭಿಸುವುದಾಗಿ ಆಯೋಗ ಹೇಳಿದೆ. ಈ ಅವಕಾಶವನ್ನು ಆಡಳಿತಾರೂಢ ಪಕ್ಷಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿವೆ. ಶಾಸಕರೂ ಸ್ಥಳೀಯ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆಯುವುದು ಬೇಕಿಲ್ಲ. ಸ್ಥಳೀಯ ಸಂಸ್ಥೆಗಳಿಗೆ ಸದಸ್ಯರು ಚುನಾಯಿತರಾದರೆ ತಮ್ಮ ಅಧಿಕಾರದ ಬಲ ಕುಗ್ಗಬಹುದು ಎಂಬ ಆತಂಕ ಶಾಸಕರಲ್ಲಿ ಇದೆ. ಹೀಗಾಗಿ, ಚುನಾವಣೆ ವಿಳಂಬದ ವಿರುದ್ಧ ಯಾವ ಶಾಸಕರೂ ಗಟ್ಟಿ ಧ್ವನಿಯಲ್ಲಿ ಮಾತನಾಡುವುದಿಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡುವುದರ ಹಿಂದೆ ಶಾಸಕರನ್ನು ಸಂತೃಪ್ತಿಪಡಿಸುವ ಉದ್ದೇಶವೂ ಇರುವುದು ರಹಸ್ಯವೇನಲ್ಲ.

ಸ್ಥಳೀಯ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ನಡೆಸದೇ ಇರುವುದರಿಂದ ಜನರ ಮತದಾನದ ಹಕ್ಕು ಮತ್ತು ಆಡಳಿತದಲ್ಲಿ ನೇರ ಪಾಲ್ಗೊಳ್ಳುವಿಕೆಯ ಅವಕಾಶಗಳು ಮೊಟಕುಗೊಳ್ಳುತ್ತಿವೆ. ಜನರ ಸಮಸ್ಯೆಗಳನ್ನು ಕೇಳುವವರಿಲ್ಲದೆ ಅರಾಜಕತೆ ಸೃಷ್ಟಿಯಾಗಿದೆ. ಹಣಕಾಸು ಆಯೋಗಗಳಿಂದ ದೊರೆಯಬೇಕಾದ ಅನುದಾನಕ್ಕೂ ಕೊಕ್ಕೆ ಬೀಳುತ್ತಿದೆ. ಕರ್ನಾಟಕಕ್ಕೆ ಕೇಂದ್ರ ಹಣಕಾಸು ಆಯೋಗದಿಂದ ದೊರೆಯುತ್ತಿದ್ದ ₹ 2,800 ಕೋಟಿಯಷ್ಟು ಅನುದಾನವು ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬ ಮಾಡಿರುವುದಕ್ಕಾಗಿ ಕೈತಪ್ಪುತ್ತಿದೆ. ನಿಗದಿತ ಕಾಲಮಿತಿಯೊಳಗೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸದೇ ಕಾಲಹರಣ ಮಾಡುವುದು ಸಂವಿಧಾನದ ಆಶಯಗಳ ಉಲ್ಲಂಘನೆ. 'ಸ್ಥಳೀಯ ಸಂಸ್ಥೆಗಳ ಚುನಾವಣಾ ಪ್ರಕ್ರಿಯೆ ನಡೆಸಲು ವಿಪರೀತ ವಿಳಂಬ ಮಾಡುವುದು ಕಾನೂನಿನ ಆಡಳಿತವು ಕುಸಿಯುತ್ತಿರುವುದರ ಸಂಕೇತ' ಎಂದು ಸುಪ್ರೀಂ ಕೋರ್ಟ್ ಕಟುವಾಗಿಯೇ ಹೇಳಿದೆ. ಆದರೂ, ರಾಜ್ಯ ಸರ್ಕಾರಗಳು ಮತ್ತು ರಾಜ್ಯ ಚುನಾವಣಾ ಆಯೋಗಗಳು ತಮ್ಮ ಧೋರಣೆಯನ್ನು ಬದಲಿಸಿಕೊಳ್ಳದೇ ಇರುವುದು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ ಮಾರಕ. ಗ್ರಾಮ ಸ್ವರಾಜ್ ಕಾಯ್ದೆಯ ಜಾರಿಯೊಂದಿಗೆ ಮೂರು ಹಂತದ ಗ್ರಾಮೀಣ ಸ್ಥಳೀಯ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದು 30 ವರ್ಷಗಳನ್ನು ಪೂರೈಸಿದ ಸಂಭ್ರಮಾಚರಣೆಗೆ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಿದ್ಧವಾಗುತ್ತಿದೆ. ಈ ಸಂದರ್ಭದಲ್ಲಾದರೂ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣಾ ಪ್ರಕ್ರಿಯೆಗೆ ಚಾಲನೆ ನೀಡದಿದ್ದರೆ ಸಂಭ್ರಮಾಚರಣೆಯೇ ಅರ್ಥಹೀನವಾಗುತ್ತದೆ.

ದಿನದ ಟ್ವೀಟ್

ಶಸ್ತ್ರಚಿಕಿತ್ಸೆ ಅಧ್ಯಯನ: ಆದ್ಯತೆ ಪಡೆಯಲಿ

ಒಂದೊಮ್ಮೆ, ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ಅಧ್ಯಯನ ಆಯ್ಕೆಯ ವಿಷಯಗಳಲ್ಲಿ ಕಿರೀಟಪ್ರಾಯದಂತಿದ್ದ 'ಶಸ್ತ್ರಚಿಕಿತ್ಸೆ'ಯು ಈಗ ನೀಟ್–ಪಿಜಿ ಟಾಪರ್‌ಗಳನ್ನು ಆಕರ್ಷಿಸುವಲ್ಲಿ ಸೋಲುತ್ತಿದೆ. 'ರಕ್ತ, ಬೆವರು, ಕಣ್ಣೀರು ಯಾವುದೂ ಬೇಡ' ಎಂಬುದು ನವಪೀಳಿಗೆಯ ಮಂತ್ರವಾಗಿದೆ. ಮೊದಲ 1500 ರ‍್ಯಾಂಕ್ ಪಡೆದವರಲ್ಲಿ ಕೆಲವೇ ಮಂದಿ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ವೈದ್ಯಕೀಯದ ಮೂಲಾಧಾರವಾದ ಈ ವಿಷಯದ ಗತಿ ಮುಂದೆ ಏನಾಗಬಹುದು?

ಎಸ್.ಪಿ.ಕಲಾಂತ್ರಿ, ವೈದ್ಯ, ಸಂಶೋಧಕ

ಕಿಡಿನುಡಿ

ಈ ದೇಶದಲ್ಲಿ ಶಿಕ್ಷಣಕ್ಕಾಗಿ ಖರ್ಚು ಮಾಡಬೇಕಾದ ಅಗತ್ಯವಿಲ್ಲ. ಬದಲಾಗಿ, ಹೇಗೆ ರಾಜಕಾರಣಿ ಆಗಬೇಕು ಎಂಬುದನ್ನು ನಿಮ್ಮ ಮಗುವಿಗೆ ಕಲಿಸಿ. ಅದಕ್ಕಾಗಿ ನೀವು ಶಿಕ್ಷಿತರಾಗಬೇಕೆಂದಿಲ್ಲ, ಸಾವಿರಾರು ಜನರೆದುರು ಸುಳ್ಳು ಹೇಳುವುದನ್ನು ಕಲಿತರಷ್ಟೇ ಸಾಕು. ನಾವು ಎತ್ತ ಸಾಗುತ್ತಿದ್ದೇವೆ, ನಮ್ಮ ಭವಿಷ್ಯ ಹೇಗಿರುತ್ತದೆ ಎಂಬುದು ಯಾವುದೂ ತಿಳಿಯದಂತೆ ಆಗಿದೆ.

ಮಯಂಕ್

25 ವರ್ಷಗಳ ಹಿಂದೆ

ಮಂಗಳವಾರ, 30-11-1999

● ಅಧ್ಯಾಪಕರ ಕರ್ತವ್ಯ ಪರಿಶೀಲನೆಗೆ ಸಮಿತಿ

ಬೆಂಗಳೂರು, ನ. 29– ವಿಶ್ವವಿದ್ಯಾಲಯ ಧನಸಹಾಯ ಆಯೋಗವು ನಿಗದಿಪಡಿಸಿದ ನಿಯಮಗಳ ಪ್ರಕಾರ, ಕಾಲೇಜು ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ನೇಮಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಇಂದು ಇಲ್ಲಿ ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಕಾಲೇಜು ಉಪನ್ಯಾಸಕರಿಗೆ ವಿ.ವಿ. ಧನ ಸಹಾಯ ಆಯೋಗವು ಸಲಹೆ ಮಾಡಿದ ಪ್ರಕಾರ ವೇತನ ನೀಡಲು ರಾಜ್ಯ ಸರ್ಕಾರವು ಒಪ್ಪಿದೆ. ಆದರೆ ಇಷ್ಟು ಸಂಬಳಕ್ಕೆ ತಕ್ಕಂತೆ ಉಪನ್ಯಾಸಕರು ಪಾಠ ಮಾಡುವುದಿಲ್ಲ, ದಿನಕ್ಕೆ ಒಂದೆರಡು ಗಂಟೆಯಷ್ಟೇ ಪಾಠ ಮಾಡುತ್ತಾರೆ ಎಂಬ ದೂರಿದೆ ಎಂದರು.

ಈ ದೂರಿನಲ್ಲಿ ಸತ್ಯವೂ ಇದೆ. ಆದ್ದರಿಂದ ಈ ಉಪನ್ಯಾಸಕರ ಕರ್ತವ್ಯ ನಿರ್ವಹಣೆಯ ಮಟ್ಟವನ್ನು ಸದಾ ಪರಿಶೀಲಿಸುವ ಕ್ರಮವಾಗಿ ಸಮಿತಿಯೊಂದನ್ನು ನೇಮಿಸಲಾಗುವುದು ಎಂದರು.

50 ವರ್ಷಗಳ ಹಿಂದೆ

ಶನಿವಾರ, 30-11-1974

● ನೀರು ಹಂಚಿಕೆಗಾಗಿ ಕಾವೇರಿ ಪ್ರಾಧಿಕಾರ ರಚನೆಗೆ ಮುಖ್ಯಮಂತ್ರಿಗಳ ಒಪ್ಪಿಗೆ

ನವದೆಹಲಿ, ನ. 29– ಮೂರು ರಾಜ್ಯಗಳಿಗೂ ಕಾವೇರಿ ನೀರಿನ ಸಮರ್ಪಕ ಹಂಚಿಕೆಗಾಗಿ 'ಕಾವೇರಿ ಕಣಿವೆ ಪ್ರಾಧಿಕಾರ' ರಚಿಸಲು ತಮಿಳುನಾಡು, ಕರ್ನಾಟಕ ಹಾಗೂ ಕೇರಳದ ಮುಖ್ಯಮಂತ್ರಿಗಳು ಇಂದು ಇಲ್ಲಿ ಒಪ್ಪಿಗೆ ನೀಡಿದರು.

ಕೇಂದ್ರ ಕೃಷಿ ಹಾಗೂ ನೀರಾವರಿ ಸಚಿವ ಜಗಜೀವನ್ ರಾಂ ಅಧ್ಯಕ್ಷತೆಯಲ್ಲಿ ಐದು ತಾಸು ನಡೆದ ಸಭೆಯಲ್ಲಿ ಈ ಒಪ್ಪಂದವಾಗಿದೆ.

ಪ್ರಾಧಿಕಾರ ರಚನೆಯ ನಿರ್ಧಾರವು ಐತಿಹಾಸಿಕ ಮೈಲಿಗಲ್ಲು ಎಂದು ಬಣ್ಣಿಸಿದ ಜಗಜೀವನ್ ರಾಂ, ಈ ಒಪ್ಪಂದವು ಇತರ ಅಂತರರಾಜ್ಯ ನದಿ ನೀರಿನ ವಿವಾದಗಳನ್ನು ಪರಿಹರಿಸಲು ಮಾದರಿಯಾಗಲಿದೆ ಎಂದರು.

ಕೇಂದ್ರ ಸರ್ಕಾರದ ಪ್ರತಿನಿಧಿಯೊಬ್ಬರು ಪ್ರಾಧಿಕಾರದ ಅಧ್ಯಕ್ಷರಾಗಿದ್ದರೆ, ಮೂರು ರಾಜ್ಯಗಳ ತಾಂತ್ರಿಕ ಪರಿಣತರು ಸದಸ್ಯರಾಗಿ ಇರಲಿದ್ದಾರೆ ಎಂದು ವಕ್ತಾರರು ತಿಳಿಸಿದ್ದಾರೆ.

ಪ್ರೇಕ್ಷಕರ ಕೊರತೆ ತುಂಬಲು ಸಮಾರಂಭಗಳಿಗೆ ವಿದ್ಯಾರ್ಥಿಗಳನ್ನು ಕರೆತರುವ ಪರಿಪಾಟ ನಿಲ್ಲಲಿ

ಫಲಿತಾಂಶವೇ ಇಲ್ಲದ ಸ್ಪರ್ಧಾ ಪ್ರಪಂಚ!

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಸ್ಪರ್ಧೆಗಳನ್ನು ನಡೆಸಬೇಕೇ ಬೇಡವೇ ಎಂಬ ಬಗ್ಗೆ ಪರ, ವಿರೋಧದ ಬಹಳಷ್ಟು ಚರ್ಚೆಗಳು ನಡೆದಿವೆ. ಆದರೆ ಇವೆಲ್ಲವೂ ಶಿಕ್ಷಣದ ತತ್ವಶಾಸ್ತ್ರೀಯ ನೆಲೆಗಳ ವೈಚಾರಿಕ ಚರ್ಚೆ ಗಳಾಗಿವೆ. ಇವೆಲ್ಲಕ್ಕಿಂತ ಮುಖ್ಯವಾದ ವ್ಯಾವಹಾರಿಕ ನೆಲೆಯೊಂದು ಚರ್ಚೆಯಿಂದ ಈ ದಿನಗಳಲ್ಲಿ ತೀರಾ ಅಗತ್ಯವಾಗಿದೆ. ಅದು, ವಿವಿಧ ಹಿತಾಸಕ್ತಿಯ ಗುಂಪುಗಳು ಶಾಲಾ ಕಾಲೇಜುಗಳಲ್ಲಿ ನಡೆಸುವ ಸ್ಪರ್ಧೆಗಳಿಗೆ ಸಂಬಂಧಿಸಿದ್ದು. ಉದಾಹರಣೆಗೆ, ಸಾರ್ವಜನಿಕ ಗಣೇಶೋತ್ಸವ ಸಮಿತಿ, ಕೃಷ್ಣಾಷ್ಟಮಿ ಸಮಿತಿ... ಇವೆಲ್ಲ ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ನಡೆಸುತ್ತವೆ. ಇವನ್ನು ಆಯಾ ಗ್ರಾಮದಲ್ಲೇ ನಡೆಸುತ್ತವೆ ಮತ್ತು ಅವು ನಡೆಸುವ ಸ್ಪರ್ಧೆಗಳು ಇಷ್ಟು ವರ್ಷ ವಯಸ್ಸಿನೊಳಗಿನ ಮಕ್ಕಳಿಗಾಗಿ ಎಂದು ಇರುತ್ತವೆಯೇ ವಿನಾ ಶಾಲಾ ವಿದ್ಯಾರ್ಥಿಗಳಿಗಾಗಿ ಎಂದು ಇರುವುದಿಲ್ಲ.

ಮಕ್ಕಳೂ ಸ್ಥಳೀಯರೇ ಆಗಿರುತ್ತಾರೆ, ಸಮಿತಿಯೂ ಸ್ಥಳೀಯವಾದದ್ದೇ ಆಗಿರುತ್ತದೆ. ಇಂಥ ಸಮಿತಿಗಳಿಗೆ ಹೆಚ್ಚೆಂದರೆ ಮಕ್ಕಳ ಜನನ ಪ್ರಮಾಣಪತ್ರ ಬೇಕು. ಬದಲು ಈ ವಿದ್ಯಾರ್ಥಿ ಈ ಶಾಲೆಯಲ್ಲಿ ಅಥವಾ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾನೆ ಎಂಬ ಅಧಿಕೃತ ಪ್ರಮಾಣಪತ್ರವನ್ನು ಸಂಸ್ಥೆಯ ಮುಖ್ಯಸ್ಥರು ಕೊಡಬೇಕಾಗುವುದಿಲ್ಲ. ಆದ್ದರಿಂದ ಈ ಮಾದರಿಯ ಸ್ಪರ್ಧೆಗಳಿಂದ ಸಮಸ್ಯೆಗಳಾಗುವುದಿಲ್ಲ.

ಇನ್ನು ಕೆಲವು ಸ್ಪರ್ಧೆಗಳು ಇರುತ್ತವೆ. ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ, ವಿಭಾಗ ಮಟ್ಟ, ರಾಜ್ಯ ಮಟ್ಟ ಎಂದೆಲ್ಲ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು ನಡೆಯುತ್ತವೆ. ಯಾವುದೋ ಒಂದು ಸಮಿತಿ ಅದಕ್ಕೆ ಬೇಕಾದ ವಿಷಯದ ಮೇಲೆ ಸ್ಪರ್ಧೆ ನಡೆಸುತ್ತದೆ. ಕೆಲವೊಮ್ಮೆ ಇಲಾಖಾ ಮುಖ್ಯಸ್ಥರ ಅನುಮತಿಯನ್ನೂ ಪಡೆದಿರುತ್ತದೆ. ಇವರಿಗೆ ಆಯಾ ಶಾಲಾ ಕಾಲೇಜಿನ ವಿದ್ಯಾರ್ಥಿ ಎಂಬ ಅಧಿಕೃತ ಪ್ರಮಾಣಪತ್ರ ಬೇಕು. ಅದನ್ನು ಸಲ್ಲಿಸಿ ವಿದ್ಯಾರ್ಥಿಗಳು ಭಾಗವಹಿಸಿದರೆ, ಆಮೇಲೆ ಆ ಸ್ಪರ್ಧೆಯ ಫಲಿತಾಂಶ ಏನಾಯಿತು ಎಂದು ವಿದ್ಯಾರ್ಥಿಗಳಿಗೂ ತಿಳಿಸುವುದಿಲ್ಲ, ವಿದ್ಯಾಸಂಸ್ಥೆಗಳಿಗೂ ತಿಳಿಸುವುದಿಲ್ಲ. ತಾವು ಅನುಮತಿ ಕೊಟ್ಟ ಸ್ಪರ್ಧೆ ಹೇಗೆ ನಡೆದಿದೆ ಎಂದು ಕೇಳಿ ತಿಳಿದು ಇಲಾಖಾ ಮುಖ್ಯಸ್ಥರೂ ಫಲಿತಾಂಶವನ್ನು ತಿಳಿಸುವುದಿಲ್ಲ.

ಸಂಘಟಕರಿಗೆ ತಮ್ಮ ಕಾರ್ಯಸೂಚಿಯನ್ನು ಪ್ರಚಾರ ಮಾಡಲು ಇದು ಒಂದು ವ್ಯವಸ್ಥೆ. ಆದರೆ ಅವರ ಅಜೆಂಡಾ ಶೈಕ್ಷಣಿಕ ಉದ್ದೇಶವನ್ನು ಹೊಂದಿದೆಯೇ ಎಂಬುದನ್ನು ಪರಿಶೀಲಿಸದೆಯೇ ಶಿಕ್ಷಣ ವ್ಯವಸ್ಥೆಯು ಅಜೆಂಡಾ ಪ್ರಚಾರಕ್ಕೆ ಅವಕಾಶ ಮಾಡಿಕೊಡುತ್ತದೆ. ಎರಡನೆಯದಾಗಿ, ಸಂಘಟಕರಿಗೆ ತಾವು ವಿದ್ಯಾರ್ಥಿಗಳಿಗಾಗಿ ಸ್ಪರ್ಧೆ ನಡೆಸಿ ಜಾಗೃತಿ ಮೂಡಿಸಿದ್ದೇವೆ ಎಂದು ತಮ್ಮ ಬಗ್ಗೆ ತಾವು ಪ್ರಚಾರ ಮಾಡಿಕೊಳ್ಳಲು ಇದು ಒಂದು ವ್ಯವಸ್ಥೆಯಾಗಿದೆ.

ಒಂದು ರಾಜ್ಯ ಮಟ್ಟದ ಸ್ಪರ್ಧೆ ಏರ್ಪಡಿಸಿದರೆ, ಬಹುಮಾನವು ಕನಿಷ್ಠ ಹತ್ತು ಸಾವಿರ ರೂಪಾಯಿಯ ಮೌಲ್ಯದ್ದಾದರೂ ಬೇಡವೇ ಎಂದು ಕೇಳಿದರೆ, 'ಬೇಡ, ಬಹುಮಾನ ಕೊಡಲಾಗುವುದು ಎಂದರೆ ಸಾಕು. ಬಹುಮಾನ ಏನು ಎಂದೂ ತಿಳಿಸಬೇಕಾಗಿಲ್ಲ' ಎನ್ನುವ ಉತ್ತರ ಬರುತ್ತದೆ. ಯಾವ ಬಹುಮಾನವನ್ನೂ ಕೊಡದಿದ್ದರೆ ಏನಾಗುತ್ತದೆ ಎಂಬುದನ್ನೂ ತಿಳಿಸದೆಯೇ ಸ್ಪರ್ಧೆ ನಡೆಸುವ ವ್ಯವಸ್ಥೆಯೂ ಇದೆ. ಫಲಿತಾಂಶ ಘೋಷಣೆಯಾದ ಬಳಿಕ ಬಹುಮಾನ ಏನು ಕೊಡಬೇಕೆಂದು ಯೋಚಿಸುವ ಸಂಘಟಕರೂ ಸಹ ಇದ್ದಾರೆ. ಸ್ಪರ್ಧೆಯನ್ನು ಮಾತ್ರ ನಡೆಸಿ ಫಲಿತಾಂಶವನ್ನೇ ಕೊಡದೆ ಇರುವವರೂ ಇದ್ದಾರೆ. ಫಲಿತಾಂಶ ಮತ್ತು ಬಹುಮಾನದ ಬಗ್ಗೆ ಕೇಳಿದರೆ ಉತ್ತರವನ್ನೇ ಕೊಡದ ಸಂಘಟಕರೂ ಇದ್ದಾರೆ.

ಈ ರೀತಿಯ ಸ್ಪರ್ಧೆಗಳು ಶಾಲಾ ಕಾಲೇಜುಗಳಲ್ಲಿ ಯಾವ ರೀತಿಯ ಪರಿಣಾಮ ಬೀರುತ್ತವೆ ಎಂದರೆ, ಪ್ರತಿ ತರಗತಿಯಲ್ಲೂ ಕೆಲವು ವಿದ್ಯಾರ್ಥಿಗಳು ಪೂರಕ ಪಠ್ಯ ಚಟುವಟಿಕೆಯಲ್ಲಿ ಆಸಕ್ತಿ ಹೊಂದಿರುತ್ತಾರೆ. ಎಲ್ಲದಕ್ಕೂ ಅವರನ್ನೇ ಕಳುಹಿಸಲಾಗುತ್ತದೆ. ಸ್ಪರ್ಧೆಗಳ ಸಂಖ್ಯೆ ಹೆಚ್ಚಿದಂತೆಲ್ಲ ಇಂಥ ವಿದ್ಯಾರ್ಥಿಗಳಿಗೆ ಈ ರೀತಿಯ ಸ್ಪರ್ಧೆಗಳು ಹೊರೆ ಎನಿಸತೊಡಗುತ್ತವೆ. ಅಧ್ಯಾಪಕರು, 'ನೀವು ಹೋಗಿ' ಎಂದದ್ದಕ್ಕಾಗಿ ಒಲ್ಲದ ಮನಸ್ಸಿನಿಂದ ಭಾಗವಹಿಸುತ್ತಾರೆ. ಅವರಿಗೆ ಉಳಿದೆಲ್ಲ ವಿದ್ಯಾರ್ಥಿಗಳಿಗೆ ಲಭ್ಯವಾಗುವ ತರಗತಿಗಳು ಕಳೆದುಹೋಗುತ್ತವೆ ಮತ್ತು ಕೆಲವು ಸಂದರ್ಭಗಳಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸಲು ತಗುಲಿದ ಖರ್ಚನ್ನು ಸಂಘಟಕರು ಕೊಡುವುದಿಲ್ಲ. ಶಾಲಾ ಕಾಲೇಜುಗಳೂ ಕೊಡುವುದಿಲ್ಲ. ಅವರು ಸ್ಪರ್ಧೆಯಲ್ಲಿ ಭಾಗವಹಿಸುವುದರಿಂದ ಅವರೇ ಹಾಕಿಕೊಳ್ಳಬೇಕಾದರೂ ಅವರಿಗೆ ಕೊಡಲಾಗುವ ಹೆಚ್ಚುವರಿ ಶಿಕ್ಷೆಯಂತೆ ಆಗುತ್ತದೆ. ಅಂದರೆ ಸಂಘಟಕರ ತೆವಲಿಗಾಗಿ ವಿದ್ಯಾರ್ಥಿಗಳಿಗೆ ಕೊಡುವ ಹಿಂಸೆ ಇದು.

ಈ ರೀತಿಯ ಹಿಂಸೆಗಳು ವಿವಿಧ ಸ್ವರೂಪ ಕಾರ್ಯಕ್ರಮಗಳು, ಸೆಮಿನಾರ್‌ಗಳಲ್ಲೂ ನಡೆಯುತ್ತವೆ. ಸಂಘಟಕರು ಯಾರಾದರೊಬ್ಬರು ಪರಿಚಿತ ಉಪನ್ಯಾಸಕರನ್ನು ಸಂಪರ್ಕಿಸಿ 'ನಿಮ್ಮ ವಿದ್ಯಾರ್ಥಿಗಳನ್ನು ಕಳಿಸಿಕೊಡಿ' ಎನ್ನುವುದು, 'ಇವರು ವಿದ್ಯಾರ್ಥಿಗಳನ್ನು ಕಳಿಸುವುದು 'ಪ್ರೇಕ್ಷಕರನ್ನು ತುಂಬುವ' ಒಂದು ವ್ಯವಸ್ಥೆಯಾಗಿದೆ. ಹೀಗೆ ಭಾಗವಹಿಸಿದಾಗ ವಿದ್ಯಾರ್ಥಿಗಳಿಗೆ ಆಂತರಿಕ ಮೌಲ್ಯಮಾಪನದ ಅಂಕಗಳು ದೊರೆತರೆ ಆಗ ಅದರಿಂದ ಅವರಿಗೆ ಉಪಯೋಗವಾಗುತ್ತದೆ ಅಥವಾ ವಿದ್ಯಾರ್ಥಿಗಳಿಗಾಗಿಯೇ ಕಾರ್ಯಕ್ರಮ ಏರ್ಪಡಿಸಿದ್ದರೆ ಉಪಯೋಗ ಆಗುತ್ತದೆ. ಇಂಥ ವ್ಯವಹಾರ ವ್ಯಾಪಕವಾಗುತ್ತಿರುವುದರಿಂದ, ಅದಕ್ಕೊಂದು ಖಚಿತವಾದ ರೂಪುರೇಷೆಯನ್ನು ಅಳವಡಿಸಬೇಕಾದ ಅಗತ್ಯವಿದೆ.

ಮೊದಲನೆಯದಾಗಿ, ಸಂಘಟಕರು ಸ್ಪರ್ಧೆಗಾಗಿ ವಿದ್ಯಾರ್ಥಿಗಳಿಗೆ ತಗಲುವ ಖರ್ಚನ್ನು ಸ್ವತಃ ಭರಿಸಬೇಕು. ಶಿಕ್ಷಣ ಸಂಸ್ಥೆಯೇ ಆ ಖರ್ಚನ್ನು ಭರಿಸಲು ಸಿದ್ಧವಿದ್ದರೂ ಆಗುತ್ತದೆ. ಉದಾಹರಣೆಗೆ, ಚಿತ್ರ ಬರೆಯುವ ಸ್ಪರ್ಧೆ ಎಂದು ಇದ್ದರೆ ಹಾಳೆಗಳು, ಬಣ್ಣಗಳಿಗೆಲ್ಲ ಖರ್ಚು ತಗಲುತ್ತದೆ. ಕ್ವಿಜ್ ಸ್ಪರ್ಧೆ ಎಂದಾದರೆ ಜಿಲ್ಲಾ ಕೇಂದ್ರ ಅಥವಾ ತಾಲ್ಲೂಕು ಕೇಂದ್ರಕ್ಕೆ ಹೋಗಿ ಬರಲು ಖರ್ಚು ತಗಲುತ್ತದೆ. ಈ ಖರ್ಚನ್ನು ವಿದ್ಯಾರ್ಥಿಗಳ ತಲೆಗೆ ಹಾಕಬಾರದು. ವಿದ್ಯಾರ್ಥಿಗಳನ್ನು ಕಳಿಸಿಕೊಡಿ ಎಂದು ಶಿಕ್ಷಣ ಸಂಸ್ಥೆಗಳಿಗೆ ಹೇಳುವಾಗ, ತಗಲುವ ಖರ್ಚಿನ ಕುರಿತ ಮಾಹಿತಿಯನ್ನು ಶಿಕ್ಷಣ ಸಂಸ್ಥೆಗೆ ಮುಂಚಿತವಾಗಿಯೇ ನೀಡಬೇಕು.

ಎರಡನೆಯದಾಗಿ, ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಭಾಗವಹಿಸಿದ ಪ್ರಮಾಣಪತ್ರವನ್ನು ನೀಡಬೇಕು. ಸ್ಪರ್ಧೆ ನಡೆಸುವ ಮೊದಲೇ ಬಹುಮಾನವನ್ನು ಘೋಷಿಸಬೇಕು. ಸಮಾರಂಭ ನಡೆಸಿ ಬಹುಮಾನಿತರನ್ನು ಕರೆಸಿ ಬಹುಮಾನ ವಿತರಣೆ ಮಾಡುತ್ತಾರೋ ಅಥವಾ ಆಯಾ ಶಾಲಾ ಕಾಲೇಜುಗಳಿಗೇ ಕಳಿಸುತ್ತಾರೋ ಎಂಬುದನ್ನು ಸ್ಪಷ್ಟಪಡಿಸಬೇಕು.

ಮೂರನೆಯದಾಗಿ, ನಡೆಸಲಾಗುವ ಸ್ಪರ್ಧೆಗಳು ವಿದ್ಯಾರ್ಥಿಗಳ ಕಲಿಕೆಯನ್ನು ಯಾವ ರೀತಿ ಉತ್ತಮೀಕರಿಸುತ್ತವೆ ಎಂಬ ವಿವರಣೆಯನ್ನು ಪಡೆದ ನಂತರವೇ ಸಂಬಂಧಿಸಿದ ಅಧಿಕಾರಿಗಳು ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಅನುಮತಿ ನೀಡಬೇಕು. ಶಾಲೆಗಳಲ್ಲೇ ಬಹಳಷ್ಟು ಸ್ಪರ್ಧೆಗಳು ನಡೆಯುವುದರಿಂದ ಮತ್ತಷ್ಟು ಹೆಚ್ಚುವರಿ ಸ್ಪರ್ಧೆಗಳ ಅಗತ್ಯ ಇದೆಯೇ, ಅಂತಹವುಗಳಿಂದ ಇದುವರೆಗೆ ನಡೆಸಿದ ಸ್ಪರ್ಧೆಗಳಿಗಿಂತ ಭಿನ್ನ ಆಯಾಮದ ಕಲಿಕೆಯನ್ನು ವಿದ್ಯಾರ್ಥಿಗಳಲ್ಲಿ ಉಂಟು ಮಾಡಲಾಗುತ್ತದೆಯೇ ಎಂಬುದನ್ನು ಪರಿಶೀಲಿಸಿ, ಸೂಕ್ತವೆಂದು ಕಂಡುಬಂದರೆ ಮಾತ್ರ ಇಂಥ ಸ್ಪರ್ಧೆಗಳಿಗೆ ಅನುಮತಿ ನೀಡುವುದು, ವಿದ್ಯಾರ್ಥಿಗಳನ್ನು ತೊಡಗಿಸುವುದು ಮಾಡಬೇಕು. ಅಲ್ಲದೆ, ವಿದ್ಯಾರ್ಥಿಗಳಿಗೆ ಇಷ್ಟವಿದ್ದರಷ್ಟೇ ಒತ್ತಾಯವಿಲ್ಲದೆ ಅವರನ್ನು ಸ್ಪರ್ಧೆಗೆ ಕಳಿಸುವ ಕ್ರಮವನ್ನು ನಿಲ್ಲಿಸಬೇಕು.

ಈ ಅಂಶವು 'ಜನ ಇಲ್ಲದ ಸಭೆ'ಗಳಿಗೆ ಕೇಳುಗರಾಗಿ ಬರುವ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ. ಸಭೆಯನ್ನು ಸಾರ್ವಜನಿಕರಿಗಾಗಿ ಸಂಯೋಜಿಸಿ, ಪ್ರೇಕ್ಷಕರು ಇಲ್ಲ ಎಂದು ಮಕ್ಕಳನ್ನು ಕರೆಸುವ ಪದ್ಧತಿಯನ್ನು ಬಿಡಬೇಕು. ಬದಲು ವಿದ್ಯಾರ್ಥಿಗಳನ್ನೇ ಕೇಳುಗರಾಗಿ ದೃಷ್ಟಿಯಲ್ಲಿರಿಸಿಕೊಂಡು ಸಭೆಯನ್ನು ಸಂಘಟಿಸಿದಾಗ ವಿದ್ಯಾರ್ಥಿಗಳನ್ನು ಕೇಳುಗರನ್ನಾಗಿ ಕರೆಸುವುದು ಸರಿಯಾಗಿರುತ್ತದೆ. ಆಗ ವಿದ್ಯಾರ್ಥಿಗಳಿಗೆ ಅರ್ಥವಾಗುವ ಹಾಗೆ ಹೇಳುವ ಉಪನ್ಯಾಸಕರು ಬೇಕಾಗುತ್ತಾರೆ.

ಸ್ಪರ್ಧೆ, ಸಭೆ- ಸಮಾರಂಭಗಳು ಶಾಲೆ, ಕಾಲೇಜು ಗಳಲ್ಲೇ ನಡೆಯುತ್ತವೆ. ಆಗ ಅವು ಸಹಜವಾಗಿ ವಿದ್ಯಾರ್ಥಿಗಳನ್ನೇ ಪರಿಗಣಿಸಿ ಸಂಘಟಿಸಲ್ಪಟ್ಟಿರುತ್ತವೆ. ಇದೇ ಮಾದರಿಯಲ್ಲಿ ಇಲ್ಲದ ಬೇರೆ ಸಮಾರಂಭಗಳಿಗೆ ವಿದ್ಯಾರ್ಥಿಗಳನ್ನು ನಿಯೋಜಿಸುವಾಗ ಬಹಳಷ್ಟು ಎಚ್ಚರಿಕೆ ಇರಬೇಕು. ಸಂಘಟಕರು ಕೇಳಿದರು ಎಂಬ ಕಾರಣಕ್ಕಾಗಿಯೇ ವಿದ್ಯಾರ್ಥಿಗಳನ್ನು ನಿಯೋಜಿಸುವ ಪದ್ಧತಿ ವಿದ್ಯಾರ್ಥಿಗಳಿಗೆ ಅನುಕೂಲಕಾರಿ ಆಗಿರಬೇಕಾಗಿಲ್ಲ. ಈ ದಿಸೆಯಲ್ಲಿ ಸಂಘಟಕರು ಮತ್ತು ವಿದ್ಯಾಸಂಸ್ಥೆಗಳು ಯೋಚಿಸಬೇಕು.

ಚುರುಮುರಿ

ಹರಾಜ್ ಹರಟೆ!

● ತುರುವೇಕೆರೆ ಪ್ರಸಾದ್

'ನಮ್ ಕ್ರಿಕೆಟ್ ಆಟಗಾರರ ನೋಡ್ರಪ್ಪ, ಕೋಟಿ ಕೋಟಿಗೆ ಹರಾಜಾಗವ್ರೆ' ಅಂದ ಗುದ್ಲಿಂಗ ಹರಟೆಕಟ್ಟೇಲಿ. 'ಊ ಕಣ್ಲಾ, ಅಯ್ಯರ್, ಪಂತು ಸೇಲಾದ್ರೂ ಪಡಿಕ್ಕಲ್ಲು ಪಾಪ ಮೊದಲ್ನೇ ದಿನ ಅಂಗೇ ಕುಂತು ವಾಪಸ್ ಓಗಿತ್ತು. ಆಮೇಲೆ ಸದ್ಯ ಮೂಲಬೆಲೆಗೇ ಸೇಲಾಯ್ತು' ಎಂದ ಮಾಲಿಂಗ.

'ಅದಿರ್‍ಲಿ, ಅದ್ಯಾವುದೊ ಉಡ್ಗ ವೈಭವ್ ಅಂತೆ, ಅವನು 1.1 ಕೋಟಿಗೆ ಹರಾಜಾಗವ್ನೆ. ನಮ್ ಮಕ್ಕಳೂ ಇವೆ, ನಮ್ಮನ್ನೇ ಪುಕ್ಕಟೆ ಹರಾಜು ಹಾಕ್ತವೆ' ಎಂದು ಲೊಚಗುಟ್ಟಿದ ಕಲ್ಲೇಶಿ.

'ಯಥಾ ಎಂಡ್ರು ತಥಾ ಮಕ್ಕು... ಮನೇಲಿ ಎಂಡ್ರು ಹರಾಜು ಆಕ್ತಾಳೆ. ಮಕ್ಕಳು ಆಚೆ ಹಾಕ್ತಾವೆ. ಕೋಟಿ ಕೋಟಿಗೆ ಹರಾಜಾದ್ರೂ ಮನೇಲಿ ನೋ ಅವಾಜು, ಮುರಿಯಂಗಿಲ್ಲ ಹೆಂಡ್ತಿ ರಿವಾಜು'.

'ರಾಜಕೀಯದಲ್ಲಿ ಉಲ್ಟಾ ಕಣ್ರಲಾ! ಅಪ್ಪ, ಮಕ್ಕಳು ಇಬ್ರನ್ನೂ ಜನನೇ ಹರಾಜ್ ಹಾಕ್ತಾರೆ. ಉಪಚುನಾವಣೇಲಿ ಅಂಗೇ ಆಗಿದ್ದಲ್ವಾ?'

'ವೂ ಕಣೇಳಪ್ಪ, ರಾಜಕೀಯದಲ್ಲಿ ಯಾರೂ ಈಗ ಮೂಲಬೆಲೆಗೆ ಹರಾಜು ಆಗಕ್ಕೇ ರೆಡಿ ಇಲ್ಲ'.

'ರಾಜಕೀಯದಲ್ಲಿ ಮೂಲಬೆಲೆ ಅಂದ್ರೇನು?'

'ಕ್ಷೇತ್ರಕ್ಕೆ ಕೊಡೊ ವಾರ್ಷಿಕ ಅನುದಾನ ಪ್ಲಸ್ ಎಲೆಕ್ಷನ್ಗೆ ಖರ್ಚು ಮಾಡಿದ್ದು ಇದು ಮೂಲಬೆಲೆ! ಆಪರೇಶನ್ ಮಾಡೋರು ಇದ್ರ ಮೇಲೆ ಹರಾಜ್ ಕೂಗ್ಬೇಕು'.

'ಹರಾಜಿಗೆ ಎಂಗ್ಲಾ ರೇಟ್ ಫಿಕ್ಸ್ ಮಾಡಾದು?'

'ಮೂಲಬೆಲೆ ಪ್ಲಸ್ ಪಕ್ಷಾಂತರದ ಅನುಭವ ಪ್ಲಸ್ ಹಗರಣಗಳ ಅನುಭವ ಪ್ಲಸ್ ಮಾತೃಪಕ್ಷದಲ್ಲಿ ಗುಂಪುಗಾರಿಕೆ ಇದರ ಆಧಾರದ ಮೇಲೆ ಹರಾಜ್ ರೇಟ್ ಫಿಕ್ಸ್ ಆಗ್ತದೆ ಕಣ್ಲಾ'.

'ನಮ್ಮ ಸೈನಿಕಣ್ಣ ಏನೋ ಇಡೀ ತೆನೆ ರೆಜಿಮೆಂಟ್ನ ಒಂದೇ ಸಾರಿಗೆ ಗಪ್ಪಂತ ರಾಹು ಕೇತು ಚಂದ್ರನ್ನ ನುಂಗ್ದಂಗೆ ಗುಳಕಾಯಿಸ್ಬುಡ್ತೀನಿ ಅಂತ ಗಡಾಬಾಜು ಹಾಕವ್ರಲ್ಲ'.

'ಅದೇನ್ ಕ್ರಿಕೆಟ್ ಟೀಂ ಏನ್ಲಾ ಒಂದೇ ಸರಿಗೆ ಗುಬರಾಕ್ಕಳಕ್ಕೆ? ಹರಾಜಲ್ಲಿ ಕೂಗ್ದೋವನ್ನ ಪೊಗಡ್ಡಸ್ತಾಗಿ ಸಾಕ್ಬೇಕು. ಇಲ್ಲಾಂದ್ರೆ ಅವು ಬೇತಾಳನ್ ತರ ಹರಾಜು ಕೂಗ್ದೋರ ಹೆಗಲು ಹತ್ತುತವೆ. ಮೊದ್ಲು ಸೈನಿಕಣ್ಣ ಸಂಪುಟದಲ್ ಒಂದು ಸೀಟು ಹರಾಜು ಕೂಕ್ಕಂಡ್ರೇ ಸಾಕಾಗದೆ' ಎಂದ ಪರ್ಮೇಶಿ. ಎಲ್ಲಾ ಹೌದ್ಹೌದು ಎಂದು ಹಲ್ಕಿರಿದರು.

ಸಂಗತ

ಶಾಲೆಯಲ್ಲಿ ಇದ್ದೂ ಇಲ್ಲದಿರುವುದು!

ಶಿಕ್ಷಕರ ಒಡನಾಟ ದೊರೆಯದ ಮಗು ಶಾಲೆಯಲ್ಲಿ ಇದ್ದೂ ಇಲ್ಲದಂತೆ

● ಉದಯ ಗಾಂವಕಾರ

ಸರ್ಕಾರಿ ಶಾಲೆಗಳು ಈಗ ಬಡವರು ಮತ್ತು ಸಾಮಾಜಿಕ ಏಣಿಯ ಕೆಳಗಿನ ಮೆಟ್ಟಿಲುಗಳಲ್ಲಿ ಇರುವವರಿಗಾಗಿ ಮಾತ್ರ ಇವೆ ಎಂಬಂತೆ ಆಗಿದೆ. ಸಾಂಪ್ರದಾಯಿಕ ಮೇಲ್ವರ್ಗದ ಪೋಷಕರು ಮತ್ತು ಹೊಸದಾಗಿ ಹುಟ್ಟಿಕೊಂಡ ಮೇಲ್ವರ್ಗಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸುತ್ತಿಲ್ಲ. ಇದರಿಂದಾಗಿ ಸರ್ಕಾರಿ ಶಾಲೆಗಳ ಬೇಡಿಕೆಗಳ ಬಗ್ಗೆ ಗಟ್ಟಿಯಾಗಿ ದನಿ ಎತ್ತುವ ಸಮೂಹವೇ ಇಲ್ಲವಾಗಿದೆ.

ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಿಂದ ಕೂಲಿಕಾರ್ಮಿಕ ಪೋಷಕರು ಕೆಲಸ ಅರಸಿ ಪ್ರತಿವರ್ಷ ದಕ್ಷಿಣ ಕರ್ನಾಟಕದ ಕಡೆ ವಲಸೆ ಬರುತ್ತಾರೆ. ಮೂರು–ನಾಲ್ಕು ತಿಂಗಳು ತಮ್ಮ ಊರಿಂದ ಬೇರೆಡೆ ಅವರು ಸ್ಥಳಾಂತರವಾದಾಗ ಅವರ ಮಕ್ಕಳೂ ಅವರೊಂದಿಗೆ ತೆರಳುವುದು ಅನಿವಾರ್ಯ. ಈ ಅವಧಿಯಲ್ಲಿ ಆ ಮಕ್ಕಳು ಶಾಲೆಯಿಂದ ಹೊರಗಿರುತ್ತಾರೆ. ಅವರು ಮರಳಿ ತಮ್ಮೂರಿಗೆ ಹೋದಾಗ, ಅದಾಗಲೇ ಸಂಭವಿಸಿರುವ ಕಲಿಕೆಯ ಹಿನ್ನಡೆಯನ್ನು ಸರಿದೂಗಿಸಿಕೊಳ್ಳಲು ಅವರಿಗೆ ಇರುವ ದಾರಿಗಳು ಅವಾಸ್ತವಿಕವಾಗಿ ಇರುವುದರಿಂದ ಮುಂದಿನ ಕಲಿಕೆ ಅವರ ಕೈಗೆಟಕುವುದಿಲ್ಲ.

ತರಗತಿ ಕಲಿಕೆಗೆ ಒಂದು ನಿಗದಿತ ವೇಗ ಇರಬೇಕಾಗುತ್ತದೆ. ಆದ್ದರಿಂದ ದೀರ್ಘಕಾಲ ಗೈರುಹಾಜರಾದ ಮಕ್ಕಳು ಮತ್ತೆ ತರಗತಿಯೊಳಗೆ ಬಂದಾಗ ಶ್ರೇಣೀಕರಣದ ಸಮಸ್ಯೆ ಉಂಟಾಗುತ್ತದೆ. ಮಾತ್ರವಲ್ಲ, ಶಿಕ್ಷಕರು ತರಗತಿಯಲ್ಲಿ ರೂಪಿಸುವ ಕಲಿಕೆಯ ಸನ್ನಿವೇಶಗಳು ದೀರ್ಘ ಸಮಯ ಶಾಲೆಯಿಂದ ಹೊರಗುಳಿದು ಮರಳಿದ ಮಕ್ಕಳಿಗೆ ಅಸಹನೀಯ ಎನಿಸುತ್ತವೆ. ಅವರು ಶಾಲೆ ಬಿಡುತ್ತಾರೆ. ಇಂತಹ ಪ್ರವೃತ್ತಿಯನ್ನು ಕಡಿಮೆ ಮಾಡಲು ಬೇರೆ ಬೇರೆ ಕಾರ್ಯಕ್ರಮಗಳು ಇವೆಯಾದರೂ ಅವುಗಳೆಲ್ಲ ಸಹಜ ತರಗತಿಯ ಸನ್ನಿವೇಶಗಳೊಡನೆ ಹೊಂದಿಕೆಯಾಗದೇ ಇರುವುದರಿಂದ ಹೆಸರಿಗಷ್ಟೇ ಎಂಬಂತೆ ಆಗಿವೆ.

ಇದರ ಜೊತೆಗೆ ಇನ್ನೊಂದು ಬಗೆಯ ಗೈರುಹಾಜರಿಯನ್ನೂ ನಾವು ಕಾಣಬಹುದು. ಮಕ್ಕಳು ನಿಯಮಿತವಾಗಿ ಶಾಲೆಗೆ ಬರುತ್ತಾರಾದರೂ ಅವರಿಗೆ ಶಿಕ್ಷಕರ ಒಡನಾಟ ದೊರೆಯದಿದ್ದರೆ ಅವರು ಶಾಲೆಯಲ್ಲಿ ಇದ್ದೂ ಇರದಂತೆಯೇ ಆಗುತ್ತದೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ಅವಶ್ಯಕತೆಯನ್ನು ನಿರ್ಧರಿಸಲಾಗುತ್ತದೆ. ಐದು ತರಗತಿಗಳಿಗೆ ಒಬ್ಬರೇ ಶಿಕ್ಷಕ ಇರುವ ಎರಡು ಸಾವಿರ ಶಾಲೆಗಳು ಕರ್ನಾಟಕದಲ್ಲಿವೆ. ಏಳು ತರಗತಿಗಳಿಗೆ ಮೂವರು ಶಿಕ್ಷಕರು ಇರುವುದು ಸಾಮಾನ್ಯವಾಗಿದೆ. ಒಬ್ಬ ಶಿಕ್ಷಕಿ ವಾರದಲ್ಲಿ ಗರಿಷ್ಠ ನಲವತ್ತೈದು ಅವಧಿಗಳನ್ನು ತೆಗೆದುಕೊಳ್ಳಬಲ್ಲರು. ಐದು ತರಗತಿಗೆ ಒಬ್ಬರೇ ಶಿಕ್ಷಕಿ ಇರುವುದೆಂದರೆ, ಒಂದು ವಾರಕ್ಕೆ ಒಂದು ತರಗತಿಗೆ ಅವರು ಲಭ್ಯವಾಗುವುದು ಒಂಬತ್ತು ಅವಧಿಗಳಿಗೆ ಮಾತ್ರ.

ದಿನವೂ ಶಾಲೆಗೆ ಬಂದೂ ಕಲಿಕೆಯ ವೇಗಕ್ಕೆ ಹೊಂದಿಕೊಳ್ಳದೆ ಅಥವಾ ತನ್ನ ತರಗತಿಯಲ್ಲಿ ಕಲಿಯಬೇಕಾದ ಕಲಿಕೆಯ ಫಲಗಳನ್ನು ಹೊಂದದೆ ಆ ಮಗು ಮುಂದಿನ ತರಗತಿಗೆ ಹೋಗಬೇಕಾಗುತ್ತದೆ. ಅಲ್ಲಿ ಹೊಸ ನಿರೀಕ್ಷೆಗಳಿರುತ್ತವೆ. ಅಲ್ಲಿ ಕಲಿಯಬೇಕಾದ ಸಂಗತಿಗಳೇ ಬೇರೆಯಾಗಿರುತ್ತವೆ. ಕಲಿಕೆಯ ಫಲಗಳನ್ನಾಧರಿಸಿ ರೂಪಿಸಿದ ತರಗತಿವಾರು ಪಠ್ಯವಸ್ತುವು ಏಣಿಯಂತೆ ಜೋಡಿಸಿಕೊಂಡಿದೆ ಎಂದು ಹೇಳಲಾಗುತ್ತಿದ್ದರೂ ಪೂರ್ವ ಕಲಿಕೆಗೆ ಅಲ್ಲಿ ಅವಕಾಶ ಕಡಿಮೆ.

ಪ್ರತಿ ತರಗತಿಯ ಪ್ರತಿ ಅವಧಿಯಲ್ಲೂ ನಿರ್ದಿಷ್ಟ ಕಲಿಕೆಯ ಸಂದರ್ಭಗಳನ್ನು ಒದಗಿಸಿದ್ದೇವೆಯೇ ಎಂಬುದು ಮುಖ್ಯ ಪ್ರಶ್ನೆ ಮತ್ತು ಅದೇ ಕಲಿಕೆಯ ವೇಗವನ್ನು ನಿರ್ಧರಿಸುತ್ತದೆ. ಆದರೆ, ಪ್ರತಿ ತರಗತಿಗೂ ನಮ್ಮಲ್ಲಿ ಶಿಕ್ಷಕರಿಲ್ಲ. ಐದು ತರಗತಿಗಳಿಗೆ ಒಬ್ಬರೇ ಶಿಕ್ಷಕರು ಇದ್ದಾರೆಂದರೆ, ಮಗುವಿಗೆ ವಾರಕ್ಕೆ ಒಂಬತ್ತು ಅವಧಿಗಳು ಮಾತ್ರ ಶಿಕ್ಷಕರ ಬೆಂಬಲ ದೊರೆಯುತ್ತದೆ. ಮಗುವು ಐದು ವಾರಗಳು ಶಾಲೆಗೆ ಬಂದರೂ ಕಲಿಕೆಯ ದೃಷ್ಟಿಯಿಂದ ಆ ಮಗು ನಾಲ್ಕು ವಾರಗಳಷ್ಟು ಗೈರುಹಾಜರಾದಂತೆ! ಐದನೇ ತರಗತಿಯವರೆಗೆ ಮಗು ಮೂಲಕೌಶಲಗಳನ್ನು ಕಲಿಯದಿದ್ದರೆ ಅದಕ್ಕೆ ಮುಂದಿನ ಕಲಿಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಕಲಿಯಲು ಅಗತ್ಯವಾದ ಕಲಿಕಾ ಕೌಶಲವೇ ಮಗುವಿಗೆ ದೊರೆತಿರುವುದಿಲ್ಲ.



ಶಾಲೆಗಳಲ್ಲಿ ತರಗತಿವಾರು ಶಿಕ್ಷಕರಿಲ್ಲ. ಇರುವ ಶಿಕ್ಷಕರು ಕಲಿಕೆಗೆ ನೇರವಾಗಿ ಸಂಬಂಧಿಸದ ಕಚೇರಿ ಕಾರ್ಯಗಳಲ್ಲಿ ಶೇಕಡ 30ರಷ್ಟು ಶಾಲಾ ಸಮಯವನ್ನು ಕಳೆಯಬೇಕಿದೆ. ಒಂದು ತಿಂಗಳಿಗೆ ಏನಿಲ್ಲವೆಂದರೂ ಐವತ್ತರಿಂದ ಅರವತ್ತು ಆದೇಶಗಳು, ಜ್ಞಾಪನಗಳು, ಸುತ್ತೋಲೆಗಳು ಬೇರೆ ಬೇರೆ ಹಂತಗಳಿಂದ ಶಿಕ್ಷಕರನ್ನು ತಲುಪುತ್ತವೆ. ಇವುಗಳಲ್ಲದೆ ವಾಟ್ಸ್‌ಆ್ಯಪ್ ಗ್ರೂಪುಗಳ ಮೂಲಕ ಸಂದೇಶಗಳು ಬರುತ್ತವೆ. ಬಹುತೇಕ ಸಂದೇಶಗಳು, ಮಾಡಿದ ಕಾರ್ಯಕ್ರಮಗಳ ಫೋಟೊ ಅಪ್ಲೋಡ್ ಮಾಡುವುದು, ಅಂಕಿ ಅಂಶ ನೀಡುವಂತಹ ದಾಖಲೆಗಳಿಗೆ ಸಂಬಂಧಿಸಿದ ಕೆಲಸಗಳನ್ನು ಹೇರುತ್ತಿರುತ್ತವೆ. ಇವೆಲ್ಲದರ ಪರಿಣಾಮವಾಗಿ, ಮಕ್ಕಳು ಶಾಲೆಯಲ್ಲಿ ಇದ್ದೂ ಕಲಿಕೆಯ ಸಂದರ್ಭಗಳಿಂದ ಹೊರಗೆ ಉಳಿಯಬೇಕಾಗುತ್ತದೆ.

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಕಲಿಕಾ ಬಲವರ್ಧನೆ ಮಾಡಲು ವಿಶೇಷ ತರಬೇತಿ, ಪೂರಕ ಪಠ್ಯದಂತಹವುಗಳನ್ನೆಲ್ಲ ಒದಗಿಸಲಾಗುತ್ತದೆ. ಮೂಲಭೂತ ಕಲಿಕೆ ಮತ್ತು ಸಾಂಖ್ಯಿಕ ಜ್ಞಾನವನ್ನು ಖಾತರಿಪಡಿಸಲು ಏನೇನೋ ಕಾರ್ಯಕ್ರಮಗಳಿವೆ. ಆದರೆ, ಶಿಕ್ಷಕರ ಕೊರತೆ ನೀಗಿಸದ ವಿನಾ ಮಾಡುವ ಬೇರೆಲ್ಲ ಕಾರ್ಯಕ್ರಮಗಳು ಹೊಳೆಯಲ್ಲಿ ತೊಳೆದ ಹುಣಸೆಯಂತೆಯೇ ಸರಿ.

ವಾಚಕರ ವಾಣಿ

ಸಂಸತ್ತಿನ ಕಲಾಪಕ್ಕೆ ಅಡ್ಡಿ: ಪ್ರಜಾಪ್ರಭುತ್ವದ ಅಣಕ

ಸಂಸತ್ತಿನ ಚಳಿಗಾಲದ ಅಧಿವೇಶನ ಪ್ರಾರಂಭವಾಗಿರುವುದು ನೆಪಮಾತ್ರಕ್ಕೆ ಎಂಬಂತಾಗಿದೆ. ಕಲಾಪಗಳು ನಡೆಯದೇ ನಾಲ್ಕು ದಿವಸಗಳು ವ್ಯರ್ಥವಾಗಿವೆ. ಸದನದಲ್ಲಿ ಗದ್ದಲ ಎಬ್ಬಿಸುವ ಜನಪ್ರತಿನಿಧಿಗಳು ಹತ್ತಾರು ಕೋಟಿ ರೂಪಾಯಿ ನಷ್ಟ ಉಂಟು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ! ಇದಕ್ಕೆಂದೇ ಜನ ಇವರನ್ನು ಆಯ್ಕೆ ಮಾಡಿ ಕಳಿಸಿದ್ದೇ? ಸರ್ಕಾರ ಯಾವುದೇ ವಿಷಯದ ಚರ್ಚೆಗೆ ಸಿದ್ಧವೆಂದು ಆಶ್ವಾಸನೆ ಕೊಟ್ಟ ಮೇಲೂ ವಿರೋಧ ಪಕ್ಷಗಳು ತಮ್ಮ ಮೂಗಿನ ನೇರಕ್ಕೆ ಮಾತ್ರ ಸದನದಲ್ಲಿ ಕಲಾಪಗಳು ನಡೆಯಬೇಕು ಎಂದು ಪಟ್ಟು ಹಿಡಿದಂತೆ ಕಾಣುತ್ತದೆ. ಸದನದ ಬಾವಿಗಿಳಿದು ಪ್ರತಿಭಟನೆ ನಡೆಸುವುದು, ಘೋಷಣೆ ಕೂಗುವುದು ಸಾಮಾನ್ಯ ನಡವಳಿಕೆಯಾಗಿದೆ. ಸದನವು ಸಾರ್ವಜನಿಕ ರಸ್ತೆಯೇ? ತಾವು ಪ್ರಸ್ತಾಪಿಸಿದ ವಿಷಯಗಳಿಗೇ ಆದ್ಯತೆ ಕೊಡಬೇಕು, ಅವನ್ನೇ ಮೊದಲು ಚರ್ಚೆಗೆ ಎತ್ತಿಕೊಳ್ಳಬೇಕು ಎಂದು ಪಟ್ಟು ಹಿಡಿದು, ಪೂರ್ವನಿಶ್ಚಿತ ಪ್ರಶ್ನೋತ್ತರ ಕಾಲದಂತಹ ನಿಗದಿತ ಕಲಾಪಗಳು ನಡೆಯದಂತೆ ನೋಡಿಕೊಳ್ಳುವಲ್ಲಿ ವಿರೋಧ ಪಕ್ಷಗಳು ಯಶಸ್ವಿಯಾಗಿರುವುದು ಪ್ರಜಾಪ್ರಭುತ್ವಕ್ಕೆ ಆಗುತ್ತಿರುವ ಅಪಮಾನ.

ಅಷ್ಟಕ್ಕೂ ಅವು ಚರ್ಚೆಯಾಗಬೇಕೆಂದು ಒತ್ತಾಯಿಸುತ್ತಿರುವ ವಿಷಯಗಳು ಅವರು ಭಾವಿಸುವಂತೆ ಬೇರೆ ಎಲ್ಲವನ್ನೂ ಬದಿಗಿರಿಸಿ ಅತ್ಯಂತ ಜರೂರಾಗಿ ಕೈಗೆತ್ತಿಕೊಳ್ಳುವ ವಿಷಯಗಳೇ? ಗದ್ದಲದ ಕಾರಣದಿಂದಾಗಿ, ಚರ್ಚೆಗಳಲ್ಲಿ ಭಾಗವಹಿಸಬಯಸುವ ಇತರ ಸಂಸದರ ಹಕ್ಕಿಗೆ ಸಂಚಕಾರವೊದಗಿದೆ ಎನ್ನುವುದನ್ನು ಲೋಕಸಭೆ ಸ್ಪೀಕರ್ ಆಗಲಿ, ರಾಜ್ಯಸಭೆಯ ಸಭಾಪತಿಯಾಗಲಿ ಯಾಕೆ ಪರಿಗಣಿಸುತ್ತಿಲ್ಲ ಎನ್ನುವುದು ಅರ್ಥವಾಗದು. ನಿರಂತರವಾಗಿ ಗದ್ದಲ, ಘೋಷಣೆಗಳಲ್ಲಿ ತೊಡಗಿರುವವರಿಗೆ ಎಚ್ಚರಿಕೆ ನೀಡಿ, ಆಗಲೂ ಪರಿಸ್ಥಿತಿ ಸುಧಾರಿಸದಿದ್ದಲ್ಲಿ ಅಂಥವರನ್ನು ಸದನದಿಂದ ಹೊರಗೆ ಹೋಗುವಂತೆ ಆದೇಶಿಸಲು ಯಾಕೆ ಹಿಂಜರಿಕೆ? ಎರಡು ಸದನಗಳಲ್ಲೂ ಕಲಾಪಗಳು ಸುಸೂತ್ರವಾಗಿ ನಡೆಯದಂತೆ ಮಾಡುವವರದೇ ಕೈ ಮೇಲಾಗುವುದಾದರೆ, ಅಂತಹ ಸನ್ನಿವೇಶವು ಪ್ರಜಾಪ್ರಭುತ್ವದ ಅಣಕ.

ಸಾಮಗ ದತ್ತಾತ್ರಿ, ಬೆಂಗಳೂರು

ಚಳಿ... ಗಾಳಿ!

ರಾಜಧಾನಿ ಬೆಂಗಳೂರಿನಲ್ಲಿ
ಶೀತ ಗಾಳಿಯ ಪರಿಣಾಮ
ಮೈ ಕೊರೆವ ಚಳಿ,
ರಾಜ್ಯದಲ್ಲಿ ಒಂದೆರಡು
ಪಕ್ಷಗಳಲ್ಲೂ ಬಿಸಿಬಿಸಿಯಾಗಿ
ಬೀಸಲಾರಂಭಿಸಿಹುದಂತೆ
ಭಿನ್ನಮತದ ಬಿರುಗಾಳಿ!

ಮ.ಗು.ಬಸವಣ್ಣ
ಮೈಸೂರು

ರಾಜ್ಯೋತ್ಸವ ಪ್ರಶಸ್ತಿ: ಇತರರು ನೀಡದಿರಲಿ

ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಸಮಾಜಕ್ಕಾಗಿ ದುಡಿದ ವಿವಿಧ ವ್ಯಕ್ತಿಗಳಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುತ್ತಿರುವುದು ಸರಿಯಷ್ಟೆ. ರಾಜ್ಯೋತ್ಸವ ಪ್ರಶಸ್ತಿಯನ್ನು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಸರ್ಕಾರದ ವತಿಯಿಂದ ಕೊಡಮಾಡಲಾಗುತ್ತದೆ. ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿ ಅರ್ಹರನ್ನು ಗುರುತಿಸಲಾಗುತ್ತದೆ. ಇತ್ತೀಚೆಗೆ ಕೆಲವು ಸಂಘ-ಸಂಸ್ಥೆಗಳೂ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಲು ಪ್ರಾರಂಭಿಸಿವೆ. ಇದು ಒಂದು ರೀತಿಯಲ್ಲಿ ಗೊಂದಲವನ್ನು ಉಂಟು ಮಾಡುತ್ತಿದೆ. ಆದ್ದರಿಂದ ಸರ್ಕಾರ ಒಂದು ಆದೇಶ ಹೊರಡಿಸಿ, ರಾಜ್ಯ ಸರ್ಕಾರ ನೀಡುವ ಪ್ರಶಸ್ತಿಗಳ ಹೆಸರಿನಲ್ಲಿ ಖಾಸಗಿ ಸಂಘ-ಸಂಸ್ಥೆಗಳು ಪ್ರಶಸ್ತಿಯನ್ನು ನೀಡದಂತೆ ಸೂಚನೆ ನೀಡುವ ಅಗತ್ಯವಿದೆ.

ಈ.ಬಸವರಾಜು, ಬೆಂಗಳೂರು

ಒಟಿಎಸ್ ಅವಧಿ ವಿಸ್ತರಣೆ ಅಗತ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಆಸ್ತಿ ತೆರಿಗೆ ಸುಸ್ತಿದಾರರಿಗಾಗಿ ಜಾರಿಗೆ ತಂದಿರುವ, ಎರಡು ಬಾರಿ ವಿಸ್ತರಣೆಗೊಂಡಿರುವ 'ಒಂದು ಬಾರಿ ಪರಿಹಾರ ಯೋಜನೆ'ಯ (ಒಟಿಎಸ್) ಕಾಲಾವಧಿಗೆ ಈ ತಿಂಗಳ ಕೊನೆವರೆಗೆ ಗಡುವು ನೀಡಲಾಗಿದೆ. ಡಿಸೆಂಬರ್ 1ರಿಂದ ದುಪ್ಪಟ್ಟು ತೆರಿಗೆ ವಿಧಿಸಲಾಗುವುದು ಎಂದು ಸರ್ಕಾರ ಭಯ ಹುಟ್ಟಿಸಿದೆ. ಪತ್ರಿಕೆಗಳಲ್ಲಿ ಬಂದಿರುವ ವರದಿಗಳ ಪ್ರಕಾರ, ವಾಣಿಜ್ಯ ಕಟ್ಟಡದ ಆಸ್ತಿಗಳಿಗಿಂತಲೂ ಮನೆಗಳ ಆಸ್ತಿ ತೆರಿಗೆ ಬಾಕಿಯೇ ಹೆಚ್ಚು ಇದೆ. ಗಡುವಿನ ಅವಧಿ ಹತ್ತಿರ ಬರುತ್ತಿದ್ದಂತೆಯೇ ಬಿಬಿಎಂಪಿ ಕಚೇರಿಗಳ ಮುಂದೆ ನೂಕುನುಗ್ಗಲು ಏರ್ಪಟ್ಟಿತ್ತು. ಕೆಲವರು ತಮ್ಮ ಹೆಸರುಗಳಿಗೆ ರಸೀದಿ ಬದಲಾವಣೆ ಮಾಡಿಕೊಳ್ಳಲು ಕಾಯುವಂತಹ ಪರಿಸ್ಥಿತಿ ಇತ್ತು. ತಾಂತ್ರಿಕ ಸಮಸ್ಯೆಯಾದ ಸರ್ವರ್ ಸಿಗುತ್ತಿಲ್ಲ, ಸರ್ವರ್ ಡೌನ್ ಎಂಬ ಮಾತುಗಳು ಅಲ್ಲಿಗೆ ಹೋದಾಗ ಕೇಳಿಬಂದವು.

ಇಷ್ಟೇ ಅಲ್ಲದೆ ಹೆಸರು ಬದಲಾವಣೆಗೆ ಕಂದಾಯ ಅಧಿಕಾರಿಗಳ ಬೆರಳಚ್ಚು (ಥಂಬ್) ಅವಶ್ಯವಾಗಿರುತ್ತದೆ. ಅಲ್ಲಿ ಅಧಿಕಾರಿಗಳೇ ಇರುವುದಿಲ್ಲ. ಅಧಿಕಾರಿಗಳ ಫೋನ್‌ಗಳು ಸಂಪರ್ಕಕ್ಕೆ ಸಿಗುವುದಿಲ್ಲ. ಸಿಕ್ಕರೂ ಕೇಂದ್ರ ಕಚೇರಿಯಲ್ಲಿ ಸಭೆ, ಸರ್ವೆ ಎಂಬ ಸಬೂಬುಗಳು ಸಿಗುತ್ತವೆ. ನಾನು ಈ ಸಂಬಂಧ ನಾಲ್ಕೈದು ದಿನಗಳಿಂದ ಕೆಂಗೇರಿಯ ಬಿಬಿಎಂಪಿ ಕಚೇರಿಗೆ ಅಲೆದು ಬೇಸರಗೊಂಡಿದ್ದೇನೆ. ಸರ್ಕಾರವು ಒಟಿಎಸ್ ವ್ಯವಸ್ಥೆಯನ್ನು ಈ ವರ್ಷದ ಡಿಸೆಂಬರ್ ಅಂತ್ಯದವರೆಗೆ ವಿಸ್ತರಿಸಬೇಕೆಂದು ಮನವಿ.

ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ದರ್ಗಾ ವಿವಾದ ಸಮಾಪ್ತಿಗೆ ಪ್ರಧಾನಿ ಸೂಚಿಸಲಿ

ರಾಜಸ್ಥಾನದ ಅಜ್ಮೇರ್‌ನಲ್ಲಿರುವ ಮೊಯಿನುದ್ದೀನ್ ಚಿಶ್ತಿ ದರ್ಗಾ ಒಳಗೆ ಶಿವನ ದೇವಸ್ಥಾನವಿದೆ ಎಂಬುದಾಗಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವುದಕ್ಕೆ ಸಂಬಂಧಿಸಿದಂತೆ ಈಗ ವಿವಾದ ಸೃಷ್ಟಿಯಾಗಿರುವುದನ್ನು ತಿಳಿದು ನೋವಾಯಿತು. ಇದು ಆಗಬಾರದು. ಹಿಂದೂಗಳಿಗೆ ದೇಶದಲ್ಲಿ ಅಸಂಖ್ಯಾತ ಮಂದಿರಗಳಿವೆ. ಅವುಗಳೇ ಸಾಕಾಗಿವೆ. ಮುಸಲ್ಮಾನರು ಹೋಗುವ ಕೆಲವೇ ಪವಿತ್ರ ಕ್ಷೇತ್ರಗಳಲ್ಲಿ ಅಜ್ಮೇರ್ ಸಹ ಒಂದು.

ನಮ್ಮ ಊರಿನಲ್ಲಿ ಓಬಜ್ಜ ಎನ್ನುವವರಿದ್ದರು. ಅವರು ಅಯ್ಯಪ್ಪ ಸ್ವಾಮಿ ಯಾತ್ರಾರ್ಥಿಗಳಿಗೆ 'ಮೊದಲು ನಮ್ಮ ಊರಲ್ಲಿರುವ ಆಂಜನೇಯ ದೇವಸ್ಥಾನದ ದೀಪ ಹಚ್ಚರಪ್ಪ' ಎಂದು ಹೇಳುತ್ತಿದ್ದರು. ಕೆಲವು ಕಡೆಗಳ ದೇವಸ್ಥಾನಗಳಲ್ಲಿ ಪೂಜೆ ಮಾಡಲು ಪೂಜಾರಿಗಳೇ ಇಲ್ಲ. ಈ ಎಲ್ಲದರ ಕಾರಣದಿಂದ, ಪ್ರಧಾನಿ ಮಧ್ಯಪ್ರವೇಶಿಸಿ ವಿವಾದವನ್ನು ಸಮಾಪ್ತಿಗೊಳಿಸುವಂತೆ ತಿಳಿಹೇಳಬೇಕಾಗಿದೆ.

ಗುರು ಜಗಳೂರು, ಹರಿಹರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಕೀಯ ಮತ್ತು ಸಿದ್ಧಾಂತ

ಬಹುತ್ವ, ಸಮಾನತೆ ಪ್ರತಿರೋಧದ ಮಿಳಿತ

● ಪ್ರೊ. ವಲೇರಿಯನ್ ರಾಡ್ರಿಗಸ್



ಕರ್ನಾಟಕ ಎಂಬ ಹೆಸರಿನ ಜೊತೆಗೆ ತಳಕು ಹಾಕಿಕೊಂಡಿರುವ ಸಿದ್ಧಾಂತಗಳನ್ನು ಕೆಲವೊಮ್ಮೆ ಬಹಿರಂಗವಾಗಿಯೇ ಹೇಳಲಾಗಿದ್ದರೂ ಬಹುಪಾಲು ಅದನ್ನು ಲಘುವಾಗಿ ಪರಿಗಣಿಸಿದ್ದೇ ಹೆಚ್ಚು. ಇದು ವಿವಾದರಹಿತವಾದುದೂ ಆಗಿರಲಿಲ್ಲ: ಅದರ ಮೂಲ ಅರ್ಥ ಮತ್ತು ಇತರ ಸಿದ್ಧಾಂತಗಳಿಗೆ ಸಂಬಂಧಿಸಿ ಈ ಹೆಸರು ಯಾವ ರೀತಿ ಸಮರ್ಪಕ ಎಂಬ ವಿಚಾರದಲ್ಲಿ ಕೆಲವರು ತೀವ್ರವಾಗಿ ಆಕ್ಷೇಪಿಸಿದ್ದಾರೆ. ಆದರೆ, ಮುಕ್ತವಾದ ಸಮಾಲೋಚನೆಗಳ ಮೂಲಕ ಹಲವು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲಾಗಿದೆ

ಕರ್ನಾಟಕ ಎಂಬ ಹೆಸರಾಗಿ 50 ವರ್ಷಗಳಾಗಿರುವ ಈ ಸಂದರ್ಭದಲ್ಲಿ ಈ ಹೆಸರಿನೊಂದಿಗೆ ಸೇರಿಕೊಂಡಿರುವ ರಾಜಕೀಯ ಸಿದ್ಧಾಂತಗಳನ್ನು ಮೆಲುಕು ಹಾಕಿಕೊಳ್ಳುವುದು ಅಗತ್ಯ. ಈ ಸಿದ್ಧಾಂತಗಳ ಜಾಡು ಹಿಡಿದು ಸಾಗಲು ಏಕೈಕ ಮೂಲವೇನೂ ಇಲ್ಲ. ಹಾಗಿದ್ದರೂ ರಾಜ್ಯದ ಅತ್ಯಂತ ಗೌರವಾನ್ವಿತ ರಾಜಕೀಯ ನಾಯಕರು ಮತ್ತು ಜನಪ್ರತಿನಿಧಿಗಳು, ಮಹತ್ವದ ಚಿಂತಕರು ಮತ್ತು ಲೇಖಕರ ಅಭಿವ್ಯಕ್ತಿಗಳು, ಸರ್ಕಾರದ ಘೋಷಣೆಗಳು, ಈ ಪ್ರದೇಶದ ಸಾರ್ವಜನಿಕ ಸಂಸ್ಕೃತಿಯ ನಿಯಂತ್ರಕ ನಿಯಮಗಳ ಮೂಲಕ ಈ ಸಿದ್ಧಾಂತಗಳನ್ನು ಪರಿಶೀಲನೆಗೆ ಒಳಪಡಿಸಬಹುದು. ಈ ಹಿಂದೆ ಇದ್ದ ಮೈಸೂರು ಎಂಬ ಹೆಸರಿನ ಜೊತೆಗೆ ಒಂದಷ್ಟು ಭಾವನಾತ್ಮಕವಾದ ನಂಟು ಇತ್ತು. ಆದರೆ, ಹೆಸರು ಬದಲಾವಣೆಗೆ ಅಂತಹ ವಿರೋಧ ಏನೂ ಬಂದಿರಲಿಲ್ಲ. ಕರ್ನಾಟಕ ಎಂಬ ಹೆಸರಿನ ಜೊತೆಗೆ ತಳಕು ಹಾಕಿಕೊಂಡಿರುವ ಸಿದ್ಧಾಂತಗಳನ್ನು ಕೆಲವೊಮ್ಮೆ ಬಹಿರಂಗವಾಗಿಯೇ ಹೇಳಲಾಗಿದ್ದರೂ ಬಹುಪಾಲು ಅದನ್ನು ಲಘುವಾಗಿ ಪರಿಗಣಿಸಿದ್ದೇ ಹೆಚ್ಚು. ಇದು ವಿವಾದರಹಿತವಾದುದೂ ಆಗಿರಲಿಲ್ಲ: ಅದರ ಮೂಲ ಅರ್ಥ ಮತ್ತು ಇತರ ಸಿದ್ಧಾಂತಗಳಿಗೆ ಸಂಬಂಧಿಸಿ ಈ ಹೆಸರು ಯಾವ ರೀತಿ ಸಮರ್ಪಕ ಎಂಬ ವಿಚಾರದಲ್ಲಿ ಕೆಲವರು ತೀವ್ರವಾದ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆದರೆ, ಮುಕ್ತವಾದ ಸಮಾಲೋಚನೆಗಳ ಮೂಲಕ ಹಲವು ಸಮಸ್ಯೆಗಳನ್ನು ಕ್ರಮೇಣ ಪರಿಹರಿಸಿಕೊಳ್ಳಲಾಗಿದೆ ಅಥವಾ ಅವುಗಳ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವ ಮಾರ್ಗಗಳನ್ನು ಹುಡುಕಿಕೊಳ್ಳಬಹುದು ಎಂದು ನಂಬಿದ್ದೇವೆ.

ಭಾರತ ಎಂಬ ಒಕ್ಕೂಟದೊಳಗೆ ಈ ರಾಜ್ಯಕ್ಕೆ ಇರುವ ಭಿನ್ನತೆಗಳ ಗುರುತಿಸುವಿಕೆ: ಈ ಪ್ರದೇಶದ ಮೂರು ವ್ಯತ್ಯಾಸಗಳನ್ನು ಸುಲಭವಾಗಿಯೇ ಗುರುತಿಸಬಹುದು. ನೆರೆಯ ರಾಜ್ಯಗಳೊಂದಿಗೆ ಹೋಲಿಕೆಯಲ್ಲಿ ಇರುವ ವೈಶಿಷ್ಟ್ಯ, ದೇಶದ ಒಟ್ಟಿಗೆ ಇರುವ ವಿಶಿಷ್ಟ ಅಸ್ಮಿತೆ ಮತ್ತು ಈ ಪ್ರದೇಶದ ಜೊತೆ ಹಾಸುಹೊಕ್ಕಾಗಿರುವ ಮತ್ತು ಇತರರಿಂತ ಭಿನ್ನವಾಗಿ ಕಾಣಿಸುವ ಬಹುತ್ವ. ಅಕ್ಕಪಕ್ಕದ ಪ್ರದೇಶಗಳಾದ, ಮುಖ್ಯವಾಗಿ ತಮಿಳು, ಮಲಯಾಳ, ತೆಲುಗು ಮತ್ತು ಮರಾಠಿ ಮಾತನಾಡುವ ಪ್ರದೇಶಗಳ ಜೊತೆಗಿನ ವ್ಯತ್ಯಾಸವನ್ನು ಗುರುತಿಸಿದರೂ ನಿರ್ಲಕ್ಷಿಸಲಾಗದ ಪ್ರಮಾಣದಲ್ಲಿ ಸಮಾನ ಅಂಶಗಳೂ ಇವೆ. ಗಡಿ ಪ್ರದೇಶಗಳಲ್ಲಿ ಈ ಭಿನ್ನತೆಯು ಅಸ್ಪಷ್ಟ ಮತ್ತು ಮಸುಕು ಮಸುಕಾಗಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಈ ಪ್ರದೇಶದ ವಿಶಿಷ್ಟ ಅಸ್ಮಿತೆಯನ್ನು ಎತ್ತಿ ಹಿಡಿದರೂ ದೇಶದ ಜೊತೆಗೆ ಇರುವ ಸಮಾನ ಸಾಂಸ್ಕೃತಿಕ ಮತ್ತು ಚಾರಿತ್ರಿಕ ನಂಟು, ಸ್ವಾತಂತ್ರ್ಯ ಚಳವಳಿಯ ಸಿದ್ಧಾಂತಗಳು, ಸಾಂವಿಧಾನಿಕ ತತ್ವಗಳನ್ನು ವ್ಯಾಪಕವಾಗಿ ಒಪ್ಪಿಕೊಳ್ಳಲಾಗಿದೆ. ಬಹುತ್ವ ಹಾಸುಹೊಕ್ಕಾಗಿರುವುದರ ಜೊತೆಗೆ ಈ ಸಾಂಸ್ಕೃತಿಕ ಪ್ರದೇಶವು ಹಲವು ಅಸಮಾನ ರಾಜಕೀಯ ಮತ್ತು ಆರ್ಥಿಕ ತುಣುಕುಗಳಿಂದ ಕೂಡಿದೆ ಹಾಗೂ ಇವೆಲ್ಲವುಗಳನ್ನೂ ಒಟ್ಟಾಗಿ ಬಂಧಿಸುವ ಒಂದು ತಂತುವನ್ನು ಕಂಡುಕೊಳ್ಳಬೇಕಾಗಿದೆ. ಇಲ್ಲಿ ಗಹನವಾದ ಆಂತರಿಕ ಭಿನ್ನತೆಗಳೂ ಇವೆ- ಭಾಷೆ, ನಂಬಿಕೆಗಳು, ಸಾಂಸ್ಕೃತಿಕ ನಂಟು ಎಲ್ಲವೂ ಬಹುತ್ವದೊಳಗೆ ಸೇರಿಕೊಂಡಿವೆ; ಇವೆಲ್ಲವುಗಳ ಜೊತೆಗಿನ ಅನುಸಂಧಾನ ಹೇಗೆ ಎಂಬ ಕುರಿತು ಅಂತಹ ಒಮ್ಮತವೇನೂ ಇಲ್ಲ. ಈ ಭಿನ್ನತೆಗಳು ಇರುವ ಕಾರಣದಿಂದಾಗಿಯೇ ಆಂತರಿಕವಾಗಿ, ಅಕ್ಕಪಕ್ಕದವರ ಜೊತೆಗೆ ಮತ್ತು ಈ ದೇಶದ ಜೊತೆಗೆ ಈ ಪ್ರದೇಶವು ಹೊಂದಿರುವ ನಂಟು ಸಂಕೀರ್ಣವಾದುದೇ ಆಗಿದೆ. ಇದು ಸುಮ್ಮನೆ ದಕ್ಕಿದ್ದು ಅಲ್ಲ, ಬದಲಿಗೆ, ಅದನ್ನು ಸ್ವಪ್ರಯತ್ನದಿಂದ ರೂಪಿಸಿಕೊಳ್ಳಲಾಗಿದೆ.

ರಾಷ್ಟ್ರೀಯತೆ ಎಂಬ ಸಂಕೀರ್ಣ ಚಿಂತನೆ: ದೇಶದ ಬೇರೆ ಕೆಲವು ನಿರ್ದಿಷ್ಟ ಭಾಗಗಳ ರೀತಿಯಲ್ಲಿ ಕರ್ನಾಟಕದಲ್ಲಿ ಯಾರೂ ಭಾರತದ ರಾಷ್ಟ್ರೀಯ ಏಕತೆಯನ್ನು ಪ್ರಶ್ನಿಸಿಲ್ಲ ಅಥವಾ ಕನ್ನಡ ಅಥವಾ ಕರ್ನಾಟಕದ ಪ್ರತ್ಯೇಕ ರಾಷ್ಟ್ರೀಯತೆಯನ್ನು ಪ್ರತಿಪಾದಿಸಿಲ್ಲ. ಹಿಂದಿ ಭಾಷೆಗೆ ಹೆಚ್ಚಿನ ಮನ್ನಣೆ ನೀಡುವುದಕ್ಕೆ ವಿರೋಧ ವ್ಯಕ್ತವಾಗಿದ್ದರೂ ಅದು ವ್ಯಾಪಕವಾದ ಪ್ರತಿರೋಧವಾಗಲಿಲ್ಲ. ಕರ್ನಾಟಕ ಸಂಗೀತದ ರೀತಿಯಲ್ಲಿಯೇ ಹಿಂದೂಸ್ತಾನಿ ಸಂಗೀತವೂ ಇಲ್ಲಿ ಸಮೃದ್ಧವಾಗಿ ಬೆಳೆದಿದೆ. ತೀರಾ ಇತ್ತೀಚಿನವರೆಗೆ, ನೌಕರಿ ಮತ್ತು ನಿವೃತ್ತಿಗೆ ಬಲು ಬೇಡಿಕೆಯ ನಗರವಾಗಿ ಬೆಂಗಳೂರು ಇತ್ತು. ಕೇಂದ್ರ ಸರ್ಕಾರವು ಬೆನ್ನ ಮೇಲೆ ಸವಾರಿ ಮಾಡಲು ಬಂದಾಗಲೆಲ್ಲ ರಾಜ್ಯದಲ್ಲಿ ಪ್ರತಿರೋಧ ವ್ಯಕ್ತವಾಗಿದೆ. ನೆಹರೂ ಅವರು ಮುಖ್ಯಮಂತ್ರಿಗಳು ತಮ್ಮ ಅಧೀನದಲ್ಲಿ ಇರುವವರು ಎಂಬ ಅರ್ಥದಲ್ಲಿ ಪತ್ರ ಬರೆಯುವುದು ತಮಗೆ ಹಿಡಿಸುತ್ತಿರಲಿಲ್ಲ ಎಂದು ಎಸ್. ನಿಜಲಿಂಗಪ್ಪ ಅವರು ತಮ್ಮ ಡೈರಿಯಲ್ಲಿ ಬರೆದುಕೊಂಡಿದ್ದಾರೆ. ಇಂದಿರಾ ಗಾಂಧಿ ಅವರ ಸ್ವೇಚ್ಛೆಯ ನಡವಳಿಕೆಯು ದೇವರಾಜ ಅರಸು ಅವರಿಗೆ ಹಿಡಿಸುತ್ತಿರಲಿಲ್ಲ. ರಾಷ್ಟ್ರೀಯತೆ ಎಂಬುದು ಎಲ್ಲವನ್ನೂ ಏಕರೂಪಗೊಳಿಸುವ ಪ್ರಯತ್ನವಲ್ಲ, ಬದಲಿಗೆ ಸಹಭಾಗಿಯಾಗಿದ್ದು ಪರಸ್ಪರ ಒಪ್ಪಿಗೆ ಮತ್ತು ಬೆಂಬಲವನ್ನು ಪ್ರತಿಫಲಿಸುವ ಸಂಬಂಧ ಎಂದು ಗ್ರಹಿಸಲಾಗಿದೆ. ತನ್ನ ಸಾಹಿತ್ಯಕ ಪರಂಪರೆ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪ, ಧಾರ್ಮಿಕ ಸಾಧನೆಗಳು, ರಾಜಕೀಯ ಪರಂಪರೆ–ಚಾಲುಕ್ಯ, ಹೊಯ್ಸಳ, ಅದಿಲ್ ಶಾಹಿ, ಬಹಮನಿ ಅಥವಾ ವಿಜಯ ನಗರ- ಯಾವುದೇ ಇರಲಿ ಇತರ ಯಾವುದಕ್ಕೂ ಕೀಳಲ್ಲ ಎಂದೇ ಕರ್ನಾಟಕ ಭಾವಿಸಿದೆ. ಮೈಸೂರು ಅರಸರ ಆಳ್ವಿಕೆಯಲ್ಲಿ ರಾಜ್ಯವು ಮಾಡಿದ ಸಾಧನೆಯ ಕುರಿತು ಹೆಮ್ಮೆಯೇ ಇದೆ. ಅದು ಆರ್ಥಿಕ ಅಭಿವೃದ್ಧಿ ಮಾತ್ರವಲ್ಲ, ಶಾಸನಾತ್ಮಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ಅದೇ ರೀತಿಯ ಸಾಧನೆಗಳು ಆಗಿವೆ.

ಸಾಮಾಜಿಕ ಸಮಾನತೆ: ಕರ್ನಾಟಕದ ರಾಜಕೀಯ ಸಂವಾದವು ಸಾಮಾಜಿಕ ಸಮಾನತೆಯ ಚಿಂತನೆಗಳಿಂದ ತುಂಬಿದೆ. ಆದರೆ, ರಾಜಕೀಯ ನಡವಳಿಕೆಯಲ್ಲಿ ಇದೇ ಸ್ಫೂರ್ತಿ ಪ್ರತಿಫಲಿಸಿದೆ ಎಂದೇನಿಲ್ಲ. ಸಾಮಾಜಿಕ ಸಮಾನತೆಯು ಹಲವೆಡೆ ಅಭಿವ್ಯಕ್ತಿಗೊಂಡಿರುವುದನ್ನು ಗಮನಿಸಬಹುದು: ಮಿಲ್ಲರ್ ಆಯೋಗದ ವರದಿ (1918) ಅದಕ್ಕೆ ಒಂದು ಉದಾಹರಣೆ. 20ನೇ ಶತಮಾನದ ಆರಂಭದಲ್ಲಿ ಸಂಗ್ರಹಿಸಲಾದ ವಚನಗಳಲ್ಲಿ ಬಸವೇಶ್ವರ ಮತ್ತು ಇತರ ವಚನಕಾರರು ಸಾಮಾಜಿಕ ಸಮಾನತೆಗೆ ನೀಡಿದ ಕರೆ ಎದ್ದು ಕಾಣುತ್ತಿದೆ. ಫ.ಗು.ಹಳಕಟ್ಟಿ ಅವರು ಸಂಗ್ರಹಿಸಿದ ವಚನಗಳು ಮತ್ತು ಅದಿಲ್ ಶಾಹಿ ಕಾಲದ ಶಾಸನಗಳು ಸಂಪ್ರದಾಯಬದ್ಧತೆ ಮತ್ತು ಸಾಮಾಜಿಕ ಶ್ರೇಣೀಕರಣದ ವಿರುದ್ಧ ಕರೆ ಕೊಟ್ಟಿದ್ದವು. ಕಿತ್ತೂರು ಕರ್ನಾಟಕದಲ್ಲಿ ಜ್ಯೋತಿಬಾ ಫುಲೆ, ಹೈದರಾಬಾದ್ ಕರ್ನಾಟಕದಲ್ಲಿ ಆರ್ಯ ಸಮಾಜದ ಪ್ರಭಾವ ದಟ್ಟವಾಗಿತ್ತು. ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ನಡೆದ ಚಳವಳಿಯು ಕರ್ನಾಟಕವು ಸಾಗುತ್ತಿದ್ದ ದಿಕ್ಕನ್ನೇ ಬದಲಿಸಿತು. ಕರ್ನಾಟಕದ ಜನಪದ ಸಾಹಿತ್ಯವು ದೇಶದಲ್ಲಿಯೇ ಅತ್ಯಂತ ಸಮೃದ್ಧವಾದುದು ಮತ್ತು ಅಲ್ಲಿಯೂ ಸಾಮಾಜಿಕ ಸಮಾನತೆಯ ಮೌಲ್ಯ ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ಸಾಮಾಜಿಕ ಹಿಂದುಳಿದಿರುವಿಕೆಯನ್ನು ಗುರುತಿಸಲು ಮಾನದಂಡ ಬೇಕು ಎಂದು ಪ್ರತಿಪಾದಿಸಿದ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ ಸಮಾನತೆಯನ್ನು ತನ್ನ ನೆಲೆಗಟ್ಟಾಗಿ ಮಾಡಿಕೊಂಡಿದೆ. ಸಾಮಾಜಿಕ ಸಮಾನತೆಯ ಈ ಕಳಕಳಿಯು ಜಾತಿಗಳಿಂದಾಗಿ ಕೆಳಕ್ಕೆ ಕುಸಿಯುವಂತಾಯಿತು; ಪ್ರಬಲ ಜಾತಿಗಳ ಜನರು ಎಲ್ಲವನ್ನೂ ತಮ್ಮ ಅನುಕೂಲಕ್ಕೆ ಬಳಸಿಕೊಳ್ಳದೇ ಇದ್ದಿದ್ದರೆ ಕರ್ನಾಟಕವು ಸರ್ವ ಸಮಾನತೆಯ ವಿಶಿಷ್ಟ ಹಾದಿಯಲ್ಲಿ ಸಾಗಬಹುದಿತ್ತು.

ಪ್ರತಿರೋಧ: ಪ್ರತಿರೋಧದ ಧ್ವನಿ ಕರ್ನಾಟಕದಲ್ಲಿ ಸದಾ ಸಮೃದ್ಧವಾಗಿಯೇ ಇತ್ತು ಮತ್ತು ಅದು ಸಾಮಾಜಿಕ ಚಳವಳಿಗಳಿಗೆ ಕಾರಣವೂ ಆಗಿದೆ. ಹಾಗಿದ್ದರೂ ಈ ಪ್ರತಿರೋಧವು ಕ್ರಾಂತಿಕಾರಕ ಪರ್ಯಾಯಗಳನ್ನು ನೀಡುವ ಸಾಮರ್ಥ್ಯವನ್ನು ತೋರಿದ್ದು ಕಡಿಮೆ. ರಾಜ್ಯವು ರೈತರ ಚಳವಳಿಗಳು, ಜಾತಿ ವಿರೋಧಿ ಪ್ರತಿಭಟನೆಗಳು, ವಿದ್ಯಾರ್ಥಿಗಳ ಸಂಘರ್ಷ, ಪ್ರಾದೇಶಿಕ ಸಮಸ್ಯೆಗಳು ಮತ್ತು ಬಂಡಾಯದಂತಹ ಸಾಹಿತ್ಯ ಚಳವಳಿಗಳನ್ನು ಕಂಡಿದೆ. ಕೆಲವು ಬದಲಾವಣೆಗಳಿಗೆ ಇವು ಕಾರಣವಾಗಿವೆ. ಆದರೆ, ಕ್ರಾಂತಿಕಾರಕ ಬದಲಾವಣೆ ಮಾತ್ರ ಸಾಧ್ಯವಾಗಿಲ್ಲ.

ಪ್ರಜಾಪ್ರಭುತ್ವ, ಗಣರಾಜ್ಯವಾದ, ಜಾತ್ಯತೀತತೆ ಅಥವಾ ಲಿಂಗತ್ವ ಸಮಾನತೆಯಂತಹ ವಿಚಾರಗಳು ಪ್ರಬಲವಾದ ಅಭಿವ್ಯಕ್ತಿಯನ್ನು ರಾಜ್ಯದಲ್ಲಿ ಪಡೆದಿಲ್ಲ. ಲಿಂಗತ್ವ ಸಂವೇದನಾಶೀಲತೆಯ ಕುರಿತು ಹೇಳುವುದಾದರೆ, ಅಕ್ಕಮಹಾದೇವಿ ಬಹಳ ಪ್ರಬಲವಾಗಿ ಆರಂಭಿಸಿದ ಸ್ತ್ರೀ ಸ್ವಾತಂತ್ರ್ಯದ ಸಂಭ್ರಮವು ಕ್ರಮೇಣ ತನ್ನ ಶಕ್ತಿ ಕಳೆದುಕೊಂಡಿತು. ಕಾರ್ಕಳದ ಪಂಡಿತ ರಮಾಬಾಯಿ ಮತ್ತು ಮಂಗಳೂರಿನ ಕಮಲಾದೇವಿ ಚಟ್ಟೋಪಾಧ್ಯಾಯ ಅಂಥವರ ಹೆಸರುಗಳು ನಮ್ಮ ನೆನಪಿನಿಂದಲೇ ಮಾಸಿಹೋಗಿವೆ.

ಲೇಖಕ: ನಿವೃತ್ತ ಪ್ರಾಧ್ಯಾಪಕ

ಹಿರಿಮೆಗಳ ‘ಗಿರಿ’ಯಿಂದ ನಿರ್ವಾತದ ‘ಪ್ರಪಾತ’ಕ್ಕೆ!

● ಕೃಷ್ಣ ಪ್ರಸಾದ್



ಬಸವಣ್ಣನ ಈ ನಾಡಿನಲ್ಲಿ, ಅದೂ ಯು.ಆರ್. ಅನಂತಮೂರ್ತಿ ಅವರು ನಿಧನ ಹೊಂದಿದಾಗ ಪಟಾಕಿ ಸಿಡಿಸಿ ಸಂಭ್ರಮಿಸುವಂತಹ, ಗೌರಿ ಲಂಕೇಶ್ ಅವರ ಕೊಲೆಗೈದ ಆರೋಪ ಹೊತ್ತವರು ಬಿಡುಗಡೆಯಾದಾಗ ಹೂಮಾಲೆ ಹಾಕಿ ಸ್ವಾಗತಿಸುವಂತಹ ವಿಕೃತಿಯನ್ನು ಮರೆಯುತ್ತಿರುವ ಈ ಹೊತ್ತಿನಲ್ಲಿ, ನಾವು ಏರಿದ ಎತ್ತರದಿಂದ ಹೇಗೆ ಪ್ರಪಾತಕ್ಕೆ ಬಿದ್ದೆವು ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬ ಅಭಿಮಾನಿ ಕನ್ನಡಿಗನೂ ಕೇಳಿಕೊಳ್ಳಬೇಕು

ಭಾರತೀಯ ಆರ್ಥಿಕತೆಯ ಉದಾರೀಕರಣವು 1991ರಲ್ಲಿ ಪ್ರಾರಂಭವಾಗುವುದಕ್ಕಿಂತ 20 ವರ್ಷಗಳ ಮೊದಲು, ಕರ್ನಾಟಕವು ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಗಳಲ್ಲಿ ಮುಂಚೂಣಿಯಲ್ಲಿರುವ ಜಾತ್ಯತೀತ ರಾಜ್ಯವೆಂದು ಹೆಸರಾಗಿತ್ತು. ತುಳಿತಕ್ಕೊಳಗಾದ ವರ್ಗಗಳಿಗೆ ಮೀಸಲಾತಿ, ಉಳುವವರಿಗೆ ಭೂಮಿಯ ಮರುಹಂಚಿಕೆ, ಪಂಚಾಯತ್ ರಾಜ್ ಮೂಲಕ ಕೆಳವರ್ಗದವರಿಗೆ ಅಧಿಕಾರದ ವಿಕೇಂದ್ರೀಕರಣ, ಇವೆಲ್ಲವೂ ರಾಷ್ಟ್ರದಲ್ಲಿ ಕರ್ನಾಟಕಕ್ಕೆ ಕೀರ್ತಿ ತಂದವು. ದೇಶದ ರಾಜಕೀಯ ವ್ಯಾಕರಣಕ್ಕೆ ‘ಮೌಲ್ಯಾಧಾರಿತ ಸರ್ಕಾರ’ ಎಂಬ ಘೋಷಣೆಯನ್ನು ಕೊಟ್ಟ ನಾಡು ಇದು. ಹಾಗಿದ್ದರೆ, ಕಳೆದ 30 ವರ್ಷಗಳಲ್ಲಿ ಕರ್ನಾಟಕವು ತನ್ನ ಭ್ರಷ್ಟಾಚಾರ, ಕೋಮುವಾದ, ಮತ್ತು ರಾಜಕೀಯದ ಒರಟುತನಕ್ಕೆ ಹೇಗೆ ಹೆಚ್ಚು ಪ್ರಸಿದ್ಧವಾಯಿತು?

ಈ ಸಂದಿಗ್ಧವನ್ನು ನೋಡಲು ಮೂರು ಮಾರ್ಗಗಳಿವೆ. ಮೊದಲನೆಯದಾಗಿ, ರಾಜ್ಯದ ರಾಜಕೀಯದಲ್ಲಿ ನಿಜವಾಗಿಯೂ ಒಂದು ಸುವರ್ಣಯುಗ ಇತ್ತೇ ಅಥವಾ ನಾವು ನಮ್ಮನ್ನು ಭ್ರಮೆಗೊಳಿಸುತ್ತಿದ್ದೇವೆಯೇ? ದೇವರಾಜ ಅರಸು ಹಾಗೂ ರಾಮಕೃಷ್ಣ ಹೆಗಡೆ ಅವರ ಮಧ್ಯೆ ಗುಂಡೂರಾಯರ ಕರಾಳ ದಿನಗಳು ಇರಲಿಲ್ಲವೇ? ಎರಡನೆಯದಾಗಿ, ಭಾರತದ ಹೆಚ್ಚಿನ ರಾಜ್ಯಗಳಲ್ಲಿ, ಪ್ರಪಂಚದ ಅನೇಕ ದೇಶಗಳಲ್ಲಿ, ರಾಜಕೀಯವು ಇದೇ ರೀತಿಯ ಗೊಂದಲದ ಸ್ಥಿತಿಯಲ್ಲಿದೆ. ಕರ್ನಾಟಕದ ರಾಜಕೀಯವು ಗುಣಾತ್ಮಕವಾಗಿ ಭಿನ್ನವಾಗಿರಬೇಕೆಂದು ನಿರೀಕ್ಷಿಸುವುದು ನ್ಯಾಯವೇ? ಇದು ಸಾಧ್ಯವೇ? ಮೂರನೆಯದಾಗಿ, ತಂತ್ರಜ್ಞಾನದಿಂದ ನಮ್ಮ ಸಮಾಜದಲ್ಲಿ ಅನೇಕ ಬದಲಾವಣೆಗಳು ಭಯಾನಕ ವೇಗದಲ್ಲಿ ನಡೆಯುತ್ತಿವೆ. ಪ್ರಜಾಪ್ರಭುತ್ವದೊಂದಿಗೆ ನಾಗರಿಕರ ಸಂಬಂಧ ಮತ್ತು ಅದರಿಂದ ಅವರ ನಿರೀಕ್ಷೆಗಳು ಬದಲಾಗುತ್ತಿವೆ. ರಾಜಕಾರಣಿಗಳು ಈ ಪಲ್ಲಟಗಳಿಂದ ದೂರ ಉಳಿಯಬಹುದೇ?

ಸಮರ್ಥನೆ ಏನೇ ಇರಲಿ, ಇಂದಿನ ಕರ್ನಾಟಕದ ರಾಜಕೀಯ ಗುಣಮಟ್ಟ ನೋಡಿ ಸಭ್ಯ ಹಾಗೂ ಸುಸಂಸ್ಕೃತ ಕನ್ನಡಿಗರ ಕಣ್ಣಲ್ಲಿ ನೀರು ಬರಬೇಕು. ಮುಖ್ಯಮಂತ್ರಿ ಆದವರು ಹಗರಣದಲ್ಲಿ ಸಿಲುಕಿ ಪೊಲೀಸರ ಮುಂದೆ ಹಾಜರಾಗೋದು, ಜೈಲಿಗೆ ಹೋಗೋದು; ಜೈಲಿಗೆ ಹೋದವರು ಮತ್ತೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಆಗೋದು; ಮಂತ್ರಿಗಳು ಡೀಲು, ಸ್ಕೆಚ್ಚು, ಪರ್ಸಂಟೇಜ್ ಎಂದೆಲ್ಲ ವ್ಯವಹಾರದಲ್ಲಿ ಮುಳುಗೋದು; ಪ್ರಜಾಪ್ರಭುತ್ವದ ದೇವಾಲಯವಾದ ವಿಧಾನಸೌಧವನ್ನು ಆಪರೇಷನ್ ಕಮಲದ ಮೂಲಕ ಶಾಸಕರ ಮಾರುಕಟ್ಟೆಯನ್ನಾಗಿ ಪರಿವರ್ತನೆ ಮಾಡೋದು; ಸದನದ ಒಳಗೆ ಶಾಸಕರು ವಿಡಿಯೊ ನೋಡೋದು, ಹೊರಗೆ ಅತಿರೇಕದಿಂದ ವರ್ತಿಸೋದು, ಅಸಹ್ಯ ಭಾಷೆ ಬಳಸೋದು, ದ್ವೇಷ ಬಿತ್ತೋದು... ಜವಾಬ್ದಾರಿಯುತ ಕನ್ನಡಿಗರಿಗೆ ಈ ದೈನಂದಿನ ಅವಮಾನವನ್ನು ನೋಡದೆ ಬೇರೆ ದಾರಿಯಿಲ್ಲ.

ಕಣ್ಣು ಕಾಣದ ವ್ಯಕ್ತಿಗಳು ಆನೆಯನ್ನು ಮುಟ್ಟಿನೋಡಿ ತಾವು ಮುಟ್ಟಿದ ಭಾಗವಷ್ಟನ್ನೇ ಆನೆ ಎಂದು ಪರಿಭಾವಿಸುವಂತೆ, ಕರ್ನಾಟಕದ ನೈತಿಕತೆಯ ದಿಕ್ಸೂಚಿ ಹೇಗೆ ಕುಸಿಯಿತು ಎಂಬುದಕ್ಕೆ ನಮ್ಮ ನಮ್ಮ ಮಿತಿಯಲ್ಲಿ ಭಿನ್ನ ಭಿನ್ನ ಉತ್ತರ ಕಂಡುಕೊಳ್ಳಬಹುದು. ಕುಟುಂಬ ರಾಜಕಾರಣದ ಅಬ್ಬರ, ದಕ್ಷಿಣದ ಜಿಲ್ಲೆಗಳಲ್ಲೇ ಕೇಂದ್ರೀಕೃತಗೊಂಡ ಅಧಿಕಾರ, ಜಾತಿಯನ್ನೇ ಮುಖ್ಯವಾಗಿಸಿಕೊಂಡ ರಾಜಕೀಯದ ಮೇಲಾಟ, ಕೋಮು ಅಸ್ಮಿತೆಯನ್ನು ಬಡಿದೆಬ್ಬಿಸಿ ಧ್ರುವೀಕರಣಕ್ಕೆ ಒತ್ತು ನೀಡಿದ ಆರ್‌ಎಸ್‌ಎಸ್–ಬಿಜೆಪಿ ಪ್ರಭಾವ, ಉದ್ಯಮ ಸಂಸ್ಥೆಗಳಿಂದ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಎಗ್ಗಿಲ್ಲದ ಲೂಟಿ, ಸಮಾಜದ ಕಾವಲು ನಾಯಿಗಳಂತಿದ್ದ ಸಂಸ್ಥೆಗಳ ಕಣ್ಮರೆ, ಸಾಹಿತ್ಯ, ಪತ್ರಿಕೋದ್ಯಮ, ಸಿನಿಮಾ ಮತ್ತು ರಂಗಭೂಮಿಯಲ್ಲಿ ಉಂಟಾದ ಬೌದ್ಧಿಕ ನಿರ್ವಾತ- ಎಲ್ಲವೂ ಕರ್ನಾಟಕದ ಇಂದಿನ ಅಧಃಪತನಕ್ಕೆ ಕೊಡುಗೆ ನೀಡಿವೆ.

ಇಂದಿನ ಈ ಸ್ಥಿತಿಗೆ ಎಲ್ಲಕ್ಕಿಂತ ಮುಖ್ಯ ಕಾರಣವೆಂದರೆ, ಕರ್ನಾಟಕದಲ್ಲಿ ರಾಜಕೀಯ ಪಕ್ಷಗಳ ಸಾಂಸ್ಥಿಕ ಸ್ವರೂಪ ಸಂಪೂರ್ಣವಾಗಿ ದುರ್ಬಲಗೊಂಡಿದ್ದು ಮತ್ತು ನಾಯಕತ್ವವೇ ಅಳಿಸಿಹೋಗಿದ್ದು. ಯಾರ ಮಾತು ಕಾನೂನಿಗೆ ಸಮವಾಗಿತ್ತೋ ಅಂತಹ ‘ಬಿಗ್ ಬಾಸ್’ಗಳ ಕಾಲ ಸಂದುಹೋಗಿದೆ. 1991ರ ಉದಾರೀಕರಣದ ಬಳಿಕ, ಹಣದ ಹರಿವು ಹೆಚ್ಚಿದ ಮೇಲೆ ರಾಜಕೀಯದ ಸ್ವರೂಪವೇ ಬದಲಾಗಿ ಹೋಗಿದೆ. ಗಣಿ ಧಣಿಗಳು, ರಿಯಲ್ ಎಸ್ಟೇಟ್ ಕುಳಗಳು, ಉದ್ಯಮಿಗಳು ಸೇರಿದಂತೆ ಸಿರಿತನದಲ್ಲಿ ಮುಳುಗಿ ಎದ್ದವರು ರಾಜಕೀಯ ಪ್ರವೇಶಿಸುತ್ತಿದ್ದಾರೆ. ಅಂಥವರಿಗೆ ಸಾಮಾಜಿಕ, ಭಾಷಿಕ ಹಾಗೂ ರಾಜಕೀಯ ಚಳವಳಿಗಳ ಹಿನ್ನೆಲೆ ಏನೇನೂ ಗೊತ್ತಿರುವುದಿಲ್ಲ. ಒಂದುವೇಳೆ ತಿಳಿದಿದ್ದರೂ ಅದು ಅಲ್ಪಮಾತ್ರ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ನ ಮಾಹಿತಿ ಪ್ರಕಾರ, ಕರ್ನಾಟಕದ ಶಾಸಕರು ಭಾರತದಲ್ಲೇ ಅತ್ಯಂತ ಶ್ರೀಮಂತರು. ಇಂತಹ ‘ಗಣ್ಯ’ ರಾಜಕೀಯ ವರ್ಗಕ್ಕೆ ರಾಜಕಾರಣವೆಂದರೆ ತಮ್ಮ ವೈಯಕ್ತಿಕ ಹಾಗೂ ಕುಟುಂಬದ ಸಿರಿವಂತಿಕೆಯನ್ನು ಹೆಚ್ಚಿಸುವುದೇ ಹೊರತು ಜನಸೇವೆಯಲ್ಲ. ಈ ರೀತಿ ರಾಜಕಾರಣದ ಅವಕಾಶವಾದಿತನ ಸಾಮಾನ್ಯೀಕರಣಗೊಂಡ ಪರಿಣಾಮ ಇಂದು ನಮ್ಮ ಮುಂದಿದೆ. ಒಂದು ಅಂದಾಜಿನ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ರಾಜ್ಯವು ಸಾಕ್ಷಿಯಾಗಿರುವ ದೊಡ್ಡ ಹಗರಣಗಳ ಒಟ್ಟು ಮೊತ್ತ ₹2 ಲಕ್ಷ ಕೋಟಿಯಷ್ಟು!

ಮುಂಚೆ ಇದ್ದಹಾಗೆ ತೂಕದ ವ್ಯಕ್ತಿತ್ವದ ನಾಯಕರು ಈಗಿಲ್ಲ. ಪಕ್ಷದಲ್ಲಿ ಖಜಾಂಚಿ ಹುದ್ದೆಗೆ ಮೊದಲಿನ ಕಿಮ್ಮತ್ತು ಕೂಡ ಉಳಿದಿಲ್ಲ. ಈಗ ಗಣನೆಗೆ ಒಳಗಾಗುತ್ತಿರುವುದು ಎಂದರೆ ‘ಗೆಲುವಿನ ಸಾಮರ್ಥ್ಯ’ವೊಂದೇ. ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಿಸಿದ ಗಣಿತವೂ ಇದೇ ಆಗಿದ್ದು, ಹಣದ ಚೀಲಗಳು ಹೇಗೆ ಹರಿದಾಡುತ್ತವೆ ಎಂಬುದನ್ನು ನಾವೆಲ್ಲ ಬಲ್ಲೆವು. ಇಂತಹ ಅರಾಜಕ ರಾಜಕಾರಣಿಗಳ ಪಾಲಿಗೆ ಕರ್ನಾಟಕದ ಕುರಿತು ಮಲತಾಯಿ ಧೋರಣೆ ಹೊಂದುವುದು ಅಪರಾಧದ ಸಂಗತಿ ಎನಿಸುವುದಿಲ್ಲ. ಹಿಂದಿ ಹೇರಿಕೆ ಅವರಿಗೆ ಸಮಸ್ಯೆಯಾಗಿ ಕಾಣುವುದಿಲ್ಲ. ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆ ನೀಗಿಸಲು ಮೊಟ್ಟೆ ವಿತರಿಸಬೇಕೆನ್ನುವ ಸಂಗತಿ ಕೂಡ ಅವರಿಗೆ ಮುಖ್ಯವಾಗುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ತಮಿಳುನಾಡು ಇಲ್ಲವೆ ಕೇರಳದವರಂತೆ, ಅಷ್ಟೇ ಏಕೆ, ನಮ್ಮದೇ ಪೂರ್ವಸೂರಿಗಳಂತೆ ಕರ್ನಾಟಕದ ಯಾವೊಬ್ಬ ಸಂಸದನಾದರೂ ಸಂಸತ್ತಿನಲ್ಲಿ ಸ್ಮರಣೀಯ ಭಾಷಣ ಮಾಡಿದ ಉದಾಹರಣೆ ಇದೆಯೇ? ಅದರ ಬದಲು, ಬೇರೆ ಪಕ್ಷಗಳ ತಮ್ಮದೇ ಸಹವರ್ತಿಗಳ ವಿರುದ್ಧ, ಅವರೇನು ತಮ್ಮ ವೈರಿಗಳೇನೋ ಎನ್ನುವಂತೆ, ಸಾಮಾಜಿಕ ತಾಣಗಳಲ್ಲಿ ಬೆಂಕಿ ಉಗುಳುವ ಪ್ರವೃತ್ತಿ ಸಾಮಾನ್ಯವಾಗಿದೆ.

ನಮ್ಮ ರಾಜಕಾರಣಿಗಳು ಸನ್ಯಾಸಿಗಳಂತೆ ಮೌನವಾಗಿರಬೇಕು ಎಂಬುದು ಇಲ್ಲಿನ ವಾದವಲ್ಲ. ನಮ್ಮ ರಾಜಕಾರಣಿಗಳು ಸಂಪೂರ್ಣವಾಗಿ ಸೋತಿದ್ದಾರೆ ಎಂದು ಹೇಳಲೂ ಈ ಲೇಖನ ಹೊರಟಿಲ್ಲ. ಇಲ್ಲಿನ ವಾದ ಇವುಗಳಿಗಿಂತ ತುಂಬಾ ಭಿನ್ನ. ಮತ್ತೆ ಮತ್ತೆ ಬಿಡುಗಡೆ ಆಗುತ್ತಿರುವ ಅಂಕಿ ಅಂಶಗಳು ಕರ್ನಾಟಕವು ದೇಶದ ಸಿರಿವಂತ ರಾಜ್ಯಗಳಲ್ಲಿ ಒಂದು ಎಂಬುದಾಗಿ ಸಾರಿ ಸಾರಿ ಹೇಳುತ್ತಿವೆ. ಮಹಾರಾಷ್ಟ್ರ ಹೊರತುಪಡಿಸಿದರೆ ಅತ್ಯಧಿಕ ತೆರಿಗೆ ನೀಡುತ್ತಿರುವ ರಾಜ್ಯವೂ ಇದಾಗಿದೆ. 1991ರ ನಂತರ ಹಲವು ವಿಷಯಗಳಲ್ಲಿ ರಾಜ್ಯ ಸರಿದಾರಿಯಲ್ಲಿದೆ ಎಂಬುದಕ್ಕೆ ಈ ಅಂಶಗಳೇ ಪುರಾವೆ. ಆದರೆ, ನಮ್ಮ ಮುಂದಿರುವ ವಾಸ್ತವ ಹೊಳಪು ಕಳೆದುಕೊಂಡಿದೆ. ರಾಜಕಾರಣದ ಹಣದ ಥೈಲಿಯಿಂದ ಹೊಳೆಯುವ ಮೇಲ್ಮೈನ ಅಡಿಯೊಳಗೆ ಈ ಹಿರಿಮೆಗಳೆಲ್ಲ ಸಿಕ್ಕಿಹಾಕಿಕೊಂಡಂತಿವೆ. ಬಸವಣ್ಣನ ಈ ನಾಡಿನಲ್ಲಿ, ಅದೂ ಯು.ಆರ್. ಅನಂತಮೂರ್ತಿ ಅವರು ನಿಧನ ಹೊಂದಿದಾಗ ಪಟಾಕಿ ಸಿಡಿಸಿ ಸಂಭ್ರಮಿಸುವಂತಹ, ಗೌರಿ ಲಂಕೇಶ್ ಅವರ ಕೊಲೆಗೈದ ಆರೋಪ ಹೊತ್ತವರು ಬಿಡುಗಡೆಯಾದಾಗ ಹೂಮಾಲೆ ಹಾಕಿ ಸ್ವಾಗತಿಸುವಂತಹ ವಿಕೃತಿಯನ್ನು ಮರೆಯುತ್ತಿರುವ ಈ ಹೊತ್ತಿನಲ್ಲಿ, ನಾವು ಏರಿದ ಎತ್ತರದಿಂದ ಹೇಗೆ ಪ್ರಪಾತಕ್ಕೆ ಬಿದ್ದೆವು ಎಂಬುದನ್ನು ಪ್ರತಿಯೊಬ್ಬ ಅಭಿಮಾನಿ ಕನ್ನಡಿಗನೂ ಕೇಳಿಕೊಳ್ಳಬೇಕು. ನಮ್ಮ ರಾಜಕಾರಣಿಗಳು ನಾವು ಮತ್ತೆ ಮೇಲೆ ಏರಲಾಗದಂತಹ ಆಳವಾದ ಪ್ರಪಾತಕ್ಕೆ ನಮ್ಮನ್ನು ಹೇಗೆ ತಳ್ಳಿದರು ಎಂಬ ಪ್ರಶ್ನೆಯನ್ನೂ ಹಾಕಿಕೊಳ್ಳಬೇಕು.

ಲೇಖಕ: ಪತ್ರಕರ್ತ

ನಾವು ನೋಡಿದ ಸಿನಿಮಾ

ಭಿನ್ನ ಕಥೆಯ ಪೇಲವ ನಿರೂಪಣೆ

ಜಲಂಧರ

- ನಿರ್ಮಾಣ: ಮದನ್ ಎಸ್
- ನಿರ್ದೇಶನ: ವಿಷ್ಣು ಪ್ರಸನ್ನ
- ತಾರಾಗಣ: ಪ್ರಮೋದ್ ಶೆಟ್ಟಿ, ರಿಷಿಕಾ ರಾಜ್, ಸ್ಟೆಪ್ ಅಪ್ ಲೋಕಿ ಮತ್ತಿತರರು

ಕಾವೇರಿ ನದಿ ತೀರದ ಊರು ಮಧುಮತಿ. ಮಂಡ್ಯ ಭಾಗದ ರೈತಾಪಿ ವರ್ಗವೇ ಹೆಚ್ಚಿರುವ ಊರಲ್ಲಿ, ನದಿಗೆ ಬಿದ್ದು ಸತ್ತವರ ಹೆಣ ಎತ್ತಿಹಾಕಲು ಎರಡು ಬಣಗಳ ನಡುವೆ ಪೈಪೋಟಿ. ಊರು, ಬಣಗಳ ನಡುವಿನ ಜಗಳ, ನದಿಗೆ ಬಿದ್ದು ಸಾಯುವವರ ಕಥೆಯೇ ಚಿತ್ರದ ಮೊದಲಾರ್ಧ. ಹಾಗಂತ ಇದೇ ಚಿತ್ರದ ಕಥೆಯಲ್ಲ. ನದಿಯಲ್ಲಿ ನಡೆಯುತ್ತಿರುವುದು ಕೊಲೆ ಸಾವಲ್ಲ ಎಂಬುದು ಗೊತ್ತಾಗುವ ಹೊತ್ತಿಗೆ ಇಂಟರ್‌ವಲ್ ಬಂದಿರುತ್ತದೆ. ಆ ಕೊಲೆಗಳ ಹಿಂದಿನ ಕಾರಣವೇನು? ಅದನ್ನು ಮಾಡಿಸುತ್ತಿರುವವರು ಯಾರು? ಏಕೆ? ಎಂಬಿತ್ಯಾದಿ ಅಂಶಗಳೆ ಚಿತ್ರದ ದ್ವಿತೀಯಾರ್ಧ.

ಇದರ ನಡುವೆ ಇನ್‌ಸ್ಪೆಕ್ಟರ್ ಅಭಿಯಾಗಿ ಪ್ರಮೋದ್ ಶೆಟ್ಟಿ ಅವರ ಕಥೆಯೊಂದು ತೆರೆದುಕೊಳ್ಳುತ್ತದೆ. ಆ ಕಥೆಯನ್ನು ನಿರ್ದೇಶಕರು ಕಾವೇರಿ ತಟದ ಕಥೆಗೆ ಬೆಸೆದ ರೀತಿ ಚೆನ್ನಾಗಿದೆ. ಪ್ರಮೋದ್ ಶೆಟ್ಟಿ ಪತ್ನಿ ಸಾಮಾಜಿಕ ಕಾರ್ಯಕರ್ತೆಯಾಗಿ ಈ ಊರಿಗೆ ಬಂದು ಊರಿನ ಶಾಸಕನ ಚಕ್ರವ್ಯೂಹದೊಳಗೆ ಸಿಲುಕಿಕೊಳ್ಳುತ್ತಾಳೆ. ಅಲ್ಲಿಂದ ಚಿತ್ರದ ನಿಜವಾದ ಕಥೆ ಪ್ರಾರಂಭವಾಗುತ್ತದೆ. ಇದರ ಸಣ್ಣ ಸುಳಿವು ಮೊದಲಾರ್ಧದಲ್ಲಿದೆ. ಕಥೆಯ ಎಳೆ ಚೆನ್ನಾಗಿದೆ. ಆದರೆ ಅದನ್ನು ಚಿತ್ರಕಥೆಯಾಗಿಸುವಲ್ಲಿ ನಿರ್ದೇಶಕರು ಎಡವಿದ್ದಾರೆ. ಅನಗತ್ಯ ಹೊಡೆದಾಟ, ಪ್ರೇಮ ಪ್ರಸಂಗಗಳು, ಹಾಡುಗಳಿಂದಾಗಿ ಕಥೆ ಎಲ್ಲೆಲ್ಲಿಗೋ ಸಾಗಿ ಬಂದಂತಾಗುತ್ತದೆ.

ಚಿತ್ರದ ಮೊದಲಾರ್ಧದಲ್ಲಂತೂ ನಾಯಕ ಪ್ರಮೋದ್ ಶೆಟ್ಟಿ ಪಾತ್ರ ಅತಿಥಿ ಪಾತ್ರದಂತಿದೆ.

ಪ್ರಮೋದ್ ಶೆಟ್ಟಿ

ಈ ಪಾತ್ರ ಪೋಷಣೆಯಲ್ಲಿ ಇನ್ನಷ್ಟು ಗಟ್ಟಿತನ ಬೇಕಿತ್ತು. ಡಿಸ್ಕೊ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿರುವ ಸ್ಟೆಪ್ ಅಪ್ ಲೋಕಿ ಮೇಲೆ ಬಹುಭಾಗ ಕಥೆ ಸಾಗುತ್ತದೆ. ಬಹುತೇಕ ಕಲಾವಿದರಿಂದ ಇನ್ನಷ್ಟು ಉತ್ತಮ ನಟನೆ ತೆಗಿಸುವ ಅವಕಾಶ ನಿರ್ದೇಶಕರಿಗಿತ್ತು. ಬಹಳಷ್ಟು ಕಡೆ ಹಿನ್ನೆಲೆ ಸಂಗೀತದ ಅಬ್ಬರ ಹೆಚ್ಚಿದೆ. ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಕಥೆ ಎಳೆ ಭಿನ್ನವಾಗಿದ್ದರೂ ನಿರೂಪಣೆ ಸಾಕಷ್ಟು ಕಡೆ ಪೇಲವವಾಗಿದೆ.

ವಿನಾಯಕ ಕೆ.ಎಸ್

ಪದಬಂಧ 5877

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಧ್ಯಾಹ್ನದ ಹೊತ್ತು ಏರಿರುವ ಅಮಲು! (2)
4.ವಿಜ್ಞಾನಿಯ ಜೊತೆಗೆ ಬಲ್ಲವನಿದ್ದಾನಲ್ಲಾ? (2)
6.ಯಾರೂ ಓದಲಾಗದ ಲಲಾಟಲಿಪಿ (5)
7.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
9.ಜುಳು ಜುಳು ಹರಿವ ಜಲದಲ್ಲಿ ಮಾಡಿದ ಸ್ನಾನ (3)
10.ಅಳಿಯತನಕ್ಕೆ ವಹಿಸಿಕೊಂಡಿರುವ ಮಧ್ಯಸ್ಥಿಕೆ (5)
11.ನಿಧಾನವಾಗಿ ರೂಢಿಸಿಕೊಂಡ ರೀತಿ (3)
12.ಈತ ದೇವರನ್ನೇ ನಂಬದವನು (3)
14.ಈ ಪರಿ ಕಾಣಿಸುತ್ತಿರುವ ಸೇವಕ (5)
17.ನೆನಪಾದಾಗ ಹೇಳಲು ಇದೊಂದು ಕಾರಣ! (2)
18.ಮಚ್ಚೆ ಉಳ್ಳವನು ಹಿಡಿದಿರುವ ಕಡಿಗತ್ತಿ! (2)

ಮೇಲಿಂದ ಕೆಳಕ್ಕೆ

1.ಮಲಗಿದ ಮಗನಿಗೆ ಬಂದಿರುವುದು ಅಪಸ್ಮಾರವೇ? (4)
2.ಜಾಗರಣೆ ಮಾಡಿರುವ ಬುದ್ಧಿವಂತೆ (2)
3.ತಲೆಗೂದಲನ್ನು ತೆಗೆಯುವುದು (2)
5.ಸ್ವಲ್ಪವೂ ಪ್ರಯೋಜನಕ್ಕೆ ಬಾರದುದು (4)
6. ಅಶ್ವದ ಮೊಗವಿದು (5)
8.ಉಳಿಕೆಯಲ್ಲ! ಸಂಪಾದನೆ! (3)
9.ಈ ಲೀಡರ್ ಪಕ್ಕಾ ಕನ್ನಡಿಗ !(5)
11.ಜ್ಞಾಪಕದಿಂದ ಮಾಡಿಕೊಡಿರುವ ಮನವಿ (4)
13.ಅಕ್ಕಿ ತೊಳೆದ ನೀರು (4)
15.ಪರಿತ್ಯಕ್ತದಲ್ಲಿರುವುದು ಖಾಲಿ! (2)
16.ಸರಕುಗಳನ್ನು ಒಂದು ದೇಶದಿಂದ ಹೊರಗೆ ಕಳಿಸುವಿಕೆ (2)



5876ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಲೋಹಚುಂಬಕ
3.ಭ್ರಮರ 5.ದಮು
8.ಆರ್ಯಭಟ 10.ಕರುಳು
11.ಕಂದರ 12.ರಾಣಿವಾಸ
15.ತಮ 17.ಸಮೀಕ್ಷೆ
18.ರತ್ನಖಚಿತ

ಮೇಲಿಂದ ಕೆಳಕ್ಕೆ:
1.ಲೋಲಾಕು 2.ಕದ
4.ರಕ್ತಸಂಚಾರ 6.ಮುಕುಟ
7.ಕಾರ್ಯ 8.ಆಳು
9.ಭರಣಿ 10.ಕನಕದಾಸ
11.ಕಂಸ 12.ರಾಯಿತ
13.ವಾಲಿ 14.ಪರಾತ
16.ಮರ

ಸುಡೊಕು 6262

7	5			1			8	
		6			9			7
4		8	7				9	6
	7			2	1			8
	6	4	9		8		7	
8		1				9		4
	8			9			4	
1		2				7		3
	4		1		7		2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6261 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ನವೆಂಬರ್ 30, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಚತುರ್ದಶಿ ಗಂ. 10-30 ನಕ್ಷತ್ರ: ವಿಶಾಖಾ ಗಂ. 12-35 ಯೋಗ: ಅತಿಗಂಡ ಗಂ. 16-44 ಕರಣ: ಶಕುನಿ ಗಂ. 10-30, ವೃಶ್ಚಿಕ ಮಾಸದ 14 ನೇ ದಿನ, ಮಳೆನಕ್ಷತ್ರ: ಅನುರಾಧ 4.
ರಾಹುಕಾಲ : ಬೆಳಿಗ್ಗೆ 09-30 – 12-00. ಸೂರ್ಯೋದಯ : 06-41 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 26 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 4, 2

ಮೇಷ: ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆಯು ನಿಮ್ಮ ಆರೋಗ್ಯದ ಮೇಲೆ ಅತ್ಯಂತ ಪ್ರಭಾವ ಬೀರಲಿದೆ. ನಿರ್ದಿಷ್ಟವಾದ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ಆಸ್ಪತ್ರೆ ಓಡಾಟ ನಿಲ್ಲುವುದು.

ವೃಷಭ: ಕೌಟುಂಬಿಕವಾಗಿ ಕೆಟ್ಟು ಹೋದ ಸಂಬಂಧ ಮತ್ತೆ ಮರಳಿ ಬರಲಿದೆ. ಹಿರಿಯರ ಮಾತಿನಂತೆ ನಡೆದುಕೊಳ್ಳುವ ನಿರ್ಧಾರ ಶುಭಪ್ರದವಾಗುತ್ತದೆ. ಕಲಾವಿದರ ಆಸಕ್ತಿಯಿಂದ ಹೆಚ್ಚು ಅವಕಾಶಗಳು ಲಭ್ಯವಾಗಲಿದೆ.

ಮಿಥುನ: ವ್ಯವಹಾರದ ಜೀವನದಲ್ಲಿ ಕೆಲವು ವಿಚಾರಕ್ಕೆ ಆತಂಕ ಮೂಡಿ ಮನೋಧೈರ್ಯ ಕುಗ್ಗುತ್ತದೆ. ತುಂಬಾ ದಿನಗಳಿಂದ ಬರಬೇಕಿದ್ದ ಹಣ ಇಂದು ಕೈ ಸೇರಲಿದೆ. ಷೇರು ಖರೀದಿಸುವಾಗ ಎಚ್ಚರವಹಿಸಿ.

ಕರ್ಕಾಟಕ: ಯೋಜನೆಯನ್ನು ಪೂರ್ಣಗೊಳಿಸುವ ವಿಚಾರವಾಗಿ ಗಡಿಬಿಡಿಯ ವಾತಾವರಣ ಇರಲಿದೆ. ಆರ್ಥಿಕತೆಗೆ ಇನ್ನೊಬ್ಬರ ಅಥವಾ ಹೆಂಡತಿಯ ಸಹಕಾರ ಅಗತ್ಯವೆನಿಸಲಿದೆ. ಎಲ್ಲಾ ಕೆಲಸಗಳೂ ಇಷ್ಟದಂತೆಯೇ ನಡೆಯುವುದು.

ಸಿಂಹ: ಪತ್ರಿಕೆ ಮತ್ತು ಕೆಲವು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಕೆಲಸದ ಅಸ್ಥಿರತೆ ಅನುಭವಕ್ಕೆ ಬರಲಿದೆ. ಮಕ್ಕಳೊಂದಿಗೆ ಸುಖ ಭೋಜನ ನಡೆಯುವುದು. ಹೂವು, ಹಣ್ಣು, ತರಕಾರಿ ಹಾಗೂ ಹಾಲಿನ ವ್ಯಾಪಾರಿಗಳಿಗೆ ಲಾಭ .

ಕನ್ಯಾ: ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ನ್ಯಾಯಾಲಯದ ಮೆಟ್ಟಿಲು ಏರಬೇಕಾಗುತ್ತದೆ. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ಸಿಗುತ್ತದೆ. ಸಾಂಸಾರಿಕವಾಗಿ ಸುಖ-ದುಃಖಗಳ ಸಮ್ಮಿಶ್ರ ಫಲವಿದೆ.

ತುಲಾ: ಸಂಧಾನ ಅಥವಾ ಕರಾರು ಒಪ್ಪಂದಗಳು ಅನುಕೂಲಕರ ಎನಿಸಲಿವೆ. ವಿದ್ಯಾರ್ಥಿಗಳಿಗೆ ವಿಪುಲ ಅವಕಾಶ ಒದಗಿ ಬಂದರೂ ಗುರಿ ಸಾಧನೆಗೆ ಅಡ್ಡಿ ಮಾಡುವುದು.

ವೃಶ್ಚಿಕ: ಗಣೇಶನ ಸೇವೆಯೊಂದಿಗೆ ಉತ್ಸಾಹದಿಂದ ಕೆಲಸ ಆರಂಭಿಸಿದರೆ ಸಮಸ್ಯೆಗಳು ಪರಿಹಾರಗೊಳ್ಳಲಿವೆ. ಈ ದಿನದ ಕಾರ್ಯ ಕಲಾಪಗಳು ಯೋಚನೆಯಂತೆ ಸುಗಮವಾಗಿ ಸಾಗುವುದು. ಹಣದ ಅಭಾವ ಕಾಡುತ್ತದೆ.

ಧನು: ಕಾರಣಗಳೇ ಇಲ್ಲದೇ ಅಕ್ಕ-ತಂಗಿಯರಲ್ಲಿ ಕಲಹವಾಗುವ ಸಂಭವವಿದೆ. ವಕೀಲರಿಗೆ ಉದ್ಯೋಗದಲ್ಲಿ ಹೆಚ್ಚಿನ ಶ್ರಮ ಅಗತ್ಯವೆನಿಸಲಿದೆ. ದಿನವಿಡಿ ಸಂಯಮದಿಂದ ವರ್ತಿಸಿ.

ಮಕರ: ಯಾವುದೇ ವಿಚಾರವಾದರೂ ತೀರ್ಮಾನ ಕೈಗೊಳ್ಳುವ ಮುನ್ನ ಮನೆಯವರೊಂದಿಗೆ ಹಾಗೂ ತಿಳಿದವರೊಂದಿಗೆ ಚರ್ಚಿಸಿ ನಿರ್ಧರಿಸಿ. ಮಕ್ಕಳ ವಿಚಾರದಲ್ಲಿ ಹೆಮ್ಮೆಪಡುವಂತಹ ಕ್ಷಣಗಳು ಎದುರಾಗುವುದು.

ಕುಂಭ: ಸಮಯವನ್ನು ಅರಿತು ಅಧಿಕಾರಿ ವರ್ಗದವರಲ್ಲಿ ಎಚ್ಚರಿಕೆಯಿಂದ ವರ್ತಿಸುವುದರಿಂದ ಯಶಸ್ಸು. ಸ್ನೇಹಿತರೊಂದಿಗಿನ ಹರಟೆ ಮನಸ್ಸನ್ನು ಹಗುರಗೊಳಿಸಲು ಕಾರಣವಾಗುವುದು.

ಮೀನ: ನಾಲ್ಕಾರು ಮಾತುಗಳನ್ನು ಕೇಳಬೇಕಾದ ಸಂದರ್ಭ ಬರಬಹುದು. ವೃತ್ತಿರಂಗದಲ್ಲಿ ನಿಮ್ಮ ತಿಳಿವಳಿಕೆಯೇ ಅಂತಿಮವೆಂದು ತಿಳಿದುಕೊಳ್ಳಬೇಡಿ. ಪ್ರವಚನ ಕೇಳುವುದರತ್ತ ಮನಸ್ಸು ಹರಿಯಲಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	43000-50000
ಚಿತ್ರದುರ್ಗ	
ಅಪಿ	48600-49000
ಬೆಟ್ಟೆ	28600-29000
ಕೆಂಪುಗೋಟು	23000-23400
ರಾಶಿ	48100-48500
ಕಾರ್ಕಳ	
ಹೊಸತು	25000-33500
ಹಳತು	30000-50000
ಕುಮಟ	
ಚಾಲಿ	32869-36229
ಚಿಪ್ಪು	23009-26809
ಕೋಕ	6099-22569
ಫ್ಯಾಕ್ಟರಿ	3019-20129
ಹಳೆಚಾಲಿ	36509-39499
ಪುತ್ತೂರು	
ಹೊಸತು	25000-33500
ಹಳತು	36000-50000
ಶಿವಮೊಗ್ಗ	
ಬೆಟ್ಟೆ	41199-51400
ಗೊರಬಲು	17460-31619
ಹೊಸತು	32409-49799
ರಾಶಿ	31169-50109
ಸರಕು	54109-79100
ಸಿದ್ದಾಪುರ	
ಬಿಳಿಗೋಟು	24299-28119
ಚಾಲಿ	31509-36509
ಕೋಕ	21699-28819
ಕೆಂಪುಗೋಟು	20019-28819
ರಾಶಿ	41699-47699
ತಟ್ಟಿಬೆಟ್ಟೆ	27119-34099
ಶಿರಸಿ	
ಬೆಟ್ಟೆ	30699-38689
ಬಿಳಿಗೋಟು	20500-30808
ಚಾಲಿ	34099-37899
ಕೆಂಪುಗೋಟು	12709-24169
ರಾಶಿ	43699-45389
ಯಲ್ಲಾಪುರ	
ಅಪಿ	59295-66595
ಬಿಳಿಗೋಟು	14899-29691
ಚಾಲಿ	30845-38169
ಕೋಕ	4499-16099
ಕೆಂಪುಗೋಟು	14899-24969
ರಾಶಿ	38129-55800
ತಟ್ಟಿಬೆಟ್ಟೆ	28100-36090

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	23,914
ಇಂದಿನ ಅಂತ್ಯ	24,131
▲	216
ದಿನದ ಗರಿಷ್ಠ	24,188

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹610
12 ಕ್ಕೆ	₹80
ಮೈಸೂರು	
100ಕ್ಕೆ	₹612

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹350-660
ದ್ವಿತಳಿ (ಬಿ.ವಿ)	₹389-771

ಎನ್.ಆರ್.ಪುರ ರಬ್ಬರ್

ಆರ್ಎಸ್ಎಸ್-4	₹189
ಆರ್ಎಸ್ಎಸ್-5	₹182
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1470 (1460)
ಸೋಯಾ (ರಿಫೈನ್ಡ್)	₹1320 (1325)
ಸೂರ್ಯಕಾಂತಿ (ರಿಫೈನ್ಡ್)	₹1390 (1380)
ಪಾಮೋಲಿನ್	₹1370 (1335)

ಪ್ರಸಕ್ತ ಹಣಕಾಸು ವರ್ಷದ ಶೇ 46ರಷ್ಟು ತಲುಪಿದ ಗುರಿ: ಸಿಜಿಎ ವರದಿ

ವಿತ್ತೀಯ ಕೊರತೆ ಅಂತರ ಹೆಚ್ಚಳ

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಮೊದಲ ಏಳು ತಿಂಗಳಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಇಡೀ ವರ್ಷಕ್ಕೆ ಅಂದಾಜು ಮಾಡಲಾದ ವಿತ್ತೀಯ ಕೊರತೆಯ ಶೇ 46.5ರಷ್ಟು ಆಗಿದೆ.

ವರಮಾನ ಮತ್ತು ವೆಚ್ಚದ ನಡುವಣ ಅಂತರವಾದ ವಿತ್ತೀಯ ಕೊರತೆಯು ಅಕ್ಟೋಬರ್ ಅಂತ್ಯಕ್ಕೆ ₹7.50 ಲಕ್ಷ ಕೋಟಿಯಷ್ಟಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರು (ಸಿಜಿಎ) ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

2023–24ನೇ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆಯು ಶೇ 5.6ರಷ್ಟಿತ್ತು. 2024–25ನೇ ಆರ್ಥಿಕ ವರ್ಷದಲ್ಲಿ ಇದನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.9ಕ್ಕೆ ತಗ್ಗಿಸಲು ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಗುರಿ ನಿಗದಿಪಡಿಸಿದೆ. ಮೌಲ್ಯದ ಲೆಕ್ಕದಲ್ಲಿ ಇದು ₹16.13 ಲಕ್ಷ ಕೋಟಿ ಆಗಿದೆ.

ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಒಟ್ಟು ₹13 ಲಕ್ಷ ಕೋಟಿ ನಿವ್ವಳ ತೆರಿಗೆ ವರಮಾನ ಸಂಗ್ರಹ ವಾಗಿದೆ. ಇದೇ ಅವಧಿಯಲ್ಲಿ ಸರ್ಕಾರದ ವೆಚ್ಚವು ₹24.7 ಲಕ್ಷ ಕೋಟಿ ಆಗಿದೆ. ಇದು ಬಜೆಟ್ ಅಂದಾಜಿನ ಶೇ 51ರಷ್ಟು ಆಗಿದೆ.

‘ಮೂಲ ವರ್ಷ ಬದಲಾವಣೆಗೆ ಚಿಂತನೆ’

ನವದೆಹಲಿ (ಪಿಟಿಐ): ದೇಶದ ಆರ್ಥಿಕತೆಯ ನಿಖರವಾದ ಚಿತ್ರಣವನ್ನು ಪ್ರತಿಬಿಂಬಿಸಲು ಜಿಡಿಪಿಯ ಲೆಕ್ಕಾಚಾರದ ಮೂಲ ವರ್ಷವನ್ನು 2022-23ಕ್ಕೆ ಬದಲಾಯಿಸುವ ಕುರಿತು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ (ಎಂಎಸ್‌ಪಿಐ) ಕಾರ್ಯದರ್ಶಿ ಸೌರಭ್ ಗಾರ್ಗ್ ಹೇಳಿದ್ದಾರೆ.

ಜಿಡಿಪಿ ಲೆಕ್ಕಾಚಾರಕ್ಕಾಗಿ 2011-12 ಅನ್ನು ಮೂಲ ವರ್ಷವಾಗಿ ಈವರೆಗೆ ಪರಿಗಣಿಸಲಾಗುತ್ತಿದೆ. ದಶಕದ ನಂತರದ ಮೊದಲ ಪರಿಷ್ಕರಣೆ ಇದಾಗಿದೆ. ಮುಂದಿನ ಮೂಲ ವರ್ಷ (ಜಿಡಿಪಿ) 2022-23 ಆಗಿರುತ್ತದೆ. ಫೆಬ್ರವರಿ 2026ರಿಂದ ಜಾರಿಗೆ ಬರಲಿದೆ ಎಂದು ಗಾರ್ಗ್ ಹೇಳಿದರು.

ಬಿಸ್ವನಾಥ್ ಗೋಲ್ದಾರ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ರಾಷ್ಟ್ರೀಯ ಲೆಕ್ಕಪತ್ರ ಅಂಕಿ ಅಂಶಗಳ ಸಲಹಾ ಸಮಿತಿಯು 2026ರ ಆರಂಭದಲ್ಲಿ ವರದಿಯನ್ನು ಪೂರ್ಣಗೊಳಿಸುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಗ್ರಾಹಕ ಬಳಕೆಯಲ್ಲಿ ಆಗಿರುವ ವ್ಯತ್ಯಾಸದ ಮಾದರಿ, ವಲಯಗಳಲ್ಲಿ ಆಗಿರುವ ಬದಲಾವಣೆ, ಹೊಸ ವಲಯಗಳ ಸೇರ್ಪಡೆಯಂತಹ ಅರ್ಥ ವ್ಯವಸ್ಥೆಯಲ್ಲಿನ ಪರಿವರ್ತನೆಗಳನ್ನು ನಿಖರವಾಗಿ ಅರ್ಥ ಮಾಡಿಕೊಳ್ಳಲು ಕಾಲಕಾಲಕ್ಕೆ ಮೂಲ ವರ್ಷದ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ.

ಬೆಂಗಳೂರಲ್ಲಿ ಮನೆ ಬೆಲೆ ಶೇ 9ರಷ್ಟು ನೆಗೆತ

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದಲ್ಲಿ ಮನೆಗಳ ಬೆಲೆ ವಾರ್ಷಿಕ ಶೇ 4.3ರಷ್ಟು ಏರಿಕೆಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಶೇ 3.5ರಷ್ಟು ಹೆಚ್ಚಳವಾಗಿತ್ತು ಎಂದು ಆರ್‌ಬಿಐ ತನ್ನ ಅಖಿಲ ಭಾರತ ಮನೆ ದರ ಸೂಚ್ಯಂಕದ (ಎಚ್‌ಪಿಐ) ಸೆಪ್ಟೆಂಬರ್ ತ್ರೈಮಾಸಿಕದ ವರದಿಯಲ್ಲಿ ಹೇಳಿದೆ.

ಮನೆಗಳ ಬೆಲೆ ಏರಿಕೆಯ ಪೈಕಿ ಬೆಂಗಳೂರಲ್ಲಿ ಶೇ 8.8ರಷ್ಟು ಏರಿಕೆಯಾಗಿದೆ. ಇದೇ ವೇಳೆ ಕಾನ್ಪುರದಲ್ಲಿ ಶೇ 2ರಷ್ಟು ಇಳಿಕೆಯಾಗಿದೆ ಎಂದು ವರದಿ ತಿಳಿಸಿದೆ.

ದೇಶದ ಪ್ರಮುಖ ಹತ್ತು ನಗರಗಳಲ್ಲಿನ ನೋಂದಣಿ ಪ್ರಾಧಿಕಾರಗಳಿಂದ ಪಡೆದ ದತ್ತಾಂಶ ಆಧರಿಸಿ ವರದಿ ಸಿದ್ಧಪಡಿಸಿದೆ. ಅಹಮದಾಬಾದ್, ಬೆಂಗಳೂರು, ಚೆನ್ನೈ, ದೆಹಲಿ, ಜೈಪುರ, ಕಾನ್ಪುರ, ಕೊಚ್ಚಿ, ಕೋಲ್ಕತ್ತ, ಲಖನೌ ಮತ್ತು ಮುಂಬೈನಿಂದ ಮಾಹಿತಿ ಸಂಗ್ರಹಿಸಿದೆ.

ಸೇವಾ ವಲಯದ ರಫ್ತು ಶೇ 22ರಷ್ಟು ಏರಿಕೆ

ದೇಶದ ಸೇವಾ ವಲಯದ ರಫ್ತು ಅಕ್ಟೋಬರ್ ತಿಂಗಳಲ್ಲಿ ಶೇ 22ರಷ್ಟು ಏರಿಕೆಯಾಗಿದ್ದು, ಒಟ್ಟು ಮೌಲ್ಯ ₹2.90 ಲಕ್ಷ ಕೋಟಿಯಾಗಿದೆ ಎಂದು ಆರ್‌ಬಿಐ ಶುಕ್ರವಾರ ತಿಳಿಸಿದೆ.

ಇದೇ ವೇಳೆ ಆಮದು ಪ್ರಮಾಣ ಶೇ 28ರಷ್ಟು ಏರಿಕೆಯಾಗಿದ್ದು, ₹1.45 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಕೈಗಾರಿಕೆಗಳಿಗೆ ಬ್ಯಾಂಕ್ ಸಾಲ ಪ್ರಮಾಣ ಹೆಚ್ಚಳ

ಮುಂಬೈ (ಪಿಟಿಐ): ಬ್ಯಾಂಕ್‌ಗಳು ಕೈಗಾರಿಕೆಗಳಿಗೆ ನೀಡುವ ಸಾಲದ ಪ್ರಮಾಣ ಕಳೆದ ವರ್ಷದ ಅಕ್ಟೋಬರ್‌ಗೆ ಹೋಲಿಸಿದರೆ, ಶೇ 8ರಷ್ಟು ಹೆಚ್ಚಳವಾಗಿದೆ ಎಂದು ಆರ್‌ಬಿಐ ಅಂಕಿ–ಅಂಶ ತಿಳಿಸಿದೆ.

ಅಕ್ಟೋಬರ್‌ನಲ್ಲಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ನೀಡಿದ ಸಾಲವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 15.5 ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ.

ರಾಸಾಯನಿಕ ಮತ್ತು ರಾಸಾಯನಿಕ ಉತ್ಪನ್ನಗಳು, ಪೆಟ್ರೋಲಿಯಂ, ಕಲ್ಲಿದ್ದಲು ಉತ್ಪನ್ನಗಳು ಮತ್ತು ಅಣು ಇಂಧನಕ್ಕೆ ಸಂಬಂಧಿಸಿದ ಕೈಗಾರಿಕೆಗಳಿಗೆ ನೀಡಿದ ಸಾಲದ ಪ್ರಮಾಣದಲ್ಲಿ ಏರಿಕೆಯಾಗಿದೆ.

ವೈಯಕ್ತಿಕ ಸಾಲದ ಪ್ರಮಾಣ ಶೇ 15.8ರಷ್ಟಿದ್ದು, ಕಳೆದ ಅಕ್ಟೋಬರ್‌ಗೆ (ಶೇ 18) ಹೋಲಿಸಿದರೆ ಇಳಿಕೆಯಾಗಿದೆ. ಆದರೆ, ವೈಯಕ್ತಿಕ ಸಾಲ ವಿಭಾಗದಲ್ಲಿ ಪ್ರಮುಖ ಎನಿಸಿರುವ ‘ಗೃಹ ಸಾಲ’ದ ಪ್ರಮಾಣ ಕಳೆದ ಬಾರಿಗಿಂತ ಏರಿಕೆಯಾಗಿದೆ ಎಂದು ತಿಳಿಸಿದೆ.

ಸಾಬೂನಿನ ದರ ಏರಿಕೆ

ನವದೆಹಲಿ (ಪಿಟಿಐ): ಸಾಬೂನು ತಯಾರಿಕೆಯ ಪ್ರಮುಖ ಕಚ್ಚಾ ವಸ್ತು, ತಾಳೆ ಎಣ್ಣೆ ಬೆಲೆ ಏರಿಕೆಯಾದ ಕಾರಣ ತ್ವರಿತವಾಗಿ ಬಿಕರಿಯಾಗುವ ವಸ್ತುಗಳ (ಎಫ್‌ಎಂಸಿಜಿ) ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿರುವ ಹಿಂದುಸ್ತಾನ್ ಯೂನಿಲಿವರ್ (ಎಚ್‌ಯುಎಲ್), ವಿಪ್ರೊ ಸಂಸ್ಥೆಗಳು ಸಾಬೂನಿನ ಬೆಲೆಯನ್ನು ಶೇ 7ರಿಂದ 8ರಷ್ಟು ಹೆಚ್ಚಿಸಿವೆ.

‘ಈ ವರ್ಷದ ಆರಂಭದಿಂದಲೇ ತಾಳೆ ಎಣ್ಣೆಯ ದರ ತ್ವರಿತವಾಗಿ ಶೇ 30ರಷ್ಟು ಏರಿಕೆಯಾಗಿದ್ದರಿಂದ ಮಾರುಕಟ್ಟೆಯಲ್ಲಿರುವ ಪ್ರಮುಖ ಸಾಬೂನು ಉತ್ಪಾದನಾ ಸಂಸ್ಥೆಗಳು ಶೇ 7ರಿಂದ 8ರಷ್ಟು ದರ ಏರಿಕೆ ಮಾಡಿವೆ. ನಾವು ಕೂಡ ಮಾರುಕಟ್ಟೆಯಲ್ಲಿನ ಬೆಳವಣಿಗೆ ಗಮನಿಸಿ, ದರ ಏರಿಕೆ ಮಾಡಿದ್ದೇವೆ’ ಎಂದು ವಿಪ್ರೊ ಕನ್ಸ್ಯೂಮರ್ ಕೇರ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನೀರಜ್ ಖತ್ರಿ ತಿಳಿಸಿದರು.

ವಿಪ್ರೊ ಎಂಟರ್‌ಪ್ರೈಸಸ್ ಭಾಗವಾಗಿರುವ ವಿಪ್ರೊ ಕನ್ಸ್ಯೂಮರ್ ಸಂಸ್ಥೆಯು ಸಂತೂರ್ ಹಾಗೂ ಚಂದ್ರಿಕಾ ಸೋಪ್‌ಗಳನ್ನು ಹೊಂದಿವೆ. ಎಚ್‌ಯುಎಲ್ ಸಂಸ್ಥೆಯು ಡವ್, ಲಕ್ಸ್, ಲೈಫ್‌ಬಾಯ್, ಲಿರಿಲ್, ಪಿಯರ್ಸ್, ರೆಕ್ಸೋನಾ ಸಾಬೂನಿನ ಬೆಲೆ ಏರಿಕೆ ಮಾಡಿದೆ.

ಆಮದು ಸುಂಕ ಹೆಚ್ಚಳ ಹಾಗೂ ಜಾಗತಿಕ ಮಟ್ಟದಲ್ಲಿ ದರ ಏರಿಕೆ ಮಾಡಿದ್ದರಿಂದ ಸೆಪ್ಟೆಂಬರ್ ಮಧ್ಯಭಾಗದ ವೇಳೆಗೆ ತಾಳೆ ಎಣ್ಣೆ ದರವು ಶೇ 35 ರಿಂದ 40ರಷ್ಟು ಏರಿಕೆ ದಾಖಲಿಸಿತ್ತು. ಇಂಡೊನೇಷ್ಯಾ, ಮಲೇಷ್ಯಾದಿಂದ ಭಾರತವು ಹೆಚ್ಚಿನ ಪ್ರಮಾಣದಲ್ಲಿ ತಾಳೆಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. 10 ಕೆ.ಜಿ. ತಾಳೆ ಎಣ್ಣೆಗೆ ಮಾರುಕಟ್ಟೆಯಲ್ಲಿ ₹1,370 ದರವಿದೆ.

ಪ್ರತಿಕೂಲ ಹವಾಮಾನದಿಂದ ಉತ್ಪಾದನೆಯಲ್ಲಿ ಕುಸಿತ ಉಂಟಾಗಿದ್ದರಿಂದ ಎಚ್‌ಯುಎಲ್, ಟಾಟಾ ಕನ್ಸ್ಯೂಮರ್ ಸಂಸ್ಥೆಯು ಚಹಾ ಪುಡಿಯ ಬೆಲೆಯನ್ನು ಏರಿಕೆ ಮಾಡಿತ್ತು.

ಜ.1ರಿಂದ ಬಿಎಂಡಬ್ಲ್ಯು ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಜರ್ಮನಿಯ ವಾಹನ ತಯಾರಿಕಾ ಕಂಪನಿ ಬಿಎಂಡಬ್ಲ್ಯುನ ದ್ವಿಚಕ್ರ ವಾಹನ ವಿಭಾಗವಾದ ಬಿಎಂಡಬ್ಲ್ಯು ಮೋಟೊರಾಡ್, ತನ್ನ ಎಲ್ಲ ಮಾದರಿಯ ವಾಹನಗಳ ಬೆಲೆಯನ್ನು ಶೇ2.5ರವರೆಗೆ ಏರಿಕೆ ಮಾಡುವುದಾಗಿ ಹೇಳಿದೆ.

ಹೊಸ ದರವು ಜನವರಿ 1ರಿಂದ ಜಾರಿಗೆ ಬರಲಿದೆ. ತಯಾರಿಕಾ ವೆಚ್ಚ ಹೆಚ್ಚಳದಿಂದ ಬೆಲೆ ಏರಿಕೆ ಮಾಡಲಾಗುತ್ತಿದೆ ಎಂದು ಕಂಪನಿ ಶುಕ್ರವಾರ ತಿಳಿಸಿದೆ.

ಜೊಂಪನಹಳ್ಳಿಗೆ ‘ಟೈಟನ್’ ಜೈವಿಕ ಅನಿಲ ಶಕ್ತಿ

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಹಯೋಗದಲ್ಲಿ ಅನುಷ್ಠಾನ

• ಎಂ. ಮಹೇಶ

ಜೊಂಪನಹಳ್ಳಿ (ಮೈಸೂರು ಜಿಲ್ಲೆ): ಖ್ಯಾತ ಕೈಗಡಿಯಾರ ತಯಾರಿಕಾ ಕಂಪನಿ ಟೈಟನ್ ತನ್ನ ‘ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಯಲ್ಲಿ ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಜೊಂಪನಹಳ್ಳಿಯನ್ನು, ‘ಪ್ರತಿ ಮನೆಹಂತದಲ್ಲೂ ಜೈವಿಕ ಅನಿಲ ಶಕ್ತಿ ಹೊಂದಿರುವ ತಾಲ್ಲೂಕಿನ ಮೊಟ್ಟ ಮೊದಲ ಗ್ರಾಮ’ ಎಂದು ಘೋಷಿಸುವ ಪಣ ತೊಟ್ಟಿದ್ದು, ಅನುಷ್ಠಾನಕ್ಕೂ ಕ್ರಮ ಕೈಗೊಂಡಿದೆ.

ಗ್ರಾಮದಲ್ಲಿ 146 ಮನೆಗಳಿದ್ದು, 108 ಮನೆಗಳಲ್ಲಿ ಅಡುಗೆ ಅನಿಲ ಸಿಲಿಂಡರ್ (ಎಲ್‌ಪಿಜಿ) ಬಳಸಲಾಗುತ್ತಿದೆ. ಸದ್ಯ 38 ಮನೆಗಳಿಗೆ ಜೈವಿಕ ಅನಿಲ ಘಟಕ ಅಳವಡಿಸಲಾಗಿದೆ. ಕೆಲವರು ಅದರಲ್ಲೇ ಅಡುಗೆಯನ್ನೂ ಮಾಡುತ್ತಿದ್ದಾರೆ. ಎಲ್‌ಪಿಜಿ ಮೇಲಿನ ಅವಲಂಬನೆ ತಪ್ಪಿಸುವುದು ಹಾಗೂ ಹಸಿರು ಗ್ರಾಮವನ್ನಾಗಿಸುವ ಗುರಿ ಇದೆ.

ಕಾರ್ಯನಿರ್ವಹಣೆ ವೀಕ್ಷಣೆ: ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸಿ.ಕೆ. ವೆಂಕಟರಾಮನ್ ಶುಕ್ರವಾರ ಈ ಘಟಕಗಳ ಕಾರ್ಯನಿರ್ವಹಣೆಯನ್ನು ವೀಕ್ಷಿಸಿದರು. ಮಲ್ಲಿಗಮ್ಮ ಅವರು ಅದರಲ್ಲೇ ಸಿದ್ಧಪಡಿಸಿದ ಚಹಾ ಸವಿದರು. ‘ಅತ್ಯಂತ ಹಿಂದುಳಿದ ತಾಲ್ಲೂಕಿನ ಹಳ್ಳಿಯ ಜನ ಪರಿಸರಕ್ಕೆ ಪೂರಕವಾದ ಸುಸ್ಥಿರ ಅಭಿವೃದ್ಧಿಯೆಡೆಗೆ ಹೆಜ್ಜೆ ಇಡುತ್ತಿದ್ದಾರೆ’ ಎಂದು ಹರ್ಷ ವ್ಯಕ್ತಪಡಿಸಿದರು.

ಟೈಟನ್ ‘ಲೀಪ್ (ಲರ್ನ್–ಅಪ್ಲೈ–ಪ್ರೋಗ್ರೆಸ್) ಅಡಿ ಘಟಕಗಳನ್ನು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವಿವೈಎಂ) ಸ್ಥಾಪಿಸಿದೆ. ನವೀಕರಿಸಬಹುದಾದ ಇಂಧನದ ಪರಿಣಾಮಕಾರಿ ಬಳಕೆ ಹಾಗೂ ‘ಜೈವಿಕ ಅನಿಲ ಬಳಸಿ ಪರಿಸರ ಉಳಿಸಿ’ ಎಂಬ ಜಾಗೃತಿಯನ್ನೂ ಮೂಡಿಸುತ್ತಿದೆ. ಘಟಕ ಸ್ಥಾಪಿಸಿ ಕೊಂಡವರಿಂದ ₹3,500 ವಂತಿಗೆಯನ್ನಷ್ಟೆ ಪಡೆದು, ಉಳಿದ ಖರ್ಚನ್ನು ಕಂಪನಿ ಭರಿಸಿದೆ. ನಿರ್ವಹಣೆ, ಬಳಕೆಯ ತರಬೇತಿಯನ್ನು ಎಸ್‌ವಿವೈಎಂನಿಂದ ಕೊಡಿಸಲಾಗಿದೆ.

ಹಲವು ಲಾಭ: ಸುಸ್ಥಿರ ಗ್ರಾಮೀಣ ಅಭಿವೃದ್ಧಿಯ ಯೋಜನೆಯ ಭಾಗವಾಗಿ, ಸೆಪ್ಟೆಂಬರ್‌ನಲ್ಲಿ ಘಟಕಗಳ ಸ್ಥಾಪನೆಗೆ ಚಾಲನೆ ನೀಡಲಾಗಿತ್ತು. ಜೊಂಪನಹಳ್ಳಿ, ಬನವಾಡಿ ಹಾಗೂ ಇತರ ಗ್ರಾಮಗಳ ಒಟ್ಟು 200 ರೈತ ಕುಟುಂಬಗಳಿಗೆ ನೆರವು ದೊರಕಲಿದೆ. ಅಡುಗೆ ಅನಿಲದೊಂದಿಗೆ ಜೈವಿಕ ಗೊಬ್ಬರವೂ ದೊರೆಯುವುದರಿಂದ, ಸುಸ್ಥಿರ ಕೃಷಿ ಹಾಗೂ ಹೈನುಗಾರಿಕೆಗೆ ಬಲ ತುಂಬಲಿದೆ. ಹಣವೂ ಉಳಿತಾಯವಾಗಲಿದೆ ಎಂದು ಆಶಿಸಲಾಗಿದೆ.

‘ಘಟಕವನ್ನು ಕಂಪನಿಯವರೇ ಹಾಕಿಕೊಟ್ಟಿದ್ದು, ಸೋಮವಾರದಿಂದ ಇದನ್ನೇ ಬಳಸುತ್ತಿದ್ದೇವೆ. ನಿತ್ಯವೂ ಸಗಣಿಯನ್ನು ನೀರಿನಲ್ಲಿ ಬೆರೆಸಿ, ದೊರೆಯುವ ಜೈವಿಕ ಗೊಬ್ಬರವನ್ನು ಜಮೀನಿಗೆ ಬಳಸಬಹುದು. ತರಬೇತಿಯನ್ನೂ ಕೊಟ್ಟಿದ್ದಾರೆ’ ಎಂದು ಗೃಹಿಣಿ ಮಲ್ಲಿಗಮ್ಮ ಹರ್ಷ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲೆ ಎಚ್.ಡಿ. ಕೋಟೆ ತಾಲ್ಲೂಕಿನ ಜೊಂಪನಹಳ್ಳಿಯಲ್ಲಿ ಮನೆಗಳ ಬಳಿ ನಿರ್ಮಿಸಿರುವ ಜೈವಿಕ ಅನಿಲ ಘಟಕವನ್ನು ಟೈಟನ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶುಕ್ರವಾರ ಉದ್ಘಾಟಿಸಿ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

> **ನಾವು ನೀಡಿದ ಸಿಎಸ್‌ಆರ್ ಅನುದಾನದಲ್ಲಿ ಇಡೀ ಹಳ್ಳಿಗೆ ಜೈವಿಕ ಅನಿಲ ಘಟಕ ಸ್ಥಾಪಿಸಿಕೊಡುತ್ತಿರುವುದು ನೋಡಿ ಖುಷಿಯಾಯಿತು. ಇದು ಪರಿಸರಕ್ಕೆ ಪೂರಕ ಚಟುವಟಿಕೆ**
> **ಸಿ.ಕೆ. ವೆಂಕಟರಾಮನ್** ವ್ಯವಸ್ಥಾಪಕ ನಿರ್ದೇಶಕ, ಟೈಟನ್ ಕಂಪನಿ

> **ಕಂಪನಿಯವರು ಮಂಡ್ಯ ಜಿಲ್ಲೆಯ ವಿವಿಧೆಡೆ ಕರೆದೊಯ್ದು ಘಟಕಗಳ ಕಾರ್ಯನಿರ್ವಹಣೆ ಬಗ್ಗೆ ತರಬೇತಿ–ಪ್ರಾತ್ಯಕ್ಷಿಕೆ ನೀಡಿದ್ದು, 10 ವರ್ಷ ಬಳಸಬಹುದೆಂದು ತಿಳಿಸಿದ್ದಾರೆ**
> **ಚಿನ್ನಮ್ಮ** ಗೃಹಿಣಿ, ಜೊಂಪನಹಳ್ಳಿ

ಸೆನ್ಸೆಕ್ಸ್, ನಿಫ್ಟಿ ಜಿಗಿತ

ಮುಂಬೈ (ಪಿಟಿಐ): ಭಾರ್ತಿ ಏರ್‌ಟೆಲ್, ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿ ಹೆಚ್ಚಳದಿಂದ ಶುಕ್ರವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಶೇ 1ರಷ್ಟು ಏರಿಕೆಯಾಗಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 759 ಅಂಶ ಏರಿಕೆಯಾಗಿ, 79,802ಕ್ಕೆ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 216 ಅಂಶ ಹೆಚ್ಚಳವಾಗಿ 24,131ಕ್ಕೆ ಕೊನೆಗೊಂಡಿತು.

ಭಾರ್ತಿ ಏರ್‌ಟೆಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಅಲ್ಟ್ರಾ ಟೆಕ್ ಸಿಮೆಂಟ್, ಅದಾನಿ ಪೋರ್ಟ್ಸ್, ರಿಲಯನ್ಸ್ ಇಂಡಸ್ಟ್ರೀಸ್, ಲಾರ್ಸನ್ ಆ್ಯಂಡ್ ಟೊಬ್ರೊ, ಜೆಎಸ್‌ಡಬ್ಲ್ಯು ಸ್ಟೀಲ್, ಹಿಂದುಸ್ತಾನ್ ಯೂನಿಲಿವರ್, ಟೈಟನ್ ಮತ್ತು ಟಾಟಾ ಮೋಟರ್ಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಪವರ್ ಗ್ರಿಡ್, ನೆಸ್ಲೆ, ಎಸ್‌ಬಿಐ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಏಷ್ಯನ್ ಮಾರುಕಟ್ಟೆಯಲ್ಲಿ ಶಾಂಘೈ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟು ನಡೆಸಿದ್ದರೆ, ಸೋಲ್ ಮತ್ತು ಟೋಕಿಯೊ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ.

ಸಂಕ್ಷಿಪ್ತ ಸುದ್ದಿ

ಪುನೀತ್ ಗೋಯೆಂಕಾ ಮರುನೇಮಕ ಪ್ರಸ್ತಾವ ತಿರಸ್ಕಾರ

ನವದೆಹಲಿ (ಪಿಟಿಐ): ಜೀ ಎಂಟರ್‌ಟೈನ್ ಮೆಂಟ್‌ನ ಷೇರುದಾರರು ಪುನೀತ್ ಗೋಯೆಂಕಾ ಅವರನ್ನು ಕಂಪನಿಯ ನಿರ್ದೇಶಕರಾಗಿ ಮರು ನೇಮಕ ಮಾಡುವ ಪ್ರಸ್ತಾಪವನ್ನು ತಿರಸ್ಕರಿಸಿದ್ದಾರೆ.

ಗೋಯೆಂಕಾ ಅವರ ಮರು ನೇಮಕಾತಿ ನಿರ್ಣಯವನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಯಿತು. ಕಂಪನಿ ಕಾಯ್ದೆ 2013ರ ಪ್ರಕಾರ ಶೇ 50ರಷ್ಟು ಮತ ಪಡೆದಿರಬೇಕು. ಆದರೆ, ಗೋಯೆಂಕಾ ಮತವನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ ಎಂದು ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಜಿಇಇಎಲ್) ಷೇರುಪೇಟೆಗೆ ತಿಳಿಸಿದೆ. ಗೋಯೆಂಕಾ ಪ್ರಸ್ತುತ ಕಂಪನಿಯ ಸಿಇಒ ಆಗಿದ್ದಾರೆ. ಈ ಹಿಂದೆ, ಹಲವು ಸಂಸ್ಥೆಗಳು ಗೋಯೆಂಕಾ ಅವರ ನೇಮಕಕ್ಕೆ ವಿರುದ್ಧವಾಗಿ ಮತ ಚಲಾಯಿಸುವಂತೆ ಷೇರುದಾರರಿಗೆ ಸಲಹೆ ನೀಡಿದ್ದವು.

ಅದಾನಿ ಗ್ರೀನ್ ಎನರ್ಜಿ ಷೇರಿನ ಮೌಲ್ಯ ಶೇ 22 ಏರಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ 11 ನೋಂದಾಯಿತ ಕಂಪನಿಗಳ ಪೈಕಿ 9 ಕಂಪನಿಗಳ ಷೇರಿನ ಮೌಲ್ಯ ಶುಕ್ರವಾರ ಏರಿಕೆಯಾಗಿದೆ.

ಕಂಪನಿಗಳ ಪೈಕಿ ಅದಾನಿ ಗ್ರೀನ್ ಎನರ್ಜಿ ಷೇರಿನ ಮೌಲ್ಯ ಶೇ 21.72ರಷ್ಟು ಹೆಚ್ಚಳವಾಗಿದೆ. ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 15.56, ಅಂಬುಜಾ ಸಿಮೆಂಟ್ಸ್ ಶೇ 3.73, ಅದಾನಿ ಪೋರ್ಟ್ಸ್ ಶೇ 1.94, ಎಸಿಸಿ ಶೇ 1.59, ಅದಾನಿ ಟೋಟಲ್ ಗ್ಯಾಸ್ ಶೇ 1.03, ಅದಾನಿ ಎಂಟರ್‌ಪ್ರೈಸಸ್ ಶೇ 1.02, ಎನ್‌ಡಿಟಿವಿ ಶೇ 0.60 ಮತ್ತು ಅದಾನಿ ವಿಲ್ಮರ್ ಶೇ 0.05ರಷ್ಟು ಷೇರಿನ ಮೌಲ್ಯ ಏರಿಕೆಯಾಗಿದೆ. ಅದಾನಿ ಪವರ್ ಶೇ 1.01 ಮತ್ತು ಶಾಂಘೈ ಇಂಡಸ್ಟ್ರೀಸ್ ಶೇ 0.45ರಷ್ಟು ಷೇರಿನ ಮೌಲ್ಯ ಇಳಿದಿದೆ.

ಜಿಡಿಪಿ: ಎರಡು ವರ್ಷಗಳ ಕನಿಷ್ಠ

ಒಂದನೇ ಪುಟದಿಂದ..

ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಚೀನಾದ ಜಿಡಿಪಿಯು ಶೇ 4.6ರಷ್ಟು ದಾಖಲಾಗಿದೆ.

ವೆಚ್ಚ ಇಳಿಕೆ: ಜನರು ಸರಕು ಮತ್ತು ಸೇವೆಗಳಿಗಾಗಿ ಮಾಡುವ ವೆಚ್ಚವನ್ನು ಸೂಚಿಸುವ ಖಾಸಗಿ ಬಳಕೆ ವೆಚ್ಚದ ಬೆಳವಣಿಗೆಯ ಪ್ರಮಾಣವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 6ಕ್ಕೆ ಇಳಿದಿದೆ. ಈ ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಇದು ಶೇ 7.4ರಷ್ಟಿತ್ತು.

ಕುಸಿದ ತಯಾರಿಕಾ ವಲಯ: ಕಳೆದ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ತಯಾರಿಕಾ ವಲಯದ ಜಿವಿಎ ಪ್ರಗತಿ ಶೇ 14.3ರಷ್ಟಿತ್ತು. ಅದು ಈ ವರ್ಷ ಶೇ 2.2ಕ್ಕೆ ಇಳಿಕೆಯಾಗಿದೆ.

ಗಣಿಗಾರಿಕೆ ಮತ್ತು ಕ್ವಾರಿ ವಲಯದ ಜಿವಿಎ ಬೆಳವಣಿಗೆಯು ಶೇ (–) 0.01ಕ್ಕೆ ಕುಸಿತ ಕಂಡಿದ್ದು, ವರ್ಷದ ಹಿಂದೆ ಇದೇ ಅವಧಿಯಲ್ಲಿ ಶೇ 11.1ರಷ್ಟಿತ್ತು.

ವಿದ್ಯುತ್, ಅಡುಗೆ ಅನಿಲ, ನೀರು ಸರಬರಾಜು ಮತ್ತು ಇತರ ದಿನ ಬಳಕೆ ಸೇವೆಗಳ ಪ್ರಗತಿಯು ಶೇ 3.3ರಷ್ಟಿದ್ದು, ವರ್ಷದ ಹಿಂದೆ ಶೇ 10.5ರಷ್ಟಿತ್ತು.

ಕಟ್ಟಡ ನಿರ್ಮಾಣ ವಲಯದ ಬೆಳವಣಿಗೆಯೂ ಕುಂಠಿತವಾಗಿದೆ. ಕಳೆದ ವರ್ಷದ ಎರಡನೇ ತ್ರೈಮಾಸಿಕದಲ್ಲಿ ಶೇ 13.6ರಷ್ಟಿದ್ದರೆ, ಈ ವರ್ಷ ಶೇ 7.7ರಷ್ಟು ದಾಖಲಾಗಿದೆ.

ಕೃಷಿ ಚೇತರಿಕೆ: ಕೃಷಿ ವಲಯದ ಒಟ್ಟು ಮೌಲ್ಯವರ್ಧನೆಯು (ಜಿವಿಎ) ಎರಡನೇ ತ್ರೈಮಾಸಿಕದಲ್ಲಿ ಶೇ 3.5ಕ್ಕೆ ಏರಿಕೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಶೇ 1.7ರಷ್ಟಿತ್ತು.

ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವೃತ್ತಿಪರ ಸೇವಾ ಕ್ಷೇತ್ರಗಳ ಜಿವಿಎ ಪ್ರಗತಿಯು ಶೇ 6.7ಕ್ಕೆ ಏರಿಕೆಯಾಗಿದೆ. ಕಳೆದ ವರ್ಷ ಶೇ 6.2ರಷ್ಟಿತ್ತು.

‘2023–24ನೇ ಸಾಲಿನ ಎರಡನೇ ತ್ರೈಮಾಸಿಕದ ವಾಸ್ತವ ಜಿಡಿಪಿ ಅಥವಾ ಹಣದುಬ್ಬರದೊಂದಿಗೆ ಹೊಂದಾಣಿಕೆ ಮಾಡಿಕೊಂಡ ಜಿಡಿಪಿಯ ಮೌಲ್ಯವು ₹41.86 ಲಕ್ಷ ಕೋಟಿ ಇತ್ತು. ಈ ವರ್ಷ ಎರಡನೇ ತ್ರೈಮಾಸಿಕದಲ್ಲಿ ಈ ಮೌಲ್ಯ ₹44.10 ಲಕ್ಷ ಕೋಟಿಯಾಗಿದ್ದು, ಬೆಳವಣಿಗೆ ದರ ಶೇ 5.4ರಷ್ಟು ದಾಖಲಾಗಿದೆ’ ಎಂದು ಎನ್‌ಎಸ್‌ಒ ಹೇಳಿಕೆಯಲ್ಲಿ ತಿಳಿಸಿದೆ.

‘ನಾಮಿನಲ್ ಜಿಡಿಪಿ ಅಥವಾ ಪ್ರಸ್ತುತ ಮಾರುಕಟ್ಟೆ ಬೆಲೆಗಳನ್ನು ಆಧಾರವಾಗಿಟ್ಟುಕೊಂಡು ಲೆಕ್ಕ ಹಾಕಿದ ಜಿಡಿಪಿ ಮೌಲ್ಯವು ಕಳೆದ ವರ್ಷದ ಜುಲೈ– ಸೆಪ್ಟೆಂಬರ್‌ನಲ್ಲಿ ₹70.90 ಲಕ್ಷ ಕೋಟಿ ಇದ್ದರೆ, ಈ ವರ್ಷ ಇದೇ ಅವಧಿಯಲ್ಲಿ ₹76.60 ಲಕ್ಷ ಕೋಟಿಯಾಗಿದೆ. ಇದರ ಪ್ರಗತಿ ದರ ಶೇ 8ರಷ್ಟು ದಾಖಲಾಗಿದೆ’ ಎಂದು ಅದು ವಿವರಿಸಿದೆ.

ಬೇಹುಗಾರಿಕೆ ಆರೋಪ: ಚೀನಾ ಪತ್ರಕರ್ತನಿಗೆ ಏಳು ವರ್ಷ ಜೈಲು

ಬೀಜಿಂಗ್ (ಎಎಫ್‌ಪಿ): ಚೀನಾದ ಸರ್ಕಾರಿ ಮಾಧ್ಯಮದ ಹಿರಿಯ ಪತ್ರಕರ್ತ ಡಾಂಗ್ ಯುಯು ಅವರಿಗೆ ಬೇಹುಗಾರಿಕೆ ಆರೋಪದ ಮೇಲೆ ಬೀಜಿಂಗ್ ನ್ಯಾಯಾಲಯವು ಶುಕ್ರವಾರ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಕಮ್ಯುನಿಸ್ಟ್ ಪಕ್ಷದ ವೃತ್ತಪತ್ರಿಕೆ ‘ಗುವಾಂಗ್ಮಿಂಗ್ ಡೈಲಿ’ಯಲ್ಲಿ ಹಿರಿಯ ಅಂಕಣಕಾರರಾಗಿದ್ದ ಡಾಂಗ್ ಯುಯು ಅವರನ್ನು 2022ರ ಫೆಬ್ರುವರಿಯಲ್ಲಿ ಬೀಜಿಂಗ್ ರೆಸ್ಟೋರೆಂಟ್‌ವೊಂದರಲ್ಲಿ ಜಪಾನಿನ ರಾಜತಾಂತ್ರಿಕರ ಜತೆಗೆ ಬಂಧಿಸಲಾಗಿತ್ತು. ಕೆಲವು ತಾಸುಗಳ ವಿಚಾರಣೆಯ ನಂತರ ರಾಜತಾಂತ್ರಿಕರನ್ನು ಬಿಡುಗಡೆ ಮಾಡಲಾಯಿತು. ಆದರೆ, 62 ವರ್ಷದ ಡಾಂಗ್ ಅವರನ್ನು ಬಂಧನದಲ್ಲಿರಿಸಿ, ಕಳೆದ ವರ್ಷ ಬೇಹುಗಾರಿಕೆ ಆರೋಪ ಹೊರಿಸಲಾಗಿತ್ತು.

‘ಬೀಜಿಂಗ್ ನಂ. 2 ಮಧ್ಯಂತರ ಪೀಪಲ್ಸ್ ಕೋರ್ಟ್ ಯುಯು ಅವರಿಗೆ ಗೂಢಚಾರಿಕೆಗೆ ಸಂಬಂಧಿಸಿ ಶಿಕ್ಷೆ ವಿಧಿಸಿದೆ. ಇದು ಆರೋಪಿಯು ಬೇಹುಗಾರಿಕೆ ಸಂಸ್ಥೆಗಳು ಮತ್ತು ಅವರ ಏಜೆಂಟರ ಪರವಾಗಿ ಉದ್ದೇಶಪೂರ್ವಕವಾಗಿ ನಡೆದುಕೊಂಡ ಅಪರಾಧವಾಗಿದೆ’ ಎಂದು ಅವರ ಕುಟುಂಬವು ಸುದ್ದಿಸಂಸ್ಥೆಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದೆ.

ಡಾಂಗ್ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿರುವ ವಿದೇಶಾಂಗ ಸಚಿವಾಲಯದ ವಕ್ತಾರರಾದ ಮಾವೋ ನಿಂಗ್ ‘ಚೀನಾ ಕಾನೂನು ಆಡಳಿತದ ದೇಶವಾಗಿದೆ. ಕಾನೂನು ಉಲ್ಲಂಘಿಸುವ ಮತ್ತು ಅಪರಾಧಗಳನ್ನು ಎಸಗುವವರನ್ನು ಕಾನೂನು ಪ್ರಕಾರ ತನಿಖೆಗೆ ಒಳಪಡಿಸಲಾಗುತ್ತದೆ’ ಎಂದು ದೈನಂದಿನ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ವಿಶ್ವಸಂಸ್ಥೆಯ ಶಾಂತಿ ಸ್ಥಾಪನಾ ಆಯೋಗಕ್ಕೆ ಭಾರತ ಮರು ಆಯ್ಕೆ

ನ್ಯೂಯಾರ್ಕ್ (ಪಿಟಿಐ): ವಿಶ್ವಸಂಸ್ಥೆಯ ಶಾಂತಿ ಸ್ಥಾಪನಾ ಆಯೋಗಕ್ಕೆ 2025–26ರ ಸಾಲಿಗೆ ಭಾರತ ಪುನರಾಯ್ಕೆ ಆಗಿದೆ. ಭಾರತದ ಪ್ರಸ್ತುತ ಅಧಿಕಾರ ಅವಧಿ ಡಿಸೆಂಬರ್ 31ಕ್ಕೆ ಕೊನೆಗೊಳ್ಳುತ್ತಿತ್ತು.

‘ವಿಶ್ವಸಂಸ್ಥೆಯ ಶಾಂತಿಪಾಲನೆಯ ಸಂಸ್ಥಾಪಕ ಸದಸ್ಯರಾಗಿ ಮತ್ತು ಪ್ರಮುಖ ಕೊಡುಗೆದಾರರಾಗಿ, ಜಾಗತಿಕ ಶಾಂತಿ ಮತ್ತು ಸ್ಥಿರತೆಗೆ ಪಿಸಿಬಿಯೊಂದಿಗೆ ಕೆಲಸ ಮಾಡಲು ಭಾರತ ಬದ್ಧವಾಗಿದೆ’ ಎಂದು ವಿಶ್ವಸಂಸ್ಥೆ ಯಲ್ಲಿನ ಭಾರತದ ಕಾಯಂ ಪ್ರತಿನಿಧಿ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಪಿಸಿಬಿಯು 31 ಸದಸ್ಯ ರಾಷ್ಟ್ರಗಳಿಂದ ಕೂಡಿದ್ದು, ಇವು ವಿಶ್ವಸಂಸ್ಥೆಯ ಸಾಮಾನ್ಯ ಸಭೆ, ಭದ್ರತಾ ಮಂಡಳಿ, ಆರ್ಥಿಕ ಮತ್ತು ಸಾಮಾಜಿಕ ಮಂಡಳಿಗಳಿಂದ ಚುನಾಯಿತವಾಗಿರುತ್ತವೆ. ವಿಶ್ವಸಂಸ್ಥೆಗೆ ಹೆಚ್ಚಿನ ಆರ್ಥಿಕ ಕೊಡುಗೆ ನೀಡುವ ದೇಶಗಳು ಮತ್ತು ಶಾಂತಿಪಾಲನಾ ಪಡೆಗೆ ಉನ್ನತ ಕೊಡುಗೆ ನೀಡುವ ರಾಷ್ಟ್ರಗಳು ಕೂಡ ಸದಸ್ಯತ್ವ ಹೊಂದಿರುತ್ತವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

40ನೇ ವರ್ಷದ ವಾರ್ಷಿಕ ಪುಣ್ಯಸ್ಮರಣೆ

ಶ್ರೀಮತಿ ಬಿ.ಸಿ. ಲೀಲಾವತಿ
W/o ಲೇಟ್ ಶ್ರೀ ಬಿ ಎಸ್ ಶಿವಲಿಂಗೇಗೌಡರು
ಜನನ: 3.3.1938 – ಮರಣ: 30.11.1984
ಅತ್ಯಂತ ಗೌರವಾದರದಿಂದ ಸ್ಮರಿಸುವ
ಲೇಟ್ ಶ್ರೀ ಬಿ ಎಸ್ ಶಿವಲಿಂಗೇಗೌಡರ ಕುಟುಂಬದವರು ಮೈಸೂರು

SAD DEMISE

Dr N Narayan
15th January, 1942-28th November, 2024
You will always live in the hearts and minds of the loving family you left behind.
Shantha, Girish, Ashita, Anya and Krishay

ಚಿರಸ್ಮರಣೆ

ದಿವಂಗತ ಶ್ರೀ ಕೆ. ವೆಂಕಟಪ್ಪ
(ಅಕ್ಕೂರ್ ಮಾಸ್ಟರ್) ಬ್ಯಾಂಕಿನ ಪ್ರಥಮ ಸ್ಥಾಪಕರು
ನಿಧನ : 30-11-1993
ಸದಾ ತಮ್ಮನ್ನು ಸ್ಮರಿಸುವ:
ಆಡಳಿತ ಮಂಡಳಿಯವರು, ಸಿಬ್ಬಂದಿವರ್ಗ ಹಾಗೂ ಸದಸ್ಯರು, ಶ್ರೀ ಲಕ್ಷ್ಮಿ ನಾರಾಯಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು.

14ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಕಮಲ ಮರಣ:30.11.2010
ಪತಿ: ಎಂ.ನಂಜೇಗೌಡ ಮತ್ತು ಶ್ರೀಮತಿ, ಶ್ರೀ. ಪ್ರಶಾಂತ್ ಮತ್ತು ಮಕ್ಕಳು, ಶ್ರೀಮತಿ, ಶ್ರೀ. ಡಾ॥ ಅರುಣ್ ಮತ್ತು ಮಕ್ಕಳು
ನಾಗಶೆಟ್ಟಿಹಳ್ಳಿ, ಬೆಂಗಳೂರು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಬಿ.ಎನ್.ಶಿವಕುಮಾರ್
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
ಜನನ–16.06.1934 ಮರಣ–19.11.2024
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರು,ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ ವಿವೇಕಾನಂದ ಶಾಲಾ ಕಾಲೇಜುಗಳು ಬೆಂಗಳೂರು-560055

ಭಾವಪೂರ್ಣ ಶ್ರದ್ಧಾಂಜಲಿ

ಡಾ.ಎನ್. ಚೌಡಪ್ಪ
ನಿವೃತ್ತ ಮುಖ್ಯ ಗ್ರಂಥಪಾಲಕರು, ಬಿ.ಎಮ್.ಎಸ್.ಸಿ.ಇ. ಬೆಂಗಳೂರು.
ಇವರು ದಿ: 29–11–2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿ: 30–11–2024ರ ಮಧ್ಯಾಹ್ನ 2.00 ಗಂಟೆಗೆ ಬನಶಂಕರಿ ಚಿತಾಗಾರದಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು:
ಕುಟುಂಬ ವರ್ಗದವರು ಮತ್ತು ಬಂಧು ಮಿತ್ರರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook
ಸಸ್ಯಾಹಾರಿ & ಮಾಂಸಾಹಾರಿ ಹೋಟೆಲ್‌ಗೆ, ನುರಿತ “ಆಲ್ ರೌಂಡರ್” ಇಂಡಿಯನ್, ಚೈನೀಸ್ & ತಂದೂರಿ ಮಾಸ್ಟರ‍ಗಳು ಬೇಕಾಗಿದ್ದಾರೆ. ನೆಲಮಂಗಲ: 9845684631

General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs
ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

Wanted
ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ನೈವೇದ್ಯ ಪ್ರಸಾದ ಮಾಡಲು ಗೊತ್ತಿರುವ ಅರ್ಚಕರಿಗೆ ಆದ್ಯತೆ ನೀಡಲಾಗುತ್ತದೆ. ವಯೋಮಿತಿ 50 ವರ್ಷ, ಸಂಪರ್ಕಿಸಿ: 7019132200, 080-25300714

ರಿಯಲ್ ಎಸ್ಟೇಟ್ ಸೆಲ್ಲಿಂಗ್
Sites
Banashankari
BDA BANASHANKARI 6th Stage 30x40 and 40x60 Site for Sale. Contact : 9849975402.

ಭವಿಷ್ಯ
Astrology
ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

ಪ್ರವಾಸ
Travel
ಭಾರತಪರಂಪರ ದರ್ಶನ: 23.12.2024 5ದಿನ ಅಹೋಬಿಲಂ ಶ್ರೀಶೈಲಂ, ಮಂತ್ರಾಲಯ. 18.1.2025 11ದಿನ 4 ಜ್ಯೋತಿರ್ಲಿಂಗ ಗುಜರಾತ್,ಮಧ್ಯಪ್ರದೇಶ. ಪ್ರಕಾಶ್ ಹೆಬ್ಬಾರ್ 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಶಾಂತಿ, ಸೌಹಾರ್ದ ಕಾಪಾಡಿ: ಉತ್ತರ ಪ್ರದೇಶ ಸರ್ಕಾರಕ್ಕೆ 'ಸುಪ್ರೀಂ' ನಿರ್ದೇಶನ

ಸಂಭಲ್: ಸಮೀಕ್ಷೆ ಸ್ಥಗಿತಗೊಳಿಸಲು ಸೂಚನೆ

ನವದೆಹಲಿ (ಪಿಟಿಐ): ಸಂಭಲ್ ಜಿಲ್ಲೆಯ ಚಂದೌಸಿಯಲ್ಲಿನ ಶಾಹಿ ಜಾಮಾ ಮಸೀದಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಸ್ಥಗಿತಗೊಳಿಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಅಲ್ಲದೇ, ಹಿಂಸಾಚಾರ ಪೀಡಿತ ಚಂದೌಸಿ ಪಟ್ಟಣದಲ್ಲಿ ಶಾಂತಿ ಹಾಗೂ ಸೌಹಾರ್ದ ಕಾಪಾಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೂ ನಿರ್ದೇಶಿಸಿದೆ.

ಮಸೀದಿಯಲ್ಲಿ ಸಮೀಕ್ಷೆ ನಡೆಸುವ ಕುರಿತು ಸಂಭಲ್‌ನ ವಿಚಾರಣಾ ನ್ಯಾಯಾಲಯ ನೀಡಿರುವ ಆದೇಶ ಪ್ರಶ್ನಿಸಿ ಶಾಹಿ ಜಾಮಾ ಮಸೀದಿ ಸಮಿತಿ ಸಲ್ಲಿಸಿರುವ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್‌ನಲ್ಲಿ, ಮೂರು ಕೆಲಸದ ದಿನಗಳಲ್ಲಿ ವಿಚಾರಣೆ ಪಟ್ಟಿಗೆ ಸೇರಿಸುವಂತೆಯೂ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯಕುಮಾರ್ ಅವರು ಇದ್ದ ಪೀಠವು, ಅರ್ಜಿ ವಿಚಾರಣೆ ನಡೆಸಿತು.

'ಕೋರ್ಟ್ ನೇಮಕ ಮಾಡಿರುವ ಕಮಿಷನರ್, ಮಸೀದಿ ಸಮೀಕ್ಷೆಗೆ ಸಂಬಂಧಿಸಿದ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಇಡಬೇಕು ಹಾಗೂ ಮುಂದಿನ ಆದೇಶದವರೆಗೆ ತೆರೆಯಬಾರದು ಎಂದು ಪೀಠ ಸೂಚಿಸಿದೆ.

'ಅರ್ಜಿದಾರರು (ಮಸೀದಿ ಸಮಿತಿ) ಮಸೀದಿ ಸಮೀಕ್ಷೆ ಕುರಿತಂತೆ ನವೆಂಬರ್ 19ರಂದು ವಿಚಾರಣಾ ನ್ಯಾಯಾಲಯ ನೀಡಿರುವ ಆದೇಶವನ್ನು ಸೂಕ್ತ ವೇದಿಕೆಯಲ್ಲಿ ಪ್ರಶ್ನಿಸಬೇಕು. ಇದೇ ವೇಳೆ, ಶಾಂತಿ ಮತ್ತು ಸೌಹಾರ್ದವನ್ನೂ ಕಾಪಾಡಬೇಕು' ಎಂದು ಪೀಠ ಆದೇಶದಲ್ಲಿ ಸೂಚಿಸಿದ್ದಾರೆ. ವಿಚಾರಣೆ ವೇಳೆ, 'ಅರ್ಜಿಯನ್ನು ಸಂಭಲ್‌ನ ನ್ಯಾಯಾಲಯ ಜನವರಿ 8ಕ್ಕೆ ವಿಚಾರಣಾ ಪಟ್ಟಿಗೆ ಸೇರಿಸಿದೆ' ಎಂಬುದನ್ನು ಪೀಠದ ಗಮನಕ್ಕೆ ತರಲಾಯಿತು.

'ಇದಕ್ಕೆ ಪ್ರತಿಕ್ರಿಯಿಸಿದ ಸಿಜೆಐ, 'ಈ ಪ್ರಕರಣವನ್ನು ಹೈಕೋರ್ಟ್‌ನಲ್ಲಿ ಪಟ್ಟಿಗೆ ಸೇರಿಸುವವರೆಗೆ ವಿಚಾರಣಾ ನ್ಯಾಯಾಲಯ ಅರ್ಜಿ ವಿಚಾರಣೆ ಮುಂದುವರಿಸುವುದಿಲ್ಲ ಎಂಬ ಭರವಸೆ ನಮಗಿದೆ' ಎಂದರು.

'ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಸಲ್ಲಿಸಲಾಗುವ ವಿಶೇಷ ಮೇಲ್ಮನವಿಯನ್ನು (ಎಸ್‌ಎಲ್‌ಪಿ) ನಾವು ವಿಲೇವಾರಿ ಮಾಡುವುದಿಲ್ಲ. ಜ.8ರ ನಂತರ ಈ ಅರ್ಜಿಯನ್ನು ವಿಚಾರಣಾ ಪಟ್ಟಿಗೆ ಸೇರಿಸಲಾಗುವುದು' ಎಂದೂ ಸ್ಪಷ್ಟಪಡಿಸಿದರು.

ಮಸೀದಿಯನ್ನು ಹರಿಹರ ಮಂದಿರದ ಮೇಲೆ ನಿರ್ಮಿಸಲಾಗಿದೆ ಎಂದು ದೂರಿ ವಕೀಲ ವಿಷ್ಣುಶಂಕರ್ ಜೈನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ಸಂಭಲ್‌ನ ಹಿರಿಯ ದಿವಾಣಿ ನ್ಯಾಯಾಲಯ, ಮಸೀದಿ ಸಮೀಕ್ಷೆಗೆ ನ.19ರಂದು ಆದೇಶಿಸಿತ್ತು.

ರಾಕೇಶ್ ಸಿಂಗ್ ರಾಘವ ಅವರನ್ನು 'ಕಮಿಷನರ್' ಆಗಿ ನೇಮಕ ಮಾಡಿರುವ ನ್ಯಾಯಾಲಯ, 10 ದಿನಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿತ್ತು.

ಇದನ್ನು ವಿರೋಧಿಸಿ, ನ.24ರಂದು ಪ್ರತಿಭಟನೆ ಆರಂಭವಾಯಿತು. ನಂತರ ಹಿಂಸಾರೂಪ ಪಡೆದಿದ್ದ ಪ್ರತಿಭಟನೆಯಲ್ಲಿ ನಾಲ್ವರು ಮೃತಪಟ್ಟಿದ್ದರು.

ಮಸೀದಿ ಸಮಿತಿ ಪರ ಹಿರಿಯ ವಕೀಲ ಹುಜೆಫಾ ಅಹ್ಮದಿ ಹಾಗೂ ಉತ್ತರ ಪ್ರದೇಶ ಸರ್ಕಾರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಹಾಜರಿದ್ದರು.

ಜ.8ಕ್ಕೆ ವಿಚಾರಣೆ

ಸಂಭಲ್ (ಉತ್ತರ ಪ್ರದೇಶ)(ಪಿಟಿಐ): ಜಿಲ್ಲೆಯ ಚಂದೌಸಿಯಲ್ಲಿರುವ ಶಾಹಿ ಜಾಮಾ ಮಸೀದಿಯ ಸಮೀಕ್ಷೆಗೆ ಸಂಬಂಧಿಸಿದ ವರದಿಯನ್ನು 10 ದಿನಗಳ ಒಳಗಾಗಿ ಸಲ್ಲಿಸುವಂತೆ ಕೋರ್ಟ್ ನೇಮಕ ಮಾಡಿರುವ 'ಕಮಿಷನರ್'ಗೆ ಸಿವಿಲ್ ನ್ಯಾಯಾಧೀಶ ಆದಿತ್ಯ ಸಿಂಗ್ ಶುಕ್ರವಾರ ನಿರ್ದೇಶನ ನೀಡಿದ್ದಾರೆ.

'ಸಮೀಕ್ಷೆ ವರದಿ ಇನ್ನೂ ಪೂರ್ಣಗೊಂಡಿಲ್ಲ. ಹೀಗಾಗಿ ಹೆಚ್ಚುವರಿ ಕಾಲಾವಕಾಶ ಅಗತ್ಯವಿದೆ ಎಂಬುದನ್ನು ಕೋರ್ಟ್ ಗಮನಕ್ಕೆ ತರಲಾಯಿತು. ನಮ್ಮ ಮನವಿಯನ್ನು ಪರಿಗಣಿಸಿದ ನ್ಯಾಯಾಧೀಶರು, ವಿಚಾರಣೆಯನ್ನು ಜ.8ಕ್ಕೆ ನಿಗದಿ ಮಾಡಿದ್ದಾರೆ' ಎಂದು ಕೋರ್ಟ್ ನೇಮಕ ಮಾಡಿರುವ ಕಮಿಷನರ್ ರಾಕೇಶ್ ಸಿಂಗ್ ರಾಘವ ಹೇಳಿದ್ದಾರೆ.

'ಕೋರ್ಟ್ ಕಮಿಷನರ್' ಅವರು ಸಮೀಕ್ಷೆ ನಡೆಸುವ ವೇಳೆ, ಹಿಂದೂ ಹಾಗೂ ಮುಸ್ಲಿಂ ಸಮುದಾಯಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು' ಎಂದು ಮಸೀದಿ ಸಮಿತಿ ಪರ ವಕೀಲ ಅಮೀರ್ ಹುಸೇನ್ ಹೇಳಿದ್ದಾರೆ.

ತ್ರಿಸದಸ್ಯ ನ್ಯಾಯಾಂಗ ಆಯೋಗ ರಚನೆ

ಆನಂದಿಬೆನ್ ಪಟೇಲ್

ಲಖನೌ (ಪಿಟಿಐ): ಸಂಭಲ್ ಜಿಲ್ಲೆಯ ಚಂದೌಸಿಯಲ್ಲಿ ನ.24ರಂದು ಸಂಭವಿಸಿದ ಹಿಂಸಾಚಾರ ಕುರಿತು ತನಿಖೆಗಾಗಿ ಮೂವರು ಸದಸ್ಯರು ಇರುವ ನ್ಯಾಯಾಂಗ ಆಯೋಗ ರಚಿಸಿದ್ದಾಗಿ ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಘೋಷಿಸಿದ್ದಾರೆ.

ನ.28ರಂದು ಈ ಕುರಿತು ಅಧಿಸೂಚನೆ ಪ್ರಕಟಿಸಲಾಗಿದೆ.

'ಅಧಿಸೂಚನೆ ಪ್ರಕಟಗೊಂಡ ಎರಡು ತಿಂಗಳ ಒಳಗಾಗಿ ತನಿಖೆ ಪೂರ್ಣಗೊಳಿಸಬೇಕು. ಸರ್ಕಾರದ ಅನುಮೋದನೆಯೊಂದಿಗೆ ತನಿಖಾ ಅವಧಿ ವಿಸ್ತರಿಸಬಹುದು' ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಅಲಹಾಬಾದ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಅರೋರಾ ಆಯೋಗದ ನೇತೃತ್ವ ವಹಿಸುವರು. ನಿವೃತ್ತ ಐಎಎಸ್ ಅಧಿಕಾರಿ ಅಮಿತ್ ಮೋಹನ್ ಪ್ರಸಾದ್, ನಿವೃತ್ತ ಐಪಿಎಸ್ ಅಧಿಕಾರಿ ಅರವಿಂದಕುಮಾರ್ ಜೈನ್ ಆಯೋಗದ ಸದಸ್ಯರಾಗಿದ್ದಾರೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಮಸೀದಿ ಸಮಿತಿ ಅರ್ಜಿ ಡಿ.9ಕ್ಕೆ ವಿಚಾರಣೆ: 'ಸುಪ್ರೀಂ'

ನವದೆಹಲಿ (ಪಿಟಿಐ): ಮಥುರಾದ ಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ವಿವಾದಕ್ಕೆ ಸಂಬಂಧಿಸಿ ಶಾಹಿ ಮಸೀದಿ ವ್ಯವಸ್ಥಾಪಕ ಸಮಿತಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಡಿ.9ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

'ಸಮಿತಿ ಸಲ್ಲಿಸಿರುವ ಮೇಲ್ಮನವಿ ಕುರಿತು ಡಿ.9ರಂದು ಮಧ್ಯಾಹ್ನ 2 ಗಂಟೆಗೆ ಸುದೀರ್ಘ ವಿಚಾರಣೆ ನಡೆಸಲಾಗುವುದು' ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇದ್ದ ನ್ಯಾಯಪೀಠ ಹೇಳಿದೆ. 'ನಿಮ್ಮ ವಾದ ಮಂಡನೆಗೆ ಖಂಡಿತವಾಗಿಯೂ ಅವಕಾಶ ನೀಡುತ್ತೇವೆ' ಎಂದು ಸಮಿತಿ ಪರ ವಕೀಲರನ್ನು ಉದ್ದೇಶಿಸಿ ಸಿಜೆಐ ಖನ್ನಾ ಹೇಳಿದರು. ಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ವಿವಾದಕ್ಕೆ ಸಂಬಂಧಿಸಿ ಸಲ್ಲಿಸಲಾಗಿರುವ 18 ಅರ್ಜಿಗಳು ಸಮರ್ಥನೀಯವಲ್ಲ ಎಂದು ಮಸೀದಿ ಸಮಿತಿ ಸಲ್ಲಿಸಿದ್ದ ಮೇಲ್ಮನವಿ ತಿರಸ್ಕರಿಸಿ ಅಲಹಾಬಾದ್ ಹೈಕೋರ್ಟ್ ಆಗಸ್ಟ್ 1ರಂದು ಆದೇಶಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಮಸೀದಿ ಸಮಿತಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

'ಸಂಬಂಧ ಮುರಿದು ಬಿದ್ದಿರುವುದೇ ಆತ್ಮಹತ್ಯೆಗೆ ಕುಮ್ಮಕ್ಕು ಎನ್ನಲಾಗದು'

ನವದೆಹಲಿ (ಪಿಟಿಐ): ಸಂಬಂಧಗಳು ಮುರಿದು ಬಿದ್ದಿವೆ ಎಂಬ ಕಾರಣಕ್ಕೆ, ಆತ್ಮಹತ್ಯೆಗೆ ಅದೇ ಕುಮ್ಮಕ್ಕು ನೀಡಿದೆ ಎಂಬುದಾಗಿ ಹೇಳಲಾಗದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ತೀರ್ಪು ನೀಡಿದೆ.

ಕಮರುದ್ದೀನ್ ದಸ್ತಗೀರ್ ಸನದಿ ಎಂಬುವವರಿಗೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಶಿಕ್ಷೆಯನ್ನು ರದ್ದುಗೊಳಿಸುವ ತೀರ್ಪು ನೀಡಿದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

'ಇದು ಸಂಬಂಧ ಮುರಿದು ಬಿದ್ದ ಪ್ರಕರಣವಾಗಿದೆ. ಇಲ್ಲಿ ಯಾವುದೇ ಕ್ರಿಮಿನಲ್ ವರ್ತನೆ ಇಲ್ಲ' ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ಸನದಿ ವಿರುದ್ಧ ಐಪಿಸಿ ಸೆಕ್ಷನ್ 317(ವಂಚನೆ), 306(ಆತ್ಮಹತ್ಯೆಗೆ ಕುಮ್ಮಕ್ಕು) ಹಾಗೂ 376(ಅತ್ಯಾಚಾರ) ಅಡಿ ಆರೋಪ ಹೊರಿಸಲಾಗಿತ್ತು.

ವಿಚಾರಣಾ ನ್ಯಾಯಾಲಯ ಸನದಿ ಅವರನ್ನು ದೋಷಮುಕ್ತ ಮಾಡಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಕರ್ನಾಟಕ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ವಂಚನೆ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಸನದಿ ಅವರಿಗೆ ಐದು ವರ್ಷ ಜೈಲು ಶಿಕ್ಷೆ ಹಾಗೂ ₹25 ಸಾವಿರ ದಂಡ ವಿಧಿಸಿ ಹೈಕೋರ್ಟ್ ಆದೇಶಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸನದಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

'21 ವರ್ಷದ ತನ್ನ ಮಗಳು, ಆರೋಪಿಯನ್ನು ಕಳೆದ 8 ವರ್ಷಗಳಿಂದ ಪ್ರೀತಿಸುತ್ತಿದ್ದಳು. ಮದುವೆಯಾಗಲು ಆರೋಪಿ ನಿರಾಕರಿಸಿದ್ದರಿಂದ ಮಗಳು 2007ರ ಆಗಸ್ಟ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಳು' ಎಂದು ಮಹಿಳೆಯ ತಾಯಿ ನೀಡಿದ ದೂರಿನ ಅನ್ವಯ ದಾಖಲಾಗಿದ್ದ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಮಹಿಳೆಯ ಮರಣಪೂರ್ವ ಹೇಳಿಕೆಗಳನ್ನು ವಿಶ್ಲೇಷಿಸಿದಾಗ, ಈ ಜೋಡಿ ನಡುವೆ ಯಾವುದೇ ದೈಹಿಕ ಸಂಬಂಧವಿತ್ತು ಎಂಬ ಬಗ್ಗೆಯಾಗಲಿ ಇಲ್ಲವೇ ಆತ್ಮಹತ್ಯೆಗೆ ಕಾರಣವಾದ ವರ್ತನೆ ಕುರಿತು ಆರೋಪ ಇರಲಿಲ್ಲ ಎಂಬುದು ಕಂಡುಬರುತ್ತದೆ' ಎಂದು ತಾವು ಬರೆದ 17 ಪುಟಗಳ ತೀರ್ಪಿನಲ್ಲಿ ನ್ಯಾಯಮೂರ್ತಿ ಮಿತ್ತಲ್ ಹೇಳಿದ್ದಾರೆ.

'ವ್ಯಕ್ತಿ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸದಿದ್ದಲ್ಲಿ, ಐಪಿಸಿ ಸೆಕ್ಷನ್ 306ರಡಿ ಆತನಿಗೆ ಶಿಕ್ಷೆ ವಿಧಿಸಲು ಸಾಧ್ಯ ಇಲ್ಲ' ಎಂದೂ ನ್ಯಾಯಪೀಠ ಹೇಳಿದೆ.

'ಪ್ರಸಾದ' ಗುಣಮಟ್ಟ ನಿಯಂತ್ರಣ 'ಸುಪ್ರೀಂ'ನಿಂದ ಅರ್ಜಿ ವಜಾ

ನವದೆಹಲಿ (ಪಿಟಿಐ): ದೇವಸ್ಥಾನಗಳಲ್ಲಿ ವಿತರಿಸಲಾಗುವ 'ಪ್ರಸಾದ' ಅಥವಾ ಆಹಾರ ಪದಾರ್ಥಗಳ ಗುಣಮಟ್ಟ ನಿರ್ವಹಣೆಗೆ ನಿಯಮಾವಳಿ ರೂಪಿಸುವಂತೆ ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಕೆ.ವಿ.ವಿಶ್ವನಾಥನ್ ಅವರಿದ್ದ ನ್ಯಾಯಪೀಠವು ಅರ್ಜಿ ವಿಚಾರಣೆ ನಡೆಸಿ, 'ಈ ವಿಷಯ, ನೀತಿ ನಿರೂಪಣೆ ವ್ಯಾಪ್ತಿಗೆ ಬರಲಿದ್ದು ಸರ್ಕಾರವೇ ತೀರ್ಮಾನ ಕೈಗೊಳ್ಳಬೇಕು' ಎಂದಿದೆ. 'ದೇಗುಲಗಳಲ್ಲಿ ವಿತರಿಸುವ ಪ್ರಸಾದ ಅಥವಾ ಆಹಾರ ಪದಾರ್ಥಗಳ ಗುಣಮಟ್ಟ ಕುರಿತು ನಿಯಮಾವಳಿ ರೂಪಿಸಬೇಕು' ಎಂದು ಅರ್ಜಿದಾರರ ಪರ ವಕೀಲರು ನ್ಯಾಯಪೀಠವನ್ನು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಈ ಅರ್ಜಿ ಹಾಗೂ ಅದರಲ್ಲಿನ ನಿವೇದನೆಯು ಸರ್ಕಾರದ ನೀತಿ ನಿರೂಪಣೆಗೆ ಸಂಬಂಧಿಸಿದ್ದು. ಹೀಗಾಗಿ ಈ ಅರ್ಜಿಯನ್ನು ಸೂಕ್ತ ಪ್ರಾಧಿಕಾರಕ್ಕೆ ಸಲ್ಲಿಸಿ. ಈ ಅರ್ಜಿಯನ್ನು ಪ್ರಸಾದಕ್ಕಷ್ಟೆ ಏಕೆ ಸೀಮಿತಗೊಳಿಸುತ್ತೀರಿ? ಹೋಟೆಲ್‌ನಲ್ಲಿ ಸಿಗುವ ಖಾದ್ಯಗಳು, ದಿನಸಿ ಅಂಗಡಿಗಳಲ್ಲಿ ನಾವು ಖರೀದಿಸುವ ಆಹಾರ ಪದಾರ್ಥಗಳು ಕೂಡ ಕಲಬೆರಕೆ ಆಗಿರುತ್ತವೆ. ಅವುಗಳ ವಿಚಾರವಾಗಿಯೂ ಅರ್ಜಿ ಸಲ್ಲಿಸಿ' ಎಂದು ನ್ಯಾಯಪೀಠ ಹೇಳಿತು.

ಸಂಕ್ಷಿಪ್ತ ಸುದ್ದಿ

ವಯನಾಡ್: ಪ್ರಿಯಾಂಕಾ, ರಾಹುಲ್ ಸಮಾವೇಶ ಇಂದು

ವಯನಾಡ್ (ಪಿಟಿಐ): ವಯನಾಡ್‌ನ ನೂತನ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತಮ್ಮ ಸಹೋದರ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ವಯನಾಡ್‌ನಲ್ಲಿ ಸಾರ್ವಜನಿಕ ಸಮಾವೇಶದಲ್ಲಿ ಶನಿವಾರ ಭಾಗವಹಿಸಲಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಪ್ರಿಯಾಂಕಾ ಅವರು ಸಂಸದೆಯಾದ ಬಳಿಕ ತಮ್ಮ ಕ್ಷೇತ್ರಕ್ಕೆ ನೀಡುತ್ತಿರುವ ಮೊದಲ ಭೇಟಿ ಇದಾಗಿದೆ. ಇತ್ತೀಚೆಗೆ ನಡೆದ ವಯನಾಡ್ ಉಪಚುನಾವಣೆಯಲ್ಲಿ 4,10,931 ಮತಗಳ ಭಾರಿ ಅಂತರದಿಂದ ಗೆಲುವು ಸಾಧಿಸಿರುವ ಪ್ರಿಯಾಂಕಾ, ಗುರುವಾರ ಸಂಸದೆಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಮಹಾರಾಷ್ಟ್ರ: ವಕ್ಫ್ ಮಂಡಳಿ ಅನುದಾನ ಹಿಂಪಡೆದ ಸರ್ಕಾರ

ಮುಂಬೈ(ಪಿಟಿಐ): ಮಹಾರಾಷ್ಟ್ರ ರಾಜ್ಯ ವಕ್ಫ್ ಮಂಡಳಿಯನ್ನು ಬಲಪಡಿಸಲು ₹10 ಕೋಟಿ ಅನುದಾನ ನೀಡುವ ಆದೇಶವನ್ನು ರಾಜ್ಯ ಸರ್ಕಾರ ಶುಕ್ರವಾರ ಹಿಂಪಡೆದಿದೆ.

ಆದೇಶವನ್ನು ಹಿಂಪಡೆದಿರುವ ಬಗ್ಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಜಾತ ಸೌನಿಕ್ ಮಾಹಿತಿ ನೀಡಿದ್ದಾರೆ.

2024–25ನೇ ಸಾಲಿನಲ್ಲಿ ವಕ್ಫ್ ಮಂಡಳಿಗೆ ₹20 ಕೋಟಿ ನೀಡುವುದಾಗಿ ಗುರುವಾರ ನಿರ್ಧರಿಸಿದ್ದ ಸರ್ಕಾರ ಈ ಬಗ್ಗೆ ಆದೇಶ ಹೊರಡಿಸಿತ್ತು. ಶುಕ್ರವಾರ ಈ ನಿರ್ಧಾರದಿಂದ ಹಿಂದೆ ಸರಿದಿದೆ. ವಕ್ಫ್ ಮಂಡಳಿಗೆ ಹೆಚ್ಚುವರಿ ಅನುದಾನ ನೀಡುವ ನಿರ್ಧಾರವನ್ನು ಆಡಳಿತರೂಢ ಮಹಾಯುತಿ ಭಾಗವಾಗಿರುವ ಬಿಜೆಪಿ ವಿರೋಧಿಸಿತ್ತು. ಮಹಾಯುತಿ ನೇತೃತ್ವದ ಸರ್ಕಾರ ವಕ್ಫ್ ಮಂಡಳಿಗೆ ಹೆಚ್ಚುವರಿ ಅನುದಾನ ನೀಡಿದೆ ಎಂದು ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ಆಡಳಿತ ಮಟ್ಟದಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ವಕ್ಫ್ ಮಂಡಳಿಗೆ ಯಾವುದೇ ಮಾನ್ಯತೆ ಇಲ್ಲ ಎಂದು ಬಿಜೆಪಿ ರಾಜ್ಯ ಘಟಕ 'ಎಕ್ಸ್' ಮೂಲಕ ತಿಳಿಸಿದೆ.

ಲೋಕಸಭೆ, ರಾಜ್ಯಸಭೆ ಕಲಾಪ ಸೋಮವಾರಕ್ಕೆ ಮುಂದೂಡಿಕೆ

ಪಟ್ಟು ಸಡಿಲಿಸದ ವಿಪಕ್ಷ; ನಡೆಯದ ಕಲಾಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಣಿಪುರ ಗಲಭೆ, ಸಂಭಲ್ ಹಿಂಸಾಚಾರ ಪ್ರಕರಣ ಮತ್ತು ಉದ್ಯಮಿ ಗೌತಮ್ ಅದಾನಿ ಲಂಚ ಹಗರಣದ ಬಗ್ಗೆ ಚರ್ಚೆ ನಡೆಸಬೇಕೆಂಬ ಬಿಗಿಪಟ್ಟನ್ನು 'ಇಂಡಿಯಾ' ಮೈತ್ರಿಕೂಟದ ಸಂಸದರು ಸಡಿಲಿಸದ ಕಾರಣ ಶುಕ್ರವಾರವೂ ಸಂಸತ್ ಕಲಾಪ ನಡೆಯಲಿಲ್ಲ.

ಚಳಿಗಾಲದ ಅಧಿವೇಶನದ ಮೊದಲ ವಾರದಲ್ಲಿ ಲೋಕಸಭೆಯು 54 ನಿಮಿಷಗಳು ಹಾಗೂ ರಾಜ್ಯಸಭೆಯು 75 ನಿಮಿಷಗಳಷ್ಟೇ ಕಾರ್ಯನಿರ್ವಹಿಸಿವೆ.

ನಾಲ್ಕನೇ ದಿನವಾದ ಶುಕ್ರವಾರ ಕೂಡಾ ಲೋಕಸಭೆಯಲ್ಲಿ ಪ್ರತಿಪಕ್ಷಗಳ ಗದ್ದಲ ಮುಂದುವರಿದಿದ್ದರಿಂದ ಸಭಾಧ್ಯಕ್ಷರು ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು. ರಾಜ್ಯಸಭೆಯಲ್ಲಿಯೂ ವಿರೋಧ ಪಕ್ಷದ ಸದಸ್ಯರ ಗದ್ದಲ ಮುಂದುವರಿಯಿತು.

ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್ ಅವರು 'ಮೋದಾನಿ ವಿಷಯವು ಮತ್ತೊಂದು ದಿನದ ಕಲಾಪವನ್ನು ನುಂಗಿದೆ' ಎಂದು ಹೇಳಿದರು.

'ಕಲಾಪ ಮುಂದೂಡದ ಹಾಗೆ ನೋಡಿಕೊಳ್ಳಲು ಸರ್ಕಾರ ಏಕೆ ಪ್ರಯತ್ನಿಸುತ್ತಿಲ್ಲ ಎಂಬುದು ನಿಗೂಢವಾಗಿಯೇ ಉಳಿದಿದೆ. ಮಣಿಪುರ, ಸಂಭಲ್ ಮತ್ತು ಅದಾನಿ ವಿಷಯದಲ್ಲಿ ವಿರೋಧ ಪಕ್ಷಗಳು ಇನ್ನಷ್ಟು ಗದ್ದಲ ಉಂಟುಮಾಡುವುದಕ್ಕೆ ಸರ್ಕಾರವೇ ಅನುವು ಮಾಡಿಕೊಡುತ್ತಿದೆ' ಎಂದು ದೂರಿದ್ದಾರೆ.

ಸಂಸತ್ ಕಲಾಪ ಮುಂದೂಡಿದ ಬಳಿಕ ಹೊರಬಂದ ಟಿಎಂಸಿ ಸಂಸದ ಕೀರ್ತಿ ಆಜಾದ್, ಬಿಜೆಪಿ ಸಂಸದರಾದ ರಾಜೀವ್ ಪ್ರತಾಪ್ ರೂಡಿ ಮತ್ತು ರವಿಶಂಕರ್ ಪ್ರಸಾದ್ ಅವರ ಲೋಕಾಭಿರಾಮದ ಕ್ಷಣ —ಪಿಟಿಐ ಚಿತ್ರ

ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿಯ ಕಾರ್ಯಾವಧಿ ವಿಸ್ತರಿಸುವ ನಿರ್ಣಯ ಅಂಗೀಕರಿಸಿದ್ದು ಮತ್ತು ಕೆಲವೊಂದು ಪ್ರಶ್ನೆಗಳನ್ನು ಪರಿಗಣಿಸಿದ್ದು ಬಿಟ್ಟರೆ ಲೋಕಸಭೆಯಲ್ಲಿ ಈ ವಾರ ಯಾವುದೇ ಕಲಾಪ ನಡೆಯಲಿಲ್ಲ.

ಲೋಕಸಭೆಯು ಸೋಮವಾರ ಆರು ನಿಮಿಷ, ಬುಧವಾರ ಮತ್ತು ಗುರುವಾರ ತಲಾ 14 ನಿಮಿಷ ಹಾಗೂ ಶುಕ್ರವಾರ 20 ನಿಮಿಷ ಮಾತ್ರ ಕಾರ್ಯನಿರ್ವಹಿಸಿದೆ. ರಾಜ್ಯಸಭೆಯು ಈ ನಾಲ್ಕು ದಿನಗಳಲ್ಲಿ ಕ್ರಮವಾಗಿ 33 ನಿಮಿಷ, 13 ನಿಮಿಷ, 16 ನಿಮಿಷ ಹಾಗೂ 13 ನಿಮಿಷ ಕಾರ್ಯನಿರ್ವಹಿಸಿದೆ.

ಶುಕ್ರವಾರ ಬೆಳಿಗ್ಗೆ ಲೋಕಸಭೆ ಕಲಾಪ ಆರಂಭವಾಗುತ್ತಿದ್ದಂತೆಯೇ ಅದಾನಿ ವಿವಾದ ಮತ್ತು ಉತ್ತರ ಪ್ರದೇಶದ ಸಂಭಲ್‌ನಲ್ಲಿ ಈಚೆಗೆ ನಡೆದ ಹಿಂಸಾಚಾರವನ್ನು ಖಂಡಿಸಿ ವಿಪಕ್ಷ ಸದಸ್ಯರು ಘೋಷಣೆಗಳನ್ನು ಕೂಗಿದರು. ಸ್ಪೀಕರ್ ಓಂ ಬಿರ್ಲಾ ಅವರು ಸುಗಮ ಕಲಾಪಕ್ಕೆ ಮನವಿ ಮಾಡಿದರೂ, ವಿಪಕ್ಷಗಳು ಒಪ್ಪಲಿಲ್ಲ. ಇದರಿಂದ ಕಲಾಪವನ್ನು ಮಧ್ಯಾಹ್ನ 12ರವರೆಗೆ ಮುಂದೂಡಲಾಯಿತು.

ಸದನ ಮತ್ತೆ ಸೇರಿದಾಗ ಪ್ರತಿಪಕ್ಷಗಳ ಸಂಸದರು ಗದ್ದಲ ಮುಂದುವರಿಸಿದರು. ಸಭಾಧ್ಯಕ್ಷರ ಪೀಠದಲ್ಲಿದ್ದ ಬಿಜೆಪಿಯ ಸಂಸದ ದಿಲೀಪ್ ಸೈಕಿಯಾ ಅವರು ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು.

ವಿರೋಧ ಪಕ್ಷಗಳ ಸದಸ್ಯರು 267ನೇ ನಿಯಮವನ್ನು ಕಲಾಪ ಮುಂದೂಡುವ ಮತ್ತು ಕಲಾಪಕ್ಕೆ ಅಡ್ಡಿಪಡಿಸುವ ಅಸ್ತ್ರವನ್ನಾಗಿ ಮಾಡಿಕೊಂಡಿದ್ದಾರೆ

ಜಗದೀಪ ಧನಕರ್, ರಾಜ್ಯಸಭೆಯ ಸಭಾಪತಿ

ರಾಜ್ಯಸಭೆಯಲ್ಲಿ ಅದಾನಿ, ಮಣಿಪುರ ಹಾಗೂ ಸಂಭಲ್ ಹಿಂಸಾಚಾರ ಪ್ರಕರಣಗಳ ಚರ್ಚೆಗೆ ಒತ್ತಾಯಿಸಿ ವಿಪಕ್ಷಗಳ 17 ಸದಸ್ಯರು ನೀಡಿದ ನೋಟಿಸ್‌ಗಳನ್ನು ತಿರಸ್ಕರಿಸಿದ ಸಭಾಪತಿ ಧನಕರ್, ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು.

'ಖಾಸಗಿ ಸಂಸ್ಥೆ–ಅಮೆರಿಕ ನ್ಯಾಯಾಂಗ ಇಲಾಖೆಯ ವಿಚಾರ'

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕದ ನ್ಯಾಯಾಂಗ ಇಲಾಖೆ ಹೊರಿಸಿರುವ ಲಂಚದ ಆರೋಪದ ಬಗ್ಗೆ ಶುಕ್ರವಾರ ಪ್ರತಿಕ್ರಿಯಿಸಿರುವ ಭಾರತ, 'ಇದು ಖಾಸಗಿ ಸಂಸ್ಥೆಗಳು ಮತ್ತು ಕೆಲವು ವ್ಯಕ್ತಿಗಳು ಹಾಗೂ ಅಮೆರಿಕದ ನ್ಯಾಯಾಂಗ ಇಲಾಖೆಯನ್ನು ಒಳಗೊಂಡಿರುವ ನ್ಯಾಯಿಕ ಸಂಗತಿ' ಎಂದು ಹೇಳಿದೆ.

'ಈ ವಿಷಯದ ಬಗ್ಗೆ ಅಮೆರಿಕವು ಭಾರತ ಸರ್ಕಾರಕ್ಕೆ ಮುಂಚಿತವಾಗಿ ತಿಳಿಸಿಲ್ಲ. ಇದೊಂದು ಕಾನೂನಿಗೆ ಸಂಬಂಧಿಸಿದ ವಿಷಯವಾಗಿರುವುದರಿಂದ ಕೆಲವೊಂದು ಸ್ಥಾಪಿತ ಕಾರ್ಯವಿಧಾನ ಮತ್ತು ನ್ಯಾಯಿಕ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ ಎಂದು ನಾವು ನಂಬಿದ್ದೇವೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿ ಭಾರತ ಅಮೆರಿಕದಿಂದ ಯಾವುದೇ ಮನವಿ ಸ್ವೀಕರಿಸಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಜೈಸ್ವಾಲ್ ಉತ್ತರಿಸಿದರು.

'ಅರ್ಹತೆ ಆಧರಿಸಿ ಆರೋಪಿಗೆ ಜಾಮೀನು ನೀಡಬೇಕು'

ಪ್ರಜಾವಾಣಿ ವಾರ್ತೆ

ನವದೆಹಲಿ: ದೀರ್ಘಕಾಲದಿಂದ ಸೆರೆವಾಸ ಅನುಭವಿಸುತ್ತಿರುವ ಆರೋಪಿಗೆ, ಅರ್ಹತೆ ಆಧರಿಸಿ ಜಾಮೀನು ನೀಡಬೇಕು. ಆದರೆ, ವಿಚಾರಣೆ ತ್ವರಿತಗೊಳಿಸುವಂತೆ ನಿರ್ದೇಶನ ನೀಡಲು ಇರುವ ಆಯ್ಕೆಯು ಇಂತಹ ಪ್ರಕರಣಗಳಲ್ಲಿ ಪರಿಹಾರವಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಹಾಗೂ ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ನ್ಯಾಯಪೀಠ, ನವೆಂಬರ್ 25ರಂದು ನೀಡಿರುವ ತೀರ್ಪಿನಲ್ಲಿ ಈ ಮಾತು ಹೇಳಿದೆ.

'ಬೇರೆಬೇರೆ ಹೈಕೋರ್ಟ್‌ಗಳು ಜಾಮೀನು ಅರ್ಜಿಗಳನ್ನು ತಿರಸ್ಕರಿಸುತ್ತಿದ್ದು, ಇದು ಸಾಮಾನ್ಯವೆಂಬಂತೆ ಆಗಿದೆ. ವಿಚಾರಣೆ ಪೂರ್ಣಗೊಳಿಸಲು ಹೈಕೋರ್ಟ್‌ಗಳು ಕಾಲಮಿತಿ ನಿಗದಿ ಮಾಡುತ್ತಿವೆ. ಇಂತಹ ನಿರ್ದೇಶನಗಳು ವಿಚಾರಣಾ ನ್ಯಾಯಾಲಯಗಳ ಕಾರ್ಯವೈಖರಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ' ಎಂದು ಹೇಳಿದೆ.

'ವಿಶೇಷ ಸಂದರ್ಭಗಳಲ್ಲಿ, ಪ್ರಕರಣದ ತ್ವರಿತ ವಿಚಾರಣೆಗೆ ನಿರ್ದೇಶನ ನೀಡಬಹುದಾಗಿದೆ. ಆದರೆ, ಸಂವಿಧಾನ ಪೀಠ ರೂಪಿಸಿರುವ ಕಾಯ್ದೆಯನ್ನು ಗಮನಿಸದೇ, ಹೈಕೋರ್ಟ್‌ಗಳು ಇಂತಹ ನಿರ್ದೇಶನಗಳನ್ನು ನೀಡುವುದು ವಾಡಿಕೆ ಎಂಬಂತಾಗಿದೆ' ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.

ಉದ್ಯಮಿ ರಾಜ್ ಕುಂದ್ರಾಗೆ ಸೇರಿದ ಸ್ಥಳಗಳಲ್ಲಿ ಇ.ಡಿ ಶೋಧ

ಮುಂಬೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಪತಿ, ಉದ್ಯಮಿ ರಾಜ್ ಕುಂದ್ರಾ ಮತ್ತು ಇತರರಿಗೆ ಸೇರಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ(ಇ.ಡಿ) ಅಧಿಕಾರಿಗಳು ಶುಕ್ರವಾರ ಶೋಧ ನಡೆಸಿದರು.

ಅಶ್ಲೀಲ ಚಿತ್ರಗಳ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ಭಾಗವಾಗಿ ಇ.ಡಿ ತನಿಖೆ ನಡೆಸುತ್ತಿದೆ.

ರಾಜ್ ಕುಂದ್ರಾ ಮತ್ತು ಇತರರಿಗೆ ಸಂಬಂಧಿಸಿದ ಆಸ್ತಿಗಳಿರುವ ಮುಂಬೈನ 15 ಸ್ಥಳಗಳು ಮತ್ತು ಉತ್ತರ ಪ್ರದೇಶದ ಕೆಲ ನಗರಗಳಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಅಶ್ಲೀಲ ಚಿತ್ರಗಳ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ ಕುಂದ್ರಾ ಮತ್ತು ಇತರರ ವಿರುದ್ಧ ಮುಂಬೈ ಪೊಲೀಸರು ದಾಖಲಿಸಿದ್ದ ಎರಡು ಪ್ರಕರಣಗಳು ಮತ್ತು ದೋಷಾರೋಪ ಪಟ್ಟಿಯ ಆಧಾರದಲ್ಲಿ 2022ರ ಮೇ ತಿಂಗಳಲ್ಲಿ ಇ.ಡಿ ಪ್ರಕರಣ ದಾಖಲಿಸಿಕೊಂಡಿತ್ತು. ಪ್ರಕರಣಕ್ಕೆ ಸಂಬಂಧಿಸಿ ಬಂಧನಕ್ಕೊಳಗಾಗಿದ್ದ ಕುಂದ್ರಾ ಮತ್ತು ಇತರರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿ ಕುಂದ್ರಾ ವಿರುದ್ಧ ದಾಖಲಾಗಿರುವ ಎರಡನೇ ಪ್ರಕರಣ ಇದಾಗಿದ್ದು, ಕ್ರಿಪ್ಟೊ ಕರೆನ್ಸಿ ಪ್ರಕರಣಕ್ಕೆ ಸಂಬಂಧಿಸಿ ಕುಂದ್ರಾ ಮತ್ತು ಶಿಲ್ಪಾ ಶೆಟ್ಟಿಗೆ ಸೇರಿದ ₹98 ಕೋಟಿ ಮೌಲ್ಯದ ಆಸ್ತಿಯನ್ನು ಈ ವರ್ಷದ ಆರಂಭದಲ್ಲಿ ಇ.ಡಿ ಮುಟ್ಟುಗೋಲು ಹಾಕಿಕೊಂಡಿತ್ತು.

ಬಸ್ ಪಲ್ಟಿ: 11 ಸಾವು

ಗೊಂಡಿಯಾ (ಪಿಟಿಐ): ಮಹಾರಾಷ್ಟ್ರದ ಗೊಂಡಿಯಾ ಜಿಲ್ಲೆಯಲ್ಲಿ ಬಸ್ ಪಲ್ಟಿಯಾಗಿ ಕನಿಷ್ಠ 11 ಪ್ರಯಾಣಿಕರು ಸಾವಿಗೀಡಾಗಿದ್ದು, 23 ಜನರು ಗಾಯಗೊಂಡಿದ್ದಾರೆ.

36 ಪ್ರಯಾಣಿಕರಿದ್ದ ಬಸ್ ಭಂಡಾರದಿಂದ ಗೊಂಡಿಯಾಗೆ ತೆರಳುತ್ತಿದ್ದ ವೇಳೆ ಶುಕ್ರವಾರ ಮಧ್ಯಾಹ್ನ ದವ್ವಾ ಗ್ರಾಮದಲ್ಲಿ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎದುರಿನಲ್ಲಿದ್ದ ದ್ವಿಚಕ್ರವಾಹನಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಬಸ್ ಚಾಲಕ ಬ್ರೇಕ್ ಹಾಕಿದಾಗ ಬಸ್ ಪಲ್ಟಿಯಾಗಿದೆ. ಆಗ ಬಸ್‌ನಲ್ಲಿದ್ದ 11 ಪ್ರಯಾಣಿಕರು ಮೃತಪಟ್ಟಿದ್ದಾರೆ.

ಗಾಯಗೊಂಡವರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

11 ಮಂದಿ ಮೃತರ ಪೈಕಿ 9 ಜನರ ಗುರುತು ಪತ್ತೆಯಾಗಿದೆ. ಉಸ್ತುವಾರಿ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು ಮೃತರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಪುದುಚೇರಿಗೆ ಅಪ್ಪಳಿಸಲಿದೆ 'ಫೆಂಗಲ್'

ಚೆನ್ನೈ (ಪಿಟಿಐ): ಬಂಗಾಳ ಕೊಲ್ಲಿಯ ನೈರುತ್ಯ ಭಾಗದಲ್ಲಿ ತೀವ್ರ ವಾಯುಭಾರ ಕುಸಿತ ಉಂಟಾಗಿ 'ಫೆಂಗಲ್' ಚಂಡಮಾರುತ ರೂಪುಗೊಂಡಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಫೆಂಗಲ್ ಚಂಡಮಾರುತ ಪುದುಚೇರಿಗೆ ಶನಿವಾರ ಅಪ್ಪಳಿಸುವ ಸಾಧ್ಯತೆಯಿದೆ. ಈ ವೇಳೆ ಗಂಟೆಗೆ 90 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ ಎಂದು ಐಎಂಡಿ ಮುನ್ನೆಚ್ಚರಿಕೆ ನೀಡಿದೆ. ಚೆನ್ನೈ, ತಿರುವಳ್ಳೂರು, ಚೆಂಗಲ್ಪಟ್ಟು, ಕಾಂಚೀಪುರಂ, ವಿಲ್ಲುಪ್ಪುರಂ, ಕಲ್ಲಕುರಿಚಿ, ಕಡಲೂರು ಜಿಲ್ಲೆಗಳು ಮತ್ತು ಪುದುಚೇರಿಯ ಒಂದೆರಡು ಕಡೆ, ರಾಣಿಪೇಟ್, ತಿರುವಣ್ಣಾಮಲೈ, ವೆಲ್ಲೂರು, ಪೆರಂಬಲೂರು, ಅರಿಯಲೂರು, ತಂಜಾವೂರು, ತಿರುವರೂರು, ನಾಗಪಟ್ಟಿಣಂ ಜಿಲ್ಲೆಗಳು ಮತ್ತು ಕಾರೈಕಲ್ ಪ್ರದೇಶದ ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಅದು ಹೇಳಿದೆ.

ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಕೆ.ಕೆ.ಎಸ್.ಎಸ್.ಆರ್. ರಾಮಚಂದ್ರನ್ ಅವರು ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರದಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಪೂರ್ವಸಿದ್ಧತೆ ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಭೆ ನಡೆಸಿದರು. ಏತನ್ಮಧ್ಯೆ, ಮುನ್ನೆಚ್ಚರಿಕೆ ಕ್ರಮವಾಗಿ ಸಮುದ್ರದಿಂದ 4,153 ದೋಣಿಗಳು ದಡಕ್ಕೆ ಮರಳಿವೆ. 2,229 ಪರಿಹಾರ ಶಿಬಿರಗಳು ಬಳಕೆಗೆ ಸಿದ್ಧವಾಗಿವೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಸದ್ಯಕ್ಕೆ ತಿರುವರೂರು ಮತ್ತು ನಾಗಪಟ್ಟಿಣಂ ಜಿಲ್ಲೆಗಳ ಆರು ಪರಿಹಾರ ಕೇಂದ್ರಗಳಲ್ಲಿ 164 ಕುಟುಂಬಗಳು ಸೇರಿದಂತೆ ಒಟ್ಟು 471 ಮಂದಿಗೆ ಆಶ್ರಯ ಕಲ್ಪಿಸಲಾಗಿದೆ.

ಭಾರತದ ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಆಗ್ರಹ

'ಬಾಂಗ್ಲಾ ಸರ್ಕಾರ ಅಲ್ಪಸಂಖ್ಯಾತರ ರಕ್ಷಿಸಬೇಕು'

ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಹೆಚ್ಚುತ್ತಿರುವ ಹಿಂಸಾಚಾರದ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿರುವ ಭಾರತ, ಎಲ್ಲಾ ಅಲ್ಪಸಂಖ್ಯಾತರಿಗೆ ರಕ್ಷಣೆ ಒದಗಿಸುವುದು ಅಲ್ಲಿನ ಮಧ್ಯಂತರ ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಶುಕ್ರವಾರ ಹೇಳಿದೆ.

ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರು ಎದುರಿಸುತ್ತಿರುವ ಬೆದರಿಕೆಗಳು ಹಾಗೂ ಅವರ ಮೇಲಿನ 'ಉದ್ದೇಶಿತ ದಾಳಿ'ಯನ್ನು ಭಾರತವು ಬಾಂಗ್ಲಾದೇಶದ ಸರ್ಕಾರದೊಂದಿಗೆ ನಿರಂತರವಾಗಿ ಪ್ರಸ್ತಾಪಿಸುತ್ತಾ ಬಂದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

'ಈ ವಿಷಯದಲ್ಲಿ ನಮ್ಮ ನಿಲುವು ಸ್ಪಷ್ಟವಾಗಿದೆ. ಮಧ್ಯಂತರ ಸರ್ಕಾರವು ಎಲ್ಲಾ ಅಲ್ಪಸಂಖ್ಯಾತರನ್ನು ರಕ್ಷಿಸುವ ಜವಾಬ್ದಾರಿಯನ್ನು ನಿಭಾಯಿಸಬೇಕು' ಎಂದಿದ್ದಾರೆ.

'ಹಿಂಸಾಚಾರ ಮತ್ತು ಅಲ್ಪಸಂಖ್ಯಾತರನ್ನು ಪ್ರಚೋದಿಸುವ ಘಟನೆಗಳು ಹೆಚ್ಚುತ್ತಿರುವುದು ಕಳವಳ ಉಂಟುಮಾಡಿದೆ. ಅಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಮಾಧ್ಯಮಗಳ ಉತ್ಪ್ರೇಕ್ಷೆ ಎಂದು ತಳ್ಳಿಹಾಕಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

'ಸಮ್ಮಿಲಿತ್ ಸನಾತನಿ ಜಾಗರಣ ಜೋತೆ' ಹಿಂದೂ ಸಂಘಟನೆಯ ಮುಖಂಡ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಅವರ ಬಂಧನದ ಕುರಿತು ಪ್ರತಿಕ್ರಿಯಿಸಿ, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಪ್ರಕ್ರಿಯೆ ನಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ವಿಚಾರಣೆ ಪ್ರಕ್ರಿಯೆ ನ್ಯಾಯಯುತ ಮತ್ತು ಪಾರದರ್ಶಕವಾಗಿ ನಡೆಯಲಿದೆ ಎಂದು ನಿರೀಕ್ಷಿಸುತ್ತೇವೆ' ಎಂದಿದ್ದಾರೆ.

ಅಲ್ಪಸಂಖ್ಯಾತರ ರಕ್ಷಣೆ ವಿಷಯದಲ್ಲಿ ಭಾರತ ಇಬ್ಬಗೆ ನೀತಿ ಅನುಸರಿಸುತ್ತಿದೆ. ಭಾರತದಲ್ಲಿ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಮೇಲೆ ದೌರ್ಜನ್ಯ ನಡೆಯುತ್ತಿದೆ. ಆದರೆ, ಆ ಬಗ್ಗೆ ಅವರಿಗೆ ಯಾವುದೇ ಪಶ್ಚಾತ್ತಾಪ ಅಥವಾ ಮುಜುಗರ ಇಲ್ಲ

ಆಸಿಫ್ ನಜ್ರುಲ್, ಬಾಂಗ್ಲಾ ಮಧ್ಯಂತರ ಸರ್ಕಾರದ ಕಾನೂನು ಸಲಹೆಗಾರ

ಬ್ಯಾಂಕ್ ಖಾತೆ ಸ್ಥಗಿತ

ಢಾಕಾ (ಪಿಟಿಐ): ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಸೇರಿದಂತೆ ಇಸ್ಕಾನ್ ಜತೆ ಗುರುತಿಸಿಕೊಂಡಿರುವ 17 ಮಂದಿಯ ಬ್ಯಾಂಕ್ ಖಾತೆಗಳನ್ನು 30 ದಿನಗಳವರೆಗೆ ಸ್ಥಗಿತಗೊಳಿಸುವಂತೆ ಬಾಂಗ್ಲಾದೇಶದ ಹಣಕಾಸು ಅಧಿಕಾರಿಗಳು ಆದೇಶಿಸಿದ್ದಾರೆ ಎಂದು ಮಾಧ್ಯಮಗಳು ಶುಕ್ರವಾರ ವರದಿ ಮಾಡಿವೆ.

'ಬಾಂಗ್ಲಾದೇಶ ಬ್ಯಾಂಕ್‌ನ ಹಣಕಾಸು ಗುಪ್ತಚರ ಘಟಕವು (ಬಿಎಫ್‌ಐಯು) ವಿವಿಧ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಇದಕ್ಕೆ ಸಂಬಂಧಪಟ್ಟ ನಿರ್ದೇಶನಗಳನ್ನು ಗುರುವಾರ ಕಳುಹಿಸಿದ್ದು, ಈ ಖಾತೆಗಳಲ್ಲಿನ ಎಲ್ಲಾ ರೀತಿಯ ವಹಿವಾಟುಗಳನ್ನು ಒಂದು ತಿಂಗಳ ಕಾಲ ಸ್ಥಗಿತಗೊಳಿಸಿದೆ' ಎಂದು ಪ್ರಥಮ್ ಅಲೊ ಪತ್ರಿಕೆ ವರದಿ ಮಾಡಿದೆ.

ಈ 17 ವ್ಯಕ್ತಿಗಳಿಗೆ ಸೇರಿದ ಖಾತೆಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ಅವರು ನಡೆಸಿರುವ ಎಲ್ಲ ರೀತಿಯ ಹಣಕಾಸು ವ್ಯವಹಾರಗಳ ವಿವರಗಳನ್ನು ಮೂರು ದಿನಗಳ ಒಳಗಾಗಿ ಕಳುಹಿಸಿಕೊಡುವಂತೆ ಬಿಎಫ್‌ಐಯು, ಬ್ಯಾಂಕ್‌ಗಳು ಹಾಗೂ ಹಣಕಾಸು ಸಂಸ್ಥೆಗಳನ್ನು ಕೇಳಿದೆ.

ಚಿನ್ಮಯಿ ದಾಸ್ ಬಿಡುಗಡೆಗೆ ಒತ್ತಾಯ

ಕೋಲ್ಕತ್ತ (ಪಿಟಿಐ): ಚಿನ್ಮಯಿ ಕೃಷ್ಣದಾಸ್ ಬಿಡುಗಡೆಗೆ ಒತ್ತಾಯಿಸಿ ಇಸ್ಕಾನ್ ಕಚೇರಿಯಲ್ಲಿ ಶುಕ್ರವಾರವೂ ಪ್ರತಿಭಟನೆ ನಡೆಯಿತು. ಇಸ್ಕಾನ್ ಅನುಯಾಯಿಗಳು ಕೀರ್ತನೆ ಪಠಿಸಿ, ದಾಸ್ ಪರವಾಗಿ ಫಲಕಗಳನ್ನು ಪ್ರದರ್ಶಿಸಿದರು. ಬಾಂಗ್ಲಾದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು, ಅದರಲ್ಲೂ ಹಿಂದೂಗಳು ಸಮಸ್ಯೆಗೆ ಸಿಲುಕಿರುವ ಬಗ್ಗೆ ಇಸ್ಕಾನ್ ವಕ್ತಾರ ರಾಧಾರಾಮನ್ ದಾಸ್ ಕಳವಳ ವ್ಯಕ್ತಪಡಿಸಿದರು.

ವಿಎಚ್‌ಪಿ ಪ್ರತಿಭಟನೆ

ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಖಂಡಿಸಿ ಶುಕ್ರವಾರದಿಂದ ಎರಡು ದಿನ ರಾಷ್ಟ್ರವ್ಯಾಪಿ ಪ್ರತಿಭಟಿಸುವುದಾಗಿ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಘೋಷಿಸಿದೆ.

'ಬಾಂಗ್ಲಾದೇಶವು ಇಸ್ಲಾಮಿಕ್ ಜಿಹಾದಿಗಳ ಕೈಗೊಂಬೆಯಾಗಿದೆ. ಅಲ್ಪಸಂಖ್ಯಾತರು ಮತ್ತು ಮಾನವ ಹಕ್ಕುಗಳನ್ನು ರಕ್ಷಿಸಲು ವಿಎಚ್‌ಪಿ, ಬಜರಂಗ ದಳ ಸೇರಿದಂತೆ ಎಲ್ಲಾ ಹಿಂದೂ ಸಂಘಟನೆಗಳು ಹಾಗೂ ಮಾನವೀಯತೆಯ ಮೇಲೆ ನಂಬಿಕೆ ಇರುವ ಎಲ್ಲರೂ ಈ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ' ಎಂದು ವಿಎಚ್‌ಪಿ ವಕ್ತಾರ ವಿನೋದ್ ಬನ್ಸಾಲ್ ತಿಳಿಸಿದರು.

ಆಂಬುಲೆನ್ಸ್‌ನಲ್ಲಿ ಬಾಲಕಿ ಮೇಲೆ ಅತ್ಯಾಚಾರ

ಮಾವುಗಂಜ್ (ಪಿಟಿಐ): ಚಲಿಸುತ್ತಿದ್ದ ಆಂಬುಲೆನ್ಸ್‌ನಲ್ಲಿ ಬಾಲಕಿಯ ಮೇಲೆ ಅತ್ಯಾಚಾರ ಎಸಗಿರುವ ಘಟನೆ ಮಧ್ಯಪ್ರದೇಶದಲ್ಲಿ ನಡೆದಿದೆ.

'108' ತುರ್ತು ಸೇವೆಯ ಆಂಬುಲೆನ್ಸ್‌ನಲ್ಲಿ ನವೆಂಬರ್ 22ರಂದು ಘಟನೆ ನಡೆದಿದೆ ಎಂದು ಆರೋಪಿಸಲಾಗಿದೆ. ಪ್ರಕರಣ ಸಂಬಂಧ ಚಾಲಕ ಸೇರಿದಂತೆ ಇಬ್ಬರು ಆರೋಪಿಗಳನ್ನು ಬುಧವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸಂತ್ರಸ್ತೆಯು (16) ತನ್ನ ಅಕ್ಕ ಮತ್ತು ಭಾವನೊಂದಿಗೆ ಆಂಬುಲೆನ್ಸ್‌ನಲ್ಲಿ ಪ್ರಯಾಣಿಸಿದ್ದರು (ಯಾರೂ ರೋಗಿಗಳಾಗಿರಲಿಲ್ಲ). ಅವರೊಂದಿಗೆ ಚಾಲಕ ಮತ್ತು ಆತನ ಸಹಚರನಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನೀರು ತರುವ ನೆಪದಲ್ಲಿ ಸಂತ್ರಸ್ತೆಯ ಅಕ್ಕ ಮತ್ತು ಭಾವ ದಾರಿ ಮಧ್ಯೆ ಆಂಬುಲೆನ್ಸ್‌ನಿಂದ ಇಳಿದಿದ್ದಾರೆ. ಅವರು ಮತ್ತೆ ವಾಹನ ಹತ್ತುವ ಮೊದಲೇ ಚಾಲಕ ಆಂಬುಲೆನ್ಸ್ ಚಲಾಯಿಸಿಕೊಂಡು ಹೋಗಿದ್ದಾನೆ. ಬಳಿಕ ಚಾಲಕನ ಸಹಚರ ರಾಜೇಶ್ ಕೇವತ್ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾನೆ' ಎಂದು ಹೇಳಿದ್ದಾರೆ.

'ರಾತ್ರಿಯಿಡಿ ಬಾಲಕಿಯನ್ನು ತಮ್ಮೊಂದಿಗೆ ಇರಿಸಿಕೊಂಡಿದ್ದ ಆರೋಪಿಗಳು ಮರುದಿನ ಬೆಳಿಗ್ಗೆ ಬಾಲಕಿಯನ್ನು ರಸ್ತೆ ಬದಿ ಎಸೆದು ಹೋಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮನೆಗೆ ಮರಳಿದ್ದ ಸಂತ್ರಸ್ತೆಯ ಅಕ್ಕ ಮತ್ತು ಭಾವ ಆಕೆಯ ತಾಯಿಗೆ ಘಟನೆಯ ಬಗ್ಗೆ ತಿಳಿಸಿದ್ದರು. ಆದರೆ ಮರ್ಯಾದೆಗೆ ಅಂಜಿ ಅವರು ದೂರು ದಾಖಲಿಸಿರಲಿಲ್ಲ. ನ.25ರಂದು ಸಂತ್ರಸ್ತೆ ಮತ್ತು ಅವರ ತಾಯಿ ನೀಡಿದ ದೂರಿನ ಆಧಾರದಲ್ಲಿ ಪ್ರಕರಣ ದಾಖಲಾಗಿದೆ.

ಕೃತ್ಯಕ್ಕೆ ಸಹಾಯ ಮಾಡಿದ ಆರೋಪದಡಿ ಸಂತ್ರಸ್ತೆಯ ಅಕ್ಕ ಮತ್ತು ಭಾವನನ್ನೂ ಆರೋಪಿಗಳೆಂದು ಪರಿಗಣಿಸಲಾಗಿದೆ. ಅವರು ತಲೆಮರೆಸಿಕೊಂಡಿದ್ದು ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

SENIOR MANAGER / AGM- SALES

The candidates should be work in open for advertisement sales. Fluency in English & Kannada.
Experience: Preferred 10+ years experience in ad sales field.
Qualification: Any Degree
Job Location: Mysore
Primary prerequisites:
- Good Knowledge of local market and connects within the media industry.
- Needs to have experience in handling ad agency / agent.
- Outdoor advertising and Product launch. Revenue generation through Event & Activations.
- To maximize ad revenue and achieve monthly/ yearly sales targets
- To develop new clients /potential advertisers for all our group of publications.
- Collection Receivables to be taken care of.

Salary will be commensurate with qualification and experience.
Please send your application for the above position mentioning the job applied for (subject of the e-mail) and along with updated resume to:

The Manager-Recruitment
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಕ್ಯಾನ್‌ಬೆರಾದಲ್ಲಿ ಆಸ್ಟ್ರೇಲಿಯಾ ಪಿ.ಎಂ ಇಲೆವೆನ್ ವಿರುದ್ಧ ಅಭ್ಯಾಸ ಪಂದ್ಯ ಇಂದಿನಿಂದ

ಟೆಸ್ಟ್ ಸಿದ್ಧತೆ: ಭಾರತಕ್ಕೆ ಅವಕಾಶ

ಕ್ಯಾನ್‌ಬೆರಾ (ಪಿಟಿಐ): ಭಾರತ ತಂಡವು ಶನಿವಾರದಿಂದ ಇಲ್ಲಿನ ಮನುಕಾ ಓವಲ್ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ಪ್ರೈಮ್ ಮಿನಿಸ್ಟರ್ಸ್ ಇಲೆವೆನ್ ಎದುರು ಎರಡು ದಿನಗಳ 'ಪಿಂಕ್‌ಬಾಲ್' ಅಭ್ಯಾಸ ಪಂದ್ಯ ಆಡಲಿದೆ. ಈ ಪಂದ್ಯವು ಎರಡನೇ ಟೆಸ್ಟ್‌ಗೆ ಬ್ಯಾಟಿಂಗ್ ಕ್ರಮಾಂಕ ಸಂಯೋಜನೆಗೆ ಸ್ಪಷ್ಟತೆ ಪಡೆಯಲು ನೆರವಾಗಲಿದೆ.

ಭಾರತ ಇದುವರೆಗೆ ನಾಲ್ಕು ಹಗಲು ರಾತ್ರಿ (ಪಿಂಕ್‌ಬಾಲ್) ಟೆಸ್ಟ್ ಪಂದ್ಯಗಳನ್ನು ಆಡಿದೆ. ಇದರಲ್ಲಿ ಏಕೈಕ ಸೋಲು ನಾಲ್ಕು ವರ್ಷಗಳ ಹಿಂದೆ ಅಡಿಲೇಡ್‌ನಲ್ಲಿ ಬಂದಿತ್ತು. ಆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಭಾರತ 36 ರನ್‌ಗಳಿಗೆ ಆಲೌಟ್ ಆಗಿತ್ತು. ಆದರೆ ಆ ಪಂದ್ಯದ ಬಳಿಕ ಚೇತರಿಸಿಕೊಂಡು ನಾಲ್ಕು ಟೆಸ್ಟ್‌ಗಳ ಸರಣಿ ಗೆದ್ದುಕೊಂಡಿತ್ತು.

ಕೆಂಬಣ್ಣದ ಚೆಂಡಿಗೆ ಹೋಲಿಸಿದರೆ, ಗುಲಾಬಿ ಬಣ್ಣದ ಚೆಂಡು ಸ್ವಲ್ಪ ಹೆಚ್ಚು ಕರಾಮತ್ತು ತೋರುತ್ತದೆ. ವಿಶೇಷವಾಗಿ ಇಳಿಸಂಜೆಯ ವೇಳೆ. ಇದು ಮೊದಲ ದರ್ಜೆ ಪಂದ್ಯ ಆಗಿಲ್ಲದ ಕಾರಣ ಭಾರತದ ಬಹುತೇಕ ಆಟಗಾರರು ಈ ಪಂದ್ಯವನ್ನು 'ನೈಜ ಪಂದ್ಯದ ಅನುಭವ' ದಕ್ಕಿಸಿಕೊಳ್ಳುವ ಉದ್ದೇಶದಿಂದ ಆಡಲಿದ್ದಾರೆ.

ಪರ್ತ್‌ನಲ್ಲಿ ಮೊದಲ ಟೆಸ್ಟ್ ಪಂದ್ಯ ಗೆದ್ದ ನಂತರ ಭಾರತ ತಂಡದ ಮನೋಸ್ಥೈರ್ಯ ವೃದ್ಧಿಸಿದೆ.

ಎರಡನೇ ಮಗುವಿಗೆ ತಂದೆಯಾಗುವ ಸಂಭ್ರಮದಲ್ಲಿ ಮೊದಲ ಟೆಸ್ಟ್ ಕಳೆದುಕೊಂಡಿದ್ದ ರೋಹಿತ್ ಶರ್ಮಾ ಈಗ ತಂಡಕ್ಕೆ ಮರಳಿದ್ದಾರೆ. ಅಂತೆಯೇ ಫಿಟ್ ಆಗಿರುವ ಶುಭಮನ್ ಗಿಲ್ ಕೂಡ. ಹೀಗಾಗಿ ಡಿಸೆಂಬರ್ 6ರಂದು ಅಡಿಲೇಡ್‌ನಲ್ಲಿ ಆರಂಭವಾಗುವ ಎರಡನೇ ಟೆಸ್ಟ್‌ಗೆ ತಂಡದ ಬ್ಯಾಟಿಂಗ್ ಕ್ರಮಾಂಕ ಬದಲಾಗಲಿದೆ.ರೋಹಿತ್ ಮತ್ತು ಜೈಸ್ವಾಲ್ ಅವರು ತಂಡದ ಆರಂಭ ಆಟಗಾರಾಗಿ ಆಡಬೇಕಾಗಿತ್ತು. ಆದರೆ ಪರ್ತ್‌ನಲ್ಲಿ ರೋಹಿತ್ ಅಲಭ್ಯರಾದ ಕಾರಣ ಕೆ.ಎಲ್.ರಾಹುಲ್ ಇನಿಂಗ್ಸ್ ಆರಂಭಿಸಿ ಉತ್ತಮ ಆಟವನ್ನೂ ಆಡಿದ್ದರು. ರೋಹಿತ್ ಆರಂಭ ಆಟಗಾರ ನಾಗುತ್ತಾರೆಯೇ ಅಥವಾ ಮಧ್ಯಮ ಕ್ರಮಾಂಕಕ್ಕೆ ಇಳಿಯಬಹುದೇ ಎನ್ನುವುದು ಖಚಿತವಾಗಿಲ್ಲ. ಗಿಲ್ ಅವರ ಕ್ರಮಾಂಕವೂ ಬದಲಾಗಲಿದೆ.

ಹೀಗಾಗಿ ಕ್ರಮಾಂಕ ಸಂಯೋಜನೆಗೆ ಸ್ಪಷ್ಟತೆ ನೀಡಲು ಈ ಪಂದ್ಯ ಅವಕಾಶ ಒದಗಿಸಿದೆ. ಇದು ಎರಡು ದಿನಗಳ ಪಂದ್ಯವಾಗಿರುವ ಕಾರಣ ಭಾರತ ಬೌಲಿಂಗ್‌ಗಿಂತ ಬ್ಯಾಟಿಂಗ್‌ಗೆ ಹೆಚ್ಚು ಅವಕಾಶ ಸಿಗಬಹುದೆನ್ನುವ ವಿಶ್ವಾಸ ಹೊಂದಿದೆ. ಟೆಸ್ಟ್ ಆಡುವ ಸಾಧ್ಯತೆ ದೂರವಾಗಿರುವ ಕಾರಣ ಸರ್ಫರಾಜ್ ಖಾನ್ ಇಲ್ಲಿ ಅವಕಾಶ ಪಡೆಯುವ ನಿರೀಕ್ಷೆಯಲ್ಲಿದ್ದಾರೆ.ಟೆಸ್ಟ್ ಆಟಗಾರರಾದ ಮ್ಯಾಟ್ ರೆನ್‌ಶಾ ಮತ್ತು ಸ್ಕಾಟ್ ಬೋಲ್ಯಾಂಡ್ ಎದುರಾಳಿ ತಂಡದಲ್ಲಿದ್ದು ಪಂದ್ಯಕ್ಕೆ ತಾಲೀಮು ಸಿಗಬಹುದೆಂಬ ವಿಶ್ವಾಸ ಭಾರತ ತಂಡದ್ದು. ಪ್ರೈಮ್ ಮಿನಿಸ್ಟರ್ಸ್ ತಂಡದ ನಾಯಕತ್ವವನ್ನು ಆಲ್‌ರೌಂಡರ್ ಜಾಕ್ ಎಡ್ವರ್ಡ್ಸ್ ವಹಿಸಿದ್ದು, 19 ವರ್ಷದೊಳಗಿನವ ತಂಡದ ತಾರೆಗಳಾದ ಚಾರ್ಲಿ ಆ್ಯಂಡರ್ಸನ್, ಮಹ್ಲಿ ಬಿಯರ್ಡ್‌ಮನ್, ಏಡನ್ ಓ'ಕಾನರ್ ಮತ್ತು ಸ್ಯಾಮ್ ಕೊನ್‌ಸ್ಟಾಸ್ ಆಡಲಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9.10
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಭಾರತದ ತಂಡದ ನಾಯಕ ರೋಹಿತ್ ಶರ್ಮಾ –ಎಎಫ್‌ಪಿ ಚಿತ್ರ

'ರಾಹುಲ್ ಮತ್ತೆ ಇನಿಂಗ್ಸ್ ಆರಂಭಿಸಲಿ'

ಪೂಜಾರ

ಕ್ಯಾನ್‌ಬೆರಾ (ಪಿಟಿಐ): ನಾಯಕ ರೋಹಿತ್ ಶರ್ಮಾ ಅವರು ತಂಡಕ್ಕೆ ಮರಳಿದರೂ, ಕೆ.ಎಲ್.ರಾಹುಲ್ ಅವರು ಆಸ್ಟ್ರೇಲಿಯಾ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್‌ನಲ್ಲಿ ಯಶಸ್ವಿ ಜೈಸ್ವಾಲ್ ಅವರೊಂದಿಗೆ ಇನಿಂಗ್ಸ್ ಆರಂಭಿಸಲಿ ಎಂದು ಹಿರಿಯ ಆಟಗಾರ ಚೇತೇಶ್ವರ ಪೂಜಾರ ಸಲಹೆ ನೀಡಿದ್ದಾರೆ.ಪರ್ತ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ರೋಹಿತ್ ಅವರ ಗೈರುಹಾಜರಿಯಲ್ಲಿ ರಾಹುಲ್ ಅವರು ಜೈಸ್ವಾಲ್ ಜೊತೆ ಇನ್ನಿಂಗ್ಸ್ ಆರಂಭಿಸಿದ್ದರು. ಭಾರತ 295 ರನ್‌ಗಳ ಭಾರಿ ಅಂತರದಿಂದ ಗೆಲುವು ಸಾಧಿಸಿರುವ ಕಾರಣ ಆರಂಭ ಆಟಗಾರರ ಸಂಯೋಜನೆ ಬದಲಿಸಬಾರದು ಎಂದು ಈ ಹಿಂದೆ ಭಾರತದ ಬ್ಯಾಟಿಂಗ್ ಆಧಾರಸ್ತಂಭವಾಗಿದ್ದ ಪೂಜಾರ ಹೇಳಿದ್ದಾರೆ. 'ಇವರಿಬ್ಬರು ಇನಿಂಗ್ಸ್ ಆರಂಭಿಸಿದಲ್ಲಿ, ರೋಹಿತ್ ಶರ್ಮಾ ಮೂರನೇ ಕ್ರಮಾಂಕದಲ್ಲಿ ಮತ್ತು ಶುಭಮನ್ ಗಿಲ್ ಐದನೇ ಕ್ರಮಾಂಕದಲ್ಲಿ ಆಡಬಹುದು' ಎಂದು ಇಎಸ್‌ಪಿಎನ್ ಜೊತೆಗಿನ ಸಂವಾದದಲ್ಲಿ ಅವರು ಅಭಿಪ್ರಾಯಪಟ್ಟಿದ್ದಾರೆ.

ನೆಟ್ಸ್‌ನಲ್ಲಿ ಗಿಲ್ ಭಾಗಿ

ಕ್ಯಾನ್‌ಬೆರಾ (ಪಿಟಿಐ): ಶುಭಮನ್ ಗಿಲ್ ಅವರು ಶುಕ್ರವಾರ ಭಾರತ ತಂಡದ ನೆಟ್ಸ್ ಅಭ್ಯಾಸದಲ್ಲಿ ಸಕ್ರಿಯವಾಗಿ ಭಾಗಿಯಾದರು. ಇದು ಹೆಬ್ಬೆರಳಿನ ಗಾಯದಿಂದ ಅವರು ಚೇತರಿಸಿಕೊಂಡಿರುವುದರ ಸಂಕೇತವಾಗಿದೆ. ಪರ್ತ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಗಿಲ್ ಆಡಿರಲಿಲ್ಲ. ಆದರೆ ಈ ಹಿಂದಿನ ಪ್ರವಾಸದಲ್ಲಿ ಅವರ ಸ್ಫೂರ್ತಿಯುತ ಪ್ರದರ್ಶನದ ಕಾರಣ ಐದು ಪಂದ್ಯಗಳ ಟೆಸ್ಟ್ ಸರಣಿಯ ಉಳಿದ ಪಂದ್ಯಗಳಲ್ಲಿ ಅವರನ್ನು ತಂಡದ ಆಡಳಿತವು ಆಡಿಸುವುದು ಖಚಿತವಾಗಿದೆ.

ಶ್ರೇಯಸ್ ಮಿಂಚು: ಕರ್ನಾಟಕಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೇಯಸ್ ಗೋಪಾಲ್ (13ಕ್ಕೆ 5) ಮತ್ತು ವಿದ್ಯಾಧರ ಪಾಟೀಲ (10ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿ ನೆರವಿನಿಂದ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಎಂಟು ವಿಕೆಟ್‌ಗಳಿಂದ ಸಿಕ್ಕಿಂ ತಂಡವನ್ನು ಮಣಿಸಿತು.

ಈ ಗೆಲುವಿನೊಂದಿಗೆ ಕರ್ನಾಟಕ ತಂಡವು ಕ್ವಾರ್ಟರ್ ಫೈನಲ್ ಕನಸನ್ನು ಜೀವಂತವಾಗಿರಿಸಿಕೊಂಡಿತು. ಆಡಿರುವ ನಾಲ್ಕು ಪಂದ್ಯಗಳಲ್ಲಿ ಎರಡನ್ನು ಗೆದ್ದಿರುವ ಮಯಂಕ್ ಅಗರವಾಲ್ ಬಳಗವು ನಾಕೌಟ್‌ಗೆ ಅರ್ಹತೆ ಪಡೆಯಲು ಇನ್ನುಳಿದ ಮೂರೂ ಪಂದ್ಯಗಳನ್ನು ದೊಡ್ಡ ಅಂತರದಲ್ಲಿ ಗೆಲ್ಲಲೇಬೇಕಿದೆ.

ಇಂದೋರ್‌ನ ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಸಿಕ್ಕಿಂ ತಂಡಕ್ಕೆ ವಿದ್ಯಾಧರ ಆರಂಭದಲ್ಲೇ ಪೆಟ್ಟು ನೀಡಿದರು. ನಂತರದಲ್ಲಿ ಶ್ರೇಯಸ್ ಅಮೋಘ ದಾಳಿ ನಡೆಸಿ, ಎದುರಾಳಿ ತಂಡವನ್ನು ಚೇತರಿಸದಂತೆ ನೋಡಿಕೊಂಡರು.

18 ರನ್ ಗಳಿಸಿದ ಸಿಕ್ಕಿಂನ ವಿಕೆಟ್ ಕೀಪರ್ ಆಶಿಷ್ ತಾಪಾ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ತಂಡವು 18.2 ಓವರ್‌ಗಳಲ್ಲಿ 82 ರನ್‌ಗೆ ಕುಸಿಯಿತು.

ಸುಲಭ ಗುರಿಯನ್ನು ಬೆನ್ನತ್ತಿದ ಕರ್ನಾಟಕ, ಮನೀಷ್ ಪಾಂಡೆ (ಔಟಾಗದೇ 30; 13ಎ, 4x2, 6x2) ಮತ್ತು ಕೆ.ಎಲ್.ಶ್ರೀಜಿತ್ (37, 13ಎ, 4x4, 6x3) ಅವರ ಬ್ಯಾಟಿಂಗ್ ನೆರವಿನಿಂದ 5.4 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 86 ರನ್ ಗಳಿಸಿ ಗೆಲುವು ಸಾಧಿಸಿತು.

'ಬಿ' ಗುಂಪಿನಲ್ಲಿರುವ ಕರ್ನಾಟಕ ತಂಡವು ಒಟ್ಟು ಎಂಟು ಅಂಕಗಳೊಂದಿಗೆ ಐದನೇ ಸ್ಥಾನದಲ್ಲಿದೆ. ಕರ್ನಾಟಕ ಡಿ.1ರಂದು ತಮಿಳುನಾಡು ತಂಡವನ್ನು ಎದುರಿಸಲಿದೆ.

ಶ್ರೇಯಸ್ ಗೋಪಾಲ್

ಸಂಕ್ಷಿಪ್ತ ಸ್ಕೋರ್: ಸಿಕ್ಕಿಂ: 18.2 ಓವರ್‌ಗಳಲ್ಲಿ 82 (ಆಶಿಷ್ ತಾಪಾ 18, ಪ್ರಾಣೇಶ್ 17; ವಿದ್ಯಾಧರ ಪಾಟೀಲ (10ಕ್ಕೆ 3, ವೈಶಾಖ ವಿಜಯಕುಮಾರ್ 14ಕ್ಕೆ 2, ಶ್ರೇಯಸ್ ಗೋಪಾಲ್ 13ಕ್ಕೆ 5). ಕರ್ನಾಟಕ: 5.4 ಓವರ್‌ಗಳಲ್ಲಿ 2 ವಿಕೆಟ್‌ಗೆ 86 (ಮನೀಷ್ ಪಾಂಡೆ ಔಟಾಗದೇ 30, ಕೆ.ಎಲ್. ಶ್ರೀಜಿತ್ 37). ಪಂದ್ಯದ ಆಟಗಾರ: ಶ್ರೇಯಸ್ ಗೋಪಾಲ್

11 ಮಂದಿ ಬೌಲಿಂಗ್– ಡೆಲ್ಲಿ ತಂಡದ ದಾಖಲೆ: ಮಣಿಪುರ ವಿರುದ್ಧದ ಪಂದ್ಯದಲ್ಲಿ ತಂಡದ ಎಲ್ಲಾ 11 ಆಟಗಾರರು ಬೌಲಿಂಗ್ ಮಾಡುವ ಮೂಲಕ ದೆಹಲಿ ತಂಡ ವಿಶೇಷ ದಾಖಲೆ ನಿರ್ಮಿಸಿತು.

'ಸಿ' ಗುಂಪಿನ ಈ ಪಂದ್ಯದಲ್ಲಿ ದೆಹಲಿ ತಂಡವು ಮಣಿಪುರ ವಿರುದ್ಧ ನಾಲ್ಕು ವಿಕೆಟ್‌ಗಳ ಜಯ ಸಾಧಿಸಿತು.

ಮಣಿಪುರ 8 ವಿಕೆಟ್‌ಗೆ 120 ರನ್ ಗಳಿಸಿದರೆ, ಡೆಲ್ಲಿ 18.3 ಓವರ್‌ಗಳಲ್ಲಿ 6 ವಿಕೆಟ್‌ಗೆ 124 ರನ್ ಗಳಿಸಿತು. ಪಂದ್ಯದಲ್ಲಿ ಡೆಲ್ಲಿ ತಂಡವು ತನ್ನ ಎಲ್ಲಾ ಆಟಗಾರರನ್ನು ಬೌಲಿಂಗ್‌ಗೆ ಬಳಸಿಕೊಂಡಿತು. ವಿಕೆಟ್ ಕೀಪರ್ ಅನೂಜ್ ರಾವತ್ ಕೂಡ ಬೌಲಿಂಗ್ ಮಾಡಿದರು.

ಪಾಂಡ್ಯ ಅಬ್ಬರ

ಬರೋಡಾ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ಒಂದೇ ಓವರ್‌ನಲ್ಲಿ ನಾಲ್ಕು ಸಿಕ್ಸರ್ ಸಹಿತ 28 ರನ್ ಸೂರೆಗೈದರು.

ಮೊದಲು ಬ್ಯಾಟಿಂಗ್ ಮಾಡಿದ ತ್ರಿಪುರ 9 ವಿಕೆಟ್‌ಗೆ 109 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಬರೋಡಾ 11.2 ಓವರ್‌ಗಳಲ್ಲೇ ಮೂರು ವಿಕೆಟ್‌ಗೆ 115 ರನ್ ಗಳಿಸಿ ಜಯ ಸಾಧಿಸಿತು. ಪಾಂಡ್ಯ 23 ಎಸೆತಗಳಲ್ಲಿ 47 ರನ್ ಗಳಿಸಿದರು. ಪರ್ವೇಜ್ ಸುಲ್ತಾನ್ ಓವರ್‌ನಲ್ಲಿ ನಾಲ್ಕು ಸಿಕ್ಸರ್, ಒಂದು ಬೌಂಡರಿ ಸಿಡಿಸಿದರು.

ಗರಿಷ್ಠ ರನ್ ನೀಡಿದ ಶಾರ್ದೂಲ್

ಮುಂಬೈ ತಂಡದ ವೇಗದ ಬೌಲರ್ ಶಾರ್ದೂಲ್ ಠಾಕೂರ್ ಅವರು ಕೇರಳ ವಿರುದ್ಧದ ಪಂದ್ಯದಲ್ಲಿ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಇತಿಹಾಸದಲ್ಲೇ ಗರಿಷ್ಠ ರನ್ ಬಿಟ್ಟುಕೊಟ್ಟಿದ್ದಾರೆ.

ಈ ಪಂದ್ಯವನ್ನು ಕೇರಳ 43 ರನ್‌ಗಳಿಂದ ಜಯಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಕೇರಳ ತಂಡ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 234 ರನ್ ಗಳಿಸಿದೆ. ಶಾರ್ದೂಲ್ ಅವರು ನಾಲ್ಕು ಓವರ್ ಬೌಲಿಂಗ್ ಮಾಡಿ 17.25ರ ಸರಾಸರಿಯಲ್ಲಿ 69 ರನ್ ನೀಡಿದರು.

ಮುಂಬೈ ತಂಡವು 9 ವಿಕೆಟ್‌ಗೆ 191 ರನ್ ಗಳಿಸಿ ಹೋರಾಟವನ್ನು ಮುಗಿಸಿತು.

ಜೂನಿಯರ್ ಹಾಕಿ: ಭಾರತಕ್ಕೆ ಗೆಲುವು

ಮಸ್ಕತ್ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಪುರುಷರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದೆ.

ಮಾಜಿ ಅಂತರರಾಷ್ಟ್ರೀಯ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅವರ ತರಬೇತಿಯಲ್ಲಿರುವ ಭಾರತ ತಂಡವು ಗುರುವಾರ ನಡೆದ 'ಎ' ಗುಂಪಿನ ಎರಡನೇ ಪಂದ್ಯದ ರೋಚಕ ಹಣಾಹಣಿಯಲ್ಲಿ 3–2 ಗೋಲುಗಳಿಂದ ಜಪಾನ್ ತಂಡವನ್ನು ಮಣಿಸಿತು. ಮೊದಲ ಪಂದ್ಯದಲ್ಲಿ 11–0ಯಿಂದ ಥಾಯ್ಲೆಂಡ್ ತಂಡವನ್ನು ಹಿಮ್ಮೆಟ್ಟಿಸಿ ಶುಭಾರಂಭ ಮಾಡಿತ್ತು.

ಭಾರತದ ಪರ ಥಾಕ್‌ಚೋಮ್ ಕಿಂಗ್ಸನ್ ಸಿಂಗ್ (12ನೇ ನಿಮಿಷ), ರೋಹಿತ್ (36ನೇ) ಮತ್ತು ಅರೈಜೀತ್ ಸಿಂಗ್ ಹುಂಡಾಲ್ (39ನೇ ನಿ) ಗೋಲು ಗಳಿಸಿದರೆ, ಜಪಾನ್ ಪರ ನಿಯೋ ಸಾಟೊ (15ನೇ ಮತ್ತು 38ನೇ) ಎರಡು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಅಮಿರ್ ಅಲಿ ನಾಯಕತ್ವದ ಭಾರತ ತಂಡವು ಶನಿವಾರ ಚೀನಾ ತೈಪೆ ತಂಡದ ಸವಾಲನ್ನು ಎದುರಿಸಲಿದೆ.

ಚಾಂಪಿಯನ್ಸ್ ಟ್ರೋಫಿ: ಸಭೆ ಇಂದು ಮುಂದುವರಿಕೆ

ಒಮ್ಮತಕ್ಕೆ ಬರದ ಐಸಿಸಿ ಮಂಡಳಿ ಸಭೆ

ದುಬೈ (ಪಿಟಿಐ): ಬಹು ನಿರೀಕ್ಷಿತ ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಮಂಡಳಿಯ ತುರ್ತು ಸಭೆ ಒಮ್ಮತಕ್ಕೆ ಬರಲಾಗಲಿಲ್ಲ. ಆತಿಥ್ಯ ವಹಿಸಿರುವ ಪಾಕಿಸ್ತಾನವು ಹೈಬ್ರಿಡ್ ಮಾದರಿ ಪ್ರಸ್ತಾವ ತಿರಸ್ಕರಿಸಿದ್ದು, ಕಗ್ಗಂಟನ್ನು ಪರಿಹರಿಸಲು ಸಭೆ ಶನಿವಾರ ಮುಂದುವರಿಯಲಿದೆ.

ಭಾರತ ತಂಡವು ತಮ್ಮ ದೇಶಕ್ಕೆ ಬರಲು ಒಪ್ಪದ ಹೊರತಾಗಿಯೂ, 'ಹೈಬ್ರಿಡ್ ಮಾದರಿ' ತಮಗೆ ಸಮ್ಮತಾರ್ಹವಲ್ಲ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಮುಖ್ಯಸ್ಥ ಮೊಹ್ಸಿನ್ ನಕ್ವಿ ಸ್ಪಷ್ಟಮಾತುಗಳಲ್ಲಿ ಹೇಳಿದರು. ಕೇಂದ್ರ ಸರ್ಕಾರ, ಪಾಕ್‌ಗೆ ತೆರಳಲು ಭಾರತ ತಂಡಕ್ಕೆ ಒಪ್ಪಿಗೆ ನೀಡಿಲ್ಲ.

'ಐಸಿಸಿ ಮಂಡಳಿಯ ಸಭೆ ಕೆಲಹೊತ್ತು ನಡೆಯಿತು. ಸಕಾರಾತ್ಮಕ ನಿಲುವಿಗೆ ಬರುವ ಸಂಬಂಧ ಎಲ್ಲ ಭಾಗಿದಾರರು ಕಾರ್ಯೋನ್ಮುಖರಾಗಿದ್ದಾರೆ. ಮಂಡಳಿಯು ಶನಿವಾರ ಸಭೆಯನ್ನು ಮುಂದುವರಿಸುವ ನಿರೀಕ್ಷೆಯಿದೆ. ಮುಂದಿನ ಕೆಲ ದಿನಗಳ ಕಾಲವೂ ನಡೆಯಬಹುದು' ಎಂದು ಐಸಿಸಿ ಪೂರ್ಣಪ್ರಮಾಣದ ಸದಸ್ಯ ರಾಷ್ಟ್ರದ ಹಿರಿಯ ಆಡಳಿತಗಾರರೊಬ್ಬರು ಪಿಟಿಐಗೆ ತಿಳಿಸಿದರು. ಅವರು ಮಂಡಳಿಯ ಭಾಗವಾಗಿದ್ದಾರೆ.

ಪಾಕಿಸ್ತಾನದ ನಿಲುವಿಗೆ ಬೆಂಬಲ ಪಡೆಯಲು ನಕ್ವಿ ಅವರು ಗುರುವಾರದಿಂದ ದುಬೈನಲ್ಲಿದ್ದಾರೆ. ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ಆನ್‌ಲೈನ್ ಮೂಲಕ ಸಭೆಗೆ ಹಾಜರಾದರು. ಶಾ ಅವರು ಡಿಸೆಂಬರ್ 1ರಂದು ಐಸಿಸಿ ಚೇರ್‌ಮನ್ ಆಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಪೂರ್ವಭಾವಿ ವೇಳಾಪಟ್ಟಿಯಂತೆ ಫೆ. 19 ರಿಂದ ಮಾರ್ಚ್ 9ರವರೆಗೆ ಐಸಿಸಿ ಚಾಂಪಿಯನ್ಸ್ ಟ್ರೋಫಿ ಪಾಕ್ ಆತಿಥ್ಯದಲ್ಲಿ ನಡೆಯಬೇಕಿದೆ. ಎಲ್ಲಾ ಪಂದ್ಯಗಳು ತನ್ನ ನೆಲದಲ್ಲಿಯೇ ನಡೆಯಬೇಕು ಎಂದು ಪಾಕಿಸ್ತಾನ ಪಟ್ಟುಹಿಡಿದಿದೆ.

ಒಂದು ವೇಳೆ ಹೈಬ್ರಿಡ್ ಮಾದರಿ ಅನಿವಾರ್ಯವಾದರೆ ಅಥವಾ ಟೂರ್ನಿಯನ್ನು ಮುಂದೂಡಿದರೆ ಇದರಿಂದ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಭಾರೀ ನಷ್ಟವಾಗಲಿದೆ. ಟಿಕೆಟ್ ಮಾರಾಟದಿಂದ ಬರುವ ಆದಾಯ ಮತ್ತು ಆತಿಥ್ಯ ಶುಲ್ಕದಲ್ಲಿ ಸುಮಾರು 60 ಲಕ್ಷ ಡಾಲರ್ (ಸುಮಾರು ₹51 ಕೋಟಿ) ಕಳೆದುಕೊಳ್ಳಬೇಕಾಗುತ್ತದೆ. ಅಲ್ಲದೆ, ಪಿಸಿಬಿಯ ವಾರ್ಷಿಕ ಆದಾಯದ ಮೇಲೂ ಪರಿಣಾಮ ಬೀರಲಿದೆ.

ಹೈಬ್ರಿಡ್ ಮಾದರಿಯನ್ನು ಕಾರ್ಯಗತಗೊಳಿಸದಿದ್ದಲ್ಲಿ ಭಾರತ ತಂಡವು ಟೂರ್ನಿಯಿಂದ ಹೊರಗುಳಿಯಲಿದೆ. ಟೂರ್ನಿಯ ಅಧಿಕೃತ ಪ್ರಸಾರ ಹಕ್ಕು ಪಡೆದಿರುವ ಸ್ಟಾರ್ ಸಂಸ್ಥೆಯು ಐಸಿಸಿಯೊಂದಿಗೆ ಮಾಡಿಕೊಂಡಿರುವ ಬಹು ಶತಕೋಟಿ ಡಾಲರ್ ಒಪ್ಪಂದವನ್ನು ಮರು ಪರಿಷ್ಕರಣೆಗೆ ಆಗ್ರಹಿಸುವ ಸಾಧ್ಯತೆಯಿದೆ.

ರಾಷ್ಟ್ರೀಯ ಭಾವೈಕ್ಯ: ಆರ್‌ಸಿಬಿ ಸಂದೇಶ

ಬೆಂಗಳೂರು: ಸಾಕಷ್ಟು ಅಭಿಮಾನಿಗಳನ್ನು ಹೊಂದಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ರಾಷ್ಟ್ರೀಯ ಭಾವೈಕ್ಯದ ಕುರಿತು ದೇಶದ ಹಲವು ಭಾಷೆಗಳಲ್ಲಿ ವಿಡಿಯೊ ಪ್ರಸಾರ ಮಾಡಿದೆ.

ಸಾಮಾಜಿಕ ಜಾಲತಾಣದಲ್ಲಿ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಐಪಿಎಲ್ ತಂಡಗಳಲ್ಲಿ ಆರ್‌ಸಿಬಿ ಒಂದಾಗಿದೆ. ಕನ್ನಡ ರಾಜ್ಯೋತ್ಸವದ ದಿನ ಕನ್ನಡದಲ್ಲಿಯೇ ಮೊದಲ ವಿಡಿಯೊ ಪೋಸ್ಟ್ ಹಾಕಿದ್ದ ಆರ್‌ಸಿಬಿ ಇದೀಗ ಈ ವಿಡಿಯೊವನ್ನು ದೇಶದ ಹಲವು ಭಾಷೆಗಳಲ್ಲಿ ಬಿಡುಗಡೆ ಮಾಡಿದೆ.

ಆರ್‌ಸಿಬಿಯ ಕನ್ನಡ ಇನ್‌ಸ್ಟಾಗ್ರಾಂ ಪುಟ ಇತ್ತೀಚೆಗಷ್ಟೇ ಆರಂಭವಾಗಿದ್ದು, 1.6 ಲಕ್ಷ ಫಾಲೋವರ್‌ಗಳನ್ನು ಹೊಂದಿದೆ. ತಂಡವು ಸ್ಥಳೀಯ ಅಭಿಮಾನಿಗಳೊಂದಿಗೆ ಭಾವನಾತ್ಮಕ ನಂಟು ಹೊಂದಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಣವ್ ಸ್ಪಿನ್ ಮೋಡಿ: ಒಡಿಶಾ ತತ್ತರ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕದ ಪ್ರಣವ್ ಅಶ್ವಥ್ ಸ್ಪಿನ್ ಮೋಡಿಗೆ (24ಕ್ಕೆ 5) ತತ್ತರಿಸಿದ ಒಡಿಶಾ ತಂಡ, ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ 147 ರನ್‌ಗೆ ಕುಸಿಯಿತು. 161ರನ್ ಹಿನ್ನಡೆಯೊಂದಿಗೆ ಎರಡನೇ ಇನ್ನಿಂಗ್ಸ್ ಆರಂಭಿಸಿರುವ ಒಡಿಶಾ, ವಿಕೆಟ್ ನಷ್ಟವಿಲ್ಲದೆ 33 ರನ್ ಗಳಿಸಿದೆ.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಮೊದಲ ದಿನದಾಟದಲ್ಲಿ 8 ವಿಕೆಟ್‌ಗೆ 298 ರನ್ ಗಳಿಸಿದ್ದ ಆತಿಥೇಯ ತಂಡ ಶುಕ್ರವಾರ 10 ರನ್ ಸೇರಿಸುವಷ್ಟರಲ್ಲಿ ಆಲೌಟ್ ಆಯಿತು.

ಸವಾಲಿನ ಮೊತ್ತ ಬೆನ್ನತ್ತಿದ ಒಡಿಶಾ ತಂಡಕ್ಕೆ ಕರ್ನಾಟಕದ ಈಶ ಪುತ್ತಿಗೆ (32ಕ್ಕೆ2) ಆರಂಭಿಕ ಆಘಾತ ನೀಡಿದರು. ಪ್ರಯಾಣ್ ಸಾಮಲ್ ಹಾಗೂ ಆಯುಷ್ ಸುತಾರ್ ಅವರನ್ನು ಬೇಗನೆ ಔಟ್ ಮಾಡಿದರು. ಸಂಬೀತ್ ಕೆ.ಬೇಜಾ (48 ರನ್) ಹೋರಾಟ ತೋರಿದರು. ಒಂದು ಹಂತದಲ್ಲಿ 92 ರನ್‌ಗೆ 4 ವಿಕೆಟ್ ಕಳೆದುಕೊಂಡಿದ್ದ ಒಡಿಶಾ ನಂತರ ಪ್ರಣವ್ ಸ್ಪಿನ್ ದಾಳಿಗೆ ಸಿಲುಕಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 95.5 ಓವರ್‌ಗಳಲ್ಲಿ 308 (ಎಸ್. ಗಗನ್ ರಾವ್ 61, ಶಿವಂ ಸಿಂಗ್ 49, ಸೈಯದ್ ತುಫೈಲ್ ಅಹಮ್ಮದ್ 66ಕ್ಕೆ 4) ಒಡಿಶಾ: 62.5 ಓವರ್‌ಗಳಲ್ಲಿ 147 (ಸಂಬೀತ್ ಬೇಜಾ 48, ಪ್ರಣವ್ ಅಶ್ವಥ್ 24ಕ್ಕೆ 5, ಧೀರಜ್ ಗೌಡ 40ಕ್ಕೆ 3) ಎರಡನೇ ಇನಿಂಗ್ಸ್: ಒಡಿಶಾ: 17 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 33 (ಆಯುಷ್ ಸುತರ್ ಔಟಾಗದೇ 18, ಪ್ರಯಾಣ್ ಸಾಮಲ್ ಔಟಾಗದೇ 13)

ಪ್ರೊ ಕಬಡ್ಡಿ ಹರಿಯಾಣಕ್ಕೆ ಶರಣಾದ ತಲೈವಾಸ್

ನೊಯ್ಡಾ: ರೇಡರ್ ವಿನಯ್ ಅವರ ಅದ್ಭುತ ಆಟದ ಜತೆಗೆ ಸಾಂಘಿಕ ಪ್ರದರ್ಶನ ಮುಂದುವರಿಸಿದ ಹರಿಯಾಣ ಸ್ಟೀಲರ್ಸ್ ತಂಡ, ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಪಂದ್ಯದಲ್ಲಿ ತಮಿಳ್ ತಲೈವಾಸ್ ತಂಡವನ್ನು 42–30 ಅಂಕಗಳಿಂದ ಸುಲಭವಾಗಿ ಮಣಿಸಿತು.

ಗೆಲುವಿನೊಡನೆ ಸ್ಟೀಲರ್ಸ್ ತಂಡ ಒಟ್ಟು 61 ಅಂಕಗಳೊಂದಿಗೆ ಲೀಗ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿತು. ವಿರಾಮದ ವೇಳೆ ವಿಜೇತ ತಂಡ 13–10 ರಲ್ಲಿ ಮೂರು ಪಾಯಿಂಟ್‌ಗಳ ಮುನ್ನಡೆ ಸಾಧಿಸಿತ್ತು.

ರೋಚಕವಾಗಿದ್ದ ಎರಡನೇ ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡ 34–33 ಪಾಯಿಂಟ್‌ಗಳಿಂದ ಗುಜರಾತ್ ಜೈಂಟ್ಸ್ ತಂಡವನ್ನು ಸೋಲಿಸಿತು.

ಸೆಮಿಗೆ ಸಿಂಧು, ಸೇನ್

ಲಖನೌ (ಪಿಟಿಐ): ಪ್ರಸಕ್ತ ಋತುವಿನಲ್ಲಿ ಪ್ರಶಸ್ತಿಯ ಬರ ಎದುರಿಸುತ್ತಿರುವ ಭಾರತದ ಅಗ್ರಮಾನ್ಯ ಬ್ಯಾಡ್ಮಿಂಟನ್ ತಾರೆಯರಾದ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಇಲ್ಲಿ ನಡೆಯುತ್ತಿರುವ ಸೈಯ್ಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕರ ಘಟ್ಟಕ್ಕೆ ಲಗ್ಗೆ ಹಾಕಿದರು.

ಅಗ್ರ ಶ್ರೇಯಾಂಕದ 29 ವರ್ಷ ವಯಸ್ಸಿನ ಸಿಂಧು 21-15, 21-17ರಿಂದ ಚೀನಾದ ಚೀನಾದ ದಾಯಿ ವಾಂಗ್ ಅವರನ್ನು ನೇರ ಗೇಮ್‌ಗಳಲ್ಲಿ ಹಿಮ್ಮೆಟ್ಟಿಸಿದರು. ಎರಡು ಬಾರಿಯ ಚಾಂಪಿಯನ್ (2017, 2022) ಸಿಂಧು ಈ ಪಂದ್ಯವನ್ನು ಜಯಿಸಲು 48 ನಿಮಿಷ ತೆಗೆದುಕೊಂಡರು. 18ನೇ ಕ್ರಮಾಂಕ ಹೊಂದಿರುವ ಅವರು ಸೆಮಿಫೈನಲ್‌ನಲ್ಲಿ ಸ್ವದೇಶದ ಉನ್ನತಿ ಹೂಡಾ ಅವರನ್ನು ಎದುರಿಸಲಿದ್ದಾರೆ.

2022ರ ಒಡಿಶಾ ಓಪನ್ ಚಾಂಪಿಯನ್ ಹೂಡಾ ಎಂಟರ ಘಟ್ಟದ ಪಂದ್ಯದಲ್ಲಿ 21-16, 21-9ರಿಂದ ಅಮೆರಿಕದ ಇಶಿಕಾ ಜೈಸ್ವಾಲ್ ಅವರನ್ನು ಮಣಿಸಿದರು.

2021ರ ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತ ಸೇನ್ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ 21-8, 21-19ರಿಂದ ಸ್ವದೇಶದ ಮೀರಬಾ ಲುವಾಂಗ್ ಅವರನ್ನು ನಿರಾಯಾಸವಾಗಿ ಮಣಿಸಿ ಮುನ್ನಡೆದರು. ಅಗ್ರ ಶ್ರೇಯಾಂಕದ ಸೇನ್ ಪಂದ್ಯದುದ್ದಕ್ಕೂ ಪ್ರಾಬಲ್ಯ ಮೆರೆದು, 41 ನಿಮಿಷದಲ್ಲಿ ಗೆಲುವು ಸಾಧಿಸಿದರು. 23 ವರ್ಷ ವಯಸ್ಸಿನ ಸೇನ್ ಮುಂದಿನ ಸುತ್ತಿನಲ್ಲಿ ಜಪಾನ್‌ನ ಶೋಗೊ ಒಗಾವಾ ಅವರ ಸವಾಲನ್ನು ಎದುರಿಸುವರು.

ಮಹಿಳೆಯರ ಡಬಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಇಲ್ಲಿ ಗೆಲುವಿನ ಓಟ ಮುಂದುವರಿಸಿದರು. ಚೀನಾದಲ್ಲಿ ನಡೆಯಲಿರುವ ಋತುವಿನ ಅಂತ್ಯದ ವಿಶ್ವ ಟೂರ್ ಫೈನಲ್‌ಗೆ ಅರ್ಹತೆ ಗಳಿಸಿರುವ ಈ ಜೋಡಿಯು ಎಂಟರ ಘಟ್ಟದ ಪಂದ್ಯದಲ್ಲಿ 21-8, 21-15ರಿಂದ ಆರನೇ ಶ್ರೇಯಾಂಕದ ಗೋ ಪೇ ಕೀ ಮತ್ತು ಟಿಯೋಹ್ ಮೇ ಕ್ಸಿಂಗ್ ಅವರನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು.

ಭಾರತದ ಲಕ್ಷ್ಯ ಸೇನ್ –ಪಿಟಿಐ ಚಿತ್ರ

ಸೋಲಿನ ಸುಳಿಯಲ್ಲಿ ಲಂಕಾ ಪಡೆ

ಡರ್ಬನ್ (ಎಎಫ್‌ಪಿ): ಟ್ರಿಸ್ಟನ್ ಸ್ಟಬ್ಸ್ (122; 221)ಮತ್ತು ನಾಯಕ ತೆಂಬಾ ಬವುಮಾ (113; 228ಎ) ಅವರ ಶತಕಗಳ ನೆರವಿನಿಂದ ಆತಿಥೇಯ ದಕ್ಷಿಣ ಆಫ್ರಿಕಾವು ಶ್ರೀಲಂಕಾ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಹಿಡಿತ ಸಾಧಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ 149 ರನ್‌ಗಳ ಮುನ್ನಡೆ ಪಡೆದಿದ್ದ ಆಫ್ರಿಕಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 100.4 ಓವರ್‌ಗಳಲ್ಲಿ ಐದು ವಿಕೆಟ್‌ಗೆ 366 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಕಠಿಣ ಗುರಿ ಪಡೆದ ಲಂಕಾ ತಂಡಕ್ಕೆ ಕಗಿಸೊ ರಬಾಡ ಮತ್ತು ಮಾರ್ಕೊ ಯಾನ್ಸನ್ ಆರಂಭದಲ್ಲೇ ಪೆಟ್ಟು ನೀಡಿದ್ದಾರೆ. 31 ಓವರ್‌ಗಳಲ್ಲಿ 103 ರನ್‌ಗೆ ಐದು ವಿಕೆಟ್ ಕಳೆದುಕೊಂಡು ಸೋಲಿನ ಸುಳಿಗೆ ಸಿಲುಕಿದೆ. ಇನ್ನೂ ಗೆಲುವಿಗೆ 413 ರನ್ ಅಗತ್ಯವಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 49.4 ಓವರ್‌ಗಳಲ್ಲಿ 191. ಶ್ರೀಲಂಕಾ: 13.5 ಓವರ್‌ಗಳಲ್ಲಿ 42. ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 100.4 ಓವರ್‌ಗಳಲ್ಲಿ 5 ವಿಕೆಟ್‌ಗೆ 366 ಡಿಕ್ಲೇರ್ (ಟ್ರಿಸ್ಟನ್ ಸ್ಟಬ್ಸ್ 122, ತೆಂಬಾ ಬವುಮಾ 113). ಶ್ರೀಲಂಕಾ: 31 ಓವರ್‌ಗಳಲ್ಲಿ 5 ವಿಕೆಟ್‌ಗೆ 103 (ಕಗಿಸೊ ರಬಾಡ 34ಕ್ಕೆ 2, ಮಾರ್ಕೊ ಯಾನ್ಸನ್ 22ಕ್ಕೆ 2).

ಬ್ಯಾಸ್ಕೆಟ್‌ಬಾಲ್: ಸಹಕಾರನಗರ ತಂಡಕ್ಕೆ ಜಯ

ಬೆಂಗಳೂರು: ರಾಕಿ ಮತ್ತು ಆದಿತ್ಯ ಅವರ ಅಮೋಘ ಆಟದ ಬಲದಿಂದ ಸಹಕಾರನಗರ ಬಿ.ಸಿ ತಂಡವು ಕರ್ನಾಟಕ ರಾಜ್ಯ ಬಾಸ್ಕೆಟ್‌ಬಾಲ್ ಸಂಸ್ಥೆ ಕಪ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 97–53ರಿಂದ ಎಸ್‌ಬಿಐ ತಂಡವನ್ನು ಮಣಿಸಿತು.ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ನಡೆದ ಪುರುಷರ ವಿಭಾಗದ ಪಂದ್ಯದಲ್ಲಿ ರಾಕಿ ಮತ್ತು ಆದಿತ್ಯ ಕ್ರಮವಾಗಿ 42 ಮತ್ತು 26 ಪಾಯಿಂಟ್ಸ್ ಗಳಿಸಿದರು.

ಫಲಿತಾಂಶ: ಜೆಎಸ್‌ಸಿ 86-67ರಿಂದ ವೈಎಂಎಂಎ ವಿರುದ್ಧ; ರಾಜ್‌ಮಹಲ್ ಬಿ.ಸಿ 68-39ರಿಂದ ಯಂಗ್ ಬುಲ್ಸ್ ಬಿಸಿ ವಿರುದ್ಧ; ಬೆಂಗಳೂರು ಸ್ಪೋರ್ಟಿಂಗ್ 67-60ರಿಂದ ಎಂಸಿಎಚ್‌ಎಸ್ ವಿರುದ್ಧ; ಸಹಕಾರನಗರ ಬಿ.ಸಿ. 97–53ರಿಂದ ಎಸ್‌ಬಿಐ ವಿರುದ್ಧ; ಜಿಎಸ್‌ಟಿ ಅಂಡ್ ಕಸ್ಟಮ್ಸ್ 65–43ರಿಂದ ಬಿಸಿವೈಎ ವಿರುದ್ಧ; ಬಾಷ್ 63–56ರಿಂದ ಅಪ್ಪಯ್ಯ ಬಿ.ಸಿ ವಿರುದ್ಧ ಗೆಲುವು.ಕೋರಮಂಗಲ ಎಸ್.ಸಿ 68–52ರಿಂದ ಯಲಹಂಕ ನ್ಯೂಟೌನ್ ಬಿ.ಸಿ ಎದುರು; ಬ್ಯಾಂಕ್ ಆಫ್ ಬರೋಡಾ 83–40ರಿಂದ ಬಳ್ಳಾರಿ ಜಿಲ್ಲೆ ಎದುರು; ಸದರ್ನ್ ಬ್ಲೂಸ್ 78–28ರಿಂದ ಹಲಸೂರು ಎಸ್.ಯು ಎದುರು; ಡಿವೈಇಎಸ್ ಬೆಂಗಳೂರು 78–31ರಿಂದ ಚಾಮರಾಜನಗರ ಜಿಲ್ಲೆ ಎದುರು; ಕೋಲಾರ ಜಿಲ್ಲೆ 74–51ರಿಂದ ಪಟ್ಟಾಭಿರಾಮ ಬಿ.ಸಿ ಎದುರು ಜಯ ದಾಖಲಿಸಿತು.

ವಿಶ್ವ ಚೆಸ್ ಚಾಂಪಿಯನ್‌ಷಿಪ್ ನಾಲ್ಕನೇ ಪಂದ್ಯ

ಡ್ರಾ ಮಾಡಿಕೊಂಡ ಲಿರೆನ್–ಗುಕೇಶ್

ಸಿಂಗಪುರ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಮತ್ತು ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ನಡುವಣ ವಿಶ್ವ ಚಾಂಪಿಯನ್‌ಷಿಪ್‌ನ ನಾಲ್ಕನೇ ಪಂದ್ಯ ಹೆಚ್ಚು ರಿಸ್ಕ್‌ಗಳಿಂದ ಕೂಡಿರಲಿಲ್ಲ. ಶುಕ್ರವಾರ ನಡೆದ ಈ ಪಂದ್ಯ 42 ನಡೆಗಳ ನಂತರ ಡ್ರಾ ಆಯಿತು.

ಇಬ್ಬರ ಕಡೆಯೂ ಸಮಾನ ಬಲವಿದ್ದು, ನಡೆಗಳ ಪುನರಾವರ್ತನೆಯಿಂದ ಡ್ರಾ ಆಯಿತು. ಆಗ ಇಬ್ಬರ ಬಳಿಯೂ ತಲಾ ಒಂದು ರೂಕ್, ಮೂರು ಪಾನ್ಸ್ (ಕಾಲಾಳುಗಳು) ಉಳಿದಿದ್ದವು. ಈ ಪಂದ್ಯದಲ್ಲಿ ಗುಕೇಶ್ ಕಪ್ಪು ಕಾಯಿಗಳಲ್ಲಿ ಆಡಿದ್ದರು.

ನಾಲ್ಕು ಪಂದ್ಯಗಳ ಬಳಿಕ ಸ್ಕೋರ್ 2–2 ಸಮಬಲಗೊಂಡಿದೆ. ಇನ್ನೂ 10 ಪಂದ್ಯಗಳು ಉಳಿದಿವೆ. ಮೊದಲು 7.5 ಪಾಯಿಂಟ್ಸ್ ತಲುಪಿದ ಆಟಗಾರ ಚಾಂಪಿಯನ್ ಕಿರೀಟ ಧರಿಸಲಿದ್ದಾರೆ. ಸ್ಕೋರ್ (7–7) ಸಮನಾದಲ್ಲಿ ಟೈಬ್ರೇಕ್ ಪಂದ್ಯಗಳನ್ನು ಆಡಿಸಲಾಗುತ್ತದೆ.

18 ವರ್ಷ ವಯಸ್ಸಿನ ಗುಕೇಶ್, ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಇತಿಹಾಸದಲ್ಲೇ ಕಿರಿಯ ಚಾಲೆಂಜರ್ ಎನಿಸಿದ್ದಾರೆ.

'ಕೊನೆಯ ಹಂತದಲ್ಲಿ ನನಗೆ ಒತ್ತಡ ಹೇರಲು ಅಲ್ಪಸ್ವಲ್ಪ ಅವಕಾಶವಿತ್ತು. ಆದರೆ ಕಪ್ಪು ಕಾಯಿಗಳಲ್ಲಿ ಆಡಿ ಹೆಚ್ಚಿನದೇನನ್ನೂ ನಿರೀಕ್ಷಿಸಲಾಗದು' ಎಂದು ಗುಕೇಶ್ ಪಂದ್ಯದ ಬಳಿಕ ಹೇಳಿದರು.

ಅತಿ ಕಿರಿಯ ಚಾಂಪಿಯನ್ ಆಗುವ ಸಂಭವದ ಕುರಿತು ಕೇಳಿದಾಗ, 'ನಾನು ಒಳ್ಳೆಯ ನಡೆಗಳನ್ನಿರಿಸಲಷ್ಟೇ ಪ್ರಯತ್ನಿಸುತ್ತಿದ್ದೇನೆ' ಎಂದಷ್ಟೇ ಉತ್ತರಿಸಿದರು.

ಚೀನಾದ ಆಟಗಾರ ಲಿರೆನ್ ಮೊದಲ ಪಂದ್ಯ ಗೆದ್ದರೆ, ಗುಕೇಶ್ ಮೂರನೇ ಪಂದ್ಯದಲ್ಲಿ ಜಯಗಳಿಸಿದ್ದರು.

'ಈ ಸುತ್ತಿನಲ್ಲಿ ನಾನು ಸುರಕ್ಷಿತ ಆಟವಾಡಲು ಯತ್ನಿಸಿದೆ. ನನಗೆ ಸ್ವಲ್ಪ ಅನುಕೂಲಕರ ಪರಿಸ್ಥಿತಿಯಿತ್ತು. ಸ್ಕೋರ್ ಈಗ ಸಮಬಲದಲ್ಲಿದೆ. ಇನ್ನೂ ಸಾಕಷ್ಟು ಪಂದ್ಯಗಳು ಆಡಲು ಇವೆ' ಎಂದು 32 ವರ್ಷ ವಯಸ್ಸಿನ ಲಿರೆನ್ ಪ್ರತಿಕ್ರಿಯಿಸಿದರು.

ವಿಶ್ವನಾಥನ್ ಆನಂದ್ ಮಾತ್ರ ಭಾರತದಿಂದ ವಿಶ್ವ ಚಾಂಪಿಯನ್ ಆದ ಏಕಮಾತ್ರ ಆಟಗಾರ. ಆನಂದ್ ಈಗ ಕೆಲವೇ ಕೆಲವು ಟೂರ್ನಿಗಳಲ್ಲಿ ಆಡುತ್ತಿದ್ದಾರೆ. ಭಾಗಶಃ ನಿವೃತ್ತರಾದ ಈ ದಿಗ್ಗಜ ಆಟಗಾರ ಶುಕ್ರವಾರ ಪಂದ್ಯದಲ್ಲಿ ಗುಕೇಶ್ ಪರ 'ಔಪಚಾರದ ಮೊದಲ ನಡೆ' ಇರಿಸಿದರು.

ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರು ನಾಲ್ಕನೇ ಪಂದ್ಯದ ಆರಂಭದ ವೇಳೆ ಗುಕೇಶ್ ಪರ 'ಔಪಚಾರಿಕ' ನಡೆ ಇರಿಸಿದರು –ಫಿಡೆ ವೆಬ್‌ಸೈಟ್ ಚಿತ್ರ